ಆಸ್ಪತ್ರೆಯಲ್ಲಿ ಐವತ್ತನಾಲ್ಕು ದಿನಗಳು

ಶಿವರಾಮು ಕಾಡನಕುಪ್ಪೆ

Death is certain, life on this earth
with all its mystery and beauty
and pain, is then to be lived far
more intensely. I want nothing more.

- Christopher Hitchens

British – American Rationalist and thinker

Death is certain. Life on this earth
with all its mystery and beauty
and pain, is then to be lived far
more intensivly. I want nothing more.

- Chrisfopher Hitechens
British - American Rationalist and thinker

ಆಸ್ಪತ್ರೆಯಲ್ಲಿ ಐವತ್ತನಾಲ್ಕು ದಿನಗಳು

ಅನುಭವ ಕಥನ

ಶಿವರಾಮು ಕಾಡನಕುಪ್ಪೆ

ಸಂವಹನ

೧೨/೧ಎ, ಈವನಿಂಗ್ ಬಜಾರ್ ಹಿಂಭಾಗ

ಶಿವರಾಂಪೇಟೆ, ಮೈಸೂರು - ೫೭೦ ೦೦೧

ASPATREYALLI IVATTANALKU DINAGALU

A Real life Experience

by

Prof. Shivaramu Kadanakuppe
1256, 'Nesara', 4th Cross, Paduvana Road
Kuvempunagara, Mysore - 570 023; Mob. : 98453 26819

Published by
Samvahana
No. 12/1A, Behind Evening Bazaar
Shivarampet, Mysore-1.

Pages : xx + 156

First Edition : 2015

ಪ್ರಥಮ ಮುದ್ರಣ : ೨೦೧೫

© ಲೇಖಕರದು

Price : ₹ 130/-

ಬೆಲೆ : ಒಂದು ನೂರು ಮೂವತ್ತು ರೂಪಾಯಿ

ಆಕಾರ : 1/8 ಡೆಮ್ಮಿ; ಬಳಸಿರುವ ಕಾಗದ : 70 GSM ಮ್ಯಾಪ್‌ಲಿಥೊ

ರಕ್ಷಾಪುಟ ವಿನ್ಯಾಸ : ಮಹಾಂತೇಶ್ ದೊಡ್ಡಮನಿ

ಲೇಖಕರ ಭಾವಚಿತ್ರ : ಡಾ. ನೇಸರ ಕಾಡನಕುಪ್ಪೆ

ಮುದ್ರಣ :
ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್
೧೨/೧, ಈವನಿಂಗ್ ಬಜಾರ್ ಹಿಂಭಾಗ, ಶಿವರಾಂಪೇಟೆ, ಮೈಸೂರು - ೫೭೦ ೦೦೧
ದೂರವಾಣಿ : ೬೪೫೧೧೩೫

ಅರ್ಪಣೆ

ಜಗತ್ತಿನಾದ್ಯಂತ ಸಾವಿರಾರು ಆಸ್ಪತ್ರೆಗಳಲ್ಲಿ ಹಗಲಿರುಳು ಕೆಲಸ
ಮಾಡುತ್ತಿರುವ ಲಕ್ಷಾಂತರ ಬ್ರದರ್‌ಗಳ ಮತ್ತು ಸಿಸ್ಟರ್‌ಗಳ
ನಿಸ್ವಾರ್ಥ ನರ್ಸಿಂಗ್ ಸೇವೆಗೆ ಈ ಕೃತಿ ಸಮರ್ಪಿತ

[illegible]VALLI IVATTANALKU DINAGALU

A Real life Experience

by

Prof. Shivaramu Kadanakuppe
[illegible], 4th Cross, Paduvana Road
[illegible], Mysore - 570 023; Mob. : [illegible]

Published by

[illegible]
No. 12/1[illegible] Bazaar
Shivarampet, Mysore-1.

Pages : xx + 156

First Edition : 2015

Price : ₹ 130/-

ಮುನ್ನುಡಿ

ಕನ್ನಡಕ್ಕೆ ಯಾವಾಗಲೂ ವಿಶಿಷ್ಟವಾದುದನ್ನೆ ಕೊಡುತ್ತಾ ಬಂದಿರುವ ಪ್ರೊ. ಶಿವರಾಮು ಕಾಡನಕುಪ್ಪೆಯವರ ಅಪರೂಪದ ಪುಸ್ತಕವಿದು. ಇದು ಅವರ ಆತ್ಮಕಥೆಯ ಒಂದು ಭಾಗವೇ ಆಗಿದೆ; ಸುಸಂಸ್ಕೃತ ಮನಸ್ಸಿನ ಸಂವೇದನಾಶೀಲ ಕತೆಯೂ ಆಗಿದೆ. ಅವರು ಆಸ್ಪತ್ರೆಯಲ್ಲಿ ಕಳೆಯಬೇಕಾಗಿ ಬಂದ ಐವತ್ತನಾಲ್ಕು ದಿನಗಳ ವಿವರಪೂರ್ಣವೂ ಅಧಿಕೃತವೂ ಆತ್ಮೀಯವೂ ಆದ, ಓದಲೇಬೇಕಾದ, ಕೃತಿಯಿದು. ವೈದ್ಯಕೀಯ ತಪಾಸಣೆ ಔಷಧೋಪಚಾರ ಪರಿಭಾಷೆಯ ಅವಲೋಕನ ಸಾಮರ್ಥ್ಯದ ಬರವಣಿಗೆಯೊಡನೆ, ಅದಕ್ಕೆ ಒಳಗಾದ ಅನುಭವದ ಸೂಕ್ಷ್ಮ ನಡವಳಿಕೆಯೂ, ಅದರ ಸಾಹಿತ್ಯಿಕ ವರ್ತನೆಯ ಮಾದರಿಯೂ ಇಲ್ಲಿದೆ. ಸಣ್ಣಕಥೆಯ ಕಥಾತ್ಮಕತೆ, ಪ್ರಬಂಧದ ವಿವರಣಾತ್ಮಕತೆ ಮತ್ತು ವಿಮರ್ಶೆಯ ವಿಚಕ್ಷಣತೆಯ ಮುಪ್ಪುರಿಯೆಂದೇ ಕೃತಿಯನ್ನು ಪರಿಭಾವಿಸಬೇಕು. ಅಂತರಂಗಕ್ಕೆ ಹತ್ತಿರವಾದ ಮಾತುಗಾರಿಕೆ, ಸಮಾನತೆಯ ಒಲವು ಮತ್ತು ಅಂತಃಕರಣ ಚೆಲುವುಗಳ ಸಂಲಗ್ನತೆ, ಭಾವ ಆಲೋಚನೆ ಕ್ರಿಯಾತ್ಮಕತೆಗಳ ಸಂದಿಗ್ಧ ದೂರವಾದ ಅಭಿವ್ಯಕ್ತಿ - ಇವು ಕೃತಿಯ ವೈಶಿಷ್ಟ್ಯವನ್ನು ಹೆಚ್ಚಿಸಿವೆ.

ಆಸ್ಪತ್ರೆಯ ಸೇವಾವ್ಯವಸ್ಥೆ, ಸ್ವಚ್ಛತೆ; ವೈದ್ಯರ ಕರ್ತವ್ಯನಿಷ್ಠೆ, ಮಾನವೀಯ ಕಾಳಜಿ; ಸುಶ್ರೂಶಕ ಸುಶ್ರೂಶಕಿಯರ ಕಾರ್ಯತತ್ಪರತೆ, ಬದ್ಧತೆ; 'ಅಕ್ಕಾ ಅಣ್ಣಾ'ಗಳ ಶ್ರದ್ಧೆ ಸೇವಾಪರತೆಗಳ ವಿವರಣೆ ಪರಿಶೀಲನೆಗಳು ಕೃತಿಯ ಮುಖ್ಯಭಾಗವಾಗಿವೆ. ನೋವಿನ ಮಧ್ಯದಲ್ಲಿಯೂ ಲೇಖಕರ ತದೇಕ ಚಿತ್ತ ಮತ್ತು ಜಾಗೃತ ಮನಸ್ಸಿನಿಂದ ಇವೆಲ್ಲವನ್ನೂ ಕಟ್ಟಿಕೊಟ್ಟಿರುವುದು ಅವರ ಮನೋದೃಢತೆಗೆ ಸಾಕ್ಷಿಯಾಗಿದೆ. ಈ ಪುಸ್ತಕ ಸಾಹಿತ್ಯ ಕ್ಷೇತ್ರದಲ್ಲಿ ನಿಶ್ಚಯವಾಗಿಯೂ ಹೊಸ ಪ್ರಕಾರವೊಂದನ್ನು ಹುಟ್ಟುಹಾಕುತ್ತದೆ. ಇದು ಭೌತಿಕ ವಿವರಗಳನ್ನಷ್ಟೆ ಕೊಡುತ್ತಿಲ್ಲ; ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮಾದರಿಗಳನ್ನೂ ಒದಗಿಸುತ್ತದೆ. ಇಡೀ ಕೃತಿ ಮಾನವೀಯ ವೈಚಾರಿಕ ಕಾಳಜಿಯ ಅನನ್ಯ ನಿದರ್ಶನವಾಗಿದೆ. ಆಧುನಿಕ ಪರ್ಯಾಯ ಸಾಂಸ್ಕೃತಿಕ ವ್ಯವಸ್ಥೆಯೊಂದು ಆಸ್ಪತ್ರೆಯ ಮಿತಿಯಲ್ಲಾದರೂ, ರೂಪುಗೊಳ್ಳುತ್ತಿರುವುದರ ಮೇಲೆ ಕೃತಿ ಬೆಳಕು ಚೆಲ್ಲುತ್ತದೆಯೆಂದೇ ಹೇಳಬೇಕು.

ಕನ್ನಡದಲ್ಲಿ ಇಂತಹದೊಂದು ಪುಸ್ತಕ ಇದೇ ಮೊದಲ ಬಾರಿಗೆ ಪ್ರಕಟವಾಗುತ್ತಿದೆ. ಹೊಸತನ, ಸೊಗಸು ಮತ್ತು ಪಾರದರ್ಶಕತೆ ಒಂದು ಅನನ್ಯ ಸ್ತರದಲ್ಲಿ ನಿಂತು ಕೆಲಸ ಮಾಡಿದಂತಿವೆ. ಅಂತಃಕರಣದ ಸ್ಪರ್ಶದಿಂದಾಗಿ ಇಡೀ ಕೃತಿ ಆಪ್ಯಾಯಮಾನವೆನಿಸಿದೆ; ಆದರೆ ಅದು ನೋವಿನ ಅನುರಣನದಿಂದ ತಪ್ಪಿಸಿಕೊಂಡಿಲ್ಲ. ಸಾವು ಬದುಕಿನ ನಡುವೆ

ಹೋರಾಟ ನಡೆಸಿ ಗೆದ್ದು ಬಂದ ಇಚ್ಛಾಶಕ್ತಿಯ ಚೇತನವೊಂದರ ದೊಡ್ಡ ಸಂಕಥನವಿದು. ಒಂದು ಹೊಸಪ್ರಪಂಚವನ್ನೆ ತೆರೆದಿಡುವ ಈ ಪುಸ್ತಕ ವಿಜ್ಞಾನ ಮತ್ತು ಕಲೆಯ ಸಾಮರಸ್ಯದಿಂದ ಅರಳಿದುದು. ಯಾತನೆ, ವಿಷಣ್ಣತೆ, ಸಂತೋಷಗಳ ಸಮ್ಮಿಶ್ರಭಾವದ ಉಯ್ಯಾಲೆಯಲ್ಲಿ ಐವತ್ತನಾಲ್ಕು ದಿನಗಳನ್ನು ಕಳೆದ ಶಿವರಾಮು ಕಾಡನಕುಪ್ಪೆಯವರ ಆಸ್ಪತ್ರೆಯ ಅನುಭವದ ಈ ಕಥನವನ್ನು ಕಂಬನಿಯ ಮಿಡಿತಗಳಿಲ್ಲದೆ ಓದುವುದು ಕಷ್ಟ. ನೋವನ್ನು ಕಲೆಯಾಗಿಸಿಕೊಳ್ಳುವ ಪರಮಾಶ್ಚರ್ಯದ ಪಾರಮ್ಯದ ಬರೆವಣಿಗೆ ಇದು. ನೊಂದನೋವನ್ನು ಯಾವ ವೈಭವೀಕರಣವಿಲ್ಲದೆ ವಾಚಕನ ಅನುಭವಕ್ಕೆ ತರುವಲ್ಲಿ ಕೃತಿ 'ಮಾನಸಿಕ ದೂರ' ಮಾರ್ಗವನ್ನು ಅನುಸರಿಸಿದೆ. ಹಾಗಾಗಿ ಕೃತಿ ನೋವನ್ನಷ್ಟೇ ಹೇಳುವುದಿಲ್ಲ; ಅದರ ಉಪಶಮನವನ್ನೂ ಹೇಳುತ್ತದೆ.

ಸೇವೆ, ಹಣ ಮತ್ತು ಮೌಲ್ಯಗಳನ್ನು ಸಮೀಕರಣಗೊಳಿಸುವ ಸಂಸ್ಕೃತಿಯೊಂದು ತಲೆಯೆತ್ತುತ್ತಿರುವುದರ ಮೇಲೆ ಕೃತಿ ಗಟ್ಟಿ ಮಾತನ್ನು ಹೇಳುತ್ತಿರುವಂತಿದೆ. ಈ ಹೊಸ ಕಲ್ಪನೆಯ ಕಾರಣವಾಗಿ ಉಳ್ಳವರು ಇಲ್ಲದವರ ನಡುವಣ ಅಂತರ ಹೆಚ್ಚುತ್ತಿರುವುದರ ಬಗ್ಗೆ ಲೇಖಕರು ಆತಂಕಿಸುವುದು ಸಹಜವೇ. ಸಂಸ್ಕೃತಿಯ ಇತ್ತೀಚಿನ ಬೆಳವಣಿಗೆಯ ಮಾನವಶಾಸ್ತ್ರೀಯ ಪರಿಕಲ್ಪನೆಗೆ ಮಾದರಿಯೆನ್ನುವಂತೆ ಪ್ರೊ. ಶಿವರಾಮುಕಾಡನಕುಪ್ಪೆಯವರ ಕೃತಿಯಿರವುದು ಒಂದು ಹರ್ಷದಾಯಕ ಸಂಗತಿಯಾಗಿದೆ.

ಹತ್ತೊಂಬತ್ತು ಅಧ್ಯಾಯಗಳಿರುವ ಈ ಕೃತಿಯನ್ನು ಎರಡೂವರೆ ತಿಂಗಳಿಗೂ ಕಡಿಮೆ ಅವಧಿಯಲ್ಲಿ ಬರೆದು ಮುಗಿಸಲಾಗಿದೆ. ಆರೋಗ್ಯ ಸುಧಾರಿಸುತ್ತಿದ್ದ ಅವಧಿಯಲ್ಲಿಯೇ ಇದನ್ನು ಬರೆದಿರುವುದು ಒಂದು ವಿಶೇಷ. ಶಿವರಾಮು ಅವರಿಗಿರುವ ಧೀಶಕ್ತಿ ಮತ್ತು ಮನೋದೃಢತೆಗೆ ಮತ್ತೊಂದು ನಿದರ್ಶನವಿದು. ಪ್ರತಿ ಅಧ್ಯಾಯದಲ್ಲಿಯೂ ನಿರ್ದಿಷ್ಟ ವಿಷಯದ ಪ್ರಸ್ತಾಪವಿದ್ದರೂ, ಅದು ಇಡೀ ಕೃತಿಯ ಸಾತತ್ಯಕ್ಕೆ ಅನುಗುಣವಾದ ಪೋಷಕ ಶಕ್ತಿಯ ಅಭಿವ್ಯಕ್ತಿಯಾಗಿರುತ್ತದೆ. ಇದೊಂದು ಸ್ಮೃತಿ ಕಥನ. ತೀವ್ರ ಅನಾರೋಗ್ಯದ ನಡುವೆಯೂ ಯಾವ ವಿವರವೂ ತಪ್ಪಿಹೋಗದಂತೆ ಉಕ್ತವಾಗಿರುವುದೊಂದು ಉಪಾದೇಯ ಸಂಗತಿ. ಆಸ್ಪತ್ರೆಯ ಲವಲವಿಕೆ ಜೀವಂತಿಕೆಗಳನ್ನು ದಾಖಲಿಸುವಂತೆ, ಅದರೊಳಗಿನಿಂದಲೇ ತಮ್ಮ ಅನಾರೋಗ್ಯದ ಕಾರಣಗಳನ್ನೂ ಪರಿಣಾಮಗಳನ್ನೂ ಮಾಪನ ಮಾಡುತ್ತಾ ಹೋಗುವುದು ಬರೆವಣಿಗೆಯ ಮುಖ್ಯ ಲಕ್ಷಣ. ಆಸ್ಪತ್ರೆಯ ಸೇವಾ ವ್ಯವಸ್ಥೆಯನ್ನು ಮಾಪನ ಮಾಡುವ ಒಂದು ನಿರ್ದರ್ಶನವಿದು:

> "ಮೊದಲ ದಿನದ ನನ್ನ ಗ್ರಹಿಕೆಯಲ್ಲೇ ಒಂದು ಸಂತಸದ
> ಸಂಗತಿಯನ್ನು ಈ ನರ್ಸುಗಳು ಮತ್ತು ಡ್ಯೂಟಿ ಡಾಕ್ಟರ್‌ಗಳಲ್ಲಿ ಕಂಡೆ.

> ಅದೆಂದರೆ, ಅವರಲ್ಲಿದ್ದ ಆತ್ಮೀಯತೆ ಮತ್ತು ಸಮಾನತೆ ಮನೋಧರ್ಮ. ಡ್ಯೂಟಿ ಡಾಕ್ಟರ್‌ಗಳು ನರ್ಸುಗಳನ್ನು ತಮಗಿಂತ ಕಡಿಮೆ ಓದಿದವರೆಂದು ನೋಡುವ ದೃಷ್ಟಿಯಿರಲಿಲ್ಲ. ತಮ್ಮಂತೆ ವೃತ್ತಿ ನಿರ್ವಹಿಸುತ್ತಿರುವ ಸಹನೌಕರರೆಂಬ ಭ್ರಾತೃತ್ವದ ಭಾವನೆ ಅವರಲ್ಲಿತ್ತು. ಮುಂದೆ ನಾನಿದ್ದ ಅಷ್ಟು ದಿನವೂ ಈ ಭಾವ ಸ್ಪಂದನವನ್ನು ಸೂಕ್ಷ್ಮವಾಗಿ ಗಮನಿಸಿದ ನಂತರ ನನ್ನ ಗ್ರಹಿಕೆ ಸ್ಥಿರವಾಯಿತು" (ಪು. ೨೦-೨೧).

ಅನಾರೋಗ್ಯದ ಸ್ಥಿತಿಯಲ್ಲಿಯೂ ಶಿವರಾಮು ಅವರ ಆರೋಗ್ಯಕರ ಗ್ರಹಿಕೆಯಿದು. ಅವರ ಮಾತು ಮತ್ತು ಹೃದಯದಲ್ಲಿ ಯಾವೊತ್ತೂ ವಿಚಾರದ ವೈಶಾಲ್ಯ ಇರುತ್ತಿತ್ತು; ಸತ್ಯಶೋಧನೆ ಮೊದಲಿನಿಂದಲೂ ಬೆಳೆಸಿಕೊಂಡಿದ್ದ ಅವರ ಹಾರ್ದಿಕ ಗುಣ. ನೋವಿನಲ್ಲೂ ಅದು ವಿಚಲಿತವಾಗಲಿಲ್ಲ; ನೆನಪಿನಿಂದ ಸತ್ಯ ಜಾರದಂತೆ ನೋಡಿಕೊಳ್ಳುವ ತವಕ ಅವರದು. ಈ ಮಾತುಗಳಿಂದ ಇಡೀ ಕೃತಿ ಭಾವಸ್ಪರ್ಶ ಮತ್ತು ವಿಚಾರ ಸ್ವಾದದ ಗಣಿಯಾಗಿರುವುದು ಸ್ಪಷ್ಟವಾಗುತ್ತದೆ.

ಕೃತಿಯ ಭಾವಕೋಶವನ್ನು ತುಂಬುವ, ವಿಸ್ತರಿಸುವ ಹಲವು ತೆರನಾದ ಮಾತುಕತೆಗಳೂ, ಪ್ರಸಂಗಗಳೂ ಚೇತೋಹಾರಿಯಾಗಿ ಕಾಣಿಸಿಕೊಳ್ಳುತ್ತವೆ. ಅವುಗಳಲ್ಲಿ ಹಾಸ್ಯದ ಪ್ರಸಂಗಗಳಿವೆ; ತಮ್ಮ ಮಕ್ಕಳು ವಹಿಸುತ್ತಿದ್ದ ಮುತುವರ್ಜಿ, ಶ್ರಮ, ಪ್ರೀತಿ, ಸಾಂತ್ವನದ ಚಿತ್ರಗಳಿವೆ; ತಮ್ಮ ಕಾಯಿಲೆಯನ್ನು ತಾವೇ ಸಾಕ್ಷಿ ಪ್ರಜ್ಞೆಯಲ್ಲಿ ನೋಡಿಕೊಳ್ಳುವ, ಪರಿಶೀಲಿಸುವ, ಅವಲೋಕಿಸುವ ಚಿಂತನೆಗಳಿವೆ; ಪ್ರತಿ ಪುಟದಲ್ಲಿಯೂ ಪುಟಿಯುವ ಲೇಖಕರ ಮಾನವೀಯತೆ, ಧೀರಗತಿ, ಎದುರಾದುದನ್ನು ಬಗೆಯುವ ಬಗೆ, ಕಾಯಿಲೆ ಅಪಾಯಕಾರಿ ಎನಿಸಿದಾಗಲೂ ತಳೆಯುವ ಸ್ಥಿತಪ್ರಜ್ಞತೆ, ತುಮುಲಗಳಲ್ಲಿಯೇ ತೋರುವ ಅಧೀರವಾಗದ ಮನೋಬಲ, ಸಾಮಾಜಿಕ ಕಾಳಜಿಗಳಿವೆ. ನಮ್ಮ ಮನಸ್ಸಿನಿಂದ ಕಳೆದುಹೋಗದ ದೃಶ್ಯಗಳಿವು; ಕೃತಿಯನ್ನು ಎತ್ತರಿಸುವ ಕೃತಿಯಲ್ಲಿಯೇ ಇರುವ ಲಕ್ಷಣಗಳು.

ಶಿವರಾಮು ಅವರಿಗೆ, ಅವರೇ ಹೇಳುವಂತೆ, 'ಅಪ್ಪಳಿಸಿದ' ಕಾಯಿಲೆ ಅಪರೂಪದ್ದು, ದುಬಾರಿಯಾದದ್ದು. ಈ ಸ್ಥಿತಿಯಲ್ಲಿ ಹಣಕಾಸಿನ ಚಿಂತೆ ಯಾರಿಗಾದರೂ ಕಾಡುತ್ತದೆ. ಅದರಲ್ಲಿಯೂ ಮಧ್ಯಮವರ್ಗದವರಿಗೆ ಇಂತಹ ಕಾಯಿಲೆ ಬಂದುಬಿಟ್ಟರೆ ನಿಭಾಯಿಸುವುದು ಕಷ್ಟ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಈ ವಿಷಯ ಶಿವರಾಮು ಅವರನ್ನೂ ಯೋಚನೆಗೀಡುಮಾಡಿದೆ. ಅವರು ಈ ಸಂದರ್ಭದಲ್ಲಿ ಬರೆಯುವ ಮಾತುಗಳಿವು:

> "ಕಣ್ಣು ಮುಚ್ಚಿದೆ. ನನ್ನ ಎದೆಯಲ್ಲಿ ಚಿಂತೆ ಮಾತಾಡತೊಡಗಿತು. ಆರ್ಥಿಕವಾಗಿ ಅಂಥ ಸುಸ್ಥಿತಿಯಲ್ಲಿದ್ದವನು ನಾನಲ್ಲ. ಒಂದು ಪ್ರತಿಷ್ಠಿತ

> ಕಾಲೇಜಿನ ಪ್ರಿನ್ಸಿಪಾಲನಾಗಿ ಹದಿನೈದು ವರ್ಷ ಕೆಲಸ ಮಾಡಿದ ನನ್ನಲ್ಲಿ ಹಣಕಾಸಿನ ತೊಂದರೆಯಿಲ್ಲವೆಂದು ಬಹುಜನ ಭಾವಿಸಿದ್ದರು. ಆದರೆ ನಾನು ಅಂಥಾ ಉಳಿತಾಯದ ಮನೋಧರ್ಮದವನಲ್ಲ. ಪ್ರಾಮಾಣಿಕವಾಗಿ ಸರ್ಕಾರಕ್ಕೆ ತೆರಿಗೆ ಪಾವತಿಸುತ್ತಿದ್ದೆ. ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತಿದ್ದೆ. ನಗರದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದ ಕಡುಬಡವ ಮಕ್ಕಳನ್ನು ಓದಿಸಲು ದತ್ತು ತೆಗೆದುಕೊಳ್ಳುತ್ತಿದ್ದೆ. ಜೊತೆಗೆ, ಮನೆಯಲ್ಲಿ ನನ್ನ ಹೆಂಡತಿ ಮಕ್ಕಳಿಗೆ ಊಟ ತಿಂಡಿ ಬಟ್ಟೆಗಳಿಗೆ ಎಂದೂ ಕೊರತೆಯಾಗದಂತೆ ಎಚ್ಚರವಹಿಸುತ್ತಿದ್ದೆ" (ಪು. ೩೪)

ಶಿವರಾಮು ಅವರ ಈ ಮಾತುಗಳು ಅವರ ಆರ್ಥಿಕ ಸ್ಥಿತಿಯ ಒಟ್ಟು ಸ್ವರೂಪವನ್ನು ತಿಳಿಸುತ್ತವೆ; ಅವರು ಈ ಕಾಯಿಲೆಯಿಂದಾಗಿ ಎಂತಹ ಬಿಕ್ಕಟ್ಟನ್ನು ಎದುರಿಸುತ್ತಿದ್ದರು ಎಂಬುದರ ಕಡೆ ಕೂಡ ಬೆಳಕು ಚೆಲ್ಲುತ್ತವೆ. ಶಿವರಾಮು ಅವರು ಸುಲಭವಾಗಿ ಧೃತಿಗೆಡುವವರಲ್ಲ; ಮನಸ್ಸಿನಲ್ಲಿ ಈ ಬಗೆಯ ಚಿಂತೆ ಆವರಿಸಿದ್ದು ಕುಟುಂಬದ ಭವಿಷ್ಯ ಕುರಿತು. ಕಾಯಿಲೆಯ ಸಂದರ್ಭದಲ್ಲಿ ಈ ಸಮಸ್ಯೆ ಎಲ್ಲರನ್ನೂ ಕಾಡುವಂಥದು. ಕಾಡನಕುಪ್ಪೆಯವರು ಇದನ್ನೆಲ್ಲ ಎದುರಿಸಿ, ಹೊರಬಂದ ಪರಿ ಮಾತ್ರ ಮರೆಯಲಾರದಂಥದು, ಪವಾಡಸದೃಶದ್ದು; ಆತಂಕ ತಲ್ಲಣಗಳ ನಡುವೆಯೇ ಈ ಎಲ್ಲ ಬೆಳವಣಿಗೆ. ಶಿವರಾಮು ಅವರ ಬರೆವಣಿಗೆ ಈ ಎಲ್ಲವನ್ನೂ ಚಾಚೂ ತಪ್ಪದೆ ಕೃತಿಸುತ್ತದೆ; ಓದುಗನನ್ನು ಹಿಡಿದಿಟ್ಟುಕೊಂಡೇ ಸಾಗುತ್ತದೆ.

ಕಾಡನಕುಪ್ಪೆಯವರಿಗೆ ಆರ್ಥಿಕ ಸಮಸ್ಯೆಯಂತೆ ಇತರ ಸಮಸ್ಯೆಗಳೂ ಕಾಡಿವೆ. ಅವುಗಳಲ್ಲಿ ಸಾವಿನ ತತ್ವಶಾಸ್ತ್ರವೂ ಒಂದು. ಉಸಿರಾಟದ ತೊಂದರೆ ಕಾಣಿಸಿಕೊಳ್ಳುವ ಹತ್ತು ವರ್ಷಗಳ ಹಿಂದೆಯೇ ಗಂಭೀರ ಕಾಯಿಲೆಯೊಂದು ಅವರನ್ನು ಕಾಡಿತ್ತು. ಈ ಎಲ್ಲ ತೊಂದರೆಗಳಿಂದ ಪಾರಾಗಿ ಬಂದು ಬರೆಯುತ್ತಿರುವ ಈಗಿನ ಸಂದರ್ಭದಲ್ಲಿ ಹಿಂದಿನ ನೆನಪು ಅವರಿಗೆ ಬಾರದೆ ಇರಲಿಲ್ಲ; ಆಗ ಅವರು ಅನುಭವಿಸಿದ ಯಾತನೆ, ಉಂಟಾದ ಹೆದರಿಕೆ, ಅದಕ್ಕಿದ್ದ ಕಾರಣಗಳನ್ನು ಈಗ ಚಿಂತನೆಗೆ ಒಡ್ಡುತ್ತಾರೆ. ವಾಸ್ತವಿಕತೆ ಮತ್ತು ತಾತ್ವಿಕತೆಯ ನಡುವಣ ಸಂಘರ್ಷದಲ್ಲಿ ಈ ಮಾತುಗಳು ಕಾಣಿಸಿಕೊಳ್ಳುತ್ತವೆ:

> "ನನ್ನ ಸಾವು ಹತ್ತಿರದಲ್ಲಿದೆ ಅಂತೆನ್ನಿಸಿತು. ಆ ಭಾವ ಮನಕ್ಕೆ ಮೂಡಿದಾಗ ಭಯವಾಯಿತು. ಈ ಕ್ಷಣದಲ್ಲೂ ನನಗೆ ಚೆನ್ನಾಗಿ ನೆನಪಿದೆ: ಆ ಭಯ ನಾನು ಇಷ್ಟರಲ್ಲೇ ಸಾಯುತ್ತೇನೆ ಎಂಬ ಹೆದರಿಕೆಯಿಂದ ಬಂದುದಲ್ಲ. ನಾನು ಸಾಹಿತ್ಯ ಓದಿದವನು. ತತ್ತ್ವಶಾಸ್ತ್ರವನ್ನು ಅಧ್ಯಯನ ಮಾಡಿದವನು. ಸಾವು ಎಲ್ಲರಿಗೂ - ಎಲ್ಲದಕ್ಕೂ ಬಂದೇಬರುತ್ತದೆಯೆಂದು ನನಗೆ ಗೊತ್ತಿತ್ತು. ಅದು ಪ್ರಕೃತಿ ನಿಯಮ.

> ಸಾವು ಚಲನೆಗೆ ಮೂಲ ಗೊಬ್ಬರ. ತಾನು ಸತ್ತು ಹೊಸದಕ್ಕೆ ಅವಕಾಶ ನೀಡುವುದರ ಸಂಕುಲ ಧರ್ಮ. ನನಗಾಗ ಐವತ್ತು ವರ್ಷ. ನಾನು ಸಾಕಷ್ಟು ಬದುಕಿದ್ದೇನೆ. ಬದುಕನ್ನು ಅನುಭವಿಸಿದ್ದೇನೆ. ಬರುವ ಸಾವಿಗೆ ನಾನು ಅಂಜಿದವನಲ್ಲ. ಆದರೆ ನಾನು ಭಯ ಪಟ್ಟಿದ್ದು ಮಾತ್ರ ಸತ್ಯ. ಆ ಭಯ ನನಗೆ ಬರುವ ಸಾವಿಗಿಂತ ಮಿಗಿಲಾಗಿ ನನ್ನ ಹೆಂಡತಿ ಮಕ್ಕಳ ಭವಿಷ್ಯದ ವಿಚಾರದಿಂದ ಬಂದದ್ದು" (ಪು. ೪೧).

ಪರಿಸ್ಥಿತಿ ಯಾರನ್ನಾದರೂ ಅಧೀರಗೊಳಿಸುವಂಥದು; ಇದಕ್ಕೆ ಕಾಡನಕುಪ್ಪೆಯವರೂ ಹೊರತಾಗಿರಲಿಲ್ಲ. ಆದರೆ ಅವರ ಆಲೋಚನೆಯ ಜಾಡು ಬೇರೆಯಾಗಿತ್ತು; ಧ್ಯೇಯಸಂಪನ್ನ ನಿಲುವು ಅದಾಗಿತ್ತು. ಸಾವಿನ ಮೀಮಾಂಸೆ ಅವರಿಗೆ ಗೊತ್ತಿಲ್ಲದ ವಿಷಯವಾಗಿರಲಿಲ್ಲ; ಅವರ ಜೀವನ ಪ್ರೀತಿ ಸಾವಿನ ಮೇಲೆ ಸಾಧಿಸಿದ ವಿಜಯವಾಗಿತ್ತು. ಶಿವರಾಮು ಅವರ ಚಿಂತನೆ ಪ್ರಸ್ತುತವಾದದ್ದೇ ಹೊರತು, ತಾತ್ವಿಕವಾದುದಾಗಿರಲಿಲ್ಲ. ಮೇಲಿನ ಮಾತುಗಳಲ್ಲಿ ಅನಾವರಣಗೊಂಡದ್ದು ಇದೇ ಆಗಿತ್ತು.

ಶಿವರಾಮು ಅವರ ಚಿಂತನೆ ಸಮಸ್ಯೆಗಳಿಗೆ ಮಾತ್ರ ಕೇಂದ್ರೀಕೃತವಾಗಿರಲಿಲ್ಲ; ಪ್ರಕೃತಿಯ ಸಹಜ ವ್ಯಾಪಾರದ ಕಡೆಗೂ ಇತ್ತು. ಬದುಕಿನ ಆಗುಹೋಗುಗಳು ಇದಕ್ಕೆ ಅಂಟಿಕೊಂಡೇ ಇರುತ್ತವೆ ಎಂಬುದು ಗೊತ್ತಿರುವ ವಿಷಯ. ಶಿವರಾಮು ಕಾಡನಕುಪ್ಪೆಯವರ ಸ್ಪಂದನ ಈ ಕಡೆಗೂ ಜಾಗೃತವಾಗಿತ್ತು; ಅನಾರೋಗ್ಯ ಅದಕ್ಕೆ ಅಡ್ಡಿ ಬರಲಿಲ್ಲ ಎಂಬುದು ಸೋಜಿಗದ ವಿಷಯವೇ. ಹಗಲು ರಾತ್ರಿಗಳು ಮನುಷ್ಯ ಸಾಮಾನ್ಯನನ್ನು ನಿಯಂತ್ರಿಸುತ್ತಲೇ ಇರುತ್ತವೆ. ಆಸ್ಪತ್ರೆಯ ವ್ಯವಹಾರವೂ ಇದಕ್ಕೆ ಬೇರೆಯಾಗಿರಲಿಲ್ಲ. ಸೇವಾ ವ್ಯವಸ್ಥೆಯ ಮೇಲಿನ ಹಗಲು ರಾತ್ರಿಗಳ ಪರಿಣಾಮ ಕುರಿತು ಶಿವರಾಮು ಹೀಗೆ ಬರೆಯುತ್ತಾರೆ:

> "ಹಗಲಿಗೇ ಇರುವ ಒಂದು ಬಗೆಯ ಎಚ್ಚರದ ಮಿಡಿತಗಳಿರುತ್ತಿದ್ದವು. ರಾತ್ರಿಗೂ ಅದರದೇ ಆದ ಗುಣಸ್ವರೂಪಗಳಿರುತ್ತವೆ. ಸಹಜವಾಗಿ ಒಂದು ಬಗೆಯ ನಿಶ್ಶಬ್ದತೆ ಹಾಗೂ ಮೌನ ಜೀವಿಗಳನ್ನು ಆಕ್ರಮಿಸಿಕೊಂಡುಬಿಡುತ್ತದೆ. ಅವರು ರಾತ್ರಿ ಹೊತ್ತು ಪ್ರಜ್ಞಾಪೂರ್ವಕವಾಗಿ ಎಚ್ಚರದಿಂದಿದ್ದರೂ ಅವರಲ್ಲಿ ಸಹಜವಾದ ಚುರುಕುತನ ಕಡಿಮೆಯಾಗುತ್ತದೆ. ಅವರ ಕಣ್ಣುಗಳು ಮುಚ್ಚಿಕೊಳ್ಳಲು ಯತ್ನಿಸುತ್ತವೆ. ದೇಹ ಒಂದು ಕಡೆ ಕೂತುಕೊಳ್ಳಲು ಹಾತೊರೆಯುತ್ತದೆ. ಒಟ್ಟಾರೆ ಸುತ್ತಲ ಪರಿಸರವೇ ತುಸು ಜಡತ್ವದ ಕಡೆ ವಾಲುತ್ತದೆ" (ಪು. ೫೬).

ಕಾಡನಕುಪ್ಪೆಯವರು ಪ್ರಕೃತಿಯ ಸಹಜಪ್ರಭಾವವನ್ನು ಕುರಿತು ಇಲ್ಲಿ ಮಾತನಾಡುತ್ತಿದ್ದಾರೆ ಎಂದೆನಿಸುವುದು ಸಹಜವಾದರೂ, ಆ ಮೂಲಕ

ತಾತ್ವಿಕತೆಯೊಂದು ರೂಪುಗೊಳ್ಳುವುದು ಸಹಜ. ಪ್ರಕೃತಿ ಸಾರ್ವತ್ರಿಕ ವಿಷಯವಾದರೂ, ವ್ಯಕ್ತಿಗತ ಪ್ರಭಾವವೂ ಅದರಲ್ಲಿರುತ್ತದೆ; ನಾವು ಎಷ್ಟೇ ಪ್ರಜ್ಞಾಪೂರ್ವಕವಾಗಿದ್ದರೂ, ಪ್ರಕೃತಿಯ ಜಾಯಮಾನದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂಬ ತತ್ತ್ವವನ್ನು ಇಲ್ಲಿ ಮುಂದಿಡುವಂತೆ ತೋರುತ್ತದೆ.

ಹೀಗೆ ಉದಾಹರಣೆಗಳನ್ನು ಕೊಡುತ್ತಾ ಹೋಗಬಹುದು. ಇಂತಹ ಪ್ರಸಂಗಗಳೆ ಕೃತಿಯ ವಿನ್ಯಾಸಕ್ಕೆ ಕಾರಣವಾಗಿರುವಂಥವು; ಮತ್ತೆ ಕೃತಿಯ ಗುಣಲಕ್ಷಣಗಳನ್ನು ರೂಪಿಸಿರುವಂಥವೇ ಇವು. ಹೀಗಾಗಿ ಕೃತಿಯ ತುಂಬ ಈ ಬಗೆಯ ಪ್ರಸಂಗಗಳು ಸಿಗುತ್ತವೆ; ಇವು ಪರಿಸ್ಥಿತಿಯ ಮೇಲೆ ಬೆಳಕು ಚೆಲ್ಲುತ್ತವೆ, ಇಲ್ಲವೆ ಪರಿಸ್ಥಿತಿಯಿಂದ ಉದ್ಭವವಾಗಿರುತ್ತವೆ. ಒಂದು ಮಾತು ಮಾತ್ರ ಸತ್ಯ : ಈ ಎಲ್ಲ ಪ್ರಸಂಗಗಳಿಗೂ ಕಾರಣವಾಗಿರುವುದು ಅಥವಾ ಅವುಗಳ ಹಿನ್ನೆಲೆಯಲ್ಲಿರುವುದು ನೋವೇ ಆಗಿದೆ ಎಂಬ ವಿಷಯ. ಸುಪ್ರಸಿದ್ಧ 'ಮೊನಲಿಸಾ' ಚಿತ್ರದ ಕಂಡೂಕಾಣದ ಮಂದಹಾಸದ ಹಿನ್ನೆಲೆಯಲ್ಲಿ ನೋವಿದೆ ಎಂಬುದು ವಿಮರ್ಶಕರ ಅಭಿಪ್ರಾಯ.

ಈ ಬರೆವಣಿಗೆಯನ್ನು ಓದುತ್ತಿದ್ದರೆ, ಇದರ ಅಧ್ಯಾಯಗಳು ಕಾದಂಬರಿಯ ಅಧ್ಯಾಯಗಳಂತೆ ಅಥವಾ ಆತ್ಮಚರಿತ್ರೆಯ ಭಾಗಗಳಂತೆ ಕಂಡರೆ ಆಶ್ಚರ್ಯವಾಗದು. ಹಾಗೆ ನೋಡಿದರೆ ಇದು ಕಾದಂಬರಿಯ ಶೈಲಿಯಲ್ಲಿ ರಚಿತವಾದ ಆತ್ಮಕಥನವೆಂದೂ ತಿಳಿಯಬಹುದು. ಆಸ್ಪತ್ರೆಯ ಸೂಕ್ಷ್ಮ ವಿವರಗಳು ಇಲ್ಲಿ ಮಡುಗಟ್ಟಿವೆ ; ಆದರೆ ಶಿವರಾಮು ಅವರ ಕೈಯಲ್ಲಿ ಅವೆಲ್ಲವೂ ಸಾಹಿತ್ಯದ ಲೇಪನ ಪಡೆದಿವೆ; ಕೆಲವು ಭಾಗಗಳಂತೂ ನೇರವಾಗಿ ಸಾಹಿತ್ಯಿಕ ಬರೆವಣಿಗೆಯೇ ಆಗಿವೆ. ಈ ಪುಸ್ತಕದಲ್ಲಿ ಬರುವ ಹಲವಾರು ಪ್ರಕರಣಗಳು ಅಥವಾ ಸನ್ನಿವೇಶಗಳು ಸಣ್ಣಕಥೆಯ ಅಥವಾ ಪ್ರಬಂಧದ ಸ್ವರೂಪವನ್ನು ಪಡೆದಿರುವುದೇ ಇದಕ್ಕೆ ಸಾಕ್ಷಿ. ಶಿವರಾಮು ತುಂಬ ಭಾವುಕವಾಗಿ, ಆತ್ಮೀಯವಾಗಿ, ಮಾನವೀಯವಾಗಿ ಬರೆಯಹೊರಟಾಗ ಆ ಎಲ್ಲ ಪ್ರಸಂಗಗಳೂ ಭಾವಗೀತೆಗಳನ್ನು ಓದಿದಂತೆ ಭಾಸವಾಗುತ್ತವೆ. ಶಿವರಾಮು ಅವರು ವಿಮರ್ಶಕರಾದುದರಿಂದ ಆಯಾ ಸನ್ನಿವೇಶಗಳ ಬಗ್ಗೆ ತಳೆಯುವ ನಿಶ್ಚಿತ ನಿಲುವುಗಳು ಅವರ ಪ್ರಖರವಾದ ಜಾಗೃತ ಮನಸ್ಸಿನ ವಿವೇಚನೆಯ ಪ್ರತಿಫಲಗಳಂತೆ ಕಾಣಿಸಿಕೊಳ್ಳುತ್ತವೆ. ಪ್ರಗತಿಪರವಾದ ಒಂದು ಆಲೋಚನಾಧಾರೆ ಈ ಕಥಾನಕದ ಒಳದನಿಯಾಗಿ ಕೆಲಸ ಮಾಡಿರುವುದೂ ಉಂಟು. ಈ ತೆರನಾದ ಆಶಯಗಳಿಂದ ಇಡೀ ಬರೆವಣಿಗೆ ಕೇವಲ ಮಾಹಿತಿಗಳ ಉಲ್ಲೇಖವಾಗಿ ಉಳಿಯದೆ, ಪಾಕಗೊಳಿಸಿದ ಸ್ವಾನುಭಾವವಾಗಿ ಕಾಣಿಸಿಕೊಂಡಿದೆ.

ಪ್ರಸ್ತುತ ಕಥಾನಕದಲ್ಲಿ ಪರಸ್ಪರ ಪೂರಕವೆನಿಸುವ ನಾಲ್ಕು ಪ್ರಮುಖ ಎಳೆಗಳಿವೆ: ಒಂದು-ಆಸ್ಪತ್ರೆಯ ಸಕಲ ಸೌಲಭ್ಯದ ಸುಸಜ್ಜಿತ ವ್ಯವಸ್ಥೆ ಮತ್ತು ತೀವ್ರ ನಿಗಾ ಘಟಕದ

ಸರ್ವೋತ್ತಮ ವಾತಾವರಣ ; ಎರಡು - ಡಾಕ್ಟರುಗಳ, ನರ್ಸುಗಳ, ಸೇವಕರ ಕರ್ತವ್ಯಪರತೆ ಮತ್ತು ಸೇವಾಬದ್ಧತೆ; ಮೂರು-ರೋಗಿಯ ಅರ್ಥಾತ್ ಶಿವರಾಮು ಅವರ ಅನನ್ಯ ಸಂಯಮ, ನೋವಿನಲ್ಲೂ ಬಳಕೆಯಾದ ತಾಳಿಕೆ ಮತ್ತು ಕುಶಾಗ್ರಮತಿಯ ಆತ್ಮಾವಲೋಕನ ; ನಾಲ್ಕು-ಮಾನವೀಯ ಸಂಬಂಧಗಳ ಹಾರ್ದಿಕ ಚಿತ್ರಣ. ಇವೆಲ್ಲವನ್ನೂ ಹಬ್ಬಿತಬ್ಬಿಕೊಂಡಿರುವ ಕರುಣಾರ್ದ್ರಗುಣ ಓದುಗನಿಗೆ ಹೊಸ ಸಂಚಲನವನ್ನು ಉಂಟುಮಾಡದಿರದು; ಆಪ್ತ, ತಪ್ತ ಮತ್ತು ನಿರ್ಲಿಪ್ತ ಬರೆವಣಿಗೆ ಸಹಜವಾಗಿಯೇ ಬೆರಗುಗೊಳಿಸುವುದು. ಈ ಬಗೆಯ ಪರಿಣಾಮವನ್ನು ಬೇರಾವ ಕೃತಿಯೂ ಉಂಟುಮಾಡುವಂತೆ ತೋರದು; ಮಾಹಾಕಾವ್ಯದಿಂದಲೂ ಕೂಡ. ನೋವನ್ನೂ, ಅದರ ಪರಿಹಾರವನ್ನೂ ಇಷ್ಟೊಂದು ನೇರವಾಗಿ, ಅಷ್ಟೇ 'ದೂರ'ವಾಗಿ ಅನುಭವದ ನೆಲೆಯಲ್ಲಿ ಕೊಟ್ಟ ಇನ್ನೊಂದು ಉದಾಹರಣೆ ಸಿಕ್ಕುವುದಿಲ್ಲ. ಈ ಪುಸ್ತಕ 'ಫ್ಯಾಂಟಸಿ' ಅಲ್ಲ; ಆದರೆ ಓದುಗನ ಮಟ್ಟಿಗೆ ಹೊಸ 'ಫ್ಯಾಂಟಸಿ'ಯನ್ನು ಸೃಷ್ಟಿಸುವಂತೆ ಭಾಸವಾಗುತ್ತದೆ. ಇದು ಪುರಾಣ ಕಥಾನಕವಲ್ಲ; ಆದರೆ ಹೊಸ 'ಮಿಥ್'ನ್ನು ಸೃಷ್ಟಿಸುವಂತೆ ಕಾಣುತ್ತದೆ. ಇಲ್ಲಿ ವಾಸ್ತವಕ್ಕೂ ಕಲಾತ್ಮಕತೆಗೂ ಅಷ್ಟೊಂದು ವ್ಯತ್ಯಾಸ ಕಾಣುವುದಿಲ್ಲ; ಏಕೆಂದರೆ ತೀವ್ರತರ ವಾಸ್ತವ ಒಂದು ಭ್ರಮಾಲೋಕವನ್ನು ಸೃಷ್ಟಿಸಿದರೆ ಅದು ಅಚ್ಚರಿಪಡುವಂಥದಲ್ಲ. ಹೀಗಾಗಿ ಫ್ಯಾಂಟಸಿ ಅಲ್ಲದೆಯೂ ಫ್ಯಾಂಟಸಿಯಾಗುವ, ಪುರಾಣ ಅಲ್ಲದೆಯೂ ಪುರಾಣವಾಗುವ, ಭ್ರಮೆ ಅಲ್ಲದೆಯೂ ಭ್ರಮೆಯನ್ನು ಸೃಷ್ಟಿಸುವ ಈ ಅದ್ಭುತ ಕಥಾನಕ ಬದುಕಿನ ಒಂದು ಭಾಗವನ್ನು ಬೆಳಕಿಗೆ ಒಡ್ಡುವುದು ನಿಜ. ಸಾವು ಬದುಕಿನ ಅಂತರದ ಸೂಕ್ಷ್ಮವನ್ನು ಓದಿದವನ ಅನುಭವ ಕೋಶಕ್ಕೆ ನೇರವಾಗಿ ರವಾನೆ ಮಾಡುವ ಕಾರಣದಿಂದಾಗಿ ಬೆಚ್ಚಿಬೀಳಿಸುವ, ಜೀವನವೆಂದರೆ ಇಷ್ಟೇ ಎಂದು ಹೇಳಿ ಬಿಡುವ ಲಕ್ಷಣವನ್ನು ಹೊಂದಿರುವುದಾದರೂ, ಜೀವನ ಪ್ರೀತಿಯನ್ನು ಕಳೆದುಕೊಳ್ಳುವಂತೆ ಮಾಡುವುದಿಲ್ಲ. ಕೃತಿಯ ಒಟ್ಟು ಸಂದೇಶ ಈ ಜೀವನ ಶ್ರದ್ಧೆಯ ಚಿಂತನೆಯೇ ಆಗಿದೆ.

ರಾಗೌ

ಲೇಖಕರ ಮಾತು

೨೦೧೩ರ ಡಿಸೆಂಬರ್ ತಿಂಗಳ ಮಧ್ಯಭಾಗದಿಂದ ೨೦೧೪ರ ಫೆಬ್ರವರಿ ಮೊದಲವಾರದವರೆಗೆ ಸುಮಾರು ಎರಡು ತಿಂಗಳಕಾಲ ಮೈಸೂರಿನ ಅಪೊಲೊ ಆಸ್ಪತ್ರೆಯಲ್ಲಿ ಗಂಭೀರ ಸ್ವರೂಪದ ಕಾಯಿಲೆಯ ಕಾರಣದಿಂದ ಒಳರೋಗಿಯಾಗಿ ಚಿಕಿತ್ಸೆ ಪಡೆದೆ. ಆ ಅವಧಿಯಲ್ಲಿ ನನಗಾದ ಅನುಭವ ಮತ್ತು ಆಸ್ಪತ್ರೆಯ ಗ್ರಹಿಕೆ ಈ ಕೃತಿಯಲ್ಲಿ ಸಾಹಿತ್ಯರೂಪ ಪಡೆದಿದೆ. ವೈದ್ಯಕೀಯ ವಿಜ್ಞಾನವನ್ನು ಕುರಿತ ಸಾಕಷ್ಟು ಪುಸ್ತಕಗಳು ನಮ್ಮಲ್ಲಿ ಬಂದಿವೆ. ಆದರೆ ರೋಗಿಯೊಬ್ಬನ ಸಾವು ಬದುಕಿನ ಸ್ಥಿತಿಯ ಅನುಭವದ ಪೂರ್ಣಸ್ವರೂಪದ ಪುಸ್ತಕಗಳು ನಮ್ಮಲ್ಲಿ ಅಪರೂಪವೆಂದು ತಿಳಿಸಿದ್ದೇನೆ. ಈ ನಿಟ್ಟಿನಲ್ಲಿ ನನ್ನ ಈ ಕೃತಿಯು ಓದುಗರಿಗೆ ಹೊಸ ಅನುಭವ ಪ್ರಪಂಚವೊಂದನ್ನು ಅನಾವರಣಗೊಳಿಸಬಹುದು.

ಎರಡು ತಿಂಗಳ ಆಸ್ಪತ್ರೆಯ ವಾಸವಲ್ಲದೆ, ನಾನು ಅನಂತರ ಎರಡು ತಿಂಗಳು ಮನೆಯಲ್ಲೇ ಕೃತಕ ಉಸಿರಾಟದ ಮೂಲಕ ಚೇತರಿಸಕೊಳ್ಳಬೇಕಾಯಿತು. ಸೋಂಕು ತಡೆಯಲಾಗದ ನನ್ನ ದೇಹ ಅನೇಕ ಕಾಯಿಲೆಗಳಿಂದ ಸಂಕಷ್ಟಪಡುವಂತಾಯಿತು. ಈ ಅವಧಿಯಲ್ಲಿ ಮಧ್ಯಮವರ್ಗದಿಂದ ಬಂದ ನನಗೆ ದುಬಾರಿ ಖರ್ಚನ್ನು ನಿಭಾಯಿಸಲು ಕಷ್ಟವಾಯಿತು. ಇದನ್ನು ಅರ್ಥಮಾಡಿಕೊಂಡ ನನ್ನ ಹಿರಿಯ ಮಿತ್ರರಾದ ಶ್ರೀ ಪ. ಮಲ್ಲೇಶ್ ಮತ್ತು ಗೆಳೆಯ ಶ್ರೀ ದೇವನೂರು ಮಹಾದೇವ ಅವರು ನಾನಾ ಮೂಲಗಳಿಂದ ನನ್ನ ಚಿಕಿತ್ಸೆಗೆ ಹಣ ಒದಗಿಸುವ ವ್ಯವಸ್ಥೆ ಮಾಡಿದರು. ನಾಸ್ತಿಕನೂ ಧಾರ್ಮಿಕ ಸಂಸ್ಥೆಗಳನ್ನು ನಿರಾಕರಿಸಿದವನೂ ಆದ ನನ್ನ ಮೇಲಿನ ಪ್ರೀತಿಯಿಂದಾಗಿ ಸುತ್ತೂರು ಕ್ಷೇತ್ರಾಧ್ಯಕ್ಷರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು ನೆರವು ನೀಡಿದ್ದಾರೆ. ಹಿರಿಯ ವೈದ್ಯರಾದ ಡಾ. ಕೆ. ಮಹದೇವ್, ಶಾಸಕ ಶ್ರೀವಾಸು ಮತ್ತು ಮಿತ್ರರಾದ ಸಿ. ಬಸವೇಗೌಡ ಅವರು ನೀಡಿದ ಸಹಾಯ ಹಸ್ತ ದೊಡ್ಡದು. ಇವರಿಗೆಲ್ಲಾ ನನ್ನ ಹೃದಯಾಳದ ಧನ್ಯವಾದಗಳು.

ನಾನು ಕೆಲಸ ಮಾಡಿದ ಮೈಸೂರಿನ ವಿದ್ಯಾವರ್ಧಕ ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರು ನನ್ನ ಮೇಲಿನ ಪ್ರೀತಿಯಿಂದಾಗಿ ದೊಡ್ಡಮೊತ್ತದ ನೆರವು ನೀಡಿದ್ದಾರೆ.

ವಿದ್ಯಾವರ್ಧಕ ಸಂಘಕ್ಕೆ ಹಾಗೂ ಶ್ರೀ ಗುಂಡಪ್ಪಗೌಡ, ಶ್ರೀ ಪಿ. ವಿಶ್ವನಾಥ್ ಮತ್ತು ಶ್ರೀ ಎಸ್.ಎನ್. ಲಕ್ಷ್ಮೀನಾರಾಯಣ ಅವರಿಗೆ ನನ್ನ ಕೃತಜ್ಞತೆಗಳು.

ಈ ಪುಸ್ತಕದ ಎರಡು ಅಧ್ಯಾಯಗಳನ್ನು ಮಿತ್ರರಾದ ಶ್ರೀ ಚಂದ್ರಶೇಖರ ಪಾಟೀಲರು 'ಸಂಕ್ರಮಣ'ದಲ್ಲಿ ಪ್ರಕಟಿಸಿದ್ದಾರೆ. ನಾಲ್ಕು ದಶಕಗಳ ನನ್ನ ಅವರ ಸ್ನೇಹ ನಿಷ್ಕಲ್ಮಶವಾದುದು; ಪಾರದರ್ಶಕವಾದುದು. 'ಸಂಕ್ರಮಣ'ದಲ್ಲಿ ಪ್ರಕಟವಾದ ಭಾಗಗಳನ್ನು ಓದಿ ಹಲವಾರು ಮಂದಿ ದೂರವಾಣಿಯ ಮೂಲಕ, ಪತ್ರದ ಮೂಲಕ ತಮ್ಮ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ. ಮಿತ್ರರಾದ ಚಂಪಾ ಅವರಿಗೆ ನಮಸ್ಕಾರಗಳು.

ಸದಾ ನನ್ನ ಬಗ್ಗೆ ಅಪಾರ ಕಾಳಜಿಯನ್ನು ವಹಿಸುತ್ತಿರುವ ಡಾ. ರಾಗೌ ಅವರು ಈ ಕೃತಿಯ ಬರವಣಿಗೆ ಮತ್ತು ಪ್ರಕಟಣೆಯ ಸಂದರ್ಭದಲ್ಲಿ ನನಗೆ ನೀಡಿರುವ ಸಹಾಯ ದೊಡ್ಡದು. ವಿನಯ ಮತ್ತು ಅನುಕಂಪಗಳ ಮೂರ್ತರೂಪರಾದ ಅವರು ಈ ಕೃತಿಯ ಕರಡನ್ನು ತಿದ್ದುವುದು ಮಾತ್ರವಲ್ಲದೆ ಅಧ್ಯಯನ ಶೀಲವಾದ ಮುನ್ನುಡಿಯನ್ನು ಬರೆದಿದ್ದಾರೆ. ಅವರು ನನ್ನಲ್ಲಿಟ್ಟಿರುವ ಪ್ರೀತಿಗೆ ನಾನೇನು ತಾನೆ ನೀಡಬಲ್ಲೆ? ಹೃದಯ ತುಂಬಿದ ಪ್ರೀತಿ ಮಾತ್ರ ನೀಡಬಲ್ಲೆ.

ಕಳೆದ ಒಂದು ವರ್ಷದ ನನ್ನ ಸಾವು ಬದುಕಿನ ಹೋರಾಟದಲ್ಲಿ ನನ್ನ ಪತ್ನಿ ಸುವರ್ಣ ಕಾಡನಕುಪ್ಪೆ, ಮಗಳು ಡಾ. ಸುಶಿಕಾಡನಕುಪ್ಪೆ ಮತ್ತು ಮಗ ಡಾ. ನೇಸರ ಕಾಡನಕುಪ್ಪೆ ಅವರ ಶ್ರಮ ಅವಿಸ್ಮರಣೀಯ. ಕುಟುಂಬ ಮೌಲ್ಯದ ಸಂಕೇತವಾಗಿ ಅವರು ನನ್ನ ಕಣ್ಮುಂದೆ ಅರಳಿದರು. ನನ್ನನ್ನು ಉಳಿಸಿಕೊಳ್ಳಲು ಅವರು ನಡೆಸಿದ ಹೋರಾಟ ಮಕ್ಕಳಿಗೆ ಮಾದರಿಯಾಗುವಂಥದು. ನನ್ನ ಮಗಳು ಈ ಕೃತಿಯಲ್ಲಿ ಬರುವ ವೈದ್ಯಕೀಯ ಪಾರಿಭಾಷಿಕ ಪದಗಳ ಟಿಪ್ಪಣಿಯನ್ನು ಸಿದ್ಧಪಡಿಸಿ ನೀಡಿದ್ದಾಳೆ. ಇವರಿಗೆ ಕೃತಜ್ಞತೆ ಸಲ್ಲಿಸುವುದು ಕೃತಕವಾದೀತು.

ಈ ಕೃತಿ ಪ್ರಕಟಣೆ ಸಂದರ್ಭದಲ್ಲೇ ನನ್ನ ಕುಟುಂಬಕ್ಕೆ ಹೊಸ ಸದಸ್ಯ ಮಗಳಾಗಿ ನನ್ನ ಸೊಸೆ ಮೇಘಾ ಕಾಡನಕುಪ್ಪೆ ಆಗಮಿಸಿದ್ದಾಳೆ. ಇದು ನನಗೆ ಅತ್ಯಂತ ಸಂತೋಷ ಉಂಟುಮಾಡಿರುವ ಸಂಗತಿ.

ನನ್ನ ಗಂಭೀರ ಸ್ವರೂಪದ ಅನಾರೋಗ್ಯಸ್ಥಿತಿಗೆ ತಮ್ಮ ಸಂಯಮ ಮತ್ತು ನಗುಮೊಗದ ಚಿಕಿತ್ಸೆ ನೀಡಿ, ಚೇತರಿಕೆಯಾಗುವಂತೆ ಮಾಡಿದ ಡಾ. ಹರೀಶ್ ಜಿ. ನಾಯಕ್ ಮತ್ತು ಡಾ. ಆಮೀರ್ ಮೊಯಿನ್ ಅವರನ್ನು ನಾನು ಮರೆಯಲಾಗುವುದಿಲ್ಲ. ತಮ್ಮನ್ನು ನಂಬಿ ಬರುವ ರೋಗಿಯನ್ನು ಗುಣಪಡಿಸಲು ಅವರು ತೆಗೆದುಕೊಳ್ಳುವ ಕಾಳಜಿ, ಕಾಯಕನಿಷ್ಠೆ ನನಗೆ ಬೆರಗುಂಟು ಮಾಡಿದೆ; ಹೃದಯವಂತ ಮನುಷ್ಯರನ್ನು ಕಾಣುವಂತಾಗಿದೆ. ಇವರಿಬ್ಬರಿಗೂ ನನ್ನ ಕೃತಜ್ಞತೆಗಳು.

ಹೆಗಡೆ, ಹಣಕಾಸು ನಿರ್ವಹಣಾಧಿಕಾರಿ ಎ.ಆರ್. ಮಂಜುನಾಥ್ ಮತ್ತು ಬ್ರದರ್ ಸಿ. ಮಂಜುನಾಥ್ ಹಾಗೂ ಆಸ್ಪತ್ರೆಯ ನರ್ಸಿಂಗ್ ವರ್ಗಕ್ಕೆ,

- ಸುಮಾರು ಎರಡು ವರ್ಷಗಳಿಂದ ನನ್ನ ಕಣ್ಣುಗಳ ಆರೈಕೆ ಮಾಡಿದ ಡಾ. ಡಿ.ಎನ್. ಪ್ರಕಾಶ್ ಹಾಗೂ ನನ್ನ ಕಣ್ಣಿಗೆ ಕ್ಯಾಟರಾಕ್ಟ್ ಸರ್ಜರಿಯನ್ನು ಯಶಸ್ವಿಯಾಗಿ ಮಾಡಿದ ಡಾ. ಚೇತನ್ ಆನಂದ್ ಅವರಿಗೆ,
- ವಿಶೇಷ ಪ್ರೀತಿ ತೋರಿದ ಪ್ರೊ. ಜಿ. ಚಂದ್ರಶೇಖರ್, ಪ್ರೊ. ಎನ್.ಎಸ್. ಸ್ವಾಮಿಗೌಡ ಮತ್ತವರ ಕುಟುಂಬವರ್ಗಕ್ಕೆ,
- ಮಿತ್ರರಾದ ಡಾ. ಎನ್.ಕೆ. ರಾಮಚಂದ್ರಗೌಡ, ಡಾ. ಎಂ. ಶಿವಲಿಂಗೇಗೌಡ, ಪ್ರೊ. ಹೆಚ್.ಕೆ. ಶಿವರಾಂ, ಡಾ. ಎಸ್. ಮರೀಗೌಡ, ಪ್ರೊ. ಹೆಚ್.ಜೆ. ಚಂದ್ರಶೇಖರ್, ಪ್ರೊ. ಎಸ್. ಸುಜಾತ, ಪ್ರೊ. ಸಿ.ಬಿ. ವತ್ಸಲ, ಪ್ರೊ. ಬಿ.ಎಂ. ಮಂಜುಳ ಅವರಿಗೆ,
- ನನ್ನೊಡನೆ ಕೆಲಸ ಮಾಡಿ ಅಪಾರ ಪ್ರೀತಿ ತೋರಿದ ಬಿ.ಕೆ. ಶಿವಹೊನ್ನೇಗೌಡ, ಮಂಜುನಾಥ್, ಎನ್. ಮೀರಾ, ಎಸ್. ಪ್ರೇಮಕುಮಾರ್, ಎಸ್.ಯು. ಸುಮಲತ, ಡಿ. ಸುನೀತ, ವಿ. ರಮೇಶ್, ಎ. ಮಂಜು, ನಿಸಾರ್ ಬೇಗ್, ಪಿ. ನಾಗರಾಜು, ಸಿಂಗಯ್ಯ, ಎನ್. ಅಶೋಕ ಕುಮಾರ್, ಹೇಮಾವತಿ, ಚಂದ್ರಕಲಾ, ಎಂ. ಮಹದೇವಸ್ವಾಮಿ, ದೇವಮ್ಮ, ಬಿ.ಎಂ. ಸುಧಾ, ಜಯಮ್ಮ, ಲತಾ ಮತ್ತು ಪಿ. ವರದಾರಾಜು ಅವರಿಗೆ,
- ಸದಾ ತಮ್ಮ ಪ್ರೀತಿ-ವಾತ್ಸಲ್ಯಗಳ ಧಾರೆಯೆರೆಯುತ್ತಿರುವ ನನ್ನ ತಂದೆ ತಾಯಿ ಮತ್ತು ನನ್ನ ಅಪಾರ ಬಂಧುಗಳಿಗೆ,
- ಬರೆಯುತ್ತಿರುವ ಈ ಸಂದರ್ಭದಲ್ಲಿ ನಾನು ಮರೆತಿರಬಹುದಾದ ನನ್ನ ಹಿತೈಷಿಗಳಿಗೆ,

- ನನ್ನ ಕೃತಜ್ಞತೆಗಳು

ಪರಿವಿಡಿ

- ಮುನ್ನುಡಿ / vii
- ಲೇಖರ ಮಾತು / xiv
- ಕೃತಜ್ಞತೆಗಳು / xvii
- ಪರಿವಿಡಿ / xix

೧. ಆಸ್ಪತ್ರೆಗೆ ಸೇರುವ ಮುನ್ನ / ೧
೨. ಕಾಮಾಕ್ಷಿಯ ತೆಕ್ಕೆಯಲ್ಲಿ / ೬
೩. ಅಪೊಲೊ ಆಸ್ಪತ್ರೆಗೆ ಸೇರಿದೆ / ೧೨
೪. ಬಿರುಸಾಗಿ ನಡೆವ ಕಾಲುಗಳು, ಮಂದಗತಿಯ ನಡಿಗೆಗಳು / ೧೯
೫. ಕಾಯಿಲೆಯ ಮೂಲ ಹುಡುಕಿ / ೨೨
೬. ಲಿಂಪೋಮಾನೋ ಥೈಮೋಮಾನೋ / ೩೭
೭. ಎದೆಕರಗಿಸುವ ಆರ್ತನಾದವೂ ಉಗ್ರನರಸಿಂಹನ ಘರ್ಜನೆಯೂ / ೫೬
೮. ರಾಮು ಅಣ್ಣ.... ಭಾಗ್ಯ ಅಕ್ಕ.... / ೬೭
೯. ಇಲ್ಲಿ ಮನುಷ್ಯರಿಗೂ ಹಾಕುತ್ತಾರೆ, ಮೂಗುದಾರ / ೭೨
೧೦. ಸೆಕ್ರಿಷನ್ ಮತ್ತು ಸಕ್ಷನ್ / ೮೦
೧೧. ನನ್ನ ಬುಲ್ಗೇರಿಯನ್ ಗಡ್ಡವೂ ಮುನಿಸ್ವಾಮಿಯೂ.... / ೮೪
೧೨. ಒಣ ಕಣ್ಣಿಗೆ ತಾಜಾ ಕಣ್ಣೀರ ಹನಿಗಳು / ೯೦
೧೩. ಮೂಗನ ಕಾಡಿದರೇನು? ಸವಿ ಮಾತನು ಆಡುವನೇನು / ೯೬
೧೪. ಎಂಐಸಿಯು : ಸಾವು ಬದುಕಿನ ತ್ರಿಶಂಕು ನೆಲೆ / ೧೦೧
೧೫. ಬ್ರದರ್‌ಗಳು, ಸಿಸ್ಟರ್‌ಗಳು / ೧೧೩
೧೬. ಸ್ನೇಹಿತರು, ಹಿತೈಷಿಗಳು ಮತ್ತು ಬಂಧುಗಳು / ೧೨೨
೧೭. ಇದು ಧರ್ಮಾಸ್ಪತ್ರೆಯಲ್ಲ; ಕಾರ್ಪೊರೇಟ್ ಕಂಪನಿ! / ೧೨೭
೧೮. ಇದು ಗ್ರಾಮ ಸಂಸ್ಕೃತಿಯ ಆಧುನಿಕ ರೂಪ / ೧೩೨
೧೯. ಆಸ್ಪತ್ರೆಯಿಂದ ಬಿಡುಗಡೆಗೊಂಡ ನಂತರ / ೧೩೯
ಟಿಪ್ಪಣಿಗಳು / ೧೫೦

೧. ಆಸ್ಪತ್ರೆಗೆ ಸೇರುವ ಮುನ್ನ

೧೭, ಡಿಸೆಂಬರ್ ೨೦೧೩, ಮಂಗಳವಾರ

ನಾನು ನನ್ನ ಪತ್ನಿ ಸುವರ್ಣ ಸರಸ್ವತಿ ಪುರಂನ ನೀರಿನ ಟ್ಯಾಂಕಿನ ಬಳಿಯಿರುವ ಅಪೂರ್ವ ಡಯಾಬಿಟಿಸ್ ಫೌಂಡೇಷನ್ ಕ್ಲಿನಿಕ್‌ನ ಒಳ ಪ್ರವೇಶ ಮಾಡಿದಾಗ ಆಗಲೇ ಮಧ್ಯಾಹ್ನ ಹನ್ನೆರಡೂವರೆ ದಾಟಿತ್ತು. ಡಾ. ಎಂ.ಎ. ಶೇಖರ್ ಅವರು ರೋಗಿಗಳಿಗೆ ತಮ್ಮ ಕೊಠಡಿಯಲ್ಲಿ ಸಲಹೆ ನೀಡುತ್ತಿದ್ದರು. ಬಹಳ ಜನ ಮಧುಮೇಹಿಗಳು ತಮ್ಮ ಸರದಿಗಾಗಿ ಕಾಯುತ್ತಿದ್ದರು. ನಾವು ಮೊದಲೇ ನಮ್ಮ ಅಪಾಯಿಂಟ್‌ಮೆಂಟ್ ತೆಗೆದುಕೊಂಡಿದ್ದರಿಂದ ನಾವು ಹೆಚ್ಚು ಹೊತ್ತು ಕಾಯಬೇಕಿರಲಿಲ್ಲ.

ನನಗೆ ಸುಮಾರು ಹದಿನೈದು ವರ್ಷಗಳಿಂದ ಮಧುಮೇಹದ ಕಾಟ ಇದ್ದರೂ, ಅದನ್ನು ನಿಯಂತ್ರಣದಲ್ಲಿಟ್ಟು ಕೊಂಡಿದ್ದೆ. ಆದರೆ ಕಳೆದ ಎಳೆಂಟು ತಿಂಗಳಿಂದ ಲೈಕನ್ ಪ್ಲೆನಸ್[೧] (Lichen Planus) ಎಂಬ ಚರ್ಮರೋಗವು ಅಂಟಿ ಕೊಂಡು, ಅದು ಮುಖ್ಯವಾಗಿ ನನ್ನ ದೇಹದ ಹೊರ ಪದರವನ್ನು ಗಾಯಗೊಳಿಸುತ್ತಿತ್ತು, ಅದರಲ್ಲೂ ಬಾಯಿಯ ಮ್ಯೂಕಸ್‌ನ[೨] ಭಾಗವನ್ನು ಹರಿದು ಹೋಗುವಂತೆ ಶಿಥಿಲಗೊಳಿಸುತ್ತಿತ್ತು. ಇದರಿಂದಾಗಿ ಬಿಸಿ ಪದಾರ್ಥವನ್ನಾಗಲೀ, ಖಾರದ ಪದಾರ್ಥಗಳನ್ನಾಗಲಿ ನಾನು ತಿನ್ನಲಾಗುತ್ತಿರಲಿಲ್ಲ. ಖಾರ ಬಿದ್ದ ತಕ್ಷಣ ಕೆನ್ನೆಯ ಒಳಭಾಗದ, ವಸಡುಗಳ ಮತ್ತು ನಾಲಗೆಯ ಮ್ಯೂಕಸ್ ಚರ್ಮವು ಹರಿದು ರಕ್ತ ಬರುತ್ತಿತ್ತು. ಈ ಸಮಸ್ಯೆಯ ನಿವಾರಣೆಗಾಗಿ ಅನೇಕ ವೈದ್ಯರನ್ನು ಭೇಟಿ ಮಾಡಿ, ಚಿಕಿತ್ಸೆ

ಪಡೆದರೂ ಗುಣ ಮಾತ್ರ ಆಗಲಿಲ್ಲ.

ಕೊನೆಗೆ ನನ್ನ ಅನೇಕ ಮಿತ್ರರ ಸಲಹೆ ಮೇರೆಗೆ ಮೈಸೂರಿನ ಪ್ರಸಿದ್ಧ ಚರ್ಮರೋಗ ತಜ್ಞರಾದ ಡಾ. ಹನುಮಂತಪ್ಪ ಅವರಲ್ಲಿಗೆ ಹೋದೆ. ಅವರು ನನಗೆ ತೀರ ಅಪರಿಚಿತರೇನಲ್ಲ. ನಾನಾ ಕಾರಣಗಳಿಂದ ಅವರ ಮತ್ತು ನನ್ನ ನಡುವೆ ಮಧುರ ಬಾಂಧವ್ಯವಿತ್ತು. ನನ್ನನ್ನು ಪರೀಕ್ಷಿಸಿದ ಅವರು, 'ಗಾಬರಿ ಪಡುವಂಥದ್ದೇನೂ ಇಲ್ಲ. ಆರೇಳು ತಿಂಗಳಲ್ಲಿ ಗುಣಮಾಡಿಕೊಡುತ್ತೇನೆ' ಎಂದು ನನ್ನಲ್ಲಿ ಧೈರ್ಯ ತುಂಬಿದರು. 'ನಿಮಗೆ ಆಟೋ ಇಮ್ಯುನ್ ಡಿಸಾರ್ಡರ್'[೩] ಆಗಿದೆ. ಅದನ್ನು ತಹಬದಿಗೆ ತರಬೇಕು ಎಂದು ಹೇಳಿ 'ಇಮ್ಯುನೋ ಥೆರಪಿ'[೪] ಎಂಬ ಚಿಕಿತ್ಸೆಯನ್ನು ಆರಂಭಿಸಿದರು. ಆ ಚಿಕಿತ್ಸೆಯ ಅಂಗವಾಗಿ ಸ್ಟಿರಾಯ್ಡ್ ಅನ್ನು ನೀಡತೊಡಗಿದರು. ಆ ಸ್ಟಿರಾಯ್ಡ್‌ನ ಸೇವನೆಯ ಪರಿಣಾಮವಾಗಿ ನನ್ನ ರಕ್ತದಲ್ಲಿ ಸಕ್ಕರೆಯ ಪ್ರಮಾಣ ಅಧಿಕಗೊಂಡಿತು. ಅದರ ನಿಯಂತ್ರಣಕ್ಕೆ ನಾನು ಮಧುಮೇಹ ತಜ್ಞರಾದ ಡಾ. ಎಂ.ಎ. ಶೇಖರ್ ಅವರನ್ನು ಕಾಣುವ ಅನಿವಾರ್ಯ ಸ್ಥಿತಿ ಬಂತು.

ಡಾ. ಎಂ. ಎ. ಶೇಖರ್ ಅವರು ಮೈಸೂರಿನ ಸರಸ್ವತಿಪುರಂನವರು. ಅವರನ್ನು ನಾನು ಬಹಳ ದಿನಗಳಿಂದ ಬಲ್ಲವನಾಗಿದ್ದೆ. ನನ್ನ ಮತ್ತು ಅವರ ಮನೆ ಹತ್ತಿರ ಹತ್ತಿರದಲ್ಲೇ ಇದ್ದವು. ಅವರ ತಂದೆ ಡಾ. ಅಂಕೇಗೌಡರು ಮೈಸೂರಿನ ಪ್ರಸಿದ್ಧ ಮಕ್ಕಳರೋಗ ತಜ್ಞರಾಗಿದ್ದರು. ನಾನು ಕಂಡ ಅಪರೂಪದ ಮಾನವೀಯ ಅಂತಃಕರಣವನ್ನುಳ್ಳ ವ್ಯಕ್ತಿ. ನನ್ನ ಇಬ್ಬರು ಮಕ್ಕಳಿಗೂ ಬಾಲ್ಯದಲ್ಲಿ ಅವರೇ ಔಷಧೋಪಚಾರ ನೀಡಿದ್ದರು. ಅವರ ಚಿಕಿತ್ಸೆಯ ವಿಶೇಷವೇನೆಂದರೆ ಅವರು ದೇಸೀ ಪೌಷ್ಠಿಕಾಂಶವನ್ನು ವಿಶೇಷವಾಗಿ ತೆಗೆದುಕೊಳ್ಳಲು ಪ್ರೋತ್ಸಾಹಿಸುತ್ತಿದ್ದರು. ಕಾರ್ಖಾನೆಗಳಲ್ಲಿ ತಯಾರಾದ ಪೂರಕ ಆಹಾರದ ಪುಡಿಗಳನ್ನು ಕೊಂಡುಕೊಳ್ಳುವುದನ್ನು ಅವರು ಒಪ್ಪುತ್ತಿರಲಿಲ್ಲ. ನಮ್ಮ ಗ್ರಾಮೀಣ ಸಂಸ್ಕೃತಿಯಲ್ಲಿ ಬಳಸುವ ಉತ್ತಮ ದೇಸೀ ಸಸ್ಯ ಮತ್ತು ಸಸ್ಯೋತ್ಪನ್ನಗಳನ್ನು ಮಕ್ಕಳಿಗೆ ವಿಶೇಷವಾಗಿ ನೀಡುವಂತೆ ತಾಯಂದಿರಿಗೆ ಹೇಳುತ್ತಿದ್ದರು. ಆ ಬಗ್ಗೆ ಪುಸ್ತಕವೊಂದನ್ನು ಬರೆದು ದೇಸೀ ಆಹಾರ ಕ್ರಮದ ಗುಣಾಂಶದ ಬಗ್ಗೆ ಬೆಳಕು ಚೆಲ್ಲಿದ್ದರು. ವೈದ್ಯಕೀಯ ಶಿಕ್ಷಣ ಮುಗಿಸಿ, ಮೈಸೂರಿನ ವಾಣೀವಿಲಾಸ ಆಸ್ಪತ್ರೆಯಲ್ಲಿ ಮಕ್ಕಳರೋಗ ವಿಭಾಗದ ಮುಖ್ಯಸ್ಥರಾಗಿದ್ದರೂ, ತಮ್ಮ ನಡೆ ನುಡಿಗಳಲ್ಲಿ ಗ್ರಾಮೀಣ ಸಂಸ್ಕೃತಿಯ ಸೊಗಡನ್ನು ಬಿಟ್ಟುಕೊಟ್ಟಿರಲಿಲ್ಲ. ನನಗೆ ಅವರ ನಿಕಟವಾದ ಪರಿಚಯವಿತ್ತು. ಅವರ ಒಬ್ಬನೇ ಮಗನಾದ ಡಾ.ಎಂ.ಎ. ಶೇಖರ್ ಅವರನ್ನು ಭೇಟಿ ಮಾಡಲು ಅಂದು ನಾನು ನನ್ನ ಸರದಿಗಾಗಿ ಕಾದು ಕುಳಿತಿದ್ದೆ. ನನ್ನ ಪತ್ನಿ ಸುವರ್ಣ ನನ್ನ ಪಕ್ಕದ ಚೇರಿನಲ್ಲಿ ಕುಳಿತು ಫ್ಯಾನಿನ ಗಾಳಿಯ ತಂಪನ್ನು

ಅನುಭವಿಸುತ್ತಿದ್ದಳು.

ನನ್ನ ಆರೋಗ್ಯ ಇತ್ತೀಚಿನ ದಿನಗಳಲ್ಲಿ ಸರಿ ಇಲ್ಲವೆಂಬುದು ನನಗೆ ಮನದಟ್ಟಾಗಿತ್ತು. ಕಳೆದ ಒಂದು, ಒಂದೂವರೆ ವರ್ಷಗಳಿಂದೀಚೆಗೆ ನಾನು ದಿನೇ ದಿನೇ ನಿತ್ರಾಣಗೊಳ್ಳುತ್ತಿದ್ದೆ. ನನ್ನ ದೇಹದ ತೂಕ ತಿಂಗಳು ತಿಂಗಳಲ್ಲಿ ಕಡಿಮೆಯಾಗತೊಡಗಿತ್ತು. ಎಪ್ಪತ್ತು ಕೆ.ಜಿ. ತೂಗುತ್ತಿದ್ದವನು ಈಚೆಗೆ ಐವತ್ಮೂರು ಕೆ.ಜಿ.ಗೆ ಇಳಿದಿದ್ದೆ. ನನ್ನ ಮಾಂಸಖಂಡಗಳು ದಿನೇ ದಿನೇ ಶಿಥಿಲಗೊಂಡು ಕರಗುತ್ತಿದ್ದವು. ಇದರ ಪರಿಣಾಮವಾಗಿಯೇನೋ ನನ್ನ ದೈಹಿಕ ಶಕ್ತಿ ಕುಂದತೊಡಗಿತ್ತು. ಸ್ವಲ್ಪ ನಡೆದರೂ ಆಯಾಸಗೊಳ್ಳುತ್ತಿದ್ದೆ. ಕಾಲೇಜಿನಲ್ಲಿ ಮಹಡಿ ಮೆಟ್ಟಲು ಹತ್ತಿ ಇಳಿಯುವಾಗ ತುಂಬ ತ್ರಾಸವಾಗುತ್ತಿತ್ತು.

ಜೊತೆಗೆ ಸರಿಯಾಗಿ ಆಹಾರ ಸೇವನೆ ಮಾಡಲು ಆಗುತ್ತಿರಲಿಲ್ಲ. 'ಲೈಕನ್ ಪ್ಲೆನಸ್'ನ ಪರಿಣಾಮದಿಂದಾಗಿ ನನ್ನ ಬಾಯಿಯ ಮ್ಯೂಕಸ್ ನಾಶವಾಗಿದ್ದರಿಂದ, ಅಲ್ಲಿ ಹುಣ್ಣುಗಳಾಗಿ ಬಿಸಿ ಪದಾರ್ಥಗಳಾಗಲೀ ಖಾರದ ಪದಾರ್ಥಗಳಾಗಲೀ ಸೋಕಿದ ತಕ್ಷಣ ಅಸಾಧ್ಯವಾದ ಉರಿ ಉಂಟಾಗುತ್ತಿತ್ತು. ಇದರಿಂದ ಸರಿಯಾದ ಪೂರ್ಣರೂಪದ ಆಹಾರ ಸೇವನೆಯೂ ಕಷ್ಟವಾಗಿತ್ತು. ಅನಿವಾರ್ಯವಾಗಿ ನಾನು ದಿನದ ಮೂರೂ ಹೊತ್ತು ಖಾರವಿಲ್ಲದ ದ್ರವ ಆಹಾರವನ್ನು ಸೇವಿಸಬೇಕಾಯಿತು. ರವೆಗಂಜಿ ಮತ್ತು ರಾಗಿ ಅಂಬಲಿಯೇ ನನ್ನ ಮುಖ್ಯ ಆಹಾರ ಕ್ರಮವಾಯಿತು. ನನ್ನ ಈ ಸ್ಥಿತಿಯನ್ನು ಕಂಡ ಡಾ. ಶೇಖರ್ ಅವರು ಬಗೆ ಬಗೆಯ ಕಾಳುಗಳನ್ನು ನೆನೆಸಿ, ಒಣಹಾಕಿ, ಅನಂತರ ಹಿಟ್ಟುಮಾಡಿಸಿ ಅಂಬಲಿಯ ಜೊತೆ ಬಳಸಲು ಸೂಚಿಸಿದರು. ಅದರಿಂದ ನನ್ನ ಮಾಂಸಖಂಡಗಳು ಕರಗುವುದು ತಪ್ಪುತ್ತದೆ ಎಂದು ಸುವರ್ಣಳಿಗೆ ಹೇಳಿದ್ದರು.

ನನಗೆ ಡಾಕ್ಟರಿಗೆ ಕಾದು ಕುಳಿತುಕೊಳ್ಳುವುದು ಅಸಹನೀಯವೆನ್ನಿಸತೊಡಗಿತು. ಇದು ಕಾಯುವ ತಾಪದ ಬೇಸರದ ಪರಿಣಾಮದಿಂದ ಉಂಟಾದ ಮನಸ್ಥಿತಿಯಲ್ಲ, ನಿಜಕ್ಕೂ ನನಗೆ ಉಸಿರಾಟದಲ್ಲಿ ಆಯಾಸವಾಗುತ್ತಿತ್ತು. ನನ್ನ ಶ್ವಾಸಕೋಶಗಳಿಗೆ ನಾನು ತೆಗೆದುಕೊಳ್ಳುತ್ತಿದ್ದ ಗಾಳಿ ಸಾಕಾಗುತ್ತಿಲ್ಲವೆಂಬಂತೆ ಭಾಸವಾಗುತ್ತಿತ್ತು. ಇದು ಇಂದು ಮಾತ್ರ ಆಗುತ್ತಿರುವ ಅನುಭವವಲ್ಲ. ಕಳೆದ ತಿಂಗಳು ನಾನು ನನ್ನ ಹೆಂಡತಿ ಮಗಳೊಡನೆ ಮಂಗಳೂರಿನ ಮಗನ ಮನೆಗೆ ಹೋದಾಗಲೂ ಈ ಅನುಭವವಾಗಿತ್ತು. ಮಂಗಳೂರಿನ ಸೆಕೆಯಿಂದಾಗಿ ಹೀಗಾಗುತ್ತಿದೆಯೆಂದು ನಾನು ಬಗೆದಿದ್ದೆ. ಆದರೆ ಮಂಗಳೂರಿನಿಂದ ಮೈಸೂರಿಗೆ ಬಂದನಂತರವೂ ನನಗೆ ಉಸಿರು ಸಾಲುತ್ತಿಲ್ಲವೆಂಬ ಅನುಭವವಾಗುತ್ತಿತ್ತು.

ನಾನು ಮೊದಲಿನಿಂದಲೂ ಪ್ರಾಣಾಯಾಮ ಮಾಡುತ್ತಿದ್ದೆ. ಆದರೆ ಇತ್ತೀಚಿನ

ದಿನಗಳಲ್ಲಿ ದೀರ್ಘ ಉಚ್ವಾಸ ನಿಚ್ವಾಸ ಮಾಡಲು ಆಗುತ್ತಿರಲಿಲ್ಲ. ಶ್ವಾಸಕೋಶದ ತುಂಬ ಗಾಳಿಯನ್ನು ತುಂಬಿ, ಕೆಲವು ಕ್ಷಣ ಅಲ್ಲಿ ಗಾಳಿಯನ್ನು ನಿಲ್ಲಿಸಿ ಎಳೆದುಕೊಳ್ಳಲು ವಿಫಲವಾಗುತ್ತಿದ್ದೆ. ಹೆಚ್ಚು ಗಾಳಿಯನ್ನು ಎಳೆದುಕೊಳ್ಳಲು ಆಗದ್ದರಿಂದ ಅತ್ಯಂತ ಕಡಿಮೆ ಗಾಳಿ ಶ್ವಾಸಕೋಶಕ್ಕೆ ಹೋಗುತ್ತಿತ್ತು. ಹೀಗೆ ಸಾಕಷ್ಟು ಗಾಳಿ ಶ್ವಾಸಕೋಶಕ್ಕೆ ಹೋಗುತ್ತಿರಲಿಲ್ಲವಾಗಿ, ಬಹುಶಃ ನನಗೆ ಬೇಕಾದಷ್ಟು ಆಮ್ಲಜನಕ ಸರಬರಾಜಾಗು ತ್ತಿರಲಿಲ್ಲ. ಇದರಿಂದ ಕುಂತಲ್ಲಿ ನಿಂತಲ್ಲಿ ಮಲಗಿದಲ್ಲಿ ಒಂದು ಬಗೆಯ ಸಂಕಟದ ಅನುಭವವಾಗುತ್ತಿತ್ತು.

ಅದರಲ್ಲೂ ಕಳೆದ ಹದಿನೈದು ಇಪ್ಪತ್ತು ದಿನಗಳಿಂದ ರಾತ್ರಿಯನ್ನು ಕಳೆಯುವುದು ತುಂಬಾ ಕಷ್ಟವಾಗುತ್ತಿತ್ತು. ನಿದ್ರೆ ಬಂದರೂ ಉಸಿರು ಸಾಲುತ್ತಿಲ್ಲವೆಂಬ ಅನುಭವ ತಟ್ಟಿದಂತಾಗಿ ತಕ್ಷಣ ಎಚ್ಚರವಾಗುತ್ತಿತ್ತು. ಅಂಗಾತ ಮಲಗಿ ಉಸಿರಾಡಲು ಆಗುತ್ತಲೇ ಇರಲಿಲ್ಲ. ಮಗ್ಗುಲು ತಿರುಗಿ ಮಲಗಿದರೆ ಸ್ವಲ್ಪ ಹೊತ್ತು ಆರಾಮವೆನ್ನಿಸುತ್ತಿತ್ತು. ಆದರೆ ಈ ಸ್ಥಿತಿ ತುಸು ಹೊತ್ತು ಮಾತ್ರ. ಅನಂತರ ಎದ್ದು ಕುಳಿತುಕೊಂಡರೆ ಉಸಿರಾಟ ಸ್ವಲ್ಪ ಸರಾಗವೆನ್ನಿಸುತ್ತಿತ್ತು. ಹೀಗಾಗಿ ಅನೇಕ ರಾತ್ರಿಗಳನ್ನು ನಾನು ಬಹಳ ಹೊತ್ತು ಕುಳಿತೇ ಕಳೆಯುವಂತಾಯಿತು. ಈ ಬಗ್ಗೆ ಡಾ. ಶೇಖರ್ ಅವರಿಗೆ ತಿಳಿಸಿದ್ದೆ. ಅವರು ಒಮ್ಮೆ ಇಸಿಜಿ ತೆಗೆಸಿ ನೋಡಿದರು. ಎಲ್ಲವೂ ನಾರ್ಮಲ್ ಆಗಿದೆ ಎಂದರು. ನನ್ನ ಬಿಪಿ ಸಾಮಾನ್ಯವಾಗಿ ನಿಯಂತ್ರಣದಲ್ಲಿತ್ತು. ಸ್ಟಿರಾಯ್ಡ್ ಮಾತ್ರೆ ತೆಗೆದುಕೊಳ್ಳು ತ್ತಿದ್ದರಿಂದ ಉಂಟಾಗುತ್ತಿದ್ದ ಸಕ್ಕರೆ ಪ್ರಮಾಣದ ಏರುಪೇರುಗಳನ್ನು ಡಾ. ಶೇಖರ್ ಪರಿಹರಿಸುತ್ತಿದ್ದರು.

ಇಂದು ಬೆಳಿಗ್ಗೆಯಿಂದಲೇ ನಾನು ಅಸ್ವಸ್ಥನಾಗಿದ್ದೆ. ಸುವರ್ಣ ನನ್ನ ಆರೋಗ್ಯದ ಏರುಪೇರನ್ನು ಗಮನಿಸುತ್ತಿದ್ದಳು. ಆದರೆ ಅವಳು ಎಂದೂ ತಾನು ಗಾಬರಿ ಯಾಗಿರುವುದನ್ನು ತೋರಿಸುತ್ತಿರಲಿಲ್ಲ. ಸದಾ ಅವಳಲ್ಲಿ ಒಂದು ಬಗೆಯ ಸ್ವಯಂ ನಿಯಂತ್ರಣಭಾವವಿರುತ್ತಿತ್ತು. ಇಲ್ಲಿ, ಈಗ, ನಾನು ಚೇರಿನಲ್ಲಿ ಕೂರಲು ಸಂಕಟ ಪಡುತ್ತಿದ್ದೆ. ನನ್ನ ಬಿಪಿ ಮತ್ತು ನಾಡಿಮಿಡಿತಗಳು ಸರಿಯಾಗಿದ್ದವೆಂದು, ಆಗ ತಾನೆ ಪರೀಕ್ಷೆ ಮಾಡಿದ್ದರಿಂದ ತಿಳಿದು ಬಂದಿತ್ತು. ಆದರೆ ಈ ಕಡಿಮೆ ಉಸಿರಿನ ತೊಂದರೆ ಯಿಂದಾಗುತ್ತಿರುವ ಸಂಕಟಕ್ಕೆ ನಾನು ತಲ್ಲಣಗೊಳ್ಳುತ್ತಿದ್ದೆ.

ನನ್ನ ಸರದಿ ಬಂತು. ಡಾಕ್ಟರ್ ಅವರ ಕೊಠಡಿಗೆ ನಾನು ನನ್ನ ಪತ್ನಿ ಹೋದೆವು. ನಾನು ಅವರಿಗೆ ನನ್ನ ಸಕ್ಕರೆ ಸಮಸ್ಯೆಗಿಂತ ಮಿಗಿಲಾದ ಎದೆಯಭಾಗದ ಸಮಸ್ಯೆಯ ಬಗ್ಗೆ ವಿವರಿಸಿದೆ. ಪ್ರತಿನಿತ್ಯ ಈ ಸಮಸ್ಯೆ ನನಗೆ ಅಸಹನೀಯವಾಗಿ ಹಿಂಸೆ ಕೊಡುತ್ತಿದೆಯೆಂದು ತಿಳಿಸಿದೆ. ಡಾ. ಶೇಖರ್ ತಮ್ಮ ಸಿಬ್ಬಂದಿಯನ್ನು ಕರೆದು, ನನ್ನ

ರಕ್ತದ ಸಕ್ಕರೆ ಪ್ರಮಾಣವನ್ನು ಚೆಕ್ ಮಾಡುವಂತೆಯೂ, ಜೊತೆಗೆ ಕೂಡಲೇ ಇಸಿಜಿಯೊಂದನ್ನು ತೆಗೆಯುವಂತೆಯೂ ಸೂಚಿಸಿದರು. ಆ ಕಟ್ಟಡದಲ್ಲೇ ಇರುವ ಲ್ಯಾಬ್‌ನಲ್ಲಿ ತಂತ್ರಜ್ಞ ಪರೀಕ್ಷೆಗೆಂದು ನನ್ನಿಂದ ರಕ್ತ ತೆಗೆದುಕೊಂಡು ಮತ್ತೊಬ್ಬ ತಂತ್ರಜ್ಞ ನನ್ನನ್ನು ಮಲಗಿಸಿ, ಇಸಿಜಿಯನ್ನು ತೆಗೆದ. ಇಸಿಜಿ ಗ್ರಾಫ್ ಶೀಟನ್ನು ಡಾಕ್ಟರ್‌ಗೆ ತೋರಿಸಲು ಅವನು ಒಳ ನಡೆದ. ನಾನು ಅಲ್ಲೇ ಕುಳಿತ್ತಿದ್ದೆ. ಅಷ್ಟರಲ್ಲಿ ನನ್ನ ರಕ್ತದ ಸಕ್ಕರೆ ಪ್ರಮಾಣದ ಪರೀಕ್ಷೆಯೂ ಮುಗಿದಿತ್ತು. ನನ್ನ ರಕ್ತದ ಸಕ್ಕರೆ ಪ್ರಮಾಣ ಹತೋಟಿಯಲ್ಲಿದೆಯೆಂದು ತಂತ್ರಜ್ಞ ಹೇಳಿದ. ಇಸಿಜಿಯೂ ನಾರ್ಮಲ್ ಆಗಿದೆಯೆಂದು ಡಾಕ್ಟರ್ ಹೇಳಿದರು. ಗಾಬರಿಯಾಗಬೇಕಾದ ಅವಶ್ಯಕತೆಯಿಲ್ಲ ಎಂದು ಡಾಕ್ಟರ್ ಕೊಠಡಿಯಿಂದ ಬಂದ ಮತ್ತೊಬ್ಬ ತಂತ್ರಜ್ಞ ನುಡಿದ. ಆದರೆ ನನ್ನ ಎದೆಯ ಸಂಕಟ ಅಸಹನೀಯವಾಗತೊಡಗಿತ್ತು. ಅಸ್ವಸ್ಥತೆಯಿಂದ ಒದ್ದಾಡುವಂತಾಯಿತು. ನನ್ನ ಸ್ಥಿತಿಯನ್ನು ಕಂಡ ಡಾ. ಶೇಖರ್ ಅವರ ಕ್ಲಿನಿಕ್ ಮೇಲ್ವಿಚಾರಕ ಅಲ್ಲಿಯೇ ಪಕ್ಕದ ಕೊಠಡಿಯಲ್ಲಿ ರೋಗಿಗಳನ್ನು ಪರೀಕ್ಷಿಸುತ್ತಿದ್ದ ಫಿಸಿಷಿಯನ್ ಡಾ. ರಮೇಶ್ ಅವರನ್ನು ತಕ್ಷಣವೇ ಕರೆತಂದನು. ಡಾ. ರಮೇಶ್ ಅವರು ತಮ್ಮ ಸ್ಟೆತಾಸ್ಕೋಪ್ ಮೂಲಕ ನನ್ನ ಎದೆ ಬೆನ್ನು ಭಾಗಗಳನ್ನು ಪರೀಕ್ಷಿಸಿ, ನಾಡಿಮಿಡಿತವನ್ನು ನೋಡಿದರು. ಅವರ ಮುಖದಲ್ಲಿ ತುಸು ಆತಂಕದ ಅಲೆ ಸುಳಿದಾಡಿತು. ಅವರು ನನ್ನನ್ನು ಮತ್ತು ಸುವರ್ಣಳನ್ನು ಕುರಿತು "ಈ ಕೂಡಲೇ ಆಸ್ಪತ್ರೆಗೆ ಸೇರಬೇಕು. ಇನ್ನೂ ಕೆಲವು ಪರೀಕ್ಷೆಗಳಾಗಬೇಕು. ತಕ್ಷಣ ಹೊರಡಿ. ತಡಬೇಡ" ಎಂದರು.

ಸುವರ್ಣ ನನ್ನನ್ನು ರಸ್ತೆಯ ಬದಿ ನಿಲ್ಲಿಸಿದ್ದ ಕಾರಿನ ಕಡೆ ಕರೆದುಕೊಂಡು ಹೊರಟಳು. ಅಪೂರ್ವ ಡಯಾಬಿಟಿಸ್ ಫೌಂಡೇಷನ್‌ನ ಲ್ಯಾಬ್ ತಂತ್ರಜ್ಞ ನನ್ನ ಜೊತೆಯಲ್ಲಿ ಕಾರಿನವರೆಗೂ ಬಂದು, ನಾನು ಹುಷಾರಾಗಿ ಕಾರಿನಲ್ಲಿ ಕೂರಲು ಸಹಕರಿಸಿದನು. ಸುವರ್ಣ ತನಗಾಗುತ್ತಿರುವ ಆತಂಕವನ್ನು ತೋರಗೊಡುತ್ತಿರಲಿಲ್ಲ. ಆಕೆ ಸದಾ ಸಂಯಮ ತೂಕದ ಹೆಣ್ಣು. ಅಂಥ ಸಂದರ್ಭದಲ್ಲೂ ಅವಳು ಕಾರನ್ನು ಜಾಗ್ರತವಾಗಿ ಡ್ರೈವ್ ಮಾಡುತ್ತಿದ್ದಳು. ಅವಳ ಕೈಗಳು ಬೆವರುತ್ತಿರಲಿಲ್ಲ. ಅವಳ ಕಣ್ಣುಗಳು ದಾರಿಯನ್ನು ಶೋಧಿಸುತ್ತಿದ್ದವು.

೨. ಕಾಮಾಕ್ಷಿಯ ತೆಕ್ಕೆಯಲ್ಲಿ

ಸುವರ್ಣ ಕಾರನ್ನು ಕಾಮಾಕ್ಷಿ ಆಸ್ಪತ್ರೆಯ ಪಶ್ಚಿಮ ದ್ವಾರದ ಮೂಲಕ ಒಳ ತಂದು ಮುಖ್ಯ ಗೇಟಿನ ಬಳಿ ನಿಲ್ಲಿಸಿದಳು. ಕಾರಿನಿಂದ ಇಳಿದು ಬಾಗಿಲಲ್ಲೇ ಇದ್ದ ಆಸ್ಪತ್ರೆಯ ಸಹಾಯಕನಿಗೆ ವೀಲ್‌ಚೇರ್ ತರಲು ಸೂಚಿಸಿದಳು. ಆಸ್ಪತ್ರೆಯ ಸಹಾಯಕ ಕೂಡಲೇ ವೀಲ್‌ಚೇರ್ ತಂದು ನನ್ನನ್ನು ಜೋಪಾನವಾಗಿ ಅದರಲ್ಲಿ ಕೂರಿಸಿ, ಮುಖ್ಯದ್ವಾರದ ಒಳ ಮಗ್ಗುಲಲ್ಲೇ ಇದ್ದ ಎಮರ್ಜೆನ್ಸಿ ವಾರ್ಡ್‌ಗೆ ಕರೆದೊಯ್ದು. ಸುವರ್ಣ ಕಾರನ್ನು ಕಾರ್‌ಸ್ಟ್ಯಾಂಡ್‌ನಲ್ಲಿ ನಿಲ್ಲಿಸಲು ಹೋದಳು.

ಎಮರ್ಜೆನ್ಸಿಯಲ್ಲಿದ್ದ ಡ್ಯೂಟಿ ಡಾಕ್ಟರ್ ನನ್ನ ನಾಡಿಮಿಡಿತ ಮತ್ತು ಎದೆಯಭಾಗ ಗಳನ್ನು ಪರೀಕ್ಷಿಸುತ್ತಲೇ "ನಿಮಗೇನಾಗು ತ್ತಿದೆ?" ಎಂದು ಪ್ರಶ್ನಿಸಿದರು. ನಾನು ನನಗಾಗುತ್ತಿರುವ ನನ್ನ ಎದೆಯ ಭಾಗದ ಸಂಕಟದ ಬಗ್ಗೆ ಮೆಲುದನಿಯಲ್ಲಿ ವಿವರಿಸಿದೆ. ಈ ಪ್ರಕ್ರಿಯೆ ನಡೆಯುತ್ತಿರು ವಾಗಲೇ ಸುವರ್ಣ ಅಲ್ಲಿಗೆ ಬಂದಳು. ಡ್ಯೂಟಿ ಡಾಕ್ಟರ್ "ನೀವು ಇವರ ಮನೆಯವರಾ? ಇವರನ್ನು ಅಡ್ಮಿಟ್ ಮಾಡಬೇಕು. ಕ್ಯಾಷ್ ಕೌಂಟರ್‌ನಲ್ಲಿ ಹಣ ಕಟ್ಟಿ ಬನ್ನಿ" ಎಂದರು. "ನನ್ನ ಬಳಿ ಅಷ್ಟು ಹಣವಿಲ್ಲ. ಮನೆಗೆ ಹೋಗಿ ತರುತ್ತೇನೆ. ನೀವು ಇವರಿಗೆ ಚಿಕಿತ್ಸೆ ಮುಂದುವರಿಸಿ" ಎಂದು ಸುವರ್ಣ ಡಾಕ್ಟರ್‌ರಿಗೆ ಹೇಳಿ, ನನ್ನ ಕಡೆ ಧೈರ್ಯದಿಂದಿರುವಂತೆ ಕಣ್ಣುಗಳಲ್ಲೇ ಹೇಳಿದಳು. ನಾನು ಅವಳನ್ನು ಕುರಿತು "ನಾನು ಇಲ್ಲಿ ಸೇರುತ್ತಿರುವ ವಿಷಯವನ್ನು ಪ್ರೇಮ್‌ಕುಮಾರ್ ಮತ್ತು ಪೂರ್ಣಿಮಾರಿಗೆ ಹೇಳಿ ಹೋಗು"

ಎಂದು ಕ್ಷೀಣದನಿಯಲ್ಲಿ ಹೇಳಿದೆ. ಪ್ರೇಮಕುಮಾರ್ ಮತ್ತು ಪೂರ್ಣಿಮಾ ನನ್ನ ಶಿಷ್ಯರು. ಅವರು ಕಾಮಾಕ್ಷಿ ಆಸ್ಪತ್ರೆಯ ಹಣಕಾಸು ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ಅವರಿಗೆ ನನ್ನ ಮೇಲೆ ಸದಾ ವಿಶೇಷ ಪ್ರೀತಿ. ಸುವರ್ಣ ಹೊರಟಳು.

ಆ ಎಮರ್ಜೆನ್ಸಿ ವಾರ್ಡಿನಲ್ಲಿ ನಾನೊಬ್ಬನೇ ರೋಗಿಯಾಗಿದ್ದೆ. ಡಾಕ್ಟರ್ ಮತ್ತು ಅವರ ಸಹಾಯಕ ನನ್ನನ್ನು ಹಾಸಿಗೆಯಲ್ಲಿ ಮಲಗಿಸಿದರು. ನನ್ನ ಎದೆಯ ಭಾಗವನ್ನು ಮತ್ತೆ ಮತ್ತೆ ಪರೀಕ್ಷಿಸಿದರು. ಡಾಕ್ಟರ್ ಅವರು "ನಿಮಗೆ ನಿಲ್ಲಲು ಆಗುತ್ತದೆಯೇ? ನಿಮ್ಮ ಎದೆಯ ಭಾಗದ ಎಕ್ಸರೇ ತೆಗೆಯೋಣ" ಎಂದರು. ನಾನು 'ಆಯಿತು' ಎಂದು ಉತ್ತರಿಸಿದೆ. ಸಹಾಯಕ ನನ್ನ ಅಂಗಿ ಮತ್ತು ಬನಿಯನ್ ತೆಗೆಯಲು ಸಹಕರಿಸಿದ. ವೀಲ್‌ಚೇರ್‌ನಲ್ಲಿ ಕೂರಿಸಿ ಎಕ್ಸ್‌ರೇ ಯೂನಿಟ್ ಇರುವ ರೂಮಿನತ್ತ ನನ್ನನ್ನು ಕರೆದೊಯ್ದರು. ಆ ರೂಮಿನಲ್ಲಿ ನನ್ನನ್ನು ವೀಲ್ ಚೇರ್‌ನಿಂದ ಕೈಹಿಡಿದು ನಿಲ್ಲಲು ಸಹಾಯಕ ಸಹಾಯ ಮಾಡಿದ.

ಆಗ ನನ್ನ ಕಣ್ಣುಗಳಲ್ಲಿ ಕತ್ತಲೆ ಆವರಿಸಲು ಆರಂಭವಾಯಿತು. ನನ್ನ ಎದೆಯ ಭಾಗದ ಸಂಕಟ ಕಡಿಮೆಯಾದಂತೆನ್ನಿಸಿತು. ಕೂಡಲೇ ನನ್ನ ಸುತ್ತಲ ಜಗತ್ತು ಕತ್ತಲೆಯಲ್ಲಿ ಲೀನವಾಯಿತು.

ನನಗೆ ಪ್ರಜ್ಞೆ ಬಂದಾಗ ನಾನು ಸಂಪೂರ್ಣ ಜಾಗೃತನಾಗಿಲ್ಲವೆಂದು ನನಗೆ ತಿಳಿಯಿತು. ಒಂದು ಬಗೆಯ ಅರೆಮಂಪರು ನನ್ನನ್ನು ಆವರಿಸಿಕೊಂಡಿತ್ತು. ನನ್ನ ಕಣ್ಣುಗಳನ್ನು ಪೂರ್ಣವಾಗಿ ತೆರೆದು ನೋಡಲು ಸಾಧ್ಯವಾಗುತ್ತಿರಲಿಲ್ಲ. ಕಣ್ಣುಗಳಲ್ಲಿ ಒಂದು ಬಗೆಯ ಉರಿ, ರೆಪ್ಪೆಯ ಒಳ ಭಾಗದಲ್ಲಿ ಚುಚ್ಚಿದಂಥ ಅನುಭವ. ನನಗೆ ತಕ್ಷಣ ನೆನಪಿಗೆ ಬಂತು. ನನಗೀಗ ತಕ್ಷಣ ಕಣ್ಣುಗಳಿಗೆ ರಿಫ್ರೆಶ್ ಟಿಯರ್ಸ್ ಐ ಡ್ರಾಪ್ಸ್‌ಗಳನ್ನು ಹಾಕಬೇಕಿತ್ತು, ಸುವರ್ಣ ಎಲ್ಲಿ? ನನ್ನ ಕಣ್ಣುಗಳಿಗೆ ಐ ಡ್ರಾಪ್ಸ್ ಹಾಕಬೇಕು. "ಸುವರ್ಣ" ಎಂದು ಕೂಗಿದೆ. ನನಗೆ ಆಶ್ಚರ್ಯವಾಯಿತು. ನನ್ನ ಧ್ವನಿ ಗಂಟಲಿಂದ ಹೊರಬರಲೇ ಇಲ್ಲ! ಅಥವಾ ನನ್ನ ಧ್ವನಿಗೆ ಏನಾದರೂ ಆಗಿದೆಯೋ? ಆದರೆ, ಆದರೆ ಸುವರ್ಣ ಎಲ್ಲಿ? ಯಾರೂ ನನ್ನ ಸಹಾಯಕ್ಕೆ ಬರುತ್ತಿಲ್ಲ. ವಿಸ್ಮಯಗೊಂಡೆ.

ನಾನು ಎಲ್ಲಿದ್ದೇನೆಂಬ ಅರಿವು ನನಗುಂಟಾಗಲಿಲ್ಲ. ಧ್ವನಿ ಬರುತ್ತಿಲ್ಲ. ನನ್ನ ಕೈ ಕಾಲುಗಳನ್ನು ಆಡಿಸಲು ಆಗುತ್ತಿರಲಿಲ್ಲ. ಏನಾಗಿದೆ ಅವಕ್ಕೆ? ಜೊತೆಗೆ ನನ್ನ ಎಡಕ್ಕೆ ತಲೆಯ ಹಿಂಭಾಗದಲ್ಲಿ ಕರ್ಕಶವಾದ ಸದ್ದು ಬೇರೆ! 'ಕುಯ್ ಕುಯ್ ಟೊಯ್ಯ ಟೊಯ್ಯ' ಎಂದು ಕರ್ಕಶವಾಗಿ ಕೇಳಿ ಬರುತ್ತಿದ್ದ ಆ ಸದ್ದು ನನ್ನ ತಲೆಯನ್ನು ಹಿಂಡುತ್ತಿತ್ತು. ಆಗ ನನಗೆ ಸೊಂಟದ ಭಾಗ ಭಾರವಾಗಿದೆ ಅನ್ನಿಸಿತು. ಹೌದು, ನಾನು

ಮೂತ್ರ ವಿಸರ್ಜಿಸಬೇಕು, ಎದ್ದೇಳಬೇಕು. ಆದರೆ ಏಕೆ ನನ್ನ ಕೈಕಾಲುಗಳನ್ನೂ ಆಡಿಸಲಾಗುತ್ತಿಲ್ಲ? ನನಗೆ ಮೊದಲಿಂದಲೂ ಹೆಚ್ಚು ಹೊತ್ತು ಮೂತ್ರ ತಡೆಹಿಡಿಯಲು ಸಾಧ್ಯವಾಗುತ್ತಿರಲಿಲ್ಲ. ಇನ್ನು ಹೆಚ್ಚು ಹೊತ್ತು ತಡೆಯಲಾರೆ, ಏಕೆ ನನ್ನಿಂದ ಮೇಲೇಳಲು ಸಾಧ್ಯವಾಗುತ್ತಿಲ್ಲ?

ಯಾರೋ ಇಬ್ಬರು ಮಾತನಾಡುವುದು ಕೇಳಿಸಿತು. ನಾನು ಅವರನ್ನು ಕೂಗಿ ಕರೆಯಲು ಯತ್ನಿಸಿದೆ. ಆದರೆ ನನ್ನ ಧ್ವನಿಗೇನಾಗಿದೆ. ಅವರಲ್ಲಿ ಒಬ್ಬ ನನ್ನ ಬಳಿ ಬಂದ. ನಾನು ಅವನಿಗೆ ನಾನು ಮೂತ್ರ ವಿಸರ್ಜಿಸಬೇಕೆಂದು ಬೆರಳು ತೋರುವ ಮೂಲಕ ಕೇಳಿಕೊಂಡೆ. ಅವನು 'ಅಲ್ಲೇ ಹೋಗಬಹುದು, ಮೂತ್ರ ಮಾಡಿ' ಎಂದ. ಛೇ! ಅಲ್ಲೇ ಮಾಡಿದರೆ ಹಾಸಿಗೆ ಹೊಲಸಾಗುವುದಿಲ್ಲವೆ? ಏನಿವನು ಹೀಗೆ ಹೇಳುತ್ತಾನೆ. ನಾನು ಮೂತ್ರ ತಡೆಯಲು ಯತ್ನಿಸಿದೆ ಆದರೆ ಆಗುತ್ತಿಲ್ಲ. ಸ್ವಲ್ಪ ಸ್ವಲ್ಪವಾಗಿ ಲೀಕ್ ಆಗುತ್ತಾ ಹೋಗುತ್ತಿದೆ. ನನಗೆ ಅಸಹ್ಯವೆನ್ನಿಸಿತು. ಆದರೆ ನನ್ನ ಕಿಬ್ಬೊಟ್ಟೆ ಭಾರ ಕಡಿಮೆಯಾದಂತೆ ಮತ್ತೆ ನನಗೆ ತುಸು ನಿರಾಳವೆನಿಸಿತು. ನಿದ್ರೆ ಆವರಿಸಿತು.

ನನಗೆ ಚೆನ್ನಾಗಿ ನೆನಪಿದೆ. ಆ ನಿದ್ರೆಯಲ್ಲಿ ನನಗೊಂದು ಕನಸು ಬಿತ್ತು. ಆ ಕನಸಿನಲ್ಲಿ ನಾನು ರೋಗಿಯಾಗಿದ್ದೆ. ನನ್ನನ್ನು ಕೆ.ಆರ್. ಆಸ್ಪತ್ರೆಯ ಡಾಕ್ಟರ್ ಹನುಮಂತಪ್ಪ ವಿಶೇಷವಾಗಿ ಚಿಕಿತ್ಸೆ ನೀಡುತ್ತಿದ್ದರು. ನಾನು ನನ್ನ ಸುತ್ತಲ ಆವರಣವನ್ನು ವೀಕ್ಷಿಸಿದೆ. ಕೆ.ಆರ್. ಆಸ್ಪತ್ರೆ ಆವರಣ ಉದ್ಯಾನಗಳಿಂದ ಹಸಿರುಮಯವಾಗಿತ್ತು. ಬಣ್ಣ ಬಣ್ಣದ ಹೂಗಳು ಅರಳಿದ್ದವು. "ನಿಮಗೆ ಏನೂ ಆಗಿಲ್ಲ. ನಿಮಗೆ ಉತ್ತಮ ಆರೋಗ್ಯಸೇವೆ ದೊರೆಯುತ್ತದೆ. ಧೈರ್ಯದಿಂದಿರಿ, ನಾನಿದ್ದೇನೆ" ಎಂದು ಡಾ. ಹನುಮಂತಪ್ಪ ನನ್ನ ಭುಜ ಸವರಿ ಹೇಳುತ್ತಿದ್ದರು.

ತಕ್ಷಣ ನನ್ನ ಕನಸು ಒಡೆದು ಎಚ್ಚರವಾಯಿತು. ಇಬ್ಬರು ಗಂಡಸರು ನನ್ನ ಹಾಸಿಗೆಯ ಎರಡು ಬದಿಯಲ್ಲಿ ನಿಂತಿದ್ದರು. "ನಿಮಗೆ ಬಾತ್ ಮಾಡಿಸುತ್ತೇವೆ. ಕೋ ಆಪರೇಟ್ ಮಾಡಿ" ಎಂದು ಹೇಳಿ, ನನ್ನ ಕೈ ಕಾಲುಗಳನ್ನು ಸಡಿಲಗೊಳಿಸಿದರು. ಆಗ ನನ್ನ ಅರಿವಿಗೆ ಬಂತು - ನನಗೇಕೆ ಕೈ ಕಾಲು ಆಡಿಸಲು ಆಗುತ್ತಿಲ್ಲ ಎಂದು. ಮಂಚದ ಕಂಬಿಗಳಿಗೆ ನನ್ನ ಕೈ ಕಾಲುಗಳನ್ನು ಬೆಲ್ಟ್‌ನಿಂದ ಕಟ್ಟಿ ಹಾಕಿದ್ದರು! ಈ ಕಾರಣದಿಂದಾಗಿ ನಾನು ಆ ಕಡೆ ಈ ಕಡೆ ಹೊರಳಾಡಲು, ಕಾಲುಗಳನ್ನು ಮಡಚಲು ಆಗುತ್ತಿರಲಿಲ್ಲ. ಅವರು ಗಂಡು ನರ್ಸ್‌ಗಳು, ಆಸ್ಪತ್ರೆಗಳಲ್ಲಿ ಬ್ರದರ್‌ಗಳೆಂದು ಕರೆಯುತ್ತಾರೆ. ಈ ಬ್ರದರ್‌ಗಳು ಕೇವಲ ಒಂದೇ ನಿಮಿಷದಲ್ಲಿ ನನ್ನನ್ನು ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ ಹೊರಳಾಡಿಸಿ 'ಬಾತ್' ನೀಡಿದರು. ನಂತರ ಬಾಯಿ ತೊಳೆಯುವ ಸರದಿ. ಆಗ ಅವರು ನನ್ನ ಕೈ ಕಾಲುಗಳನ್ನು ಮತ್ತೆ ಮಂಚದ ಕಂಬಿಗಳಿಗೆ ಬಿಗಿದರು. ನನ್ನ

ಬಾಯಿಯಿಂದ ಹೊರಕ್ಕೆ ಟ್ಯೂಬ್ ಒಂದು ಬಂದು, ಅದರ ತುದಿಗೆ ಮತ್ತೊಂದು ಟ್ಯೂಬ್ ಜೋಡಣೆಯಾದಂತೆ ತೋರಿತು. ನನ್ನ ಮೂಗಿನಿಂದ ಹೊರಕ್ಕೆ ಮತ್ತೊಂದು ಟ್ಯೂಬ್ ನೇತಾಡುತ್ತಿತ್ತು. ಆಗ ಅವು ಏನೆಂದು ನನಗೆ ಅರ್ಥವಾಗಲಿಲ್ಲ. ಆ ಬ್ರದರ್‌ಗಳು ನನ್ನ ಬಾಯಿಯನ್ನು ಅಗಲಿಸಿ, ಒಳಗಿಂದ ಒಂದು ಬೆಣೆಯನ್ನು ಹೊರ ತೆಗೆದರು. ಆಗ ನನ್ನ ಬಾಯಿ ಆಡಿಸಲು ಸರಾಗವಾಯಿತು. ಬ್ರದರ್ ಒಬ್ಬ ಯಾವುದೋ ಲೋಶನ್‌ನಿಂದ ನನ್ನ ಹಲ್ಲುಗಳನ್ನು ಹತ್ತಿ ಹಚ್ಚಿದ ಕತ್ತರಿಯ ಮೂಲಕ ತಿಕ್ಕತೊಡಗಿದ. ಆನಂತರ ನನ್ನ ನಾಲಗೆಯನ್ನು ಮತ್ತೊಂದು ಹತ್ತಿಯ ಬಟ್ಟೆಯಿಂದ ಒರಟಾಗಿ ಉಜ್ಜಿದ. ನನಗೆ ವಿಪರೀತ ನೋವಾಯಿತು. ನನ್ನ ಬಾಯಿಯನ್ನು ನೋಡಿದ ಬ್ರದರ್‌ಗೆ ಗಾಬರಿಯಾಯಿತೆಂದು ತೋರುತ್ತದೆ. "ನೋಡು, ರಕ್ತ ಹರಿಯುತ್ತಿದೆ. ಈ ಪೇಶೆಂಟ್ ಟಂಗ್‌ಬೈಟ್ ಮಾಡಿಕೊಂಡಿರಬೇಕು" ಎಂದು ತನ್ನ ಸಹಚರನಿಗೆ ಹೇಳಿ ಸರಸರನೆ ಮತ್ತೆ ಬೆಣೆಯನ್ನು ಬಾಯಿಯೊಳಕ್ಕೆ ಹಾಕಿ ಲಾಕ್ ಮಾಡಿದ. ನಾನು ಹಲ್ಲು ಉಜ್ಜುವಾಗಲೇ ಕೂಗಿ ಹೇಳಲು ಯತ್ನಿಸಿದೆ: "ನನ್ನ ಬಾಯಿಯ ಮ್ಯೂಕಸ್ ಲೈಕನ್ ಪ್ಲೆನಸ್ ಕಾಯಿಲೆಯಿಂದ ನಾಶವಾಗಿದೆ. ಮೃದುವಾಗಿ ಸ್ವಚ್ಛಗೊಳಿಸುವ ಕೆಲಸ ಮಾಡಿರಿ". ಆದರೆ ನನ್ನ ಬಾಯಿಯಿಂದ ಧ್ವನಿಯೇ ಹೊರಬರುತ್ತಿರಲಿಲ್ಲ. ಆದರೆ ಆ ಬ್ರದರ್‌ಗಳು ನನ್ನ ಬಾಯಿಯ ಮೇಲೆ ಮಾಡಿದ ಧಾಳಿಯಿಂದ ನನ್ನ ಒಸಡು ಮತ್ತು ನಾಲಗೆಗಳು ಮುಂದಿನ ಅನೇಕ ತಿಂಗಳುಗಳ ಕಾಲ ಪರಿತಾಪ ಅನುಭವಿಸಬೇಕಾಯಿತು.

ಅವರು ಹೋದನಂತರ ಕಣ್ಣುಮುಚ್ಚಿ ನನಗಾಗುತ್ತಿರುವ ಯಾತನೆಯನ್ನು ಅನುಭವಿಸುತ್ತಿದ್ದೆ. ನನ್ನ ತಲೆಯ ಹಿಂಬದಿಯಿಂದ ಬರುತ್ತಿದ್ದ ಕರ್ಕಶ "ಕುಯ್ ಕುಯ್ ಟೊಯ್ಯ ಟೊಯ್ಯ" ಸದ್ದು ನನ್ನನ್ನು ಮತ್ತಷ್ಟು ವಿಹ್ವಲಗೊಳಿಸುತ್ತಿತ್ತು. ಆಗ ಯಾರೋ ಇಬ್ಬರು ನನ್ನ ಹಾಸಿಗೆಯ ಬಳಿ ಬಂದು ಮಾತನಾಡುವುದು ಕೇಳಿಸಿತು. ಕಣ್ಣು ತೆರೆದು ನೋಡಲು ಯತ್ನಿಸಿದೆ. ನನ್ನ ಒಣ ಕಣ್ಣುಗಳನ್ನು ನಾನು ತೆರೆಯಲು ಆಗುತ್ತಿರಲಿಲ್ಲ. ಅವರ ಮಾತುಗಳಿಂದ ಅವರು ವೈದ್ಯರೆಂದು ತಿಳಿಯಿತು. "ಕ್ರಿಟಿಕಲ್ ಆಗಿದೆ. ಆದರೆ ಹಾರ್ಟ್ ಪ್ರಾಬ್ಲಮ್ ಏನೂ ಇಲ್ಲ. ತಪ್ಪು ಡಯಾಗ್ನೈಸ್ ಮಾಡಿ ಟ್ರೀಟ್‌ಮೆಂಟ್ ನೀಡಿದ್ದಾರೆ. ಅವರ ರಕ್ತದ ಸೋಡಿಯಂ ಲೆವಲ್ ತೀರಾ ಕಡಿಮೆಯಾಗಿದೆ. ಓನ್ಲಿ ಥರ್ಟಿಪರ್ಸೆಂಟ್! ಪೇಶೆಂಟ್‌ಗೆ ರೆಸ್ಪಿರೇಟರಿ ಅಟ್ಯಾಕ್ ಆಗಿದೆ. ಆ ಆ್ಯಂಗಲ್‌ನಲ್ಲಿ ಟ್ರೀಟ್‌ಮೆಂಟ್ ನೀಡುವ ಬಗ್ಗೆ ಚಿಂತಿಸಬೇಕು" ಅವರಲ್ಲೊಬ್ಬರು ವಿವರಿಸುತ್ತಿದ್ದರು. ಅವರು ಅಲ್ಲಿಂದ ಹೋಗುತ್ತಿದ್ದಾರೆಂದು ಅವರ ಧ್ವನಿಯ ಕರಗುವಿಕೆಯಿಂದ ಅರ್ಥವಾಯಿತು. ಈಗಿನ ಅಲ್ಲಿನ ಚಟುವಟಿಕೆಗಳಿಂದ ಬೆಳಗಾಗಿರಬೇಕೆಂದೆನ್ನಿಸಿತು.

ನರ್ಸ್ ಒಬ್ಬಳು ನನ್ನ ಹಾಸಿಗೆಯ ಬಳಿ ಬಂದಿದ್ದಾಳೆಂದು ಆಕೆಯು ಇತರರೊಡನೆ ಮಾತನಾಡುತ್ತಿರುವುದರಿಂದ ಭಾಸವಾಯಿತು. ಅವಳ ಗಮನ ಸೆಳೆಯುವುದು ಹೇಗೆ? ನನ್ನ ಬಾಯಲ್ಲಿ ಮಾತಿಲ್ಲ, ಕಟ್ಟಿ ಹಾಕಿದ ಬಲಗೈಯಿಂದ ಕಂಬಿಯನ್ನು ತುಸು ಕುಟ್ಟಿದೆ. ಆಕೆ ನನ್ನ ಕಡೆ ಗಮನಹರಿಸಿದಳು. ನಾನು ನನ್ನ ಕೈ ಬೆರಳಿನಿಂದ ಬರೆಯಲು ಪೆನ್ನು ಮತ್ತು ಕಾಗದ ನೀಡುವಂತೆ ಸನ್ನೆ ಮಾಡಿದೆ. ನನ್ನ ಸನ್ನೆಯನ್ನು ಅವಳು ಅರ್ಥಮಾಡಿಕೊಂಡಂತೆ ಕಾಣುತ್ತದೆ. ಆಕೆ ನನಗೆ ಪೆನ್ನು ಕಾಗದ ನೀಡಿದಳು. ನಾನು "ನನಗೆ ಡ್ರೈ ಟಿಯರ್ಸ್ ಇದೆ. ನನಗೆ ಐ ಡ್ರಾಪ್ಸ್‌ನ ಅವಶ್ಯಕತೆಯಿದೆ. ರಿಫ್ರೆಶ್‌ಟಿಯರ್ಸ್ ಐ ಡ್ರಾಪ್ಸ್ ಬೇಕು. ತರಿಸಿ" ಎಂದು ಬರೆದು ನೀಡಿದೆ. ಆ ಕಾಗದ ಪಡೆದು ಹೊರಹೋದಳು.

ಮತ್ತೆ ನನಗೆ ಮಂಪರು ಕವಿಯಿತು.

ಯಾವುದೋ ಹಿತವಾದ ಸ್ಪರ್ಶ ಮತ್ತೆ ನನ್ನನ್ನು ಎಚ್ಚರಿಸಿತು. ನನ್ನ ಹಣೆಯನ್ನು ಮೃದುವಾಗಿ ಸವರುತ್ತಿದ್ದ ಕೈ ಹಾಗೂ ನನ್ನ ಕೈಯನ್ನು ಪ್ರೀತಿಯಿಂದ ಸವರುತ್ತಿದ್ದ ಕೈಗಳು ನನಗೆ ಹಿತವನ್ನುಂಟು ಮಾಡಿದವು. "ಅಪ್ಪ"- ಮಗಳ ಧ್ವನಿ. "ಅಪ್ಪ"- ಮಗನ ಧ್ವನಿ. ಆತ್ಮೀಯತೆಯ ಸೋಂಕು ನನ್ನಲ್ಲಿ ಧೈರ್ಯವನ್ನೂ ವಿಶ್ವಾಸವನ್ನೂ ಬಿತ್ತ ತೊಡಗಿತು. ಸುಶಿ ನನ್ನ ಕಣ್ಣುಗಳಿಗೆ ನಯವಾಗಿ ಒಂದೊಂದು ತೊಟ್ಟು ರಿಫ್ರೆಶ್‌ಟಿಯರ್ಸ್ ಐ ಡ್ರಾಪ್ಸ್ ಅನ್ನು ಹಾಕಿದಳು. ತಕ್ಷಣ ನನ್ನ ಕಣ್ಣುಗಳಿಗೆ ಜೀವ ಬಂತು. ಕಣ್ಣಿನ ಉರಿ ಕಡಿಮೆಯಾಯಿತು. ಕಣ್ಣು ತೆರೆದೆ. ನನ್ನ ಮಕ್ಕಳು ನನ್ನೊಡನೆ ನನ್ನ ಎದುರು ನಿಂತಿದ್ದರು. "ನಾನು ನಿನ್ನೆ ರಾತ್ರಿ ಏಳೂವರೆ ಎಂಟಕ್ಕೆಲ್ಲಾ ಬಂದೆ. ನೇಸರ ರಾತ್ರಿ ಹನ್ನೆರಡು ಗಂಟೆಗೆ ಬಂದ"- ಎಂದಳು ಮಗಳು. "ನನಗೇಕೆ ಮಾತನಾಡಲಾಗುತ್ತಿಲ್ಲ" ಎಂದು ಸನ್ನೆ ಮಾಡಿ ಕೇಳಿದೆ. "ನಿಮಗೆ ವೆಂಟಿಲೇಟರ್[೫] ಅಳವಡಿಸಿ, ಅದಕ್ಕೆ ನಿಮ್ಮ ಬಾಯಿಯ ಮೂಲಕ ಎಂಡೋಟ್ರೇಕಿಯಲ್ ಟ್ಯೂಬ್[೬] ಅನ್ನು ಅಳವಡಿಸಿದೆ. ಅದರ ಮೂಲಕ ನಿಮಗೆ ಕೃತಕ ಉಸಿರು ಸರಬರಾಜಾಗುತ್ತಿದೆ. ಆ ಟ್ಯೂಬ್ ನಿಮ್ಮ ಧ್ವನಿಪೆಟ್ಟಿಗೆಯನ್ನು ಅದುಮಿರುವುದರಿಂದ ನಿಮಗೆ ಮಾತನಾಡಲು ಆಗುವುದಿಲ್ಲ" ಎಂದು ವಿವರಿಸಿದಳು. ನಾನು ನನ್ನ ಮೂಗಿನ ಮೂಲಕ ತೂಗಾಡುತ್ತಿರುವ ಟ್ಯೂಬ್ ತೋರಿ "ಇದು ಏನು" ಎಂದು ಕೇಳಿದೆ. "ನಿಮಗೆ ಈಗ ಬಾಯಿಯ ಮೂಲಕ ಆಹಾರ ತೆಗೆದುಕೊಳ್ಳಲಾಗುವುದಿಲ್ಲ. ನಿಮ್ಮ ಮೂಗಿನ ಮೂಲಕ ಜಠರಕ್ಕೆ ನೇರವಾಗಿ ರೈಲ್ಸ್ (Ryles Tube)[೭] ಟ್ಯೂಬನ್ನು ಅಳವಡಿಸಿದೆ. ಅದರ ಮೂಲಕ ನೇರವಾಗಿ ನಿಮ್ಮ ಜಠರಕ್ಕೆ ದ್ರವರೂಪದ ಆಹಾರ ನೀಡುತ್ತಾರೆ"- ಆಕೆ ಮತ್ತೆ ವಿವರಿಸಿದಳು. ನೇಸರ "ನಾವು ಡಾಕ್ಟರ್ ಅನ್ನು ಮಾತನಾಡಿಸಿ ಬರುತ್ತೇವೆ,

ನೀವು ಗಾಬರಿ ಪಡಬೇಡಿ. ಮತ್ತೆ ಬರುತ್ತೇವೆ" ಹೇಳಿ ಹೊರಡಲು ಸಿದ್ಧನಾದ. "ಅಪ್ಪ, ಈಗ ನೀವು ಐಸಿಯುನಲ್ಲಿದ್ದೀರಾ, ಹೆಚ್ಚು ಹೊತ್ತು ನಾವು ಇಲ್ಲಿರಲು ಬಿಡುವುದಿಲ್ಲ" ಎಂದಳು ಸುಶಿ. ನಾನು ಗಂಟೆ ಎಷ್ಟು ಎಂದು ಸನ್ನೆ ಮೂಲಕ ಕೇಳಿದೆ. "ಬೆಳಿಗ್ಗೆ ಹನ್ನೊಂದು ಗಂಟೆ" ಎಂದು ನೇಸರ ತಿಳಿಸಿದ.

ಹತ್ತಿರ ಹತ್ತಿರ ಮುಕ್ಕಾಲುಗಂಟೆ ಕಳೆದಿರಬಹುದು. ಮತ್ತೆ ಮಕ್ಕಳು ಬಂದರು. ಸುಶಿ ಹೇಳಿದಳು "ಅಪ್ಪ, ನಿಮ್ಮನ್ನು ಇಲ್ಲಿಂದ ಈಗ ಅಪೊಲೊ ಆಸ್ಪತ್ರೆಗೆ ಶಿಫ್ಟ್ ಮಾಡಲು ತೀರ್ಮಾನಿಸಿದ್ದೇವೆ. ನಿಮಗೆ ಉತ್ತಮ ಕೇರ್ ಮತ್ತು ಟ್ರೀಟ್‌ಮೆಂಟ್ ಸಿಗುತ್ತದೆ" ಎಂದು ಹೇಳಿ ನನ್ನ ಮುಖವನ್ನು ನೋಡಿದಳು. ನಾನು ಏನನ್ನೂ ಹೇಳುವ ಅಥವಾ ವಿವೇಚಿಸಿ ತಿಳಿಸುವ ಸ್ಥಿತಿಯಲ್ಲಿರಲಿಲ್ಲ. "ನಿಮಗೆ ತೋರಿದ ಹಾಗೆ ಮಾಡಿ" ಎಂದು ಸನ್ನೆಯ ಮೂಲಕ ಒಪ್ಪಿಗೆ ನೀಡಿದೆ. "ನಿಮ್ಮನ್ನು ಸರಿಯಾಗಿ ಪರೀಕ್ಷೆ ಮಾಡಿ ಚಿಕಿತ್ಸೆ ನೀಡುವ ಡಾಕ್ಟರ್ರೇ ಸಿಗುತ್ತಿಲ್ಲ. ಇಲ್ಲಿನ ಹಿರಿಯ ಫಿಸಿಶಿಯನ್ 'ರ'ರವರು ಆದಷ್ಟು ಬೇಗ ನಿಮ್ಮನ್ನು ಅಪೋಲೋಗೆ ಶಿಫ್ಟ್ ಮಾಡುವುದು ಉತ್ತಮ ಎಂದು ಸಲಹೆ ನೀಡಿದ್ದಾರೆ" ಎಂದು ನೇಸರ ನುಡಿದ. ಅವನ ಕೈ ನನ್ನ ತೋಳನ್ನು ಸವರುತ್ತಿತ್ತು. ಸುಶಿಯ ಬಲಗೈ ಮತ್ತೆ ನನ್ನ ಹಣೆಯನ್ನು ನೇವರಿಸುತ್ತಿತ್ತು.

ನನ್ನ ಮಕ್ಕಳ ಮಗ್ಗುಲಲ್ಲಿ ಯಾರೋ ನಿಂತಿದ್ದಾರೆಂದು ಅನ್ನಿಸಿತು. ಅದು ಚಂದ್ರಶೇಖರ್‌ರವರೋ ಸ್ವಾಮಿಗೌಡರೋ ಎಂಬುದು ಅರಿವಿಗೆ ಬಾರದಾಯಿತು.

೩. ಅಪೋಲೊ ಆಸ್ಪತ್ರೆಗೆ ಸೇರಿದೆ

ಮಧ್ಯಾಹ್ನ ಒಂದೂವರೆಯ ಸಮಯ. ನನ್ನನ್ನು ಕಾಮಾಕ್ಷಿಯಿಂದ ವೀಲ್‌ಕಾಟ್ ಮೂಲಕ - ಆಮ್ಲಜನಕ ನೀಡುವುದರ ಸಹಿತ - ಅಲ್ಲಿನ ಐಸಿಯುನಿಂದ ಹೊರಗೆ ಕರೆತರಲಾಯಿತು. ಕಾರಿಡಾರ್‌ನ ಇಕ್ಕೆಲಗಳಲ್ಲಿ ಆತಂಕಭರಿತ ಪರಿಚಿತನೋಟಗಳು ನನ್ನನ್ನು ಗಮನಿಸುತ್ತಿದ್ದವು. ಆಸ್ಪತ್ರೆಯ ಬಾಗಿಲಲ್ಲಿ ಅಪೋಲೊ ಆಸ್ಪತ್ರೆಯ ಮೆಡಿಕಲ್ ಅಂಬುಲೆನ್ಸ್ ಬಾಗಿಲು ತೆರೆದು ನನಗಾಗಿ ಕಾಯುತ್ತಿತ್ತು. ವೀಲ್‌ಕಾಟ್‌ನಿಂದ ನಾಲ್ವರು ಬ್ರದರ್‌ಗಳು ನನ್ನನ್ನು ಅನಾಮತ್ತಾಗಿ ಬೆಡ್ ಶೀಟ್‌ನ ಸಹಾಯದಿಂದ ಅಂಬುಲೆನ್ಸ್ ಕಾಟ್‌ಗೆ ನಾಜೂಕಾಗಿ ವರ್ಗಾಯಿಸಿದರು. "ಪ್ರೊ. ವೆಲ್‌ಕಮ್ ಟು ಅಪೊಲೊ, ಯಾವುದಕ್ಕೂ ಹೆದರಬೇಕಿಲ್ಲ. ನಿಮಗೆ ಎಲ್ಲ ಬಗೆಯ ಹೆಲ್ತ್ ಕೇರ್ ಸಿಗುತ್ತದೆ. ಯು ಆರ್ ಇನ್ ದಿ ರೈಟ್ ಹ್ಯಾಂಡ್ಸ್. ಡಾ. ಹರೀಶ್ ನಾಯಕ್ ನಿಮ್ಮನ್ನು ಚೆನ್ನಾಗಿ ನೋಡಿಕೊಳ್ತಾರೆ. ಅವರು ನಿಮ್ಮ ಮುಖ್ಯ ಡಾಕ್ಟರ್" ಎಂದು ಅಪರಿಚಿತ ಬ್ರದರ್ ಧ್ವನಿಯೊಂದು ಹೇಳಿತು. ಸುಶಿ ಆಂಬುಲೆನ್ಸ್‌ನಲ್ಲಿ ನನ್ನ ಜೊತೆಯಲ್ಲೇ ಇದ್ದಳು.

ನನ್ನ ಪ್ರಜ್ಞೆ ಜಾಗೃತವಾಗಿತ್ತು. ನಾನು ತುಂಬಾ ನಿತ್ರಾಣನಾಗಿರುವೆನೆಂದು ಅನ್ನಿಸಿತು. ಆಮ್ಲಜನಕವನ್ನು ನನ್ನ ಬಾಯಿಗಾಕಿರುವ ಟ್ಯೂಬ್‌ನ ಮೂಲಕ ನೀಡಲಾಗುತ್ತಿತ್ತು. ಆಮ್ಲಜನಕವನ್ನು ಸಿಲಿಂಡರ್‌ನಿಂದ ನನ್ನ ಬಾಯಿಯ ಟ್ಯೂಬ್‌ಗೆ ಹಾರ್ನ್‌ನಂಥ ರಬ್ಬರ್ ಬಾಲ್ ಅನ್ನು ಬ್ರದರ್ ಒಬ್ಬ ಅದುಮಿ ಬಿಡುತ್ತಿದ್ದ.

ನಾನು ಕಣ್ಮುಚ್ಚಿ ಮಲಗಿದ್ದರೂ ಅಂಬುಲೆನ್ಸ್ ಸಾಗುವ

ರಸ್ತೆ ಯಾವುದೆಂದು ಸ್ಪಷ್ಟವಾಗಿ ಗ್ರಹಿಸಬಲ್ಲವನಾಗಿದ್ದೆ. ಅಂಬುಲೆನ್ಸ್ ಕಾಮಾಕ್ಷಿಯ ರಸ್ತೆಯಲ್ಲಿ ಪೂರ್ವಕ್ಕೆ ಚಲಿಸಿ, ಸ್ವಲ್ಪ ಸಮಯದಲ್ಲೇ ವಿಶ್ವಮಾನವ ಜೋಡಿ ರಸ್ತೆಯಲ್ಲಿ ದಕ್ಷಿಣಕ್ಕೆ ತಿರುಗಿತು. ಅರ್ಧ ಕಿಲೋಮೀಟರ್ ಮುಂದೆ ಸಾಗಿ ಮತ್ತೆ ಪೂರ್ವಕ್ಕೆ ತಿರುಗಿತು. ಅದು ನ್ಯೂ ಕಾಂತರಾಜೇ ಅರಸ್ ರಸ್ತೆ. ಈ ರಸ್ತೆಯಲ್ಲೇ ಅಪೊಲೊ ಆಸ್ಪತ್ರೆ ಇರುವುದು.

ಕಾಮಾಕ್ಷಿ - ಅಪೊಲೊ ಆಸ್ಪತ್ರೆಗಳಿರುವುದು ನಾನು ವಾಸ ಮಾಡುವ ಪ್ರದೇಶದಲ್ಲಿಯೇ. ನಾನು ಪ್ರತಿನಿತ್ಯ ಈ ಸರಹದ್ದಿನ ರಸ್ತೆಗಳಲ್ಲೇ ನನ್ನ ವೃತ್ತಿಗಾಗಿ ಹೋಗಿಬರುವುದಾಗಿತ್ತು. ಜೊತೆಗೆ, ಈ ರಸ್ತೆಗಳು, ಕಟ್ಟಡಗಳು ಇತರೆ ನಾಗರಿಕ ಸೌಲಭ್ಯಗಳು ನನ್ನ ಕಣ್ಣ ಮುಂದೆಯೇ ಅರಳಿ ಎದ್ದು ನಿಂತಿದ್ದವು. ಇದು ನನ್ನ ಪ್ರದೇಶ!

ಅಂಬುಲೆನ್ಸ್ ನ್ಯೂಕಾಂತರಾಜೇ ಅರಸ್ ರಸ್ತೆಯಲ್ಲಿ ಸಾಗಿ, ಆದಿಚುಂಚನಗಿರಿ ರಸ್ತೆಗೆ ಮತ್ತೆ ದಕ್ಷಿಣಕ್ಕೆ ತಿರುಗಿತು. ಈ ತಿರುವಿನ ಐದಾರು ಮೀಟರ್‌ಗಳಲ್ಲಿಯೇ ಅಪೊಲೊ ಆಸ್ಪತ್ರೆಯ ಮುಖ್ಯ ದ್ವಾರವಿದೆ. ಈ ದ್ವಾರದಲ್ಲಿ ಪ್ರವೇಶಮಾಡಿ, ಅಲ್ಲಿಯೇ ತಕ್ಷಣದ ಎಡಭಾಗದಲ್ಲಿರುವ ಎಮರ್ಜೆನ್ಸಿ ದ್ವಾರದ ಮುಂಭಾಗದಲ್ಲಿ ನಿಂತಿತು. ಬ್ರದರ್ ಒಬ್ಬ ಇಳಿದು ಹೋಗಿ ಅಪೊಲೊ ಐಸಿಯುಗೆ ಹೊಸ ಕೇಸ್ ಬಂದಿದೆಯೆಂದು ತಿಳಿಸಲು ನಡೆದ.

ನ್ಯೂ ಕಾಂತರಾಜೇ ಅರಸ್ ರಸ್ತೆಯ ದಕ್ಷಿಣ ಭಾಗಕ್ಕೆ ಹೊಂದಿಕೊಂಡಂತೆ ಬೃಹತ್ ಆಗಿ ಎದ್ದಿರುವ ಆಧುನಿಕ ಕಟ್ಟಡವೇ ಅಪೊಲೊ ಆಸ್ಪತ್ರೆ. ಇದರ ಶಂಕುಸ್ಥಾಪನೆಯಿಂದ ಹಿಡಿದು ಆರಂಭಗೊಂಡ ಕ್ಷಣದವರೆಗೆ ಗೊತ್ತು. ಮೂಲತಃ ಆದಿ ಚುಂಚನಗಿರಿ ಮಠದ ಸ್ವತ್ತು ಈ ಜಾಗ. ದೇಶದ ಅತಿ ದೊಡ್ಡ ಕಾರ್ಪೊರೇಟ್ ಕಂಪನಿಯಾದ ಅಪೊಲೊ ಸಹಭಾಗಿತ್ವದಲ್ಲಿ ಈ ಕಟ್ಟಡವನ್ನು ಕಟ್ಟಲಾಯಿತು. ಇದನ್ನು ಕಟ್ಟುವ ಮೇಲುಸ್ತುವಾರಿಯನ್ನು ನಾನು ಕೆಲಸ ಮಾಡುತ್ತಿದ್ದ ವಿದ್ಯಾಸಂಸ್ಥೆಯ ಅಂದಿನ ಕಾರ್ಯದರ್ಶಿಗಳಾಗಿದ್ದ ಪಿ.ಎಂ. ಚಿಕ್ಕಬೋರಯ್ಯನವರು ವಹಿಸಿಕೊಂಡಿದ್ದರು. ಈ ಕಟ್ಟಡದ ನಿರ್ಮಾಣದ ಹಂತದಲ್ಲಿ ಇಲ್ಲಿ ಕೆಲಸ ಮಾಡುತ್ತಿದ್ದ ಇಂಜನಿಯರ್‌ಗಳು, ಡಿಸೈನರ್‌ಗಳು ಮತ್ತು ಲೆಕ್ಕಾಧಿಕಾರಿಗಳು ಆಗಾಗ್ಗೆ ನಮ್ಮ ಸಂಸ್ಥೆಯ ಕಛೇರಿಗೆ ಬರುತ್ತಿದ್ದರು. ಈ ಆಸ್ಪತ್ರೆ ಉದ್ಘಾಟನೆಗೊಂಡಾಗ "ಬಿಜಿಎಸ್ ಅಪೊಲೊ ಹಾಸ್ಪಿಟಲ್" ಆಗಿತ್ತು. ಆದರೆ ಈಗ ಆದಿ ಚುಂಚನಗಿರಿ ಮಠದ ಷೇರುಗಳು ಕಡಿಮೆಯಾಗಿ "ಅಪೊಲೊ ಬಿಜಿಎಸ್ ಹಾಸ್ಪಿಟಲ್" ಆಗಿದೆ.

ನನ್ನನ್ನು ಕರೆದೊಯ್ಯಲು ಆಸ್ಪತ್ರೆಯ ಒಳಭಾಗದಿಂದ ವೀಲ್‌ಕಾಟ್ ಬಂದಿತು. ಮೊದಲಿನಂತೆಯೇ ಅತ್ಯಂತ ನಾಜೂಕಿನಿಂದ ಅಂಬುಲೆನ್ಸ್‌ನ ಕಾಟ್‌ನಿಂದ

ವೀಲ್‌ಕಾಟ್‌ಗೆ ವರ್ಗಾಯಿಸಿದರು. ಅಪೊಲೊ ಆಸ್ಪತ್ರೆಯ ಸಾಗಾಣಿಕೆ ವಿಭಾಗದ ತರುಣನ ಜೊತೆ ಬ್ರದರ್‌ಗಳು ಆಮ್ಲಜನಕದ ಸಿಲಿಂಡರ್ ಸಮೇತ ಲಿಫ್ಟ್ ಬಳಿ ಕರೆತಂದರು. ಲಿಫ್ಟ್‌ನಲ್ಲಿ "ಎಂಐಸಿಯು ಥರ್ಡ್‌ಫ್ಲೋರ್" ಎಂದು ಹೇಳಿದ್ದು ನನಗೆ ಕೇಳಿಸಿತು. ಸುಶಿಯ ಕೈಗಳು ನನ್ನ ತೋಳನ್ನು ಮೃದುವಾಗಿ ನನ್ನನ್ನು ಹಿಡಿದಿದ್ದವು.

ಮೂರನೆಯ ಮಹಡಿಯಲ್ಲಿ ಲಿಫ್ಟ್‌ನ ಬಾಗಿಲು ತೆರೆಯಿತು. ನನ್ನ ಕಾಟ್ ಅನ್ನು ತಳ್ಳುತ್ತಾ "ಕನ್‌ಸಲ್ಟೇಶನ್ ರೂಮಿನ ಬಾಗಿಲಿಂದ ನಡೆಯಿರಿ. ನೇರವಾಗಿ ಬೆಡ್ ನಂ. ಹತ್ತು" ಎಂದು ಬ್ರದರ್ ಒಬ್ಬ ಸೂಚಿಸಿದ. ವೀಲ್‌ಕಾಟ್ ಸರಸರನೆ ಮುಂದುವರಿಯಿತು. ಇಲ್ಲಿ ಯಾವುದಕ್ಕೂ ವ್ಯವಧಾನವಿಲ್ಲ. ನಡೆಯೆಲ್ಲವೂ ತೀವ್ರ. ಕ್ರಿಯೆಯೂ ಅಷ್ಟೆ! ನನ್ನನ್ನು ಎಂಐಸಿಯು ನ ಉತ್ತರ ಭಾಗದಲ್ಲಿದ್ದ ಬೆಡ್ ನಂ. ಹತ್ತರ ಬಳಿ ತಂದು ಮತ್ತೆ ನಾಜೂಕಾಗಿ ಅಲ್ಲಿನ ಕಾಟ್‌ಗೆ ವರ್ಗಾಯಿಸಿದರು.

ಮುಂದಿನ ಹತ್ತು - ಹದಿನೈದು ನಿಮಿಷ ಅಲ್ಲಿ ಬ್ರದರ್‌ಗಳ ಕುಶಲಭರಿತ ಚುರುಕಿನ ಕೆಲಸದ ಗತಿಯನ್ನು ಅನುಭವಿಸಿದೆ. ಮೊದಲು ಕಾಮಾಕ್ಷಿಯ ಗೌನ್ ಅನ್ನು ತೆಗೆದು ಅಪೊಲೊ ಆಸ್ಪತ್ರೆಯ ಬಿಳಿ ಚುಕ್ಕೆಗಳಿರುವ ಹಸಿರು ಗೌನನ್ನು ತೊಡಿಸಿದರು. ಸಿಲಿಂಡರ್‌ನಿಂದ ಬರುತ್ತಿದ್ದ ಆಮ್ಲಜನಕದ ಸಂಪರ್ಕವನ್ನು ನನ್ನ ಬಾಯಿಯಲ್ಲಿದ್ದ ಟ್ಯೂಬ್‌ಗೆ ವೆಂಟಿಲೇಟರ್‌ನ ಸಂಪರ್ಕ ನೀಡಲಾಯಿತು. ನನ್ನ ಬಲತೋಳಿಗೆ ಬಿಪಿಮಾಪನ ಪಟ್ಟಿಯನ್ನು ಬಿಗಿಯಲಾಯಿತು. ನನ್ನ ಎದೆ ಭಾಗಕ್ಕೆ ಐದು ಕಡೆ ಬಿಲ್ಲೆಗಳನ್ನು ಅಂಟಿಸಿ, ಅವುಗಳಿಗೆ ವೈರ್‌ಗಳಿಂದ ಸಂಪರ್ಕ ಕಲ್ಪಿಸಿ ನನ್ನ ಎದೆಯ ಭಾಗದ ಕಾರ್ಯಕ್ಷಮತೆಯ ರೀಡಿಂಗ್ ಅನ್ನು ಮಾನಿಟರ್‌ನಿಂದ ಪಡೆಯಲು ವ್ಯವಸ್ಥೆ ಮಾಡಲಾಯಿತು. ನನ್ನ ಎಡಕೈನ ತೋರ್ಬೆರಳಿಗೆ ನನ್ನ ರಕ್ತದಲ್ಲಿರುವ ಆಮ್ಲಜನಕದ ಪ್ರಮಾಣವನ್ನು ಪತ್ತೆ ಹಚ್ಚಿ ತಿಳಿಸುವ ಮತ್ತು ನನ್ನ ಹೃದಯದ ಬಡಿತವನ್ನು ಅಳತೆ ಮಾಡುವ ಪಲ್ಸ್ ಆಕ್ಸಿಮೀಟರ್ ಅನ್ನು ಅಳವಡಿಸಲಾಯಿತು. ನನ್ನ ಮೂತ್ರ ಸಲೀಸಾಗಿ ಹೊರಹೊಮ್ಮುತ್ತಿದೆಯೇ ಎಂದು ಪರೀಕ್ಷಿಸಿ, ಮೂತ್ರ ಸಂಗ್ರಹಿಸಿಕೊಳ್ಳುವ ಪ್ಲಾಸ್ಟಿಕ್ ಚೀಲವನ್ನು ಕಾಟ್‌ಗೆ ಸಿಕ್ಕಿಸಲಾಯಿತು. ಅನಂತರ ರಗ್ಗನ್ನು ನಾಜೂಕಾಗಿ ನನ್ನ ಕುತ್ತಿಗೆವರೆಗೂ ಎಳೆದು ದೇಹಕ್ಕೆ ಬೆಚ್ಚನೆಯ ಹಿತವನ್ನುಂಟು ಮಾಡಲಾಯಿತು.

ಸುಶಿ ನನ್ನ ಕ್ಯಾಬಿನ್ ಇನ್‌ಚಾರ್ಜ್ ಬ್ರದರ್‌ಗೆ ನನ್ನ ಕಣ್ಣಿಗೆ ಹಾಕುವ ರಿಫ್ರೆಶರ್ ಐ ಡ್ರಾಪ್ಸ್ ಅನ್ನು ನೀಡಿ "ಈ ಡ್ರಾಪ್ಸ್‌ನ್ನು ಪ್ರತಿಗಂಟೆಗೆ ಒಮ್ಮೆ ಹಾಕಬೇಕು" ಎಂದು ಹೇಳಿದ್ದು ಕೇಳಿಸಿತು. ಬ್ರದರ್ ನನ್ನ ಕಣ್ಣಿ ರೆಪ್ಪೆಗಳನ್ನು ಅಗಲಿಸಿ ಐ ಡ್ರಾಪ್ಸ್ ಅನ್ನು ಹಾಕಿದ. ಹಿತವಾಯಿತು. ಕಣ್ಣಿ ಉರಿ ಕಡಿಮೆಯಾಯಿತು. ನಾನು ನಿಧಾನವಾಗಿ ಕಣ್ಣು ತೆರೆದೆ. ಸುಶಿ ಕಾಣಿಸಿದಳು. ಸುತ್ತ ಐದಾರು ಬ್ರದರ್‌ಗಳು! ತಕ್ಷಣ ಕಣ್ಣು ಮುಚ್ಚಿಕೊಳ್ಳು

ವಂತಾಯಿತು. ಏಕೆಂದರೆ ಎಂಐಸಿಯು ಒಳಾಂಗಣಕ್ಕೆ ಅತ್ಯಂತ ಪ್ರಕಾಶಮಾನವಾದ ದೀಪಗಳನ್ನು ಅಳವಡಿಸಿದ್ದರು. ಅವುಗಳಿಂದ ಹೊರಹೊಮ್ಮುತ್ತಿದ್ದ ಬೆಳಕಿಗೆ ಕಣ್ಣು ಮುಚ್ಚುವಂತಾಯಿತು. ಅಹಾ! ಚಳಿಯಾಗುತ್ತಿದೆ. ದೇಹ ಸೂಕ್ಷ್ಮವಾಗಿ ನಡುಗಿತು. ಸುಶಿ "ಅಪ್ಪ, ಇದು ಫುಲ್ಲೀ ಏರ್ ಕಂಡೀಷನ್ಡ್ ವಾರ್ಡ್" ಎಂದಳು.

ಬ್ರದರ್‌ಗಳ ಕೆಲಸವೆಲ್ಲವೂ ಡ್ಯೂಟಿ ಡಾಕ್ಟರ್‌ಗಳ ಮೇಲುಸ್ತುವಾರಿಯಲ್ಲಿ ನಡೆಯುತ್ತಿತ್ತು. ಬ್ರದರ್‌ಗಳ ನಗುಮುಖ ಹಾಗೂ ಅವರ ಪ್ರಶಾಂತಮುಖ ನನಗೆ ಹಿಡಿಸಿತು. ಅವರೊಡನೆ ಕಿಲಕಿಲನೆ ನಗುತ್ತಾ ಕೆಲಸ ಮಾಡುತ್ತಿದ್ದ ಅತಿ ತೆಳುದೇಹದ ಕೋಮಲಾಂಗದ ಸಿಸ್ಟರ್‌ಗಳು ಎಂಐಸಿಯುಗೆ ಜೀವಂತಿಕೆಯನ್ನು ಜಾಗೃತಗೊಳಿಸು ತ್ತಿದ್ದರು.

ಬ್ರದರ್‌ಗಳು ತಮ್ಮ ಪ್ರಾಥಮಿಕ ಕೆಲಸಗಳನ್ನು ಮುಗಿಸಿದ ತಕ್ಷಣ ಡ್ಯೂಟಿ ಡಾಕ್ಟರ್‌ಗಳು ನನ್ನ ದೇಹವನ್ನು ಸ್ಟೆತಾಸ್ಕೋಪ್‌ನಿಂದ ಪರೀಕ್ಷಿಸಿದರು; ನನ್ನ ನಾಡಿಮಿಡಿತ, ಹೃದಯ ಬಡಿತ, ಬಿಪಿ, ಆಮ್ಲಜನಕ ಪ್ರಮಾಣ ಮತ್ತಿತರ ಅಂಶಗಳನ್ನು ಮಾನಿಟರ್ ನೆರವಿನಿಂದ ಗ್ರಹಿಸತೊಡಗಿದರು. ನನ್ನ ಕ್ಯಾಬಿನ್ ಎದುರಿಗಿದ್ದ ಟೇಬಲ್ ಮೇಲೆ ನನ್ನ ಕೇಸ್‌ಶೀಟ್ ಸಿದ್ಧಗೊಳಿಸುವ ಕೆಲಸದಲ್ಲಿ ಬ್ರದರ್ ಒಬ್ಬ ಉದ್ಯುಕ್ತನಾದ. ಅದರಲ್ಲಿ ನಾನು ಎಂಐಸಿಯುಗೆ ದಾಖಲಾದ ಸಮಯ ಹಾಗೂ ನನ್ನ ಆರೋಗ್ಯದ ಸ್ಥಿತಿಯನ್ನು ತಿಳಿಸುವ ಅಂಕಿ ಅಂಶಗಳು ದಾಖಲಾದವು. ಜೊತೆಗೆ ಕಾಮಾಕ್ಷಿ ಆಸ್ಪತ್ರೆಯವರು ನೀಡಿದ್ದ ನನ್ನ ಡಿಸ್‌ಚಾರ್ಜ್ ನೋಟ್ ಸಮ್ಮರಿ ಸಹ ಇಡಲಾಯಿತು. ಇವೆಲ್ಲವೂ ತಜ್ಞ ಡಾಕ್ಟರ್‌ರವರ ಅವಗಾಹನೆಗಾಗಿ ಸಿದ್ಧಗೊಳ್ಳುತ್ತಿದ್ದ ಮೂಲಭೂತ ಮಾಹಿತಿಗಳೆಂದು ಅನಂತರ ನನಗೆ ಮನದಟ್ಟಾಯಿತು.

ಅಷ್ಟು ಹೊತ್ತಿಗೆ ಮಧ್ಯಾಹ್ನ ಮೂರುಗಂಟೆಯ ಮೇಲಾಗಿತ್ತು. ಬ್ರದರ್‌ಗಳು ನನ್ನ ಮಗಳನ್ನು ಮತ್ತೆ ಕರೆದಾಗ ಬನ್ನಿ ಎಂದು ಹೊರಕ್ಕೆ ಕಳಿಸಿದರು. ಅಷ್ಟರಲ್ಲಿ ಆಹಾರ ಬಂದಿತ್ತೆಂದು ತೋರುತ್ತದೆ. ನನ್ನ ರೈಲ್ಸ್ ಟ್ಯೂಬ್‌ನ ಮೂಲಕ ಆ ದ್ರವವನ್ನು ನನ್ನ ಜಠರಕ್ಕೆ ಕಳಿಸಲಾಯಿತು. ನನಗೆ ಆಯಾಸವಾಗಿತ್ತೆಂದು ತೋರುತ್ತದೆ. ಕಣ್ಣು ಭಾರವಾಯಿತು-ಮುಚ್ಚಿದೆ.

"ಶಿವರಾಮು ಸರ್, ಶಿವರಾಮು ಸರ್" ಎಂದು ಕರೆದಂತೆ ಭಾಸವಾಯಿತು. "ಶಿವರಾಮು, ಸರ್, ಕಣ್ಣು ತೆರೆಯಿರಿ. ನಾನು ಡಾ. ಆಮಿರ್ ಮೊಹಿನ್, ನಿಮ್ಮ ಡಾಕ್ಟರ್. ಎಲ್ಲಿ, ಕಣ್ಣು ಸರಿಯಾಗಿ ಬಿಡಿ. ಎಡಕ್ಕೆ ನೋಡಿ, ಬಲಕ್ಕೆ ನೋಡಿ, ಮೇಲಕ್ಕೆ ನೋಡಿ, ಹಾಗೇ ಕೆಳಕ್ಕೆ ನೋಡಿ" ಎಂದು ಮೃದುವಾಗಿ ಹೇಳುತ್ತಿದ್ದರು. ಅವರು ಹೇಳಿದ ಹಾಗೆ ನಾನು ನನ್ನ ಕಣ್ಣುಗುಡ್ಡೆಗಳನ್ನು ತಿರುಗಿಸುತ್ತಿದ್ದೆ.

"ಈಗ ಬಲಗೈ ಮೇಲಕ್ಕೆತ್ತಿ"- ಅವರ ಮಾತಿಗೆ ನನ್ನ ಬಲಗೈಯನ್ನು ಮೇಲಕ್ಕೆತ್ತಲು ಯತ್ನಿಸಿದೆ. ಮೇಲಕ್ಕೆತ್ತಲು ಸಾಧ್ಯವಾದರೂ ಅದನ್ನು ನೆಟ್ಟಗೆ ನಿಲ್ಲಿಸಲು ಸಾಧ್ಯವಾಗಲಿಲ್ಲ. ಆದರೆ ಎಡಗೈಯನ್ನು ನೆಟ್ಟಗೆ ಮೇಲಕ್ಕೆ ಎತ್ತಿದೆ. ಅವರ ಅಂಗೈಯಲ್ಲಿ ಕೈಯನ್ನು ಹಿಡಿದು ಬಲವಾಗಿ ಅಮುಕಲು ಹೇಳಿದರು, ಅಮುಕಿದೆ. ನನ್ನ ಎರಡು ಬೆರಳನ್ನು ತಮ್ಮ ಕೈಯಲ್ಲಿ ಭದ್ರವಾಗಿ ಹಿಡಿದು "ಎಳೆಯಿರಿ" ಎಂದರು. "ಗುಡ್" ಎಂದರು. ಅನಂತರ ನನ್ನ ತಲೆಯನ್ನು ಹಿಂದಕ್ಕೆ ಮುಂದಕ್ಕೆ ಅಕ್ಕ ಪಕ್ಕ ತಿರುಗಿಸಲು ಹೇಳಿದರು. ಅವರು ಹೇಳಿದ ಹಾಗೆ ಮಾಡಿದೆ. ಆದರೆ ನನ್ನ ಹಣೆಯ ಮೇಲೆ ಅವರು ಬೆರಳನ್ನಿಟ್ಟು ಅಮುಕಿ, ತಲೆಯನ್ನು ಮುಂದಕ್ಕೆ ತಳ್ಳುವಂತೆ ಹೇಳಿದಾಗ ಅಸಮರ್ಥನಾದೆ. ಅದೇ ರೀತಿ ಹಿಂದಕ್ಕೆ ಒತ್ತುವಾಗಲೂ, "ಇಟ್ಸ್ ಆಲ್‌ರೈಟ್" ಎಂದರು. ಅನಂತರ ನನ್ನ ಕಾಲುಗಳನ್ನು ಮಡುಚುವಂತೆ ಮತ್ತೆ ನೆಟ್ಟಗೆ ಮಾಡುವಂತೆ ತಿಳಿಸಿದರು. ಮಂಡಿಯ ಮೇಲೆ ಅವರ ಕೈನ ಒತ್ತನ್ನು ಕೊಟ್ಟು ಮತ್ತೆ ಮಡುಚುವಂತೆ ಹೇಳಿದರು. ಹಾಗೇ ಮಾಡಿದೆ. ನನ್ನ ಎರಡು ಪಾದಗಳ ಬೆರಳುಗಳನ್ನು ಅಲುಗಾಡಿಸಲು ಹೇಳಿ, ನಾನು ಅಲುಗಾಡಿಸಿದಾಗ 'ಗುಡ್' ಎಂದರು.

ಅವರು ನನ್ನನ್ನು ಹಾಗೆ ಪರೀಕ್ಷೆ ಮಾಡುವಾಗ ಅವರೊಡನೆ ಮೂರ್‍ನಾಲ್ಕು ಜನ ಡ್ಯೂಟಿ ಡಾಕ್ಟರ್‌ಗಳಿದ್ದರು. ನನ್ನ ಉಸಿರಾಟದ ಸಮಸ್ಯೆಯನ್ನು ಅವರು ಮುಖ್ಯವಾಗಿ ಗಮನಿಸಿದರು. ಕಾಮಾಕ್ಷಿ ಆಸ್ಪತ್ರೆಯ ಡಿಸ್ಚಾರ್ಜ್ ಸಮ್ಮರಿಯನ್ನು ಮತ್ತೆ ಮತ್ತೆ ಓದಿದರು. ಅಪೊಲೊಗೆ ಬಂದ ಮೇಲೆ ನಿಧಾನವಾಗಿ ನನ್ನ ರಕ್ತದ ಸೋಡಿಯಂ ಪ್ರಮಾಣ ಏರಿತ್ತು. ನನ್ನ ಹೃದಯದ ಬಡಿತ ಸರಿಯಾಗಿತ್ತು. ಡಾ. ಆಮೀರ್ ರವರು ನನ್ನ ಬಳಿ ಬಂದು ನನ್ನ ಎದೆಯ ಮೇಲೆ ತಮ್ಮ ಸ್ಟೆತಾಸ್ಕೋಪನ್ನು ಇಟ್ಟು ದೀರ್ಘವಾಗಿ ಉಸಿರೆಳೆದುಕೊಳ್ಳಲು ಹೇಳಿದರು. ಶಕ್ತಿಮೀರಿ ಉಸಿರನ್ನು ಮೂಗಿನ ಮೂಲಕ ಎಳೆದೆ. "ಮತ್ತೆ ಮತ್ತೆ ಪ್ರಯತ್ನಿಸಿ" ಎಂದರು. ನನಗೇ ತಿಳಿಯುತ್ತಿತ್ತು. ಈ ವಿಚಾರದಲ್ಲಿ ನಾನು ಶಕ್ತಿಹೀನನಾಗಿದ್ದೆ. ದೀರ್ಘ ಉಸಿರು ತೆಗೆದುಕೊಂಡರೂ ಗಾಳಿ ನನ್ನ ಎದೆಗೂಡನ್ನು ಪ್ರವೇಶಿಸುತ್ತಿರಲಿಲ್ಲ. "ಗಾಳಿ ಎದೆಗೆ - ಶ್ವಾಸಕೋಶಕ್ಕೆ ಬರುತ್ತಿಲ್ಲ. ನಿಮ್ಮ ಚೆಸ್ಟ್ ಎಕ್ಸ್‌ಪೆಂಡ್ ಆಗುತ್ತಿಲ್ಲ. ನೀವು ತೆಗೆದುಕೊಳ್ಳುವ ಗಾಳಿ ನಿಮ್ಮ ಹೊಟ್ಟೆಗೆ ಹೋಗುತ್ತಿದೆ" ಎಂದು ಹೇಳಿ "ಇವರಿಗೆ ಹೃದಯದ ಯಾವುದೇ ಸಮಸ್ಯೆ ಇಲ್ಲ. ಇವರಿಗೆ ರೆಸ್ಪಿರೇಟರಿ ಅಟ್ಯಾಕ್ ಆಗಿದೆ. ಅದಕ್ಕೇನು ಕಾರಣವೆಂದು ಶೋಧಿಸಬೇಕು" ಎಂದು ಡ್ಯೂಟಿ ಡಾಕ್ಟರ್‌ಗಳ ಜೊತೆ ಹೇಳಿದರು. ನನ್ನ ಕೇಸ್‌ಶೀಟ್‌ನಲ್ಲಿ ಆಗಬೇಕಿರುವ ವಿವಿಧ ರಕ್ತ ಪರೀಕ್ಷೆಗಳು ಮತ್ತು ಎಕ್ಸ್‌ರೇ ತೆಗೆಸುವಂತೆ ಬರೆದು ಮುನ್ನಡೆದರು.

ಸಮಯ ಸಂಜೆಯ ಆರು ಗಂಟೆ ಆಗಿರಬೇಕೆಂದುಕೊಂಡೆ. ಏಕೆಂದರೆ ತಜ್ಞ ವೈದ್ಯರು ರೋಗಿಗಳ ತಪಾಸಣೆ ಮಾಡಿ, ಸೂಕ್ತ ಔಷಧೋಪಚಾರಗಳ ಬಗ್ಗೆ ನರ್ಸ್‌ಗಳಿಗೆ ಸೂಚನೆ ನೀಡಿ ಹೋಗುತ್ತಿದ್ದರು. ಸುಮಾರು ಆರೂವರೆ ಗಂಟೆಯ ಹೊತ್ತಿಗೆ ಡಾ. ಹರೀಶ್‌ನಾಯಕ್ ಬಂದರು. ಅವರು ಮಾತನಾಡುತ್ತಲೇ ನನ್ನನ್ನು ಕೂಲಂಕುಷವಾಗಿ ಪರೀಕ್ಷೆ ಮಾಡಿದರು. ಮುಖ್ಯವಾಗಿ ನನ್ನ ಎದೆಯ ಭಾಗದ, ಉಸಿರಾಟದ ಸಮಸ್ಯೆಯ ಬಗ್ಗೆ ಸಹವೈದ್ಯರೊಡನೆ ಚರ್ಚಿಸಿದರು. ನನ್ನ ಆಮ್ಲಜನಕದ ಸ್ಯಾಚುರೇಷ್ನ ಎಂಬತ್ತೇಳು ಎಂಬತ್ತೆಂಟರ ಆಜುಬಾಜು ಇರುವುದು ಅವರಿಗೆ ಆತಂಕ ತಂದಿತ್ತು. ಕೃತಕ ಉಸಿರಾಟದಲ್ಲೂ ಅದು ಏರಿಕೆಯಾಗದಿದ್ದುದು ಅವರಿಗೆ ಸಮಸ್ಯೆಯಾಗಿ ಕಾಡಿರಬೇಕು. ನನ್ನ ಎದೆಯ ಭಾಗದಲ್ಲಿ ತಮ್ಮ ಸ್ಟೆತಾಸ್ಕೋಪ್‌ನಿಂದ ನನ್ನನ್ನು ಸುಮಾರು ಹೊತ್ತು ಪರೀಕ್ಷಿಸಿದರು. ಒಳಗೆ ಆಗುತ್ತಿರುವ ಸೂಕ್ಷ್ಮ ಏರಿಳಿತಗಳನ್ನು ತಮ್ಮ ಕಿವಿಯಿಂದ ಆಲಿಸುತ್ತಿದ್ದರು. ಬ್ರದರ್ ನರ್ಸ್‌ಗೆ "ಇವರಿಗೆ ಕೃತಕ ಆಹಾರವನ್ನು ನೀಡಿರಿ. ಪ್ರತಿ ಎರಡು ಗಂಟೆಗೆ 250 ML ಆಹಾರ ಹೋಗಲಿ" ಎಂದು ತಿಳಿಸಿ, ನನ್ನ ಕೇಸ್‌ಶೀಟ್‌ನಲ್ಲಿ ನನಗೆ ಸೂಚಿಸಬೇಕಾದ ವಿವಿಧ ಬಗೆಯ ಪರೀಕ್ಷೆಗಳ ಬಗ್ಗೆ ಬರೆದು, ನನ್ನ ಕಡೆ ತಿರುಗಿ "ಗಾಬರಿಯಾಗುವುದು ಬೇಡ. ಎಲ್ಲವೂ ಸರಿಹೋಗುತ್ತೆ. ಕೆಲವು ಪರೀಕ್ಷೆಗಳನ್ನು ಮಾಡಿಸಲು ಬರೆದಿದ್ದೇವೆ. ಬೆಳಿಗ್ಗೆ ಅವು ಬರುತ್ತವೆ. ಅವು ಬಂದ ಮೇಲೆ ಲೈನ್ ಆಪ್ ಟ್ರೀಟ್‌ಮೆಂಟ್ ಶುರು ಮಾಡೋಣ" ಎಂದು ಮುಂದಿನ ರೋಗಿಯತ್ತ ನಡೆದರು.

ಸ್ವಲ್ಪ ಹೊತ್ತಿನ ಬಳಿಕ ನನ್ನ ಮಕ್ಕಳು ನನ್ನ ಬಳಿ ಬಂದರು. "ಡಾ. ಆಮಿರ್ ಮತ್ತು ಡಾ. ಹರೀಶ್‌ನಾಯಕ್ ಅವರು ನಿಮ್ಮ ಕೇಸ್ ಬಗ್ಗೆ ಚರ್ಚಿಸಿದ್ದಾರೆ. ನಾಳೆ ಸಿಗಲಿರುವ ಟೆಸ್ಟ್‌ಗಳ ಫಲಿತಾಂಶದ ಆಧಾರದ ಮೇಲೆ ನಿಮ್ಮ ಕಾಯಿಲೆಯನ್ನು ಕನ್‌ಫರ್ಮ್ ಮಾಡಿಕೊಂಡು - ಅದಕ್ಕೆ ಸರಿಯಾದ ಟ್ರೀಟ್‌ಮೆಂಟ್ ಪ್ರಾರಂಭ ಮಾಡುತ್ತಾರೆ. ನೀವು ಯಾವುದಕ್ಕೂ ಚಿಂತಿಸುವುದು ಬೇಡ. ನಾವು ನೋಡಿಕೊಳ್ಳುತ್ತೇವೆ. ಎಲ್ಲ ನಮ್ಮ ಸ್ನೇಹಿತರು ನಮ್ಮ ಜೊತೆಯಲ್ಲಿದ್ದಾರೆ" ಎಂದು ನುಡಿದರು. ಇಲ್ಲಿ ಯಾರೂ ಇರುವಂತಿಲ್ಲ. ನೀವು ಮನೆಗೆ ಹೋಗಿ ಎಂದು ಸನ್ನೆ ಮಾಡಿ ಹೇಳಿದೆ. ಅವರು ಆಯಿತೆಂದು ಹೇಳಿ ಹೊರಟರು.

ನನ್ನ ಕಣ್ಣು ಭಾರವಾದವು. ನಿದ್ರೆ ಆವರಿಸಿರಬೇಕು. ಆಗ ನನಗೊಂದು ಕನಸು ಬಿತ್ತು. ಸುಶಿ ನೇಸರ ನನಗಾಗಿ ಹೊರಗೆ ಕುರ್ಚಿಯಲ್ಲೇ ಮಲಗಿರುವಂತೆ ಮೊದ ಮೊದಲು ಅನ್ನಿಸಿತು. ಅನಂತರ ಇಲ್ಲೇ ನನ್ನ ಕ್ಯಾಬಿನ್‌ನಲ್ಲೇ ನೆಲದ ಮೇಲೆ ಬೆಡ್‌ಶೀಟನ್ನು ಹಾಸಿಕೊಂಡು ಮಲಗಿದ್ದಾರೆ. ಅವರಿಗೆ ಚಳಿಯಾಗುವುದಿಲ್ಲವೆ?

ಹೊದಿಕೆಯಿಲ್ಲ. ಮನೆಗೆ ಹೋಗಿ ಮಲಗಿ ಎಂದು ಹೇಳಬೇಕೆಂದು ಧ್ವನಿ ಹೊರಡಿಸಿದೆ. ಆದರೆ ನನ್ನ ಬಾಯಿಯಿಂದ ಧ್ವನಿಯೇ ಬರುತ್ತಿರಲಿಲ್ಲ.

ಯಾರೋ ತಟ್ಟಿ ಎಬ್ಬಿಸಿದಂತಾಯಿತು. ಬ್ರದರ್ "ಸರ್, ನಿಮಗೆ ಫೀಡಿಂಗ್ ಮಾಡಿಸಬೇಕು" ಎಂದು ಸಿರೆಂಜ್ ಅನ್ನು ನನ್ನ ಮೂಗಿನ ರೈಲ್ಸ್‌ಟ್ಯೂಬಿಗೆ ಸಿಕ್ಕಿಸುತ್ತಿದ್ದ.

೪. ಬಿರುಸಾಗಿ ನಡೆವ ಕಾಲುಗಳು, ಮಂದಗತಿಯ ನಡಿಗೆಗಳು

ಬ್ರದರ್ ನನಗೆ ಪೀಡಿಂಗ್ ಮಾಡಿಸಿದ. ಅನಂತರ ನನ್ನ ಬಾಯಿಯಲ್ಲಿ ತುಂಬಿಕೊಂಡಿದ್ದ, ಅಲ್ಲಿಂದ ಒಸರುತ್ತಿದ್ದ ಜೊಲ್ಲನ್ನು ಯಂತ್ರದ ಸಹಾಯದಿಂದ ಹೊರತೆಗೆದ. ಜೊಲ್ಲು ತೆಗೆಯುವ ಆ ನಳಿಗೆಯನ್ನು ವಿದ್ಯುತ್ ಸಂಪರ್ಕದಿಂದ ನಿರ್ವಹಿಸುತ್ತಿದ್ದರಿಂದ ಕೆಲಸ ಸುಲಭವಾಗಿ ಆಗುತ್ತಿತ್ತು. ಆದರೆ ಅದರಿಂದ ನನಗೆ ಒಂದು ಬಗೆಯ ಆರಾಮ ಸಿಗುತ್ತಿದ್ದರೂ ನೋವಂತೂ ಆಗುತ್ತಿತ್ತು.

ಗಂಟೆ ಎಷ್ಟಾಗಿತ್ತೋ ಗೊತ್ತಿಲ್ಲ. ರಾತ್ರಿಯಂತೂ ಆಗಿತ್ತು ಎಂಬುದು ಮಾತುಕತೆಗಳಿಂದ ನನಗೆ ಅರ್ಥವಾಗುತ್ತಿತ್ತು. ನನ್ನ ಕ್ಯಾಬಿನ್ ಎಂಐಸಿಯುನ ಕೇಂದ್ರಭಾಗದಲ್ಲಿತ್ತು. ಅಲ್ಲಿಂದ ನನಗೆ ಆ ಘಟಕದ ಪೂರ್ಣ ಚಿತ್ರ ದೃಷ್ಟಿಗೆ ಗೋಚರಿಸುವ ಸಾಧ್ಯತೆಯಿತ್ತು. ಆದರೆ ಇಂದು ಆ ಘಟಕದ ಪೂರ್ಣ ಚಿತ್ರ ನನ್ನ ಕಣ್ಣಿಗೆ ಕಾಣಿಸುತ್ತಿರಲಿಲ್ಲ. ಕಾರಣ ನನ್ನ ಹಾಸಿಗೆಯನ್ನು ಆ ಕ್ರಮದಲ್ಲಿ ಏರುಪೇರು ಗೊಳಿಸಲಾಗಿತ್ತು. ಅದು ಆಸ್ಪತ್ರೆಯ ಅತ್ಯಾಧುನಿಕ ತಂತ್ರಜ್ಞಾನದ ಅಳವಡಿಕೆಯ ಹಾಸಿಗೆ. ಅದನ್ನು ಮೂರು ಭಾಗಗಳಲ್ಲಿ ಉಬ್ಬು ತಗ್ಗುಗೊಳಿಸಬಹುದಿತ್ತು. ನನ್ನ ತಲೆ ಮತ್ತು ಬೆನ್ನು ಭಾಗಗಳನ್ನು ಮೇಲಕ್ಕೆತ್ತರಿಸಲಾಗಿತ್ತು. ಆದರೆ ನಾನು ಜಾರಿಕೊಂಡು ಹಾಸಿಗೆಯ ಬುಡದ ಕಡೆ ಹೋಗಬಾರದೆಂದು ನನ್ನ ಕುಂಡಿಯ ಮುಂಭಾಗವನ್ನು ಎತ್ತರಿಸಲಾಗಿತ್ತು. ಇದರಿಂದ ನಾನು ಜಾರದೆ ಒಂದೇ ಬಗೆಯಲ್ಲಿ ಮಲಗಲು ಸಾಧ್ಯವಿತ್ತು.

ನಾನು ಮಲಗಿದ್ದ ಕೋನದಿಂದ ಎಂಐಸಿಯುನ

ಮೇಲ್ಭಾಗ ಕಾಣುತ್ತಿರಲಿಲ್ಲ. ನನ್ನ ದೃಷ್ಟಿಗೆ ನರ್ಸುಗಳು ಆ ಘಟಕದ ತುಂಬ ಸುಳಿದಾಡುತ್ತಿದ್ದರು. ಅವರ ನಗು, ಕಲರವ, ಮಾತುಕತೆಗಳು ಕೇಳಿಸುತ್ತಿದ್ದವು. ನಾನು ನನ್ನ ದೃಷ್ಟಿಯನ್ನು ಆ ಘಟಕದ ತುಂಬೆಲ್ಲಾ ಹಾಯಿಸಿದೆ. ಆಶ್ಚರ್ಯ! ನನಗೆ ಅಲ್ಲಿನವರ ಕಾಲುಗಳು - ಸೊಂಟದ ಕೆಳಗಿನ ಪೂರ್ಣಭಾಗ - ಕಾಣುತ್ತಿದ್ದವು. ಆ ಕಾಲುಗಳಲ್ಲಿ ಅವುಗಳ ನಡಿಗೆಯ ಕ್ರಿಯೆಯನ್ನು ಗಮನಿಸಿ ಎರಡು ಬಗೆಯಿರುವುದನ್ನು ಅರ್ಥಮಾಡಿಕೊಂಡೆ. ಕೆಲವು ಕಾಲುಗಳು ಬಿರುಸಾಗಿ ನಡೆದಾಡುತ್ತಿದ್ದವು. ಅವುಗಳ ಸಂಖ್ಯೆಯೇ ಅಧಿಕ. ಅವುಗಳಲ್ಲಿ ಸೋಮಾರಿತನ ಲವಲೇಶವೂ ಕಾಣಲು ಸಾಧ್ಯವಿರಲಿಲ್ಲ. ಘಟಕದ ಮಧ್ಯಭಾಗದಲ್ಲಿ ಇಡಲಾಗಿದ್ದ ಔಷಧದ ಬೀರುವಿನಲ್ಲಿ ಮತ್ತು ರೆಫ್ರಿಜರೇಟರ್‌ನಲ್ಲಿ ಔಷಧಿ ತೆಗೆದುಕೊಂಡು ರೋಗಿಗಳ ಕ್ಯಾಬಿನ್‌ನತ್ತ ಆ ಕಾಲುಗಳು ಬಿರುಸಾಗಿ ಚಲಿಸುತ್ತಿದ್ದವು. ಒಬ್ಬರಿಗೊಬ್ಬರು ಮಾತನಾಡುತ್ತಾ, ನಗೆಯ ಚಟಾಕಿಯನ್ನು ಸಿಡಿಸುತ್ತಾ ರೋಗಿಗಳ ಆರೈಕೆಯಲ್ಲಿ ನಿರತರಾಗುತ್ತಿದ್ದ ಅವರು ಬ್ರದರ್‌ಗಳು - ಸಿಸ್ಟರ್‌ಗಳಾಗಿದ್ದರು.

ಇನ್ನು ಕೆಲವೇ ಕೆಲವು ಕಾಲುಗಳು ನಡೆಯುತ್ತಿದ್ದ ಗಮ್ಮತ್ತೆ ಬೇರೆ. ಅವು ಯಾವುದೇ ಬಗೆಯ ಯೂನಿಫಾರಂ ಹಾಕಿರಲಿಲ್ಲ. ನಿಧಾನವಾಗಿ ಚಲಿಸುತ್ತಾ ಪ್ರತಿ ಕ್ಯಾಬಿನ್ ಮುಂದೆ ನಿಂತು, ರೋಗಿಗಳನ್ನು ಅವಲೋಕಿಸುತ್ತಾ, ನರ್ಸುಗಳಿಗೆ ಅವಶ್ಯ ಸೂಚನೆಗಳನ್ನು ನೀಡುತ್ತಾ, ನರ್ಸುಗಳ ಕಾರ್ಯಕ್ಷಮತೆಯನ್ನು ಗಮನಿಸಿ ಮುಂದೆ ಮುಂದೆ ಸಾಗುತ್ತಿದ್ದವು. ಚಲಿಸುತ್ತಾ ಚಲಿಸುತ್ತಾ ಹಾಗೆಯೇ ಒಮ್ಮೊಮ್ಮೆ ನಾಲ್ಕಾರು ಜೊತೆ ಕಾಲುಗಳು ಜೊತೆಗೂಡಿ ಲಘು ಹರಟೆಯಲ್ಲಿ ಭಾಗಿಯಾಗುತ್ತಿದ್ದವು. ಆ ಹರಟೆಯಲ್ಲಿ ವೃತ್ತಿಯ ವಿಷಯವೂ ಇರುತ್ತಿತ್ತು. ವಯೋಮಾನಕ್ಕೆ ತಕ್ಕಂಥ ಸರಸ, ಮೋಜಿನ ವಿಷಯವೂ ಬಂದು ಹೋಗುತ್ತಿತ್ತು. ಈ ಡ್ಯೂಟಿ ಡಾಕ್ಟರುಗಳಿಗೆ ಸಹಜವಾದ ಗಾಂಭೀರ್ಯವೂ ಇತ್ತು.

ಮೊದಲದಿನದ ನನ್ನ ಗ್ರಹಿಕೆಯಲ್ಲೇ ಒಂದು ಸಂತಸದ ಸಂಗತಿಯನ್ನುಈ ನರ್ಸುಗಳು ಮತ್ತು ಡ್ಯೂಟಿ ಡಾಕ್ಟರ್‌ಗಳಲ್ಲಿ ಕಂಡೆ. ಅದೆಂದರೆ, ಅವರಲ್ಲಿದ್ದ ಆತ್ಮೀಯತೆ ಮತ್ತು ಸಮಾನತೆ ಮನೋಧರ್ಮ. ಡ್ಯೂಟಿ ಡಾಕ್ಟರ್‌ಗಳು ನರ್ಸುಗಳನ್ನು ತಮಗಿಂತ ಕಡಿಮೆ ಓದಿದವರೆಂದು ನೋಡುವ ದೃಷ್ಟಿಯಿರಲಿಲ್ಲ. ತಮ್ಮಂತೆ ವೃತ್ತಿ ನಿರ್ವಹಿಸುತ್ತಿರುವ ಸಹ ನೌಕರರೆಂಬ ಭ್ರಾತೃತ್ವದ ಭಾವನೆ ಅವರಲ್ಲಿತ್ತು. ಮುಂದೆ ನಾನಿದ್ದ ಅಷ್ಟೂ ದಿನವೂ ಈ ಭಾವಸ್ಪಂದನವನ್ನು ಸೂಕ್ಷ್ಮವಾಗಿ ಗಮನಿಸಿದ ನಂತರ ನನ್ನ ಗ್ರಹಿಕೆ ಸ್ಥಿರವಾಯಿತು. ಅಲ್ಲಿನ ಅನೇಕ ಹಿರಿಯ ನರ್ಸುಗಳು ಡ್ಯೂಟಿ ಡಾಕ್ಟರ್‌ಗಳಿಗಿಂತ ಅನುಭವದಲ್ಲಿ ಮುಂದಿದ್ದರು. ಶುಶ್ರೂಷತನ ಆರೈಕೆಯಲ್ಲಿ ಅವರ

ಕೈಗಳು ಪಳಗಿದ್ದವು. ರೋಗಿಗಳ ಮತ್ತು ಅವರ ಮನೆಯವರ ಮನಸ್ಥಿತಿಯನ್ನು ಅರ್ಥಮಾಡಿಕೊಂಡವರಾಗಿದ್ದರು. ಆದರೆ ಈ ಹಿರಿಯ ನರ್ಸುಗಳನ್ನು 'ನಿಮಗಿಂತ ನಾವು ಬಲ್ಲೆವು' ಎಂಬ ಮೇಲರಿಮೆಯ ಭಾವ ಕಾಡಿದ್ದಿಲ್ಲ. ಅನೇಕ ಸಂದರ್ಭಗಳಲ್ಲಿ-ತುರ್ತು ನಿರ್ವಹಣಾ ಸಂದರ್ಭದಲ್ಲಿ - ಯಾವುದೇ ಸಂಕೋಚವಿಲ್ಲದೆ ಡ್ಯೂಟಿ ಡಾಕ್ಟರ್‌ಗಳು ಹಿರಿಯ ನರ್ಸುಗಳ ಅನುಭವದ ನೆರವನ್ನು ಪಡೆದುದನ್ನು ನಾನು ಕಂಡಿದ್ದೇನೆ.

ಎಂಐಸಿಯುನಲ್ಲಿ ಸದಾ ನಾಲ್ಕೈದು ಜನ ಡ್ಯೂಟಿ ಡಾಕ್ಟರ್‌ಗಳು, ಇಪ್ಪತ್ತೆರಡು ಜನ ನರ್ಸುಗಳು ಕಾರ್ಯ ನಿರ್ವಹಿಸುತ್ತಿದ್ದರು. ಇದು ಸರದಿಯ ಮೇಲೆ ನಡೆಯುತ್ತಿತ್ತು. ಇವರಿಗೆ ಸಹಾಯಕರಾಗಿ ನಾಲ್ಕನೇ ದರ್ಜೆ ನೌಕರರು ಇದ್ದೇ ಇರುತ್ತಿದ್ದರು.

೫. ಕಾಯಿಲೆಯ ಮೂಲ ಹುಡುಕಿ

ಬ್ರದರ್ ನನ್ನನ್ನು ಕುರಿತು "ಸರ್, ಎಚ್ಚರವಾಗಿ, ನಿಮಗೆ ಈಗ ಬಾತ್ ಮಾಡಿಸ್ತೇನೆ", ಕಣ್ಣು ತೆರೆದೆ, ನನ್ನ ಒಣ ಕಣ್ಣುಗಳು ಚುಚ್ಚುತ್ತಿದ್ದವು. ಕೈಸನ್ನೆಯ ಮೂಲಕ ಡ್ರಾಪ್ಸ್ ಹಾಕಲು ಕೋರಿದೆ. ಆತ ನನ್ನೆರಡು ಕಣ್ಣುಗಳಿಗೆ ಐ ಡ್ರಾಪ್ಸ್ ಹಾಕಿದ. ಹಿತವಾಯಿತು. ಕಣ್ಣು ತೆರೆದರೆ ಪ್ರಕಾಶಮಾನವಾದ ಬೆಳಕು. ಬ್ರದರ್ ನನ್ನ ಕೈ ಕಾಲುಗಳಿಗೆ ಕಟ್ಟಿದ್ದ ಕಟ್ಟುಗಳನ್ನು ಬಿಚ್ಚಿದ. ಬ್ರದರ್ ನನ್ನ ತೊಡುಗೆಯನ್ನು ಕಳಚಿದ. ನನಗೆ ಚಳಿಯಾಯಿತು. ಅಷ್ಟು ಹೊತ್ತಿಗೆ ಮತ್ತೊಬ್ಬ ಬ್ರದರ್ ಬಂದ. ಕಾಟ್‌ನ ಮತ್ತೊಂದು ಬದಿಯಲ್ಲಿ ನಿಂತ. ಆತ ನನ್ನ ಉಸ್ತುವಾರಿ ಬ್ರದರ್‌ನನ್ನು ಕೇಳಿದ: "ಈ ಪೇಶೆಂಟ್‌ಗೆ ಏನಾಗಿದೆ?" "ಇವರಿಗೆ ರೆಸ್ಪಿರೇಟರ್ ಪ್ರಾಬ್ಲಮ್ ಇದೆ. ಶ್ವಾಸಕೋಶಕ್ಕೆ ಸಾಕಷ್ಟು ಗಾಳಿ ಹೋಗುತ್ತಿಲ್ಲ ಅದರಿಂದ ರಕ್ತದಲ್ಲಿ ಆಮ್ಲಜನಕದ ಕೊರತೆ ಯಾಗಿದೆ" ಎಂದು ಬ್ರದರ್ ಉತ್ತರಿಸಿದ. ಅದಕ್ಕೆ ಆತ "ನನ್ನನ್ನು ನೋಡು, ಗಾಳಿಯನ್ನು ಎಷ್ಟು ತೆಗೆದುಕೊಳ್ಳುತ್ತೇನೆ" ಎಂದು ಹೇಳಿ ನೀಳವಾಗಿ ಒಮ್ಮೆ ಉಸಿರೆಳೆದು ನಿಧಾನವಾಗಿ ಗಾಳಿಯನ್ನು ಹೊರಬಿಟ್ಟನು. "ನೋಡು ಗೆಳೆಯ ನನ್ನ ಹಾಗೆ ಸಿಗರೇಟ್ ಸೇದುವ ಅಭ್ಯಾಸ ಬೆಳೆಸಿಕೊಳ್ಳಬೇಕು. ನಾವು ಸಿಗರೇಟ್ ಸೇದುವವರು ನಿಧಾನವಾಗಿ ಸಿಗರೇಟಿನ ದಮ್ ಎಳೆದು, ಎದೆಯಲ್ಲಿ ಅದನ್ನು ಸ್ವಲ್ಪ ಹೊತ್ತು ನಿಲ್ಲಿಸಿ, ಅನಂತರ ನಿಧಾನವಾಗಿ ಸ್ವಲ್ಪ ಸ್ವಲ್ಪವೇ ಸಿಗರೇಟ್ ಹೊಗೆಯನ್ನು ಹೊರಕ್ಕೆ ಬಿಡುತ್ತೇವೆ. ಪ್ರಾಣಾಯಾಮದಲ್ಲಿ ಹೀಗೆ ತಾನೆ ಮಾಡಿ ಎಂದು ಹೇಳಿಕೊಡುವುದು. ಈ

ಪೇಶೆಂಟ್‌ಗೆ ಸಿಗರೇಟಿನ ಅಭ್ಯಾಸ ಇಲ್ಲವೆಂದು ಕಾಣುತ್ತೆ. ಇದ್ದಿದ್ದರೆ ಈ ಸಮಸ್ಯೆ ಉಂಟಾಯ್ತಿರಲಿಲ್ಲ" ಎಂದನು. ನನ್ನ ಉಸ್ತುವಾರಿ ಬ್ರದರ್ "ಶ್... ಪೇಶೆಂಟ್‌ಗೆ ಪ್ರಜ್ಞೆಯಿದೆ, ಏನೇನೋ ಮಾತನಾಡಬೇಡ" ಎಂದು ಎಚ್ಚರಿಸಿದ.

ಅವರ 'ಬಾತ್' ನೀಡುವ ಕ್ರಿಯೆ ಕೆಲವೇ ನಿಮಿಷಗಳಲ್ಲಿ ಮುಗಿದು ಹೋಯಿತು. ಹಾಸಿಗೆಯ ಬೆಡ್‌ಶೀಟ್ ತೆಗೆದು, ಹೊಸ ತಲೆದಿಂಬಿನ ಕವರ್‌ನ್ನು ಹಾಕಿದರು. ನನ್ನ ಮೈ ಕಾಲು ಕೈಗಳನ್ನು 'ಈಸಿಬಾತ್' ಎಂಬ ತೇವಭರಿತ ಕಾಗದದಲ್ಲಿ ಒರೆಸಿದರು. ನನ್ನ ಸೊಂಟಕ್ಕೆ ಕಟ್ಟಿದ್ದ ಡೈಪರ್ ಚಡ್ಡಿ ತೆಗೆದು ಹೊಸದನ್ನು ತೊಡಿಸಿದರು.

ಅನಂತರ ನನ್ನ ಉಸ್ತುವಾರಿ ಬ್ರದರ್ ನನಗೆ 'ಮೌತ್‌ಕೇರ್' ನೀಡಿದನು. ನನ್ನ ಬಾಯಿಗೆ ಜಡಿದಿದ್ದ ಬೆಣೆಯನ್ನು ಹೊರ ತೆಗೆದು, ಕತ್ತರಿಗೆ ಸಿಕ್ಕಿಸಿದ್ದ ಸ್ವಚ್ಛ ತೆಳು ಬಟ್ಟೆಯಿಂದ ನನ್ನ ಹಲ್ಲುಗಳನ್ನು ಒಂದೆರಡು ಸಾರಿ ಸವರಿ, ನಾಲಿಗೆಯನ್ನು ಅದರಲ್ಲೇ ಒರೆಸಿದ. ರಕ್ತ ಬಟ್ಟೆ ತುಂಬ ಮೆತ್ತಿಕೊಂಡಿತು. ಅವನಿಗೆ ಗಾಬರಿಯಾಯಿತು. ನನ್ನ ನಾಲಗೆಯ ಮ್ಯುಕೋಸ ನಶಿಸಿಹೋಗಿದೆಯೆಂದು ಹೇಗೆ ತಾನೆ ಅವನಿಗೆ ಹೇಳಲಿ? ಬಾಯಿಂದ ಒಸರುವ ಈ ಬಗೆಯ ರಕ್ತದಿಂದಾಗಿ ಮುಂದಿನ ಎರಡು ತಿಂಗಳುಗಳ ಕಾಲ ನನ್ನ ಬಾಯನ್ನು ಸರಿಯಾಗಿ ಶುದ್ಧಗೊಳಿಸಲಾಗಲಿಲ್ಲವೆಂಬುದಂತು ಸತ್ಯ.

ಬ್ರದರ್ ನನ್ನ ಮೈ ತುಂಬ ಹೊಸ ಗೌನನ್ನೂ ತೊಡಿಸಿ, ಹಿತವಾಗುವಂತೆ ರಗ್ಗನ್ನು ಹೊದಿಸಿದ. ನನ್ನ ಬಾಯಿಗೆ ತೊಡಿಸಿದ್ದ ಟ್ಯೂಬ್‌ನಿಂದ ಉಸಿರಾಟ ನಡೆಯುತ್ತಿತ್ತು. ನನ್ನ ತಲೆಯ ಬುಡದಲ್ಲಿದ್ದ ವೆಂಟಿಲೇಟರ್ ನನ್ನ ಉಸಿರಾಟ ಮತ್ತು ನನ್ನ ಎದೆಯ ಏರಿಳಿತಗಳಿಗೆ ತಕ್ಕಂತೆ ಸದ್ದು ಮಾಡುತ್ತಿತ್ತು. ಬ್ರದರ್ ಮತ್ತೆ ನನ್ನ ಕೈಕಾಲುಗಳನ್ನು ಮಂಚದ ಕಂಬಿಗಳಿಗೆ ಬಿಗಿದು ಕಟ್ಟಿದ. ನಾನು ಕಣ್ಣು ಮುಚ್ಚಿದೆ. ಸಮಯ ಎಷ್ಟು ಅಂತ ಗೊತ್ತಾಗುತ್ತಿಲ್ಲ. ಆದರೆ ಬೆಳಿಗ್ಗೆಯಾಗುತ್ತಿದೆಯೆಂಬುದು ಅಲ್ಲಿನ ಚಟುವಟಿಕೆಗಳಿಂದ ತಿಳಿದು ಬರುತ್ತಿತ್ತು. ಮಂಪರು ಆವರಿಸಿತು.

ಬ್ರದರ್ ಬಂದು ತಟ್ಟಿದಾಗ ಕಣ್ಣು ತೆರೆದೆ. ನಾನು ಅರ್ಧಗಂಟೆ ಮಲಗಿರಬಹುದು. ಬ್ರದರ್ ಜೊತೆ ತರುಣನೊಬ್ಬ ನಿಂತಿದ್ದ. ಅವನ ಹಿಂದೆ ಎಕ್ಸ್‌ರೇ ಯೂನಿಟ್ ಇತ್ತು. ಕೂಡಲೇ ನನಗೆ ಈತ ನನ್ನ ಎದೆಯ ಎಕ್ಸ್‌ರೇ ತೆಗೆಯಲು ಬಂದಿದ್ದಾನೆಂದು ಅರಿವಾಯಿತು. ಆ ತರುಣ ನನ್ನ ಹಾಸಿಗೆಯನ್ನು ಅವನ ಎಕ್ಸ್‌ರೇ ಆ್ಯಂಗಲ್‌ಗೆ ಅನುಗುಣವಾಗಿ ಅಣಿಗೊಳಿಸಿದ. ನನ್ನ ಬೆನ್ನಿಗೆ ಪೆಟ್ಟಿಗೆಯಂಥ ಡಬ್ಬವನ್ನು ಇಟ್ಟು ಅದರ ಮೇಲೆ ಮಲಗಲು ಸೂಚಿಸಿದ. ನನಗೆ ಇದರಿಂದ ನೋವಾಗುತ್ತಿತ್ತು. ಆದರೆ ನನ್ನ ಎದೆಯ ಭಾಗ ಉಬ್ಬಿಕೊಂಡು ಎಕ್ಸ್‌ರೇ ಕಣ್ಣಿಗೆ ಸರಿಯಾಗಿ ಹೊಂದಿಕೊಂಡು ಚಿತ್ರ ತೆಗೆಯಲು ಅನುಕೂಲವಾಗುತ್ತಿತ್ತು. ಬ್ರದರ್ ನನ್ನ

ಗೌನ್‌ನನ್ನು ಸರಿಸಿದ. ಎಕ್ಸ್‌ರೇ ತರುಣ ಮತ್ತೊಮ್ಮೆ ಎಕ್ಸ್‌ರೇ ಕಣ್ಣಿನಿಂದ ಪರಿಶೀಲಿಸಿ, ಈಗ ಎಕ್ಸ್‌ರೇ ತೆಗೆಯುವುದಾಗಿ ಎಂಐಸಿಯುನ ಎಲ್ಲರಿಗೆ ಕೇಳಿಸುವಂತೆ ಸೂಚನೆ ನೀಡಿದ. ತಕ್ಷಣ ಆ ಘಟಕದ ಎಲ್ಲರೂ ಕಂಬ ಇನ್ನಿತರ ಮರೆಗಳಲ್ಲಿ ಆಶ್ರಯ ಪಡೆದರು. ಈತ 'ಒನ್ ಟು ತ್ರೀ' ಎಂದು ಹೇಳಿ ಎಕ್ಸ್‌ರೇ ಬಟನ್ ಕ್ಲಿಕ್ಕಿಸಿ 'ಓವರ್' ಎಂದನು. ಮರೆಯಲ್ಲಿದ್ದ ಎಲ್ಲರೂ ಹೊರ ಬಂದು ಅವರವರ ಕೆಲಸದಲ್ಲಿ ನಿರತರಾದರು. ತರುಣ ನನ್ನ ಹಿಂದಕ್ಕೆ ಇಟ್ಟಿದ್ದ ಡಬ್ಬವನ್ನು ಹೊರತೆಗೆದು, ತನ್ನ ಎಕ್ಸ್‌ರೇ ಯೂನಿಟ್ ಅನ್ನು ಸರಿಪಡಿಸಿಕೊಂಡು ಹೊರಟನು. ನನ್ನ ಕ್ಯಾಬಿನ್ ಉಸ್ತುವಾರಿ ಬ್ರದರ್ ಮತ್ತೆ ನನ್ನ ಹಾಸಿಗೆಯನ್ನು ಸರಿಪಡಿಸಿ ಮೂವತ್ತೈದು ನಲವತ್ತು ಡಿಗ್ರಿಗೆ ತಲೆ ಭಾಗದ ಹಾಸಿಗೆಯನ್ನು ಎತ್ತರಿಸಿ, ನನ್ನ ಕೈಕಾಲುಗಳನ್ನು ಮತ್ತೆ ಮಂಚದ ಕಂಬಿಗೆ ಬಿಗಿದು ಒಮ್ಮೆ ನನ್ನನ್ನು ಆತ್ಮೀಯತೆಯಿಂದ ನೋಡಿದ. ಯಾರೋ ತಟ್ಟುತ್ತಿರುವಂತೆ ಭಾಸವಾಯಿತು. "ಸರ್, ಕಣ್ಣು ತೆರೆಯಿರಿ, ಸರ್ ಕಣ್ಣು ತೆರೆಯಿರಿ"- ಒಮ್ಮೆ ಕೇಳಿದ್ದ ಧ್ವನಿ. ಕಣ್ಣು ತೆರೆದೆ. ಡಾ. ಆಮೀರ್ ಮೊಹಿನ್ ನನ್ನ ಮಂಚದ ಪಕ್ಕ ನಿಂತಿದ್ದರು. ನನ್ನ ಕೈಕಾಲುಗಳ ಕಟ್ಟುಗಳನ್ನು ಬಿಡಿಸಲು ಬ್ರದರ್‌ಗೆ ಸೂಚನೆ ನೀಡಿದರು. ಅವನು ಕಟ್ಟುಗಳನ್ನು ಬಿಡಿಸಿದ ಮೇಲೆ ಡಾ. ಆಮೀರ್ ಯಥಾ ಪ್ರಕಾರ ನನ್ನ ಕೈಕಾಲುಗಳ ಶಕ್ತತೆಯನ್ನು ಪರೀಕ್ಷಿಸಿದರು. ನನ್ನ ತಲೆಯನ್ನು ಹಿಂದಕ್ಕೆ ಮುಂದಕ್ಕೆ ಒತ್ತುವಂತೆ ತಮ್ಮ ಅಂಗೈನ ಒತ್ತಡದ ಮೂಲಕ ಅವಲೋಕಿಸಿದರು. ನನ್ನ ಕಣ್ಣು ಗುಡ್ಡೆಗಳನ್ನು ಮೇಲಕ್ಕೆ ಕೆಳಕ್ಕೆ ಎಡಕ್ಕೆ ಬಲಕ್ಕೆ ತಿರುಗಿಸಲು ಹೇಳಿದರು. ನಾನು ಅವರು ಹೇಳಿದಂತೆ ಮಾಡಿದೆ. ಅವರಿಗೆ ನನ್ನ ಬಲಗೈ ಶಕ್ತಿಹೀನವಾಗಿರುವುದು ಹಾಗೆಯೇ ನನ್ನ ಕುತ್ತಿಗೆಗೆ ಸಾಮರ್ಥ್ಯವಿಲ್ಲದಿರುವುದು ಅರಿವಿಗೆ ಬಂತು.

ಅವರ ಜೊತೆ ಕ್ರಿಟಿಕಲ್ ಕೇರ್ ಯೂನಿಟ್‌ನ ಮತ್ತೊಬ್ಬ ತಜ್ಞ ವೈದ್ಯರಾದ ಡಾ. ರಾಮಕೃಷ್ಣ ಇದ್ದರು. ನನ್ನ ಮಂಚದ ಮುಂಭಾಗದಲ್ಲಿನ ಟೇಬಲ್ ಮೇಲಿಂದ ನನ್ನ ಕೇಸ್‌ಶೀಟ್‌ನಲ್ಲಿ ಏನನ್ನೋ ಬರೆಯುತ್ತಾ ಅವರು ಚರ್ಚಿಸುತ್ತಿದ್ದರು. ಅವರ ಚರ್ಚೆಗೆ ಡ್ಯೂಟಿ ಡಾಕ್ಟರ್‌ಗಳು ಕುತೂಹಲದ ಕಿವಿಗಳಾದರು. ಆಗ ತಾನೆ ಎಕ್ಸ್‌ರೇ ವಿಭಾಗದಿಂದ ಬಂದಿದ್ದ, ನನ್ನ ಎದೆಯ ಭಾಗದ ಎಕ್ಸ್‌ರೇ ಅನ್ನು ದೀಪದ ಬೆಳಕಿಗೆ ಹಿಡಿದು, ಅದರ ವಿವರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರು. ಡಾ. ಆಮೀರ್ ಮತ್ತು ಡಾ. ರಾಮಕೃಷ್ಣರಿಗೆ ನನ್ನ ಎಕ್ಸ್‌ರೇ ಕುತೂಹಲ ಮೂಡಿಸಿತ್ತು. ಅದರಲ್ಲಿ ಶ್ವಾಸ ಸಂಬಂಧಿ ಅಥವಾ ಹೃದಯ ಸಂಬಂಧಿ ಬ್ಲಾಕ್‌ಗಳು ಅವರಿಗೆ ಗೋಚರಿಸುತ್ತಿರಲಿಲ್ಲ. ಅದರ ಬದಲು ನನ್ನ ಹೃದಯ ಮತ್ತು ಶ್ವಾಸಕೋಶಗಳ ನಡುವೆ ಒಂದು ಗೆಡ್ಡೆಯಿರುವುದು ಕಂಡುಬಂದಿತು. ಆ ಗೆಡ್ಡೆ ಏನು? ಅದು ಕ್ಯಾನ್ಸರ್ ಇರಬಹುದೆ?

ಅಥವಾ ಬೇರೆ ಬಗೆಯದಾದ ಸಾಮಾನ್ಯ ಗೆಡ್ಡೆ ಇರಬಹುದೆ? ವೈದ್ಯರ ಜಿಜ್ಞಾಸೆ ನಡೆಯುತ್ತಿತ್ತು. ಎಕ್ಸ್‌ರೇ ಜೊತೆ ಅಲ್ಲಿನ ತಜ್ಞರು ಕಳಿಸಿದ್ದ ವರದಿಯಲ್ಲಿ ಆ ಗೆಡ್ಡೆ ಲಿಂಪೋಮಾನೋ[೯] ಅಥವಾ ಥೈಮೋಮಾನೋ[೧೦] ಇರಬೇಕು ಎಂದು ಅನುಮಾನ ವ್ಯಕ್ತಪಡಿಸಲಾಗಿತ್ತೆಂದು ತೋರುತ್ತದೆ. ಅವರ ಮಾತುಗಳು ನನಗೆ ಕೇಳಿಸುತ್ತಿತ್ತು. ಅವರಿಗೆ "ನನಗಿರುವುದು ಲಿಂಪೋಮಾ ಅಲ್ಲ, ಥೈಮೋಮಾ" ಅಂತ ಹೇಳಬೇಕೆನ್ನಿಸಿತು. ಬ್ರದರ್‌ಗೆ ಬರೆಯಲು ಕಾಗದ, ಪೆನ್ನು ನೀಡುವಂತೆ ಸನ್ನೆ ಮಾಡಿ ಕೇಳಿದೆ. ಅವನು ಘಟಕದ ಕೌಂಟರ್‌ನಿಂದ ಕಾಗದ ಪೆನ್ನು ತಂದು ನೀಡಿದ. ನಾನು "ನನಗಿರುವುದು ಥೈಮೋಮಾ" ಎಂದು ಬರೆದು ಡಾಕ್ಟರಿಗೆ ನೀಡುವಂತೆ ಬ್ರದರ್‌ಗೆ ಚೀಟಿ ನೀಡಿದೆ. ಬ್ರದರ್ ನೀಡಿದ ಚೀಟಿಯನ್ನು ಓದಿದ ಡಾಕ್ಟರ್‌ಗಳ ಕಣ್ಣುಗಳಲ್ಲಿ ಬೆರಗು ಮೂಡಿತು. ಡಾ. ಆಮೀರ್ "ಇಲ್ಲ ಈ ಬಗ್ಗೆ ಮತ್ತಷ್ಟು ಇನ್‌ವೆಸ್ಟಿಗೇಶನ್ ಮಾಡಬೇಕು. ಡಾ. ಹರೀಶ್ ನಾಯಕ್‌ಗೆ ತಿಳಿಸಿ. ಇವರಿಗೆ ಕೂಡಲೆ ಸಿಟಿ ಸ್ಕ್ಯಾನ್ ಆಗಬೇಕು" ಎಂದು ಹೇಳಿ, ಕೇಸ್‌ಶೀಟ್‌ನಲ್ಲಿ ತಮ್ಮ ಅಭಿಪ್ರಾಯ ದಾಖಲು ಮಾಡತೊಡಗಿದರು. ಡಾ. ರಾಮಕೃಷ್ಣ ನನ್ನ ವೆಂಟಿಲೇಟರ್‌ನಲ್ಲಿ ದಾಖಲಾಗುತ್ತಿದ್ದ ಅಂಕಿ ಅಂಶಗಳನ್ನು ಗಮನಿಸುತ್ತಿದ್ದರು. "ಗುಡ್, ಸೋಡಿಯಂ ಲೆವಲ್ ನಿನ್ನೆಗಿಂತ ಜಾಸ್ತಿಯಾಗಿದೆ. ನೂರಿಪ್ಪತ್ತು ಅಂದರೆ ಗುಡ್, ಫೈನ್" ಎಂದರು. ರಕ್ತದಲ್ಲಿನ ಆಮ್ಲಜನಕದ ಪ್ರಮಾಣ ಇನ್ನೂ ಹೆಚ್ಚು ಬೇಕಿದೆಯೆಂದು ತಮ್ಮ ಸಹಚರ ಡಾಕ್ಟರ್‌ಗಳಿಗೆ ತಿಳಿಸುತ್ತಿದ್ದರು. ಡಾ. ಆಮೀರ್ "ಸಿಯೂ ಇನ್ ದಿನ ಇವನಿಂಗ್" ಎಂದು ಹೇಳಿ ಮುನ್ನಡೆದರು.

ಸುಮಾರು ಹನ್ನೊಂದುವರೆ ಹೊತ್ತಿಗೆ ನನ್ನ ಮಕ್ಕಳು ಬಂದರು. "ಡಾ. ಆಮೀರ್ ಮತ್ತು ಡಾ. ಹರೀಶ್ ನಮ್ಮನ್ನು ಕರೆದಿದ್ದರು. ನಿಮ್ಮ ಕೇಸ್ ಡೀಟೈಲ್ ಎಲ್ಲವನ್ನೂ ವಿವರವಾಗಿ ಪಡೆದರು. ನಿಮಗೆ ಹಿಂದೆ ಆಗಿದ್ದ ಕ್ಯಾನ್ಸರ್ ಟ್ರೀಟ್‌ಮೆಂಟ್ ಬಗ್ಗೆಯೂ ತಿಳಿಸಿದ್ದೇವೆ, ಹಾಗೆಯೆ ಕಳೆದ ಹಲವು ತಿಂಗಳಿಂದ ನೀವು ಅನುಭವಿಸುತ್ತಿದ್ದ ದೈಹಿಕ ನೋವುಗಳ ಬಗೆಗೆ, ನಿಮ್ಮ ಕತ್ತು ಬಗ್ಗುತ್ತಿರುವ ಬಗೆಗೆ, ನಿಮ್ಮ ಮಾಂಸಖಂಡಗಳು ಶಿಥಿಲವಾಗುತ್ತಿರುವ ಬಗೆಗೆ, ನಿಮಗೆ ನುಂಗಲು ಕಷ್ಟವಾಗುತ್ತಿದ್ದುದರ ಬಗೆಗೆ - ಎಲ್ಲವನ್ನೂ ವಿವರವಾಗಿ ತಿಳಿಸಿದ್ದೇವೆ. ಡಾ. ಆಮೀರ್ ಮಯೇಸ್ತಿನಿಯಾ ಗ್ರೇವಿಸ್ (Myashtania gravis)[೧೦] ಕಾಯಿಲೆಯೆಂದು ಅನುಮಾನ ವ್ಯಕ್ತಪಡಿಸಿದ್ದಾರೆ. ಅದನ್ನು ಖಚಿತಪಡಿಸಿಕೊಳ್ಳಲು ಈಗಾಗಲೇ ನಿಮ್ಮ ರಕ್ತದ ಪರೀಕ್ಷೆಗೆ ತಿಳಿಸಿದ್ದಾರೆ. ಈಗಾಗಲೇ ಆ ಕಾಯಿಲೆಗೆ ನೀಡುವ ಡ್ರಗ್ಸ್ ನೀಡಲು ಪ್ರಾರಂಭಿಸಿದ್ದಾರೆ" ಎಂದು ವಿವರವಾಗಿ ಸುಶಿ ಹೇಳಿದಳು. ನೇಸರನ ಕಣ್ಣುಗಳಲ್ಲಿ ಆಯಾಸವಿತ್ತು. ಒಂದು ಕ್ಷಣ ಈ ಮಕ್ಕಳು ನಿರ್ವಹಿಸುತ್ತಿರುವ ಜವಾಬ್ದಾರಿಯ ಬಗ್ಗೆ ಚಿಂತೆ ಮೂಡಿತು.

ಸೆಕ್ಯುರಿಟಿ ಬಂದ. ಮಕ್ಕಳು ನನ್ನ ಹಾಸಿಗೆಯ ಬಳಿ ಹೆಚ್ಚು ಹೊತ್ತು ನಿಲ್ಲಲು ಅವಕಾಶವಿಲ್ಲವೆಂದು ತಿಳಿಸಿ ಹೊರಡಲು ಹೇಳಿದ. "ಮತ್ತೆ ಸಂಜೆ ಬರುತ್ತೇವೆ" - ಎಂದು ಹೇಳಿ ಅವರು ಹೊರ ನಡೆದರು. ಇದು ಐಸಿಯು ಆದ್ದರಿಂದ ರೋಗಿಗಳಲ್ಲದವರನ್ನು ಒಳಕ್ಕೆ ಬಿಡುತ್ತಿರಲಿಲ್ಲ. ವಿಸಿಟಿಂಗ್ ಅವರ್ಸ್‌ನಲ್ಲಿ ಮಾತ್ರ ಒಂದೈದು ನಿಮಿಷ ಭೇಟಿಗೆ ಅವಕಾಶವಿರುತ್ತಿತ್ತು.

ನನ್ನ ತಲೆಯ ಮೇಲೆ ಒಂದರ್ಧ ಅಡಿ ಹಿಂದಕ್ಕಾದಂತೆ ಪ್ರಕಾಶಮಾನವಾದ ದೀಪ ಉರಿಯುತ್ತಿತ್ತು. ಆ ಬೆಳಕನ್ನು ದಿಟ್ಟಿಸಿ ಒಂದು ಕ್ಷಣವೂ ನನ್ನಿಂದ ನೋಡಲಾಗುತ್ತಿರಲಿಲ್ಲ. ಕಣ್ಣು ಮುಚ್ಚಿದೆ. ಒಳಗಿನ ಬೆಳಕು ಹಿತವೆನ್ನಿಸಿತು. ಇದೆಂಥಾ ಕಾಯಿಲೆ? ಏನದರ ಹೆಸರು? ಮಯೇಸ್ತಿನಿಯಾ ಗ್ರೇವಿಸ್! ನನ್ನ ಇಷ್ಟು ಜೀವಿತಾವಧಿಯಲ್ಲಿ ಎಂದು ಕೇಳಿರದ ಶಬ್ದ! ಆ ಶಬ್ದ ಕಾಯಿಲೆಯನ್ನು ಕುರಿತು ಮಾತನಾಡುತ್ತದೆಂದು ನನಗೆ ಈಗಲೇ ಗೊತ್ತಾಗಿದ್ದು. ಅನಂತರದ ದಿನಗಳಲ್ಲಿ ನಾನು ತಿಳಿದುಕೊಂಡ ಸಂಗತಿಗಳಿಂದ ಈ ಕಾಯಿಲೆಯ ಬಗ್ಗೆ ನಾನು ಗ್ರಹಿಸಿದ್ದು ಇಷ್ಟು: ಇದೊಂದು ಅಪರೂಪದ ಕಾಯಿಲೆ. ನಮ್ಮ ದೇಶದಲ್ಲಿ ಲಕ್ಷಕ್ಕೊಬ್ಬರಿಗೆ ಬರಬಹುದು. ಸಾಮಾನ್ಯವಾಗಿ ಯುರೋಪು, ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್‌ಗಳಲ್ಲಿ ತುಸು ಅಧಿಕ. ನಮ್ಮ ದೇಶದಲ್ಲಿ ಹಿಂದಿಯ ಮೇರು ನಟ ಅಮಿತಾಬ್ ಬಚ್ಚನ್‌ಗೆ ಈ ಕಾಯಿಲೆಯಿದೆ. ಇಡೀ ದೇಹದ ಮಾಂಸಖಂಡಗಳು ದುರ್ಬಲಗೊಂಡು ಶಿಥಿಲಗೊಳ್ಳುವುದೇ ಈ ಕಾಯಿಲೆಯ ಪ್ರಧಾನ ಲಕ್ಷಣ.

ನನಗೆ ನಿಧಾನವಾಗಿ ಅರ್ಥವಾಗತೊಡಗಿತು. ಈ ಮಾಂಸಖಂಡಗಳ ದುರ್ಬಲತೆ ದಿಢೀರನೆ ನನಗೆ ಬಂದುದಲ್ಲ. ಸುಮಾರು ಎರಡು ವರ್ಷಗಳ ಹಿಂದೆಯೇ ನನ್ನ ದೇಹದ ಮಾಂಸಖಂಡಗಳು ದುರ್ಬಲಗೊಂಡು ನಾನು ತೂಕ ಕಳೆದುಕೊಂಡು ಸಣ್ಣಾಗುತ್ತಿರುವುದು ನನ್ನ ಗಮನಕ್ಕೆ ಬಂದಿತ್ತು. ನನ್ನ ವಯೋಮಾನ ಮತ್ತು ಕೆಲಸದ ಒತ್ತಡಗಳಿಂದ ಹೀಗಾಗುತ್ತಿದೆಯೆಂದು ನಾನು ತಿಳಿದಿದ್ದೆ. ಕೆಲವು ವೈದ್ಯರಂತು 'ನಿಮಗೆ ಬಿಪಿ ಶುಗರ್ ಇರುವುದರಿಂದ ದೇಹದ ತೂಕ ಇಳಿದಿರುವುದು ಒಳ್ಳೆಯದೇ' ಎಂದು ಸಮಾಧಾನ ಮಾಡಿದ್ದರು. ಪ್ರಾರಂಭದಲ್ಲಿ ನನಗೆ ಭೇದಿ ಆಗಿತ್ತು. ಅದು ಏನು ಔಷಧ ತೆಗೆದುಕೊಂಡರೂ ತಿಂಗಳಾನುಗಟ್ಟಲೆ ನಿಲ್ಲಲಿಲ್ಲ. ನನ್ನ ಗುದದ್ವಾರಕ್ಕೆ ಅವಸರವಾದಾಗ ಬಿಗಿಹಿಡಿಯಲು ಆಗುತ್ತಲೇ ಇರಲಿಲ್ಲ. ಚೊಳ್ಳನೆ ನೀರಿನಂತೆ ಹೊರಕ್ಕೆ ಬಂದು ಬಿಡುತ್ತಿತ್ತು. ಈಗ ನನಗೆ ಅರ್ಥವಾಗುತ್ತಿದೆ; ನನ್ನ ಗುದದ್ವಾರದ ಸ್ನಾಯುಗಳು ದುರ್ಬಲಗೊಂಡು ತಮ್ಮ ಕಾರ್ಯಕ್ಷಮತೆಯನ್ನು ಕಳೆದುಕೊಂಡಿದ್ದವು. ಈ ಸ್ಥಿತಿ ಹೆಚ್ಚು ಕಡಿಮೆ ಮೂರು ತಿಂಗಳು ಇತ್ತು. ಅನಂತರ ಅದೇ ಸರಿಹೋಯಿತು.

ಅನಂತರದ ದಿನಗಳಲ್ಲಿ ಅಂದರೆ ಒಂದು ವರ್ಷದ ಹಿಂದೆ ಬಂದದ್ದೇ ಲೈಕನ್ ಪ್ಲೆನಸ್ ಎಂಬ ನನ್ನ ಬಾಯಿಯ ಒಳಚರ್ಮದ ಮೇಲ್ಪದರವಾದ ಮ್ಯುಕೋಸವನ್ನು ನಾಶಮಾಡುವ ಕಾಯಿಲೆ. ಇದನ್ನು ನೋಡಿದ ಫಿಸಿಸಿಯನ್‌ಗಳು- 'ಇದು ವಿಟಮಿನ್‌ಗಳ ಕೊರತೆಯಿಂದ ಆಗಿದೆ' ಎಂದು ಹೇಳಿ ತಿಂಗಳುಗಟ್ಟಲೇ ವಿಟಮಿನ್ ಮಾತ್ರೆಗಳನ್ನು ನುಂಗಿಸಿದರು. ಆಗಲೂ ವಾಸಿಯಾಗದಾದಾಗ ನನ್ನ ಮಗಳು ಇದು ಓರಲ್ ಡೆಂಟಿಸ್ಟ್ರಿಗೆ ಸಂಬಂಧಿಸಿದ್ದು, ಎಂದು ಹೇಳಿ ಡಾ. ಜಯಶಂಕರ್ ಬಳಿ ಕರೆದುಕೊಂಡು ಹೋಗಿ ಪರೀಕ್ಷೆಗೆ ಒಳಪಡಿಸಿದಳು. ಡಾ. ಜಯಶಂಕರ್ ಸುಮಾರು ಮೂರು ತಿಂಗಳು ಕಾಲ ಚಿಕಿತ್ಸೆ ನೀಡಿದರೂ ಗುಣವಾಗಲಿಲ್ಲ. ಹತಾಶರಾದ ಅವರು ನಿಮಗೆ 'ಆಟೋ ಇಮ್ಯುನ್ ಡಿಸ್ ಆರ್ಡರ್' ಆಗಿದೆ. ನೀವು ಚರ್ಮರೋಗ ತಜ್ಞರಲ್ಲಿಗೆ ಹೋಗುವುದು ಉತ್ತಮ" ಎಂದರು. ಅನಂತರ ನಾನು ಡಾ. ಹನುಮಂತಪ್ಪನವರಿಗೆ ತೋರಿಸಿ, "ಇಮ್ಯುನೋ ಥೆರಪಿ" ಚಿಕಿತ್ಸೆ ಪಡೆಯುತ್ತಿದ್ದೆ.

ದಿನೇ ದಿನೇ ನಾನು ದುರ್ಬಲಗೊಳ್ಳುತ್ತಿದ್ದೆ. ನನ್ನ ದೇಹದ ತೂಕ ತೀವ್ರವಾಗಿ ಇಳಿಯತೊಡಗಿತು. ಆಯಾಸ, ಸುಸ್ತು ಜಾಸ್ತಿಯಾಯಿತು. ನಾನು ಸುಮಾರು ಇಪ್ಪತ್ತು ಕೆಜಿ ಕಡಿಮೆಯಾದೆ. ನನಗೆ ನಡೆಯಲು ಆಗುತ್ತಿರಲಿಲ್ಲ. ಕತ್ತಿನ ನೋವು ಅಧಿಕವಾಗ ತೊಡಗಿತು. ಆಹಾರವನ್ನು ನುಂಗಲು ಕಷ್ಟವಾಗುತ್ತಿದೆಯೆಂದು ನಿಧಾನವಾಗಿ ಅರಿವಿಗೆ ಬರತೊಡಗಿತು.

ಸುಮಾರು ಹನ್ನೆರಡು ಗಂಟೆಯ ಹೊತ್ತಿಗೆ ಡಾ. ಹರೀಶ್‌ನಾಯಕ್ ಬಂದರು. ಸದಾ ಶಾಂತಮೊಗದ ಆತ್ಮೀಯ ಸ್ಪರ್ಶದ ವ್ಯಕ್ತಿ ಅವರು. ತಾಳ್ಮೆ ಅವರ ಪ್ರಧಾನ ಗುಣವೆಂದು ನನಗೆ ಅರ್ಥವಾಗಿತ್ತು. ರೋಗಿಯನ್ನು ನಿಧಾನವಾಗಿ ಪರಿಶೀಲಿಸಿ, ನಾನಾ ತರದ ದೃಷ್ಟಿಕೋನಗಳಿಂದ ಸ್ಥಿತಿಯನ್ನು ತೂಗಿ ನೋಡಿ ಒಂದು ತೀರ್ಮಾನಕ್ಕೆ ಬರುವ ಸ್ವಭಾವ ಅವರದು. ನನ್ನ ಎದೆ ಮತ್ತು ಬೆನ್ನುಗಳ ಬಡಿತಗಳನ್ನು ಸಾವಕಾಶವಾಗಿ ತಮ್ಮ ಸ್ಟೆತಾಸ್ಕೋಪ್ ಸಹಾಯದಿಂದ ತಮ್ಮ ಕಿವಿಯ ಮೂಲಕ ಆಲಿಸಿದರು. ನನ್ನ ಉಸಿರಾಟದ ಕ್ರಿಯಾಗತಿಯನ್ನು ಅವಲೋಕಿಸಿದರು. ಬ್ರದರ್‌ಗೆ ಯಾವ ಯಾವ ಔಷಧಿ ನೀಡಬೇಕು, ನನಗೆ ಎಂಥ ಆಹಾರ ನೀಡಬೇಕೆಂದು ಸಲಹೆ ನೀಡಿದರು. ಅನಂತರ ಕೇಶ್‌ಶೀಟ್‌ನಲ್ಲಿ ವಿವರವಾಗಿ ಟಿಪ್ಪಣಿ ಮಾಡಿದರು. ಬ್ರದರ್‌ಗೆ "ಈ ಪೇಶೆಂಟ್‌ಗೆ ಕೂಡಲೇ ಸಿಟಿ ಸ್ಕ್ಯಾನ್ ಮಾಡಿಸುವ ವ್ಯವಸ್ಥೆ ಮಾಡಿ" ಎಂದು ಹೇಳಿ ಮತ್ತೊಮ್ಮೆ ನನ್ನ ಎಕ್ಸ್‌ರೇ ಶೀಟನ್ನು ದೀಪದ ಬೆಳಕಲ್ಲಿ ಅವಲೋಕಿಸಿದರು. ಅನಂತರ "ಸಿಟಿ ಸ್ಕ್ಯಾನ್ ಬಂದ ಮೇಲೆ ವರದಿ ನೋಡಲು ಆಂಕಾಲಿಜಿಸ್ಟ್‌ಗೆ ತಿಳಿಸಿರಿ. ಇವೆಲ್ಲಾ ತಡ ಆಗಬಾರದು" ಎಂದು ಹೇಳಿ ನನ್ನ ಕಡೆ ತಿರುಗಿ "ಗಾಬರಿಯಾಗುವುದು ಬೇಡ, ಎಲ್ಲವೂ

ಸರಿಹೋಗುತ್ತೆ" ಎಂದು ಮತ್ತೆ ನನ್ನ ವೆಂಟಿಲೇಟರ್ ಮಾನಿಟರ್ ಅನ್ನು ಅವಲೋಕಿಸಿದರು. ನನ್ನ ಕೈಯನ್ನು ಮೃದುವಾಗಿ ತಟ್ಟಿ ಹೋದರು.

ಬ್ರದರ್ ಕೂಡಲೆ ನನ್ನ ಎದೆಯ ಭಾಗದ ಸಿಟಿ ಸ್ಕ್ಯಾನ್ ತೆಗೆಸುವ ನಿಟ್ಟಿನಲ್ಲಿ ಕಾರ್ಯೋನ್ಮುಖನಾದ. ಸ್ಕ್ಯಾನ್ ವಿಭಾಗಕ್ಕೆ ಫೋನ್ ಮಾಡಿ ಸಮಯ ನಿಗದಿಮಾಡಿದ. ಅಲ್ಲಿಗೆ ನನ್ನನ್ನು ಸಾಗಿಸಲು ವೀಲ್‌ಕಾಟ್ ತರುವಂತೆ ಸಂಬಂಧಪಟ್ಟ ಸಾಗಾಣಿಕೆ ವಿಭಾಗಕ್ಕೆ ತಿಳಿಸಿದ. ನನ್ನ ಕೈಕಾಲುಗಳಿಗೆ ಕಟ್ಟಿದ್ದ ಕಟ್ಟುಗಳನ್ನು ಬಿಚ್ಚಿ, ನನ್ನ ಗೌನನ್ನು ಸರಿಮಾಡಿದ. ಅಷ್ಟರಲ್ಲಿ ವೀಲ್‌ಕಾಟ್ ಬಂತು, ನಾಲ್ಕು ಜನ ಬ್ರದರ್‌ಗಳು ತಮ್ಮ ಎಂದಿನ ಕಸಬುಗಾರಿಕೆಯಿಂದ ನನ್ನ ದೇಹಕ್ಕೆ ಬಾಧೆಯಾಗದಂತೆ ಹಾಸಿಗೆಯಿಂದ ವೀಲ್‌ಕಾಟ್‌ಗೆ ವರ್ಗಾಯಿಸಿದರು. ನನ್ನ ಬಾಯಿಗೆ ಜೋಡಿಸಿದ್ದ ಟ್ಯೂಬ್‌ಗೆ ತಳ್ಳುವ ಸಿಲಿಂಡರ್ ಮೂಲಕ ಆಮ್ಲಜನಕದ ಸಂಪರ್ಕ ಕಲ್ಪಿಸಲಾಯಿತು. ಆಮ್ಲಜನಕವನ್ನು ಸಿಲಿಂಡರ್‌ನಿಂದ ನನ್ನ ದೇಹದೊಳಕ್ಕೆ ಪಂಪ್ ಮಾಡುವ ಬಾಲ್ ಒಂದನ್ನು ಬ್ರದರ್ ಒಬ್ಬ ಹಿಡಿದು ನಿಧಾನವಾಗಿ ಪಂಪ್ ಮಾಡತೊಡಗಿದ. ಆಸ್ಪತ್ರೆಯ ನೆಲ ಅಂತಸ್ತಿನಲ್ಲಿದ್ದ ಸ್ಕ್ಯಾನಿಂಗ್ ಸೆಂಟರ್‌ಗೆ ನನ್ನನ್ನು ಲಿಫ್ಟ್‌ನ ಮೂಲಕ ಕರೆತರಲಾಯಿತು. ಎಲ್ಲಿಯೂ ನನ್ನ ದೇಹಕ್ಕೆ ನೋವಾಗದಂತೆ ಸಾಗಾಣಿಕೆಯನ್ನು ನಿರ್ವಹಿಸಿದ ಅವರ ಕುಶಲತೆ ಮೆಚ್ಚುವಂತಾದ್ದಾಗಿತ್ತು.

ಸ್ಕ್ಯಾನಿಂಗ್ ಸೆಂಟರ್‌ನ ತಂತ್ರಜ್ಞರು ನಾವು ಬರುವುದನ್ನೇ ಕಾಯುತ್ತಿದ್ದರು. ಸ್ಕ್ಯಾನಿಂಗ್‌ಗಾಗಿ ಎಲ್ಲ ಸಿದ್ಧತೆಯನ್ನೂ ಮಾಡಿಕೊಂಡಿದ್ದರು. ಸ್ಕ್ಯಾನಿಂಗ್ ಟೇಬಲ್‌ಗೆ ಮತ್ತೆ ನನ್ನನ್ನು ನಯವಾಗಿ ವರ್ಗಾಯಿಸಲಾಯಿತು. ಅಲ್ಲಿನ ತಂತ್ರಜ್ಞ ನನ್ನ ಎದೆಯ ಭಾಗದ ಚಿತ್ರ ಸರಿಯಾಗಿ ಬರುವಂತೆ ಕಂಪ್ಯೂಟರ್ ಸ್ಕ್ಯಾನಿಂಗ್ ಮೂಲಕ ಪರಿಶೀಲಿಸಿ ಖಚಿತಪಡಿಸಿಕೊಂಡನು. ಸ್ಕ್ಯಾನಿಂಗ್ ಕಂಪ್ಯೂಟರ್‌ನ ಮುಂದೆ ಕುಳಿತಿದ್ದ ತಂತ್ರಜ್ಞ ನೀಡುತ್ತಿದ್ದ ಮಾರ್ಗದರ್ಶನದಲ್ಲಿ ಸ್ಕ್ಯಾನಿಂಗ್ ಯಂತ್ರದೊಳಕ್ಕೆ ನನ್ನ ದೇಹದ ಎದೆಯ ಭಾಗ ಹೋಗುವಂತೆ ಮಾಡಿ, ದೇಹದ ಚಿತ್ರ ಸರಿಯಾಗಿ ಬರುವ ಬಗ್ಗೆ ಖಚಿತಪಡಿಸಿ ಕೊಂಡ. ನನಗೆ ಆಮ್ಲಜನಕವನ್ನು ಎಚ್ಚರ ತಪ್ಪದೆ ನೀಡುತ್ತಿದ್ದರು. ತಂತ್ರಜ್ಞ ಸ್ಕ್ಯಾನಿಂಗ್ ಯಂತ್ರ ಆನ್ ಮಾಡುವ ಮುನ್ನ ಅಲ್ಲಿದ್ದವರಿಗೆಲ್ಲಾ ರೇಡಿಯೇಶನ್ ಕಿರಣಗಳು ತೊಂದರೆ ಕೊಡದಿರಲೆಂದು ಅದಕ್ಕಾಗಿಯೇ ಸಿದ್ಧಪಡಿಸಿ ಇಡಲಾಗಿದ್ದ ಗೌನುಗಳನ್ನು ಧರಿಸಲು ಸೂಚಿಸಿದ. ಎಲ್ಲರೂ ಗೌನು ಧರಿಸಿ ಸಿದ್ಧರಾದರು. "ನೀವೇನೂ ಗಾಬರಿ ಯಾಗಬೇಡಿ, ಕೆಲವೇ ನಿಮಿಷಗಳಲ್ಲಿ ಮುಗಿಯುತ್ತೆ" ಎಂದು ಹೇಳಿ ಯಂತ್ರವನ್ನು ಆನ್ ಮಾಡಿದ. ಬಣ್ಣದ ಬೆಳಕಿನ ಕಿರಣ ಎದೆಯ ಭಾಗದಲ್ಲಿ ಹರಿದಾಡಿದವು. ಸ್ಕ್ಯಾನಿಂಗ್ ಮುಗಿಯಿತೆಂದು ಸೂಚನೆ ಬಂತು. ಬ್ರದರ್‌ಗಳು ತಾವು ತೊಟ್ಟಿದ್ದ ಕಿರಣ

ನಿರೋಧಕ ಗೌನುಗಳನ್ನು ತೆಗೆದರು. ನನ್ನನ್ನು ಮತ್ತೆ ವೀಲ್‌ಕಾಟ್‌ಗೆ ವರ್ಗಾಯಿಸಿ, ಭದ್ರಗೊಳಿಸಿ, ಲಿಫ್ಟ್ ಮೂಲಕ ಮೂರನೆಯ ಅಂತಸ್ತಿನಲ್ಲಿದ್ದ ಐಸಿಯುಗೆ ಕರೆತರಲಾಯಿತು.

ಅಂದು ಸಂಜೆಯ ಹೊತ್ತಿಗೆ ನನ್ನ ರಕ್ತದ ಪರೀಕ್ಷೆಗಳ ಫಲಿತಾಂಶಗಳೆಲ್ಲವೂ ಬಂದಿದ್ದವು. ಸಿಟಿ ಸ್ಕ್ಯಾನಿಂಗ್ ಚಿತ್ರ ಮತ್ತು ವರದಿಯು ಸಹ ಬಂದು ನನ್ನ ಮಂಚದ ಎದುರಿಗಿದ್ದ ಟೇಬಲ್ ಮೇಲೆ ಬಂದು ಕುಳಿತಿತು. ಈ ಆಸ್ಪತ್ರೆಯ ಕೆಲಸಗಾರಿಕೆಯಲ್ಲಿ ಚುರುಕುತನವಿರುವುದನ್ನು ನನ್ನ ಒಂದು ದಿನದ ವಾಸ್ತವ್ಯದ ಅವಧಿಯಲ್ಲೇ ಕಂಡು ಕೊಂಡಿದ್ದೆ. ಸಂಜೆ ಐದು ಗಂಟೆಗೆ ತಜ್ಞ ವೈದ್ಯರು ಬರುತ್ತಾರೆ. ಅವರು ಬೆಳಿಗ್ಗೆ ತಿಳಿಸಿ ಹೋಗಿದ್ದ ಎಲ್ಲಾ ಕೆಲಸಗಳು ಸಿದ್ಧಗೊಂಡು, ಅವರು ಬರುವ ಹೊತ್ತಿಗೆ ಅವುಗಳ ಫಲಿತಾಂಶ ಅವರ ಕೈಗೆ ಸಿಗುವಂತಿರಬೇಕು ಎಂಬ ಎಚ್ಚರ ಮತ್ತು ಅಚ್ಚುಕಟ್ಟುತನ ಇಲ್ಲಿನ ಆಡಳಿತ ವ್ಯವಸ್ಥೆಯಲ್ಲಿತ್ತು.

ನನಗೆ ಎಚ್ಚರವಾಗುವಂತೆ ಯಾರೋ ಮೃದುವಾಗಿ ತಟ್ಟಿದ ಅನುಭವ. ಸಿಸ್ಟರ್‌ಗಳ ನಗುಮುಖ ಎದುರಾಯಿತು. ಆಕೆಯ ಪಕ್ಕ ಸುಮಾರು ಮೂವತ್ತೈದು ವರ್ಷದ ಮಧ್ಯಮಕಾಯದ ವ್ಯಕ್ತಿಯೊಬ್ಬರು ನಿಂತಿದ್ದರು. ಸಂಜೆ ಆಗಿರಬೇಕು ರೋಗಿಗಳನ್ನು ನೋಡಲು ತಜ್ಞವೈದ್ಯರು ಬರತೊಡಗಿದ್ದರು. ನನ್ನ ಎದುರಿಗಿದ್ದ ವ್ಯಕ್ತಿ ತನ್ನನ್ನು ತಾನು ಪರಿಚಯ ಮಾಡಿಕೊಂಡರು. "ನಾನು ಆಂಕಾಲಿಜಿಸ್ಟ್ - ನಿಮ್ಮ ಎಕ್ಸ್‌ರೇ ಮತ್ತು ಸಿಟಿ ಸ್ಕ್ಯಾನಿಂಗ್‌ಗಳನ್ನು ನೋಡಿದೆ. ನಿಮ್ಮ ಎದೆಯ ಮಧ್ಯೆ ಭಾಗದಲ್ಲಿ ಒಂದು ಗಡ್ಡೆ ಇದೆ, ಅದು ಎಷ್ಟು ದಿನಗಳಿಂದ ಇದೆಯೆಂದು ನಿಮಗೇನಾದರೂ ಗೊತ್ತೆ? ಯಾವುದೇ ಬಗೆಯ ಅಸಹಜ ನೋವಿನ ಅನುಭವ ನಿಮಗೆ ಆಗಾಗ ಆಗುತ್ತಿತ್ತೆ?" ಎಂದು ಹೇಳಿದರು.

ಅಷ್ಟರಲ್ಲಿ ಬ್ರದರ್ ನನ್ನ ಕೈಗಳನ್ನು ಬಿಚ್ಚಿದ್ದ. ನನ್ನ ಬೆರಳುಗಳನ್ನು ತೋರಿಸಿ ಸುಮಾರು ಹತ್ತು ವರ್ಷಗಳಿಂದ ಆ ಗೆಡ್ಡೆ ನನ್ನಲ್ಲಿದೆಯೆಂದು ಅವರಿಗೆ ಸಂಜ್ಞೆ ಮೂಲಕ ತಿಳಿಸಿದೆ. ಆ ಭಾಗದಲ್ಲಿ ನನಗೆ ಯಾವುದೇ ಬಗೆಯ ನೋವು ಇಲ್ಲವೆಂದು ನನ್ನ ಮುಟ್ಟಿ ಅವರಿಗೆ ತೋರಿದೆ. ಬಹುಶಃ ಅವರಿಗೆ ನನ್ನ ಮೂಕಭಾಷೆ ಅರ್ಥವಾಗಿರಬೇಕು. "ನಿಮ್ಮ ಇಂದಿನ ಈ ಸ್ಥಿತಿಗೆ ಈ ಗಡ್ಡೆ ಕಾರಣವಿಲ್ಲದಿರಬಹುದು. ಆದರೆ ಗಡ್ಡೆ ಇರುವುದು ಸತ್ಯ. ಅದನ್ನು ಹೊರ ತೆಗೆಯುವುದು ಉತ್ತಮ. ಡಾ. ಹರೀಶ್ ನಾಯಕ್ ಜೊತೆ ಮಾತನಾಡುತ್ತೇನೆ" ಎಂದು ಹೇಳಿದ ಅವರು ನನ್ನ ಕೇಶ್ ಶೀಟ್‌ನಲ್ಲಿ ವಿವರವಾಗಿ ತಮ್ಮ ಗ್ರಹಿಕೆಯನ್ನು ದಾಖಲಿಸಿದರು.

ಬ್ರದರ್ ಡಾಕ್ಟರ್ ಹೋದ ನಂತರ ನನ್ನ ಬಳಿ ಬಂದು, ನನ್ನ ಕೈಗಳನ್ನು ಕಟ್ಟಲು

ಮುಂದಾದ. ಅವನು ನನ್ನ ಕೈಗಳನ್ನು ಹಿಡಿದು ಮಂಚದ ಕಂಬಿಯ ಕಡೆ ಎಳೆಯುವ ಮೊದಲೇ ನಾನೇ ಮುಂದಾಗಿ ನನ್ನ ಕೈಗಳನ್ನು ಕಟ್ಟುವಂತೆ ನೀಡಿದೆ. ಬ್ರದರ್ ಒಮ್ಮೆ ನನ್ನ ಮುಖವನ್ನೇ ದಿಟ್ಟಿಸಿದ. ಅವನ ಕಣ್ಣುಗಳಲ್ಲಿ ಆಶ್ಚರ್ಯಭರಿತ ಭಾವವಿತ್ತು. ನನ್ನನ್ನು ಕಟ್ಟಲು ಅವನ ಮನಸ್ಸು ಒಪ್ಪಲಿಲ್ಲವೆಂದು ತೋರುತ್ತದೆ. ನನ್ನನ್ನೇ ದಿಟ್ಟಿಸಿ "ನೋಡಿ ಸಾರ್, ನಿಮ್ಮಂಥ ಕ್ರಿಟಿಕಲ್ ಸ್ಥಿತಿಯಲ್ಲಿರೋ ಹಾಗೂ ವೆಂಟಿಲೇಶನ್ ನಲ್ಲಿರೋ ಪೇಶೆಂಟ್‌ಗಳ ಕೈಕಾಲುಗಳನ್ನು ನಾವು ಕಟ್ಟಿಹಾಕುವುದು ಅನಿವಾರ್ಯ ವಾಗುತ್ತದೆ. ಏಕೆಂದರೆ, ಸಾಮಾನ್ಯವಾಗಿ ಈ ಸ್ಥಿತಿಯ ಪೇಶೆಂಟ್‌ಗಳು ತಮ್ಮ ಮೂಗು ಮತ್ತು ಬಾಯಿಗೆ ಹಾಕಿರುವ ಟ್ಯೂಬ್‌ಗಳನ್ನು ಕಿತ್ತುಹಾಕಿಕೊಳ್ಳುತ್ತಾರೆ. ಅದರಿಂದ ಗಾಯಗಳಾಗುತ್ತವೆ. ಅಲ್ಲದೆ ಆಕ್ಸಿಜನ್ ಸಂಪರ್ಕ ಕಡಿದು ಹೋಗಿ ಜೀವಕ್ಕೆ ಅಪಾಯ ಬರುತ್ತದೆ. ಆದರೆ ನಾವು ನಿನ್ನೆಯಿಂದ ನಿಮ್ಮನ್ನು ನೋಡುತ್ತಿದ್ದೇವೆ. ನೀವು ತುಂಬಾ ಕೋಆಪರೇಟೀವ್ ಪೇಶೆಂಟ್. ನಮ್ಮ ಯಾವುದೇ ಕೆಲಸಕ್ಕೆ ಅಡ್ಡಿ ಬಂದಿಲ್ಲ. ಆ ಕಾರಣದಿಂದ ನಾನು ಈಗ ನಿಮ್ಮನ್ನು ಕಟ್ಟುತ್ತಿಲ್ಲ. ಆದರೆ ನೀವು ಯಾವುದೇ ಕಾರಣಕ್ಕೂ ನಿಮ್ಮ ಬಾಯಿ ಮತ್ತು ಮೂಗಿನಲ್ಲಿರುವ ಟ್ಯೂಬುಗಳನ್ನು ಕೀಳಬಾರದು" ಎಂದನು. ನಾನು ಆಗಲೆಂದು ತಲೆ ಆಡಿಸಿದೆ.

ಇಲ್ಲಿನ ಬ್ರದರ್ ಸಿಸ್ಟರ್‌ಗಳು ನಿನ್ನೆಯಿಂದ ನನ್ನ ದೇಹದ ಮೇಲೆ ಹತ್ತಾರು ಸಾರಿ ತಮ್ಮ ವಿವಿಧ ಸೈಜಿನ ಸಿರಿಂಜುಗಳಿಂದ ರಕ್ತ ತೆಗೆದಿದ್ದರು. ರಕ್ತ ತೆಗೆಯಲು ನನ್ನ ತೋಳುಗಳಲ್ಲಿ ಸರಿಯಾದ ರಕ್ತನಾಳಗಳು ಅವರಿಗೆ ಸಿಗುತ್ತಿರಲಿಲ್ಲ. ಅದಕ್ಕಾಗಿ ನನ್ನ ಎರಡು ತೋಳುಗಳ ಅನೇಕ ಭಾಗಗಳಲ್ಲಿ ಸಿರಿಂಜಿನಲ್ಲಿ ಚುಚ್ಚಿ ಚುಚ್ಚಿ ವಿಫಲರಾಗುತ್ತಿದ್ದರು. ನನಗಾಗ ಅಪಾರ ನೋವಾಗುತ್ತಿತ್ತು. ನನ್ನ ನೋವು ಶಬ್ದವಾಗಿ ಬಾಯಿಂದ ಹೊರ ಹೊಮ್ಮುತ್ತಿರಲಿಲ್ಲ ನೋವು ಕಣ್ಣುಗಳಲ್ಲಿ ಮಾತ್ರ ಕಾಣುತ್ತಿತ್ತು. ಕೆಲವು ಕುಶಲ ಬ್ರದರ್‌ಗಳು ನೋವಾಗದಂತೆ ರಕ್ತ ತೆಗೆಯಲು ಯಶಸ್ವಿಯಾಗುತ್ತಿದ್ದರು. ಆದರೆ ಎಲ್ಲರಿಂದ ಅದು ಸಾಧ್ಯವಿರಲಿಲ್ಲ. ಅದರಲ್ಲೂ ಐವಿ(IV) ಲೈನ್[೨] ಹಾಕುವ ಸಂದರ್ಭದಲ್ಲಂತು ತುಂಬಾ ಯಾತನೆಯನ್ನು ಅನುಭವಿಸಬೇಕಾಗಿತ್ತು. ಈ ಐವಿ ಲೈನುಗಳು ಒಂದು ಭಾಗದಲ್ಲಿ ಮೂರು ದಿನಗಳು ತೊಂದರೆಯಿಲ್ಲದಂತೆ ಕಾರ್ಯ ನಿರ್ವಹಿಸುತ್ತಿದ್ದವು. ಅನಂತರ ಅವನ್ನು ಅಳವಡಿಸಿದ ಭಾಗದಲ್ಲಿ ಅಪಾರವಾದ ನೋವು ಪ್ರಾರಂಭವಾಗುತ್ತಿತ್ತು. ಆ ಭಾಗದ ಸುತ್ತೆಲ್ಲ ಊದಿಕೊಂಡುಬಿಡುತ್ತಿತ್ತು. ಐವಿ ಲೈನುಗಳ ಮೂಲಕ ಔಷಧ ನೀಡುವಾಗ, ರಕ್ತನಾಳದೊಳಕ್ಕೆ ಔಷಧಿ ಹರಿಯುವಾಗ ನನ್ನ ಒಣ ಕಣ್ಣುಗಳಲ್ಲಿ ನೀರು ಬರುವಷ್ಟು ಯಾತನೆಯಾಗುತ್ತಿತ್ತು. ಆಗ ಬ್ರದರ್‌ಗಳಿಗೆ ಅನಿವಾರ್ಯವಾಗಿ ನನ್ನ ಐವಿ ಲೈನನ್ನು ತೋಳಿನ ಮತ್ತೊಂದು ಭಾಗಕ್ಕೆ ಅಳವಡಿಸುವ

ಪರಿಸ್ಥಿತಿ ಬರುತ್ತಿತ್ತು. ಹೀಗೆ ಆಸ್ಪತ್ರೆಯಲ್ಲಿ ನಾನಿದ್ದ ಅಷ್ಟೂ ದಿನಗಳಲ್ಲಿ ನನ್ನ ಎರಡು ತೋಳುಗಳ ರಕ್ತನಾಳಗಳೆಲ್ಲವೂ ತೂತು ತೂತಾಗಿ ನಿಷ್ಕ್ರಿಯವಾಗತೊಡಗಿದ್ದವು. ನನ್ನ ದೇಹದಿಂದ ರಕ್ತ ತೆಗೆಯುವುದು ಮತ್ತು ಐವಿ ಲೈನ್ ಅನ್ನು ಅಳವಡಿಸುವುದು ಬ್ರದರ್‌ಗಳಿಗೆ ಕೊನೆ ಕೊನೆಗೆ ಸವಾಲಿನ ಪ್ರಶ್ನೆಯಾಯಿತು. ಐವಿ ಲೈನ್ ಹಾಕುವುದರಲ್ಲೇ ತಜ್ಞತೆಯನ್ನು ಸಾಧಿಸಿದ್ದ ಕೆಲವು ಬ್ರದರ್‌ಗಳಿದ್ದರು. ಅನೇಕ ವೇಳೆ ಅವರಿಗಾಗಿ ಕಾದು ಐವಿ ಲೈನ್ ಹಾಕಿಸಬೇಕಿತ್ತು.

ಇಂಥ ಯಾತನಾಸಮಯದಲ್ಲೆಲ್ಲಾ ನಾನು ಬ್ರದರ್‌ಗಳಿಗೆ ಎಂದೂ ಕಾಟ ನೀಡಿದವನಲ್ಲ. ಸಾಧ್ಯವಾದಷ್ಟೂ ಅವರ ಚಿಕಿತ್ಸಾ ಕ್ರಿಯೆಗೆ ಸಹಕರಿಸುತ್ತಿದ್ದೆ. ಕೊನೆ ಕೊನೆಗೆ ನಾನು ಇಡೀ ಐಸಿಯುನಲ್ಲಿ ಮೋಸ್ಟ್ ಕೋ ಆಪರೇಟಿವ್ ಪೇಶೆಂಟ್ ಎಂದು ಕರೆಸಿಕೊಂಡೆ. ಬ್ರದರ್ ನನ್ನ ಕೈಕಾಲುಗಳನ್ನು ಕಟ್ಟದಿದ್ದುರಿಂದ ನನಗೆ ಸ್ವಲ್ಪ ಆರಾಮವೆನ್ನಿಸಿತು. ಕೈಕಾಲುಗಳನ್ನು ಆಡಿಸಲು, ಮಡಚಲು ಸಾಧ್ಯವಾಯಿತು. ದೇಹವನ್ನು ಸಾಧ್ಯವಾದಷ್ಟು ಹಗುರವಾಗಿಡಲು ಅನುವಾಯಿತು. ಬ್ರದರ್‌ಗೆ ಸನ್ನೆ ಮೂಲಕ ಥ್ಯಾಂಕ್ಸ್ ಹೇಳಿದೆ.

ಐಸಿಯುನ ಬ್ರದರ್ ಸಿಸ್ಟರ್‌ಗಳಿಗೆ ನಾನು ಕಾಲೇಜೊಂದರ ಪ್ರಿನ್ಸಿಪಾಲನಾಗಿದ್ದವನೆಂದೂ ಜನಪ್ರಿಯ ಅಧ್ಯಾಪಕನೆಂದೂ ತಿಳಿದುಬಿಟ್ಟಿತ್ತು. ಮಂಜುನಾಥ್ ಎಂಬ ನನ್ನ ಹಳೆಯ ವಿದ್ಯಾರ್ಥಿಯೊಬ್ಬ ಅಪೊಲೊ ಆಸ್ಪತ್ರೆಯ ಮ್ಯಾನೇಜರ್/ಆಡಳಿತಾಧಿಕಾರಿಯಾಗಿದ್ದರು. ಅವರು ನಾನು ಆಸ್ಪತ್ರೆಗೆ ದಾಖಲಾದ ನಂತರ ದಿನಕ್ಕೆರಡು ಬಾರಿ ನನ್ನ ಕ್ಷೇಮ ವಿಚಾರಿಸಲು ಬರುತ್ತಿದ್ದರು. ಬಹುಶಃ ಅವರು ಐಸಿಯುನ ಬ್ರದರ್‌ಗಳಿಗೆ ಈ ವಿಷಯ ತಿಳಿಸಿರಬೇಕು. ಹೀಗಾಗಿ ಬ್ರದರ್‌ಗಳು ನನ್ನ ಬಗ್ಗೆ ವಿಶೇಷವಾದ ಪ್ರೀತಿ - ಕಾಳಜಿ ವಹಿಸುತ್ತಿದ್ದರು. ಅಧ್ಯಾಪಕನಾದವನಿಗೆ ಇದಕ್ಕಿಂತ ದೊಡ್ಡ ಗೌರವ ಸಂಮಾನಗಳು ಮತ್ತೇನು ಬೇಕು?

ಮತ್ತೆ ಸಂಜೆ ತಜ್ಞ ವೈದ್ಯರ ಪುಟ್ಟ ತಂಡವೊಂದು ನನ್ನ ಟೇಬಲ್ ಮುಂದೆ ಸೇರಿತ್ತು. ಡಾ. ಹರೀಶ್‌ನಾಯಕ್, ಡಾ. ಆಮೀರ್ ಮೊಹಿನ್, ಡಾ. ರಾಮಕೃಷ್ಣ ಹಾಗೂ ಇತರೆ ಡ್ಯೂಟಿ ಡಾಕ್ಟರ್‌ಗಳು ನನ್ನ ಸಿಟಿ ಸ್ಕ್ಯಾನ್ ಅನ್ನು ದೀಪದ ಬೆಳಕಿಗೆ ಅಡ್ಡವಾಗಿಟ್ಟು ಪರೀಕ್ಷಿಸಿ, ಚರ್ಚಿಸಿದರು. ನನ್ನ ಇಂದಿನ ಈ ಸ್ಥಿತಿಗೆ ನನ್ನ ಎದೆಯ ಭಾಗದಲ್ಲಿರುವ ಗ್ಲಾಂಡ್‌ನ ಪಾತ್ರವೇನು ಎಂಬುದು ಮುಖ್ಯ ವಿಷಯವಾಗಿತ್ತು ನನಗಾಗಿರುವ ಆಟೋ ಇಮ್ಯುನೋ ಡಿಸ್ ಆರ್ಡರ್‌ಗೆ ಈ ಗೆಡ್ಡೆಯು ನಿರ್ವಹಿಸುತ್ತಿರುವ ಪಾತ್ರವೂ ಕೂಡ ಮುಖ್ಯ ಎಂಬ ತೀರ್ಮಾನಕ್ಕೆ ಬಂದರು. ನನಗಾಗಿರುವ ಮಯೋಸ್ತೀನಿಯಾ ಗ್ರೇವಿಸ್ ಕಾಯಿಲೆಯು ತೀವ್ರತರ ಸ್ವರೂಪ ಪಡೆಯುವಂತಾಗಲು

ಈ ಗೆಡ್ಡೆ ತನ್ನಿಂದ ಹೊರ ಹಾಕುತ್ತಿರುವ ಆಟೋ ಆಂಟಿ ಬಾಡಿಗಳು[೧೩] ಕಾರಣವೆಂದು ಅಭಿಪ್ರಾಯಕ್ಕೆ ಬರಲಾಯಿತು. ಮಯೋಸ್ತಿನಿಯಾ ಗ್ರೆವಿಸ್‌ಗೆ ಸೂಕ್ತ ಔಷಧವನ್ನು ಇಂದಿನಿಂದಲೇ ಪ್ರಾರಂಭಮಾಡುವ ನಿರ್ಧರಿಸಲಾಯಿತು. ಈ ಸಂಬಂಧಿತ ಔಷಧ ಗಳನ್ನು ಡಾ. ಆಮೀರ್ ಕೇಶ್‌ಶೀಟಿನಲ್ಲಿ ಬರೆದು ಬ್ರದರ್‌ಗೆ ಸೂಕ್ತ ಸೂಚನೆ ನೀಡಿದರು. ಅದರಲ್ಲಿ ಒಂದು ಮಾತ್ರೆಯನ್ನು ಪ್ರತಿ ನಾಲ್ಕುಗಂಟೆಗೊಮ್ಮೆ ನೀಡಲು ಹೇಳಿದರು.

ನನ್ನ ಬ್ಬಾಯಿಯಲ್ಲಿ ವೆಂಟಿಲೇಟರ್ ನಳಿಗೆ ಇದ್ದುದರಿಂದ ಬಾಯಿಮೂಲಕ ಮಾತ್ರೆ ನೀಡಲು ಸಾಧ್ಯವಿರಲಿಲ್ಲ. ಹೀಗಾಗಿ ದ್ರವರೂಪದ ಔಷಧದ ಜೊತೆಗೆ ಮಾತ್ರೆಗಳನ್ನು ಪುಡಿ ಮಾಡಿ ನನ್ನ ಮೂಗಿನಲ್ಲಿ ಜೋಡಿಸಿದ್ದ ರೈಲ್ಸ್ ಟ್ಯೂಬ್ ಮೂಲಕ ಜಠರಕ್ಕೆ ಕಳಿಸಲಾಗುತ್ತಿತ್ತು. ಇದರಿಂದ ನನ್ನ ತಲೆಯ ಬಳಿ ಇದ್ದ ಚಿಕ್ಕ ಟ್ರ್ಯಾಲಿ ರೂಪದ ಟೇಬಲ್ಲಿನ ಮೇಲೆ ಆಗಾಗ್ಗೆ ಮಾತ್ರೆ ಕುಟ್ಟಿ ಪುಡಿಮಾಡುವ ಕುಟ್ಟಾಣಿಯ ಸದ್ದು ನಿರಂತರವಾಗಿ ಕೇಳತೊಡಗಿತು.

ಸುಮಾರು ಎಂಟು ಗಂಟೆಯ ಹೊತ್ತಿಗೆ ಮಕ್ಕಳು ಬಂದರು. ಡಾ. ಹರೀಶ್ ಮತ್ತು ಡಾ. ಆಮೀರ್ ಅವರು ನನ್ನ ಕಾಯಿಲೆಯ ವಿವರವನ್ನೂ ನೀಡಬೇಕಿರುವ ಚಿಕಿತ್ಸಾ ಕ್ರಮವನ್ನೂ ಅವರೊಡನೆ ಚರ್ಚಿಸಿದರಂತೆ, "ನಿಮ್ಮ ಕಾಯಿಲೆಯು ಮಯೇಸ್ತಿನಿಯಾ ಗ್ರೇವಿಸ್ ಎಂಬುದು ಕನ್‌ಫರ್ಮ್ ಆಗಿದೆ. ಈಗ ಅದನ್ನು ಕ್ಯೂರ್ ಮಾಡಿ, ನಿಮ್ಮ ಉಸಿರಾಟದ ಸಮಸ್ಯೆಯನ್ನು ಸಹಜ ಸ್ಥಿತಿಗೆ ತರಬೇಕು. ಆ ನಿಟ್ಟಿನಲ್ಲಿ ಟ್ರೀಟ್‌ಮೆಂಟ್ ಪ್ರಾರಂಭಮಾಡಿದ್ದಾರೆ. ಇನ್ನೊಂದೆರಡು ದಿನದಲ್ಲಿ ಅದರ ಪರಿಣಾಮ ಕಾಣಬಹುದಂತೆ" ಎಂದು ಸುಶಿ ನೇಸರ ವಿವರಿಸಿದರು. ಸೆಕ್ಯುರಿಟಿ ಬಂದು ವೇಳೆಯಾಯಿತು ಹೊರಡಿ ಎನ್ನುವಂತೆ ಅವರನ್ನು ನೋಡಿದ. ನಾನು ಅವರನ್ನು ಮನೆಗೆ ಹೋಗುವಂತೆ ಸನ್ನೆ ಮೂಲಕ ಹೇಳಿದೆ. ಅವರು ನನ್ನನ್ನು ಪ್ರೀತಿ ತುಂಬಿದ ಕಣ್ಣುಗಳಿಂದ ಸಾಂತ್ವನ ಹೇಳಿ ಹೊರಟರು.

ಮಾತ್ರೆಗಳ ಮೂಲಕ ನನ್ನ ಕಾಯಿಲೆಗೆ ಚಿಕಿತ್ಸೆ ನೀಡುತ್ತಿದ್ದರೂ ನನ್ನ ಉಸಿರಾಟದ ಪ್ರಕ್ರಿಯೆಯಲ್ಲಿ ಅಂಥ ಸುಧಾರಣೆಯೇನು ಆಗಲಿಲ್ಲ. ನನ್ನ ಶ್ವಾಸಕೋಶಗಳು ಗಾಳಿಯನ್ನು ಎಳೆದು ಬಿಡುವುದರಲ್ಲಿ ಅಸಹಾಯಕವಾಗಿದ್ದವು. ಅವುಗಳು ಕೆಲಸ ನಿರ್ವಹಿಸಲು ತಮ್ಮ ಶಕ್ತಿಯ ಮೂಲಕ ಸಹಕರಿಸಬೇಕಿದ್ದ ಅವುಗಳ ಹೊರ ಕವಚದ ಮೇಲಿನ ಮಾಂಸಖಂಡಗಳು ಚೈತನ್ಯವೊಂದಲು ವಿಫಲವಾಗುತ್ತಿದ್ದವು. ವೈದ್ಯರು ಬೆಳಿಗ್ಗೆ-ಸಂಜೆ ನನ್ನ ಶ್ವಾಸಕೋಶಗಳ ಏರಿಳಿತಗಳನ್ನು ನಾನು ಉಸಿರು ತೆಗೆದು ಬಿಡುವುದರ ಮೂಲಕ ಪರಿಶೀಲಿಸುತ್ತಿದ್ದರು. ನನ್ನ ಎದೆ ಗಾಳಿ ತುಂಬಿಕೊಂಡು

ವಿಸ್ತಾರಗೊಳ್ಳುತ್ತಿರಲಿಲ್ಲ. ಮೂಗಿನ ಮೂಲಕ ನಾನು ಎಳೆದು ಕೊಳ್ಳುವ ಗಾಳಿ ಜಠರಕ್ಕೆ ಹೋಗುತ್ತಿತ್ತು. ಆ ಗಾಳಿಯನ್ನು ಶ್ವಾಸಕೋಶಕ್ಕೆ ತಳ್ಳಿ, ಅಲ್ಲಿ ಅದು ವಿರಮಿಸಿ ಹೊರಹೊಮ್ಮಿಸಲು ನನ್ನ ಅಂಗಾಂಶಗಳು ಸೋಲುತ್ತಿದ್ದವು. ಅದನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಅವಲೋಕಿಸುತ್ತಿದ್ದ ವೈದ್ಯರ ಮುಖದ ಮೇಲಿನ ಭಾವಗಳು ನನಗೆ ಅರ್ಥವಾಗುತ್ತಿದ್ದವು. ಡಾ. ಆಮೀರ್ ಅವರು ಶಿಥಿಲಗೊಂಡಿರುವ ನನ್ನ ಮಾಂಸ ಖಂಡಗಳು ಪುನಶ್ಚೇತನಗೊಳ್ಳುವ ಪ್ರಯತ್ನವನ್ನು ಮುಂದುವರಿಸಿದರು. ಮಾತ್ರೆ ರೂಪದಲ್ಲಿ ನೀಡುತ್ತಿದ್ದ ಔಷಧವನ್ನು ದ್ರವರೂಪದಲ್ಲಿ ನೇರವಾಗಿ ನನ್ನ ರಕ್ತಕ್ಕೆ ನೀಡಲು ಸೂಚಿಸಿದರು. ನನ್ನ ತೋಳಲ್ಲಿ ಅಳವಡಿಸಿದ್ದ ಐವಿ ಲೈನ್ ಮೂಲಕ ಔಷಧ ನೇರವಾಗಿ ನನ್ನ ರಕ್ತದಲ್ಲಿ ಬೆರೆಯಲಾರಂಭಿಸಿತು. ಇದೇ ರೀತಿ ಮತ್ತೆರೆಡು ದಿನ ಔಷಧ ಪ್ರಯೋಗ ನಡೆಸಲಾಯಿತು. ಅಂಥ ಸುಧಾರಣೆ ಕಂಡು ಬರದಿದ್ದಾಗ ವೈದ್ಯರ ಮುಖದ ಮೇಲೆ ಚಿಂತೆಯ ಗೆರೆಗಳು ಮೂಡಲಾರಂಭಿಸಿದವು.

ಮಯೇಸ್ತೇನಿಯಾ ಗ್ರೇವಿಸ್‌ಗೆ ನೀಡುವ ಈ ಔಷಧ ಪ್ರಯೋಗದಿಂದ ಇಷ್ಟು ಹೊತ್ತಿಗೆ ಚೇತರಿಕೆಯ ಲಕ್ಷಣಗಳು ಕಾಣಿಸಬೇಕಿತ್ತು. ಬಹುಶಃ ಎದೆಯ ಮಧ್ಯಭಾಗ ದಲ್ಲಿ ಮೂಡಿರುವ ಗೆಡ್ಡೆಯು ಉತ್ಪನ್ನ ಮಾಡುತ್ತಿರುವ ಆಂಟಿ ಬಾಡಿಗಳು ಔಷಧದ ಪರಿಣಾಮವನ್ನು ಕುಂಠಿತಗೊಳಿಸುತ್ತಿರಬಹುದು. ಆ ಗೆಡ್ಡೆಯನ್ನು ನಿಷ್ಕ್ರಿಯಗೊಳಿಸದೆ ಅಥವಾ ಅದನ್ನು ತೆಗೆಯದೆ ಮಯೇಸ್ತೇನಿಯಾ ಗ್ರೇವಿಸ್ ಗುಣವಾಗುವುದು ಕಷ್ಟವಾಗಬಹುದು. ಈಗಂತೂ ನಾನಿರುವ ಸ್ಥಿತಿಯಲ್ಲಿ ಎದೆಯ ಭಾಗದ ಆಪರೇಶನ್ ಮಾಡಿ ಗೆಡ್ಡೆಯನ್ನು ಹೊರತೆಗೆಯುವುದು ಅಸಾಧ್ಯದ ಮಾತು. ಡಾ. ಆಮೀರ್ ಮತ್ತು ಡಾ. ಹರೀಶ್ ನಾಯಕ್ ಅವರು ತಮ್ಮ ತಮ್ಮಲ್ಲೇ ಸಮಾಲೋಚನೆ ನಡೆಸಿದರು. ಅವರು ಗೆಡ್ಡೆ ಉತ್ಪನ್ನ ಮಾಡುತ್ತಿರಬಹುದಾದ ಆ ಆಂಟಿ ಬಾಡಿಗಳನ್ನು ನಿಷ್ಕ್ರಿಯಗೊಳಿಸುವ ಔಷಧವನ್ನು ನನಗೆ ನೀಡಲು ನಿರ್ಧರಿಸಿದರು.

ಆ ಬಗ್ಗೆ ನನ್ನ ಮಕ್ಕಳ ಜೊತೆ ಸಮಾಲೋಚನೆ ಮಾಡಿದರಂತೆ. ಏಕೆಂದರೆ ಆ ಔಷಧ ಅತ್ಯಂತ ದುಬಾರಿ ಬೆಲೆಯದ್ದಾಗಿತ್ತು. ಅದನ್ನು ಭರಿಸುವ ಶಕ್ತಿ ರೋಗಿಯ ಮನೆಯವರಿಗೆ ಇರಬೇಕಾಗಿತ್ತು. ಅಂದು ಸಂಜೆ ನನ್ನ ಮಕ್ಕಳು ನನ್ನ ಬಳಿ ಬಂದರು. ಸುಶಿ ನನ್ನ ದೇಹದ ಸ್ಥಿತಿ, ಔಷಧಗಳ ಪರಿಣಾಮ, ಆಂಟಿ ಬಾಡಿಗಳ ವಿರುದ್ಧ ನಡೆ - ಇವೆಲ್ಲವನ್ನೂ ವಿವರಿಸಿ, ಔಷಧಗಳು ಕೆಲಸ ಮಾಡಬೇಕಾದರೆ ಐವಿಐಜಿ (intravenous immuno globinis)[೧೪] ಎಂಬ ಔಷಧವನ್ನು ನೀಡುವುದು ಈ ಸಂದರ್ಭದಲ್ಲಿ ಯುಕ್ತ. ಆದರೆ ಅದು ತುಂಬಾ ದುಬಾರಿಯಾದ ಔಷಧವೆಂದು ವಿವರಿಸಿದಳು. ನಾನು "ಎಷ್ಟಾಗುತ್ತೆ?" ಎಂದು ಒಂದು ಹಾಳೆಯಲ್ಲಿ ಬರೆದು ಕೇಳಿದೆ. ನೇಸರ "ಒಂದು

ಬಾಟಲ್‌ಗೆ ಹದಿನೆಂಟು ಸಾವಿರ ರೂಪಾಯಿಗಳು. ಈಗ ನಿರಂತರವಾಗಿ ಮೂರು ದಿನ ನೀಡಬೇಕಂತೆ, ನಿಮ್ಮ ದೇಹದ ತೂಕದ ಆಧಾರದ ಮೇಲೆ ಔಷಧದ ಪ್ರಮಾಣವಿರುತ್ತದೆ. ಈಗ ಮೊದಲ ಆವೃತ್ತದಲ್ಲಿ ಮೂರು ದಿನ ನಿರಂತರವಾಗಿ ನಾಲ್ಕು+ಮೂರು+ಮೂರು+ನಾಲ್ಕು - ಈ ರೀತಿಯಲ್ಲಿ ಔಷಧವನ್ನು ಐವಿ ಮೂಲಕ ನೀಡಬೇಕಾಗುತ್ತದೆ" ಎಂದನು.

ಕಣ್ಣು ಮುಚ್ಚಿದೆ. ನನ್ನ ಎದೆಯಲ್ಲಿ ಚಿಂತೆ ಮಾತಾಡ ತೊಡಗಿತು. ಆರ್ಥಿಕವಾಗಿ ಅಂಥ ಸುಸ್ಥಿತಿಯಲ್ಲಿದ್ದವನು ನಾನಲ್ಲ. ಒಂದು ಪ್ರತಿಷ್ಠಿತ ಕಾಲೇಜಿನ ಪ್ರಿನ್ಸಿಪಾಲನಾಗಿ ಹದಿನೈದು ವರ್ಷ ಕೆಲಸ ಮಾಡಿದ ನನ್ನಲ್ಲಿ ಹಣಕಾಸಿನ ತೊಂದರೆಯಿಲ್ಲವೆಂದು ಬಹಳ ಜನ ಭಾವಿಸಿದ್ದರು. ಆದರೆ ನಾನು ಅಂಥಾ ಉಳಿತಾಯದ ಮನೋಧರ್ಮದವನಲ್ಲ. ಪ್ರಾಮಾಣಿಕವಾಗಿ ಸರ್ಕಾರಕ್ಕೆ ತೆರಿಗೆ ಪಾವತಿಸುತ್ತಿದ್ದೆ. ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತಿದ್ದೆ. ನಗರದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದ ಕಡು ಬಡವ ಮಕ್ಕಳನ್ನು ಓದಿಸಲು ದತ್ತು ತೆಗೆದುಕೊಳ್ಳುತ್ತಿದ್ದೆ. ಜೊತೆಗೆ, ಮನೆಯಲ್ಲಿ ನನ್ನ ಹೆಂಡತಿ ಮಕ್ಕಳಿಗೆ ಊಟ ತಿಂಡಿ ಬಟ್ಟೆಗಳಿಗೆ ಎಂದೂ ಕೊರತೆಯಾಗದಂತೆ ಎಚ್ಚರವಹಿಸುತ್ತಿದ್ದೆ.

ಹೀಗೆ ಧಿಡೀರನೆ ಹೆಸರೇ ಕೇಳರಿಯದ ದುಬಾರಿಯಾದ ಅಪರೂಪದ ಕಾಯಿಲೆಯೊಂದು ಬಂದು ನನ್ನನ್ನು ಅಪ್ಪಳಿಸುತ್ತದೆಯೆಂದು ನಾನು ಕನಸು ಕಂಡಿರಲಿಲ್ಲ. ಒಂದು ವೇಳೆ ಈ ಔಷಧ ತೆಗೆದುಕೊಂಡ ಮೇಲೂ ನಾನು ಬದುಕುಳಿಯುತ್ತೇನೆಂಬ ಭರವಸೆ ಏನಾದರೂ ಇದೆಯೇ? ಕಳೆದ ಕೆಲ ದಿನಗಳಿಂದ ನನ್ನ ಸ್ವಂತ ಉಸಿರಾಟದ ಕ್ರಿಯೆಯನ್ನು ಪುನಶ್ಚೇತನಗೊಳಿಸಲು ವೈದ್ಯರು ಪ್ರಯತ್ನಪಟ್ಟು ವಿಫಲರಾಗುತ್ತಿದ್ದುದು ನನ್ನ ಗಮನಕ್ಕೆ ಬರುತ್ತಿತ್ತು. ವೆಂಟಿಲೇಟರ್ ತೆಗೆದರೆ ನನ್ನ ಪ್ರಾಣ ಹೋಗುವುದೆಂದು ನನಗೆ ತಿಳಿದಿತ್ತು. ಸದಾ ಒಂದೇ ಭಂಗಿಯಲ್ಲಿ ಕಣ್ಮುಚ್ಚಿ ಮಲಗಿರುವ ನನ್ನ ಪ್ರಜ್ಞೆ ತುಂಬಾ ಜಾಗೃತವಾಗಿತ್ತು. ನನ್ನ ಸುತ್ತ ಮುತ್ತ ನಡೆಯುತ್ತಿರುವ ಸಾವು ಬದುಕಿನ ಹೊಯ್ದಾಟದ ಈ ಘಟಕದ ಎಲ್ಲವನ್ನೂ ಗಮನಿಸುತ್ತಿದ್ದೆ. ಅಲ್ಲಿ ನರ್ಸುಗಳ ಕ್ರಿಯಾತ್ಮಕ ಚಟುವಟಿಕೆಯ ನಡುವಿನ ಹಾಸ್ಯ ಚಟಾಕಿಗಳ ನಡುವೆ ಹೆಪ್ಪುಗಟ್ಟಿರುವ ನೋವು ಮತ್ತು ವಿಷಾದಗಳು ನನ್ನನ್ನು ಗಟ್ಟಿಗೊಳಿಸುತ್ತಿದ್ದವು. ನನ್ನನ್ನು ಬೆಳಿಗ್ಗೆ-ಸಂಜೆ ಪರೀಕ್ಷಿಸುವ ವೈದ್ಯರು ನನ್ನ ಮಂಚದ ಮುಂಭಾಗದ ಟೇಬಲ್ ಬಳಿ ನಿಂತು ಮಾತನಾಡುವಾಗ ಅಲ್ಲಿ ವ್ಯಕ್ತವಾಗುವ ಸೂಕ್ಷ್ಮ ವಾಸ್ತವ ಸತ್ಯದ ಎಳೆಗಳನ್ನು ಗ್ರಹಿಸಬಲ್ಲವನಾಗಿದ್ದೆ.

ನನಗೆ ಗೊತ್ತಿತ್ತು. ನನ್ನ ಮಕ್ಕಳು ನನ್ನನ್ನೇ ದಿಟ್ಟಿಸುತ್ತಿದ್ದಾರೆ ಎಂದು. ಕಣ್ಣು

ತೆರೆದೆ, "ಈ ಔಷಧ ತೆಗೆದುಕೊಂಡರೆ ನಾನು ಬದುಕುವ ಸಾಧ್ಯತೆ ಇದೆಯೇ? ನನ್ನ ಸಮಾಧಾನಕ್ಕಾಗಿ ಮಾತನಾಡಬೇಡಿ, ನಾನು ಸಂಪಾದನೆ ಮಾಡಿ ಉಳಿಸಿದ್ದನ್ನು ನನ್ನ ಚಿಕಿತ್ಸೆಗೆ ಖರ್ಚು ಮಾಡಿಕೊಂಡು ಹೋಗುವುದು ನನಗೆ ಇಷ್ಟವಿಲ್ಲ" ಎಂದು ಚೀಟಿಯಲ್ಲಿ ಬರೆದು ಕೇಳಿದೆ. "ನಿಮಗೆ ಖಂಡಿತಾ ಗುಣವಾಗುತ್ತೆ. ನಿಮಗೆ ಈ ಕ್ರೈಸಿಸ್‌ನಿಂದ ಹೊರ ಬರುವ ಆತ್ಮಬಲವಿದೆ" ಎಂದಳು ಸುಶಿ. ನಾನು ಅವರ ಕಣ್ಣುಗಳನ್ನು ನೋಡಿದೆ. ಅವುಗಳಲ್ಲಿ ಭರವಸೆಯ ಬೆಳಕಿತ್ತು. "ಈ ಐವಿಐಜಿಯನ್ನು ಎಷ್ಟು ಆವೃತ್ತಗಳಲ್ಲಿ ತೆಗೆದುಕೊಳ್ಳಬೇಕು" ಮತ್ತೆ ಬರೆದು ಕೇಳಿದೆ. "ಮೂರು ಸೈಕಲ್ ಆಗಬಹುದು. ಎರಡು ಮತ್ತು ಮೂರನೇ ಸೈಕಲ್‌ಗೆ ಇಷ್ಟು ಔಷಧ ಬೇಕಿಲ್ಲ. ಆಗ ತಲಾ ಐದು ಬಾಟಲ್‌ಗಳಾದರೆ ಸಾಕಂತೆ" ಎಂದು ನೇಸರ ನುಡಿದ. ನನ್ನ ಮನಸ್ಸು ತನ್ನಲ್ಲೇ ಲೆಕ್ಕ ಹಾಕಿತು. ಈಗ ಹದಿನಾಲ್ಕು ಬಾಟಲ್‌ಗಳು. ಅನಂತರ ಐದು+ಐದು. ಒಟ್ಟು ಇಪ್ಪತ್ತಾಲ್ಕು ಬಾಟಲ್ಲುಗಳು. ಕೇವಲ ಈ ಔಷಧಕ್ಕೇ ಹತ್ತಿರ ಹತ್ತಿರ ಐದು ಲಕ್ಷ ರೂಪಾಯಿಗಳು ತಗುಲುತ್ತದೆ.

ನನ್ನ ಕಣ್ಮುಂದೆ ನನ್ನ ಹೆಂಡತಿ, ನನ್ನ ಮನೆ-ಮಕ್ಕಳು, ನನ್ನ ಬಾಲ್ಯ, ನಾನು ಬೆಳೆದ ಊರುಗಳು, ಅಲ್ಲಿನ ಜನಗಳು, ಸ್ನೇಹಿತರು, ನಾನು ಕೆಲಸ ಮಾಡಿದ ವಿದ್ಯಾಸಂಸ್ಥೆ, ಜೊತೆಗೆ ನನ್ನ ಅಪ್ಪ ಅಮ್ಮ - ಎಲ್ಲ ಬಂದು ಹೋದಂತೆ ಭಾಸವಾಯಿತು. ನನ್ನ ಸಾಹಿತ್ಯದ ಕೆಲಸ, ನನ್ನ ಪ್ರಗತಿಪರ ಹೋರಾಟಗಳು, ಅಲ್ಲಿನ ನನ್ನ ಗೆಳೆಯರು, ನನ್ನ ಗುರುಗಳು - ಎಲ್ಲ ಒಮ್ಮೆ ಸುಳಿದು ಸುತ್ತಿದಂತೆ ಅನುಭವವಾಯಿತು.

ಕೇವಲ ಈ ಔಷಧಕ್ಕೆ ಇಷ್ಟಾದರೆ ಇತರೆ ಬಾಬ್ತು? ಮೊದಲೇ ಈ ಆಸ್ಪತ್ರೆ ದುಬಾರಿ. ಈ ಎಂಐಸಿಯು ದಿನದ ಬಾಡಿಗೆಯೇ ನಾಲ್ಕುಸಾವಿರ. ಔಷಧ ಮತ್ತಿತರ ಖರ್ಚುಗಳು ಎಷ್ಟಾಗುತ್ತದೋ- ಎಂದು ಚಿಂತೆ ಕಾಡಿತು. ನನ್ನ ಮಕ್ಕಳು ನನ್ನನ್ನೇ ನೋಡುತ್ತಿದ್ದರು. "ಆಯಿತು" ಎಂದು ಬರೆದು ತಿಳಿಸಿದೆ. ಅವರಿಬ್ಬರ ಕಣ್ಣಲ್ಲಿ ಸಂತಸ ಚಿಮ್ಮಿತು. ಅವರಲ್ಲಿ ನನ್ನನ್ನು ಉಳಿಸಿಕೊಳ್ಳುವ ಉತ್ಸಾಹ ಹೊರಸೂಸುತ್ತಿತ್ತು. ಮತ್ತೆ ನೇಸರನ ಬಳಿಯಿದ್ದ ಚೀಟಿಯನ್ನು ತೆಗೆದುಕೊಂಡು "ಅಂದಿನಿಂದ ಖರ್ಚುವೆಚ್ಚಗಳಿಗೆ ಏನು ಮಾಡುತ್ತಿರುವಿರಿ?" ಎಂದು ಬರೆದು ಕೇಳಿದೆ. ನೇಸರ ಮನೆಯಿಂದ ಚೆಕ್‌ಬುಕ್ ಮತ್ತು ಪಾಸ್‌ಬುಕ್‌ಗಳನ್ನು ತಂದಿದ್ದ. ನಾನು ಮೂರು ಬ್ಲಾಂಕ್ ಚೆಕ್‌ಗಳಿಗೆ ಸಹಿ ಮಾಡಿ ನೀಡಿದೆ. "ಹಣ ತಂದು ಮನೆಯಲ್ಲಿಟ್ಟುಕೊಳ್ಳಬೇಡಿ ಆಸ್ಪತ್ರೆಗೆ ಸ್ವಲ್ಪ ಕಟ್ಟಿರಿ. ಮತ್ತಷ್ಟು ಹಣವನ್ನು ಮನೆಯ ಹತ್ತಿರವಿರುವ ಬ್ಯಾಂಕಿನ ಅಮ್ಮನ ಖಾತೆಗೆ ಜಮಾ ಮಾಡಿರಿ. ಬೇಕಾದಾಗ ತೆಗೆದುಕೊಳ್ಳಬಹುದು" ಎಂದು ಚೀಟಿಯಲ್ಲಿ ಬರೆದು ತಿಳಿಸಿದೆ.

ಮಕ್ಕಳು ನನ್ನ ಮಂಚದ ಬಳಿ ಇಂದು ತುಸು ಹೆಚ್ಚು ಹೊತ್ತು ನಿಂತಿದ್ದರು.

ಅವರು ಹೊರಡುವ ಸಮಯ ಬಂತು. "ನಾಳೆ ಬರುವಾಗ ಅಮ್ಮನನ್ನು ಕರೆತನ್ನಿ" ಎಂದು ಬರೆದು ಹೇಳಿದೆ. ಆಗಲಿ ಎಂದರು.

ಮುಂದಿನ ಮೂರು ದಿನಗಳು ಹಗಲಿರುಳೆನ್ನದೇ ನಿರಂತರವಾಗಿ ನನ್ನ ರಕ್ತನಾಳದ ಮೂಲಕ ಐವಿಐಜಿ ಔಷಧವು ನನ್ನ ದೇಹವನ್ನು ಹೊಕ್ಕು ಹರಿದಾಡಿತು. ಡಾ. ಆಮೀರ್ ಮತ್ತು ಡಾ. ಹರೀಶ್ ನಾಯಕ್ ಈ ಔಷಧ ನನ್ನ ಮೇಲೆ ಉಂಟು ಮಾಡಬಹುದಾದ ಸಕಾರಾತ್ಮಕ ಪರಿಣಾಮದ ಬಗ್ಗೆ ಕುತೂಹಲದಿಂದ ಕಾಯುತ್ತಿದ್ದರು. ಔಷಧ ನೀಡಿದ ಒಂದೆರಡು ದಿನಗಳಲ್ಲಿ ನನ್ನ ರಕ್ತದ ಆಮ್ಲಜನಕದ ಪ್ರಮಾಣ ಉತ್ತಮಗೊಳ್ಳ ತೊಡಗಿತು. ನನ್ನ ಎದೆಯ ಭಾಗದ ಸ್ನಾಯುಗಳು ನಿಧಾನವಾಗಿ ಚಲನೆಯನ್ನು ಕಂಡುಕೊಂಡಂಥ ಸೂಚನೆ ಆಗತೊಡಗಿತು. ಇಪ್ಪತ್ತೈದು + ಎಪ್ಪತ್ತೈದು ಭಾಗದಲ್ಲಿ ಕೃತಕ ಉಸಿರನ್ನು ನೀಡಿ ನೋಡಿದರು. ನನ್ನ ಸ್ವಂತ ಶ್ವಾಸಬಲದಿಂದ ಪ್ರತಿಶತ ಇಪ್ಪತ್ತೈದರಷ್ಟು ಉಸಿರಾಡುವಷ್ಟು ಸುಧಾರಣೆಗೊಂಡೆ. ಅಂದರೆ ಐವಿಐಜಿ ಔಷಧ ಕೆಲಸ ಮಾಡಲು ಉದ್ಯುಕ್ತವಾಗಿದೆಯೆಂದು ಡಾ. ಆಮೀರ್ ಸಂತಸಗೊಂಡರು.

ಈ ದಿನಗಳಲ್ಲೇ ಒಂದು ದಿನ ಡಾ. ಹರೀಶ್ ನಾಯಕ್ ನನ್ನ ದೇಹವನ್ನು ತಮ್ಮ ಸ್ಟೆತಾಸ್ಕೋಪ್‌ನಿಂದ ಪರಿಶೀಲಿಸುತ್ತಾ "ನಿಮಗೆ ಪ್ರೊ. ಜಿ.ಎಚ್. ನಾಯಕ್ ಗೊತ್ತೆ?" ಅಂತ ಕೇಳಿದರು. ನನ್ನ ಗುರುಗಳಾದ ಜಿ.ಎಚ್. ನಾಯಕ್‌ರ ಹೆಸರನ್ನು ಅವರ ಬಾಯಿಂದ ಕೇಳಿದಾಗ ನನ್ನಲ್ಲಿ ತುಸು ಚೈತನ್ಯ ಬಂತು. ಗೊತ್ತೆಂದೂ, ಅವರು ನನ್ನ ಗುರುಗಳು ಮಾತ್ರವಾಗಿರದೆ ನನ್ನ ಜೀವನ ಮಾರ್ಗದರ್ಶಕರೂ ಆದರ್ಶ ಪ್ರಾಯರೆಂದೂ ಚೀಟಿಯಲ್ಲಿ ಬರೆದು ತಿಳಿಸಿದೆ. "ನಿನ್ನೆ ಅವರ ಮನೆಗೆ ಹೋಗಿದ್ದೆ. ಅವರು ನನಗೆ ಸಂಬಂಧಿಕರು. ನಿಮ್ಮ ಅನಾರೋಗ್ಯ ತಿಳಿದು ನಾಯಕರೂ ಮೀರಕ್ಕನೂ ತುಂಬಾ ನೊಂದುಕೊಂಡರು. ನಿಮ್ಮನ್ನೂ ನಿಮ್ಮ ಮಕ್ಕಳನ್ನೂ ಕಂಡರೆ ಅವರಿಗೆ ಬಹಳ ಪ್ರೀತಿಯಿರುವುದು ಅವರ ಮಾತುಗಳಿಂದ ನನಗೆ ತಿಳಿದು ಬಂತು" ಎಂದು ನುಡಿದರು ಹರೀಶ್ ನಾಯಕ್. ಜಿ.ಎಚ್. ನಾಯಕ ಮತ್ತು ಮೀರಾ ಮೇಡಂ ಅವರ ಮುಖಗಳು ನನ್ನ ಕಣ್ಮುಂದೆ ಮೂಡಿದವು. ಮನದಲ್ಲೇ ಕೈ ಮುಗಿದೆ. "ಎಕ್ಸ್ಟ್ರಾ ಕೇರ್ ತೆಗೆದುಕೊಂಡು ನೋಡಿಕೊಳ್ಳುವಂತೆ ನನಗೆ ತಿಳಿಸಿದ್ದಾರೆ" ಎಂದು ಹೇಳಿದ ಡಾ. ಹರೀಶ್‌ನಾಯಕ್ ಬ್ರದರ್‌ಗೆ ಕೆಲವು ಸೂಚನೆಗಳನ್ನು ನೀಡತೊಡಗಿದರು.

೬. ಲಿಂಪೋಮಾನೋ ಥೈಮೋಮಾನೋ?

ಡಾ. ಆಮೀರ್ ಮತ್ತು ಇತರೆ ವೈದ್ಯರು ನನ್ನ ಎದೆಯ ಎಕ್ಸ್‌ರೇ ನೋಡಿ, ಅಲ್ಲಿರುವ ಗೆಡ್ಡೆ ಬಗ್ಗೆ ಚರ್ಚಿಸಿದಾಗ ನನಗೆ ನೋವು, ಗಾಬರಿ ಆಗದ್ದನ್ನು ಕಂಡು ಓದುಗರಿಗೆ ಆಶ್ಚರ್ಯವಾಗಿರಬೇಕು. ಕ್ಯಾನ್ಸರ್‌ನಂಥ ಭೀಕರ ಕಾಯಿಲೆ ವ್ಯಕ್ತಿಯನ್ನು ಆವರಿಸಿದೆ ಯೆಂದು ತಿಳಿದಾಗ ಅವನಿಗೆ ನೋವು - ಗಾಬರಿ - ಭಯ ಆಗುವುದು ಸಹಜ. ಕ್ಯಾನ್ಸರ್ ಬಂದರೆ ಸಾಯುತ್ತಾರೆ; ಅದು ವ್ಯಕ್ತಿಯನ್ನು ತೆಗೆದುಕೊಂಡು ಹೋಗದೆ ಬಿಡದು; ಕಾಯಿಲೆ ಬಂದ ಮೇಲೆ ರೋಗಿ ದಿನಗಳನ್ನು ಎಣಿಸುತ್ತಾ ಇರುವುದಷ್ಟೇ ಸತ್ಯ- ಎಂಬಂತೆಲ್ಲಾ ಲೋಕರೂಢಿಯ ಪರಿಕಲ್ಪನೆ ಯಲ್ಲಿ ಬದುಕುತ್ತಿರುವ ನಮ್ಮ ಸಮಾಜ ದಲ್ಲಿ ತನಗೆ ಕ್ಯಾನ್ಸರ್‌ನಂಥ ಪಿಡುಗು ಅಮರಿಗೊಂಡಿದೆ ಎಂದು ತಿಳಿದಾಗ ಭಯ ಆವರಿಸುವುದು ಸಹಜ. ನಾನೂ ಮನುಷ್ಯ. ಅಂಥ ಪರಿಸ್ಥಿತಿಗೆ ಈಗಾಗಲೇ ನಾನು ಬಂದಿದ್ದೆ.

ಸುಮಾರು ಹತ್ತು ವರ್ಷಗಳ ಹಿಂದೆ ನನಗೆ ಎದೆನೋವು ಕಾಣಿಸಿಕೊಂಡಿತು. ನಾನು ಒಂದೆರಡು ದಿನ ಏನೋ ಬಂದಿದೆ, ಹೋಗುತ್ತದೆಯೆಂದು ಉಡಾಫೆ ಮಾಡಿದೆ. ಆದರೆ ನೋವು ಕಡಿಮೆಯಾಗದಾದಾಗ ನನ್ನ ಕುಟುಂಬ ವೈದ್ಯರಲ್ಲಿಗೆ ಹೋದೆ. ಅವರು ನನ್ನ ಎದೆಯ ಭಾಗವನ್ನು ಪರೀಕ್ಷೆ ಮಾಡಿದರು. ನನಗೆ ಬಿಪಿ ಇತ್ತು. ಅದನ್ನು ಪರಿಶೀಲಿಸಿದ ಅವರು ಹೃದಯ ಬಡಿತವನ್ನು ಗಮನಿಸಿದರು. ನನ್ನ ಎದೆಯ ನಾನಾ ಭಾಗಗಳಲ್ಲಿ ಸ್ಟೆತಾಸ್ಕೋಪ್ ಇಟ್ಟು, ನನಗೆ ಜೋರಾಗಿ ಉಸಿರೆಳೆದು ಬಿಡಲು ಹೇಳಿದರು. ಎಲ್ಲವೂ ಸರಿಯಾಗಿದೆ.

"ಏನೋ ಮಾಂಸ ಖಂಡಗಳ ಹಿಡಿತವಿರಬಹುದು. ಮಾತ್ರೆ ಕೊಡುತ್ತೇನೆ. ತೆಗೆದುಕೊಳ್ಳಿ, ಸರಿಹೋಗುತ್ತೆ" ಎಂದು ಮಾತ್ರೆ ಬರೆದು ಕೊಟ್ಟರು. ನಾನು ಅವುಗಳನ್ನು ಅವರು ಹೇಳಿದಂತೆ ನುಂಗಿದೆ. ಆದರೆ ನೋವು ಮಾತ್ರ ಕಡಿಮೆಯಾಗಲಿಲ್ಲ.

ಅದರ ಮಾರನೆ ದಿನ ಮಧ್ಯಾಹ್ನ ನಾನು ಕಾಲೇಜಿನ ನನ್ನ ಛೇಂಬರ್‌ನಲ್ಲಿ ಕುಳಿತಿದ್ದೆ. ನನ್ನ ಬಲಭಾಗದ ಎದೆಯಲ್ಲಿ ತೀವ್ರವಾದ ನೋವಿನ ಸೆಳೆತ ಪ್ರಾರಂಭ ವಾಯಿತು. ದೀರ್ಘ ಉಸಿರಾಟ ನಡೆಸಿದೆ. ಉಸಿರಾಡಲು ತೊಂದರೆಯೇನಾಗಲಿಲ್ಲ. ಆದರೆ ಕ್ಷಣ ಕ್ಷಣಕ್ಕೂ ನನ್ನ ನೋವಿನ ತಿವಿತ ಅಧಿಕವಾಯಿತು. ಕೂರಲೂ ಆಗುತ್ತಿರಲಿಲ್ಲ, ನಿಲ್ಲಲೂ ಆಗುತ್ತಿರಲಿಲ್ಲ. ವಿಪರೀತ ಸಂಕಟವಾಗುತ್ತಿತ್ತು. ನನ್ನ ಕಛೇರಿ ಸಹಾಯಕ ನನ್ನ ಸ್ಥಿತಿಯನ್ನು ಕಂಡು, ಅದೆಲ್ಲಿಂದ ತಂದನೋ ತಿಳಿಯದು ವಿಕ್ಸ್‌ವೇಪರಬ್ ಅನ್ನು ಎದೆಯ ಮೇಲೆ ಸವರಿ ಮಸಾಜು ಮಾಡಿದನು. ಆದರೆ ಏನೂ ಕಡಿಮೆಯಾಗಲಿಲ್ಲ, ನನಗೆ ನೋವು ತಂದು ಕೊಡುತ್ತಿದ್ದ ಸಂಕಟ ವಿಪರೀತವಾಯಿತು. ಅದು ಹೇಗೆ ಸಂಜೆವರೆಗೂ ಸಹಿಸಿಕೊಂಡೆನೋ ತಿಳಿಯದು. ಕಛೇರಿ ಮುಗಿಸಿಕೊಂಡು ನನ್ನ ಸ್ಕೂಟರ್ ಹತ್ತಿ ಮನೆಯ ಕಡೆ ಹೊರಟೆ. ಗಾಡಿ ಓಡಿಸಲು ಕಷ್ಟವಾಗುತ್ತಿತ್ತು. ರಸ್ತೆಯ ಮೇಲೆ ನಿಗಾ ಇಡಲು ಆಗುತ್ತಿರಲಿಲ್ಲ. ನನ್ನ ಎದೆಯ ನೋವು ಉಂಟು ಮಾಡುತ್ತಿದ್ದ ತೀವ್ರತೆಯಿಂದ ನನ್ನ ದೇಹ ಕಂಪಿಸತೊಡಗಿತು. ಬಹಳ ಕಷ್ಟಪಟ್ಟು ಮನಸ್ಸನ್ನು ರಸ್ತೆಯ ಮೇಲೆ ಕೇಂದ್ರೀಕರಿಸಿ ಸರಸ್ವತಿಪುರಂನ ಪಾರ್ಕಿನವರೆಗೂ ಬಂದೆ. ಇನ್ನು ಸಾಧ್ಯವಿಲ್ಲ. ಗಾಡಿಯಿಂದ ಬೀಳುತ್ತೇನೆ, ಇಲ್ಲವೇ ಯಾರಿಗಾದರೂ ಗುದ್ದುತ್ತೇನೆಂಬ ಆತಂಕ ಜಾಸ್ತಿಯಾಯಿತು. ಪಾರ್ಕಿನ ಹೊರಗಿನ ಫುಟ್‌ಪಾತ್‌ನಲ್ಲಿ ಸ್ಕೂಟರ್ ಅನ್ನು ನಿಲ್ಲಿಸಿದೆ. ನಿಧಾನವಾಗಿ ಪಾರ್ಕಿನ ಒಳಕ್ಕೆ ಹೋದೆ. ಖಾಲಿಯಿದ್ದ ಒಂದು ಸಿಮೆಂಟ್ ಜಗುಲಿಯ ಮೇಲೆ ಕುಳಿತೆ. ನನ್ನ ಫೋನ್ ತೆಗೆದು ಮನೆಗೆ ಫೋನ್ ಮಾಡಿ, ನಾನು ಸರಸ್ವತಿಪುರದ ಪಾರ್ಕಿನ ಜಗುಲಿಯ ಮೇಲೆ ಕೂತಿರುವುದಾಗಿಯೂ ಯಾರಾದರೂ ಬಂದು ಕರೆದುಕೊಂಡು ಹೋಗಬೇಕೆಂದೂ ಹೇಳಿದೆ. ಹತ್ತು ನಿಮಿಷದಲ್ಲಿ ನನ್ನ ಮಗಳು ಬಂದಳು. ನನ್ನ ಸ್ಥಿತಿಯನ್ನು ಕಂಡ ಅವಳ ಕಣ್ಣುಗಳಲ್ಲಿ ಗಾಬರಿ ಆಗಿತ್ತು. "ಶ್ರೀನಿವಾಸ್ ಡಾಕ್ಟರ್ ಮನೆಗೆ ಹೋಗೋಣ ಮಗಳೆ" ಎಂದೆ. ಒಂದು ಆಟೋ ಮಾಡಿಕೊಂಡು ಮಾರುತಿ ಟೆಂಪಲ್ ರಸ್ತೆಯ ಕ್ರಾಸಿನಲ್ಲಿದ್ದ ಅವರ ಮನೆಗೆ ಹೋದೆವು. ಆಗಲೇ ವೇಳೆ ಸಂಜೆ ಆರರ ಹತ್ತಿರ ಆಗಿತ್ತು. ಡಾಕ್ಟರ್ ತಮ್ಮ ಕ್ಲಿನಿಕ್‌ಗೆ ಹೋಗಲು ಸಿದ್ಧವಾಗುತ್ತಿದ್ದರು. ನಮ್ಮನ್ನು ನೋಡಿ ಒಳಕ್ಕೆ ಕರೆದರು. ನಾನು ನನಗಾಗುತ್ತಿರುವ ಎದೆಯ ಭಾಗದ ಸಂಕಟದ ಬಗ್ಗೆ ವಿವರಿಸಿದೆ. ಅವರು ಮತ್ತೆ ವಿವರವಾಗಿ ಪರಿಶೀಲಿಸಿದರು. ಅವರು ನಿನ್ನೆ ತಾನೆ ಪರಿಶೀಲಿಸಿ ಮಾತ್ರೆ ನೀಡಿದ್ದರು.

ನನ್ನ ನಾಡಿ ಬಡಿತ, ಬಿಪಿ ಎಲ್ಲವನ್ನು ಪರಿಶೀಲಿಸಿ, "ನಾಳೆ ಬೆಳಿಗ್ಗೆ ಎದೆಯ ಭಾಗದ ಎಕ್ಸ್‌ರೇ ಮಾಡಿಸಿರಿ, ಈಗ ನೋವು ಕಡಿಮೆಯಾಗಲು ಮಾತ್ರೆ ಕೊಡುತ್ತೇನೆ. ಅವನ್ನು ಮಲಗುವ ಮುನ್ನ ನುಂಗಿರಿ" ಎಂದು ನನಗೆ ಹೇಳಿ ನನ್ನ ಮಗಳ ಕಡೆ ತಿರುಗಿ "ಗಾಬರಿಯಾಗುವಂಥದ್ದೇನೋ ಇಲ್ಲ, ಬೆಳಿಗ್ಗೆ ನಿಮ್ಮ ತಂದೆಯವರನ್ನು ರವಿ ಡಯಾಗ್ನಸ್ಟಿಕ್ ಸೆಂಟರ್‌ಗೆ ಕರೆದುಕೊಂಡು ಹೋಗಿ ಎಕ್ಸ್‌ರೇ ತೆಗೆಸಿಕೊಂಡು ಬನ್ನಿ" ಎಂದರು.

ಸಂಜೆ ಅವರು ಕೊಟ್ಟ ಮಾತ್ರೆ ನುಂಗಿದೆ. ನೋವು ತುಸು ತಹಬದಿಗೆ ಬರುವ ಸೂಚನೆ ನೀಡಿತು. ಮಲಗುವ ಮುನ್ನ ನುಂಗಲು ಹೇಳಿದ್ದ ಮಾತ್ರೆಯನ್ನು ನುಂಗಿ ಮಲಗಿದೆ. ರಾತ್ರಿಯೆಲ್ಲಾ ಗಾಢವಾಗಿ ನಿದ್ರೆ ಮಾಡಿದೆ. ಬೆಳಿಗ್ಗೆ ಎದ್ದಾಗ ಎದೆಯ ನೋವು ಇರಲಿಲ್ಲ, ನನಗೆ ಆಶ್ಚರ್ಯವಾಯಿತು. ನನ್ನ ಎದೆಯ ಭಾಗದಲ್ಲಿ ಮೂರ್ನಾಲ್ಕು ದಿನದಿಂದ ನೋವಿತ್ತು ಎಂಬ ಯಾವ ಸೂಚನೆಯೂ ಇಲ್ಲದಂತೆ, ನೋವು ಮಂಗ ಮಾಯವಾಗಿತ್ತು. ನನ್ನ ಮಗಳು ಮತ್ತು ನಾನು ಕುವೆಂಪುನಗರದಲ್ಲಿದ್ದ ರವಿ ಡಯಾಗ್ನಸ್ಟಿಕ್ ಸೆಂಟರ್‌ಗೆ ತಿಂಡಿ ತಿಂದು ಹೋದೆವು. ಅಲ್ಲಿನ ಲ್ಯಾಬ್ ಟೆಕ್ನಿಷಿಯನ್ ಡಾಕ್ಟರ್ ನೀಡಿದ್ದ ಚೀಟಿಯ ಸೂಚನೆಯಂತೆ ನನ್ನ ಎದೆ ಭಾಗದ ಎಕ್ಸ್‌ರೇ ತೆಗೆದ. "ಮಧ್ಯಾಹ್ನದ ಹೊತ್ತಿಗೆ ಎಕ್ಸ್‌ರೇ ಮತ್ತು ಅದರ ವರದಿ ರೆಡಿಯಾಗಿರುತ್ತೆ. ಬಂದು ತೆಗೆದುಕೊಂಡು ಹೋಗಿ" ಎಂದ. ನಾನು ಯಥಾ ಪ್ರಕಾರ ಕಾಲೇಜಿಗೆ ಹೊರಟು ನಿಂತೆ. ನನ್ನ ಹೆಂಡತಿ "ರಜೆ ಹಾಕಿ ವಿಶ್ರಾಂತಿ ಪಡೆಯಬಾರದೆ?" ಎಂದು ತಿಳಿಹೇಳಿದಳು. ಆದರೆ ನಾನು ಮನೆಯಲ್ಲಿ ಕೂತು ಮಾಡುವುದೇನು? ಕಾಲೇಜಿಗೆ ಹೋದರೆ ದೈನಂದಿನ ಕೆಲಸವಾದರೂ ನಡೆಯುತ್ತವೆ ಎಂದು ನಿಶ್ಚಯಿಸಿದೆ. ನನ್ನ ಹೆಂಡತಿಗೆ ಮಧ್ಯಾಹ್ನ ಎಕ್ಸ್‌ರೇ ಮತ್ತು ಅದರ ವರದಿಯನ್ನು ಡಯಾಗ್ನಸ್ಟಿಕ್ ಸೆಂಟರ್‌ನಿಂದ ತರುವಂತೆ ಹೇಳಿದೆ.

ಆ ದಿನವೆಲ್ಲಾ ಆರಾಮವಾಗಿದ್ದೆ. ನಿಜಕ್ಕೂ ಎದೆಯ ನೋವು ಮಾಯವಾಗಿತ್ತು. ಎಂದಿನ ಲವಲವಿಕೆ ನನ್ನಲ್ಲಿತ್ತು. ದೈನಂದಿನ ಕೆಲಸಗಳನ್ನು ಸಂತೋಷದಿಂದಲೇ ನಿರ್ವಹಿಸಿದೆ.

ಸಂಜೆ ಮನೆಗೆ ಬಂದೆ. ಗೆಳೆಯ ಚಂದ್ರಶೇಖರ್ ಬಂದರು. ಅವರು, ನಾನು, ನನ್ನ ಹೆಂಡತಿ, ಮಗಳು ಸಂಜೆ ಎಕ್ಸ್‌ರೇ ಜೊತೆಯಲ್ಲಿ ಶ್ರೀನಿವಾಸ್ ಡಾಕ್ಟರ್‌ರ ಕ್ಲಿನಿಕ್‌ಗೆ ಹೋದೆವು. ಎಕ್ಸ್‌ರೇಯನ್ನೂ ಅದರ ಜೊತೆಗೆ ರೇಡಿಯಾಲಜಿಸ್ಟ್ ನೀಡಿದ್ದ ವರದಿಯನ್ನೂ ಕೂಲಂಕಷವಾಗಿ ಪರಿಶೀಲಿಸಿದ ಡಾಕ್ಟರ್‌ರ ಮುಖದಲ್ಲಿ ನಿರ್ಭಾವುಕತೆ ಇತ್ತು. ಅವರು ನನ್ನ ಹೆಂಡತಿ ಮತ್ತು ಚಂದ್ರಶೇಖರ್ ಕಡೆ ನೋಡಿ "ತಜ್ಞ ವೈದ್ಯರನ್ನೊಮ್ಮೆ ನೋಡಬೇಕಾಗುತ್ತೆ. ನಾನು ಈಗಲೇ ಯಾವುದೇ ತೀರ್ಮಾನಕ್ಕೆ

ಬರಲಾರೆ. ಈ ಎಕ್ಸ್‌ರೇ ಜೊತೆ ನಾಳೆ ಸಂಜೆ ಭಾರತ್ ಡಯಾಗ್ನಸ್ಟಿಕ್ ಸೆಂಟರ್‌ನಲ್ಲಿರುವ ಡಾ. ವಿಶ್ವೇಶ್ವರ ಅವರನ್ನು ಕಾಣಿರಿ. ಅವರು ಮುಂದೆ ಏನು ಮಾಡಬೇಕೆಂದು ಹೇಳುತ್ತಾರೆ" ಎಂದರು. ತಲೆ ತಗ್ಗಿಸಿಕೊಂಡು ಡಾ. ವಿಶ್ವೇಶ್ವರ ಅವರಿಗೆ ಪತ್ರ ಬರೆಯತೊಡಗಿದರು.

ಮನೆಗೆ ಬಂದೆವು. ಚಂದ್ರಶೇಖರ್ "ನಾಳೆ ಸಂಜೆ ಡಾ. ವಿಶ್ವೇಶ್ವರ ಅವರನ್ನೂ ಭೇಟಿಯಾಗೋಣ. ಗಾಬರಿಪಡುವಂಥದ್ದು ಏನೂ ಇಲ್ಲವೆಂದು ಕಾಣುತ್ತೆ" ಎಂದು ಸಮಾಧಾನದ ಮಾತನಾಡಿ ಮನೆಗೆ ಹೊರಟರು. ನಾನು ತುಸು ಹೊತ್ತು ಸುಮ್ಮನೆ ಕುಳಿತಿದ್ದೆ. ನನ್ನ ಮಕ್ಕಳು ಯಾವುದೋ ಅವ್ಯಕ್ತ ವಾತಾವರಣದಲ್ಲಿ ಸಿಲುಕಿಹಾಕಿ ಕೊಂಡಂತೆ ನನ್ನನ್ನು ನೋಡುತ್ತಿದ್ದರು. ಸುವರ್ಣ ತನ್ನ ಎಂದಿನ ಸಂಯಮಪೂರ್ಣ ಭಾವದಿಂದ ರಾತ್ರಿಯ ಊಟಕ್ಕೆ ಸಿದ್ಧತೆ ಮಾಡಲು ಅನುವಾದಳು. ನಾನು ಮಕ್ಕಳಿಗೆ ಓದಿಕೊಳ್ಳುವಂತೆ ಹೇಳಿದೆ. ಅವರು ಮರು ಮಾತಾಡದೆ ರೂಮಿಗೆ ಸೇರಿ ಪುಸ್ತಕದಲ್ಲಿ ಮುಖವಿಟ್ಟರು.

ನಾನು ನನ್ನ ಹೆಂಡತಿ ಮಕ್ಕಳನ್ನು ಕುರಿತು ಚಿಂತಿಸಿದೆ. ಸುಶಿ ಬಿ.ಡಿ.ಎಸ್. ಪದವಿ ಮುಗಿಸಿದ್ದಳು. ನೇಸರ ಬಿ.ಎ. ಪದವಿಯಲ್ಲಿದ್ದ. ಶ್ರೀನಿವಾಸ್ ಡಾಕ್ಟರ್ ಅವರ ನಿರ್ಭಾವುಕತೆ ಮತ್ತು ಮಾತಿನ ಧಾಟಿಯಿಂದಲೇ ನನಗೆ ಭೀಕರ ಕಾಯಿಲೆ ಇದೆಯೆಂದು ಅರ್ಥವಾಗಿತ್ತು. ಅವರು ನಮ್ಮೆದುರಿಗೆ ಆ ಕಾಯಿಲೆ ಯಾವುದೆಂದು ಸ್ಪಷ್ಟವಾಗಿ ಹೇಳಿರಲಿಲ್ಲ. ಆದರೆ ಅವರು ನಾಳೆ ಹೋಗಿ ನೋಡಿರೆಂದು ಸಲಹೆ ನೀಡಿದ್ದ ಡಾ. ವಿಶ್ವೇಶ್ವರರ ಬಗ್ಗೆ ನಾನು ಕೇಳಿದ್ದೆ. ಅವರು ಮೈಸೂರಿನ ಭಾರತ್ ಕ್ಯಾನ್ಸರ್ ಆಸ್ಪತ್ರೆಯಲ್ಲಿ ವೈದ್ಯರಾಗಿದ್ದರು. ಅವರು ಪ್ರತಿ ದಿನ ಸಂಜೆ ಮೈಸೂರಿನ ಇರ್ವಿನ್ ರಸ್ತೆಯಲ್ಲಿರುವ ಭಾರತ್ ಡಯಾಗ್ನಸ್ಟಿಕ್ ಸೆಂಟರ್‌ನಲ್ಲಿ ಕ್ಯಾನ್ಸರ್ ರೋಗಿಗಳಿಗೆ ಸಲಹೆ ನೀಡುತ್ತಿದ್ದರು. ಈ ಎಲ್ಲಾ ಅಂಶಗಳಿಂದ ನನಗೆ ಅಂಟಿಕೊಂಡಿರುವ ಕಾಯಿಲೆ ಯಾವುದೆಂದು ಯಾರು ಬಾಯಿಬಿಟ್ಟು ಹೇಳದಿದ್ದರೂ ತಿಳಿಯಬಲ್ಲವನಾಗಿದ್ದೆ.

ಮತ್ತೆ ಎಕ್ಸ್‌ರೇ ಶೀಟನ್ನು ನೋಡಿದೆ. ಅರ್ಥವಾಗಲಿಲ್ಲ. ರೇಡಿಯಾಲಿಜಿಸ್ಟ್ ನೀಡಿದ್ದ ವರದಿಯನ್ನು ಓದಿದೆ. ಅರ್ಧಂಬರ್ಧ ಅರ್ಥವಾಯಿತು. ಎದೆಯ ಭಾಗದಲ್ಲಿ ಮೂರು ಸೆಂಟಿಮೀಟರ್ ದಪ್ಪ ಐದು ಸೆಂಟಿಮೀಟರ್ ಉದ್ದದ ಗಡ್ಡೆ ಇದೆಯೆಂದು ಅದು ಹೇಳುತ್ತಿತ್ತು. ಅದು ನಿಖರವಾಗಿ ಏನೆಂದು ತಿಳಿಸುವಲ್ಲಿ ಆ ವರದಿ ವಿಫಲವಾಗಿತ್ತು. ಎದ್ದು ಟಿವಿ ಆನ್ ಮಾಡಿದೆ. ಸುದ್ದಿವಾಹಿನಿಯಲ್ಲಿ ಬಿತ್ತರವಾಗುತ್ತಿದ್ದ ಸುದ್ದಿ ಕಿವಿಗೆ ಕೇಳಿಸುತ್ತಿದ್ದರೂ ಮಿದುಳಿಗೆ ಮುಟ್ಟುತ್ತಿರಲಿಲ್ಲ.

ಕಣ್ಣು ಮುಚ್ಚಿದೆ. ನನ್ನ ಹೆಂಡತಿ ಮಕ್ಕಳು ಧುತ್ತನೆ ಮೂಡಿದರು. ಕಣ್ಣು ತೆರೆದೆ.

ಸುವರ್ಣ ಅಡುಗೆ ಮನೆಯಲ್ಲಿದ್ದಳು. ಅವಳ ತಲೆಯಲ್ಲಿ ಎಂಥ ಚಿಂತೆ ಕುದಿಯು ತ್ತಿದೆಯೋ? ಮಕ್ಕಳು? ಅವರೇನೂ ತೀರಾ ಚಿಕ್ಕವರೇನಲ್ಲ, ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವ ವಯೋಮಾನದವರು. ಸುಶಿಯಂತು ದಂತವೈದ್ಯೆ. ಅವಳಿಗೆಲ್ಲಾ ಅರ್ಥವಾಗಿರುತ್ತೆ. ನೇಸರನೇನೂ ದಡ್ಡನಲ್ಲ, ಅವನ ಗ್ರಹಿಕೆಯ ಮಟ್ಟ ಚುರುಕಾಗಿತ್ತು.

ನನ್ನ ಸಾವು ಹತ್ತಿರದಲ್ಲಿದೆ ಅಂತೆನ್ನಿಸಿತು. ಆ ಭಾವ ಮನಕ್ಕೆ ಮೂಡಿದಾಗ ಭಯವಾಯಿತು. ಈ ಕ್ಷಣದಲ್ಲೂ ನನಗೆ ಚೆನ್ನಾಗಿ ನೆನಪಿದೆ: ಆ ಭಯ ನಾನು ಇಷ್ಟರಲ್ಲೇ ಸಾಯುತ್ತೇನೆ ಎಂಬ ಹೆದರಿಕೆಯಿಂದ ಬಂದುದಲ್ಲ. ನಾನು ಸಾಹಿತ್ಯ ಓದಿದವನು. ತತ್ತ್ವಶಾಸ್ತ್ರವನ್ನು ಅಧ್ಯಯನ ಮಾಡಿದವನು. ಸಾವು ಎಲ್ಲರಿಗೂ - ಎಲ್ಲದಕ್ಕೂ ಬಂದೇ ಬರುತ್ತದೆಯೆಂದು ನನಗೆ ಗೊತ್ತಿತ್ತು. ಅದು ಪ್ರಕೃತಿ ನಿಯಮ. ಸಾವು ಚಲನೆಗೆ ಮೂಲ. ತಾನು ಸತ್ತು ಹೊಸದಕ್ಕೆ ಅವಕಾಶನೀಡುವುದು ಸಂಕುಲ ಧರ್ಮ. ನನಗಾಗ ಐವತ್ತು ವರ್ಷ. ನಾನು ಸಾಕಷ್ಟು ಬದುಕಿದ್ದೇನೆ. ಬದುಕನ್ನು ಅನುಭವಿಸಿದ್ದೇನೆ. ಈಗ ಬರುವ ಸಾವಿಗೆ ನಾನು ಅಂಜಿದವನಲ್ಲ, ಆದರೆ ನಾನು ಭಯಪಟ್ಟಿದ್ದು ಮಾತ್ರ ಸತ್ಯ. ಆ ಭಯ ನನಗೆ ಬರುವ ಸಾವಿಗಿಂತ ಮಿಗಿಲಾಗಿ ನನ್ನ ಹೆಂಡತಿ ಮಕ್ಕಳ ಭವಿಷ್ಯದ ವಿಚಾರದಿಂದ ಬಂದದ್ದು.

ನನ್ನ ಪತ್ನಿ ನನ್ನ ಸಹಪಾಠಿ. ಆಕೆ ಅನಂತರ ಬಿ.ಎಡ್ ಪದವಿಯನ್ನೂ ಮಾಡಿದಳು. ಆದರೆ ಕೆಲಸಕ್ಕೆ ಹೋಗದೆ ಗೃಹಿಣಿಯಾಗಿ ಉಳಿದಳು. ಮನೆಗೊಂದು ಉದ್ಯೋಗವೆಂಬ ಆದರ್ಶದ ಬೆನ್ನು ಬಿದ್ದ ನಾವು ಅದರಂತೆಯೇ ನಡೆದುಕೊಂಡಿದ್ದೆವು. ಈಗ ನಾನು ಈ ಕಾಯಿಲೆಯಿಂದ ಸತ್ತರೆ ಇವರ ಭವಿಷ್ಯದ ಗತಿಯೇನು? ಸುಶಿ ಎಂಡಿಎಸ್ ಮಾಡಬೇಕೆಂಬ ಆಸೆಯನ್ನಿಟ್ಟುಕೊಂಡಿದ್ದಾಳೆ. ಮಗ ಇನ್ನೂ ಬಿ.ಎ. ಓದುತ್ತಿದ್ದಾನೆ. ಅವನು ಎಂ.ಎ. ಮಾಡಬೇಕು. ನಾನು ಸತ್ತರೆ ಇವೆಲ್ಲಾ ಸಾಧ್ಯವೇ? ಈ ಆಲೋಚನೆಯೇ ನನಗೆ ಮತ್ತಷ್ಟು ಭಯವನ್ನೂ ತಂದುಬಿಟ್ಟಿತ್ತು.

ನನ್ನ ಭಯಕ್ಕೆ ಮತ್ತೂ ಒಂದು ಕಾರಣವಿತ್ತು. ನಾನು ಸತ್ತರೆ ನನ್ನ ಕುಟುಂಬಕ್ಕೆ ನನ್ನ ಹೆಂಡತಿಯ ಅಥವಾ ನನ್ನ ಮನೆಯ ಕಡೆಯ ನೆರವಿನ ಬಗ್ಗೆ ನನಗೆ ಅನುಮಾನ ವಿತ್ತು. ಅದಕ್ಕೆ ಮೂಲ ಕಾರಣ - ನಮ್ಮ ಮದುವೆ. ನಮ್ಮದು ಪ್ರೇಮವಿವಾಹ; ಅಂತರ್ಜಾತಿ ವಿವಾಹ. ಈ ಜಾತಿ ವ್ಯವಸ್ಥೆಯ ಭೀಕರ ಸಮಾಜದ ಅಮಾನವೀಯ ವರ್ತನೆಯನ್ನು ಸಾವು ಈಗಾಗಲೇ ಅನುಭವಿಸಿದ್ದೆವು. ನನ್ನ ಮತ್ತು ಆಕೆಯ ಮನೆಯವರು ಜಾತಿ ವ್ಯವಸ್ಥೆಯ ಭಾಗವಾಗಿದ್ದರು. ಅವರಿಂದ ವಿಶೇಷವಾದ ಮಾನವೀಯ ಸಂಬಂಧದ ವರ್ತನೆಯನ್ನು ನಾನು ನಿರೀಕ್ಷಿಸುವಂತಿರಲಿಲ್ಲ. ಅದರ ಜೊತೆಗೆ, ಅವರ ಆರ್ಥಿಕ ಸ್ಥಿತಿಗತಿಗಳು ಅಂಥ ಉತ್ತಮವಾಗಿರಲಿಲ್ಲ. ಅಥವಾ

ಇವೆಲ್ಲಾ ನನ್ನ ಭಯಮೂಲ ಊಹೆಗಳಾಗಿರಬಹುದು.

ಊಟ ಮಾಡಿದೆವು. ಮಕ್ಕಳು ಓದಿಕೊಂಡು ಮಲಗಿದರು. ನಾನು ಸುವರ್ಣ ಇಬ್ಬರೇ ಒಬ್ಬರನ್ನೊಬ್ಬರು ನೋಡುತ್ತಾ ಕುಳಿತೆವು. ಸಂಜೆಯಿಂದ ಆಗದ ಎದೆಯ ಭಾರ ಉಂಟಾಯಿತು. ದುಃಖ ಒತ್ತರಿಸಿ ಬಂತು. ಅವಳನ್ನು ತಬ್ಬಿ ಕಣ್ಣೀರು ಹಾಕಿದೆ. ಸುವರ್ಣ ಸ್ವಭಾತಃ ಕಡಿಮೆ ಮಾತನಾಡುವವಳಾಗಿದ್ದಳು. ಅವಳು ಸಮಾಧಾನ ಪಡಿಸುತ್ತಾ "ಏಕೆ ಹೆದರುತ್ತೀರಿ? ನೀವೇ ಹೆದರಿದರೆ ನಾನು ಮಕ್ಕಳು ಹೇಗೆ ಪರಿಸ್ಥಿತಿಯನ್ನು ನಿಭಾಯಿಸುವುದು? ಮಕ್ಕಳಿನ್ನೂ ಚಿಕ್ಕವರು. ಅವರು ನಿಮ್ಮ ಸ್ಥಿತಿಯಿಂದ ಹೆದರಿಬಿಟ್ಟಾರು. ಅಷ್ಟಕ್ಕೂ ನಿಮಗೇನಾಗಿದೆ? ಇನ್ನು ತಜ್ಞ ವೈದ್ಯರು ನೋಡಿಲ್ಲ. ಒಂದು ವೇಳೆ ಶ್ರೀನಿವಾಸ್ ಡಾಕ್ಟರ್‌ರ ಊಹೆ ನಿಜವಾದರೂ ನಾವೇಕೆ ಹೆದರಬೇಕು? ನಿಮ್ಮನ್ನು ನಾನು ಬಲ್ಲೆ. ನೀವು ಧೈರ್ಯವಂತ. ಎಂಥಾ ಸ್ಥಿತಿಯನ್ನು ಎದುರಿಸುವ ಮತ್ತು ಸಮಚಿತ್ತದಿಂದ ನಿರ್ವಹಿಸುವ ಶಕ್ತಿ ನಿಮಗಿದೆ. ಕ್ಯಾನ್ಸರ್ ಕೂಡ ಗುಣವಾಗುತ್ತೆ. ಅಂಥ ನೂರಾರು ಪ್ರಕರಣಗಳನ್ನು ನಾವು ಓದಿಲ್ಲವೆ? ಕೇಳಿಲ್ಲವೆ? ನಿಮಗೆ ಅಂಥ ಗಂಭೀರವಾದ ಸ್ಥಿತಿಯೇನು ಆಗಿಲ್ಲವೆಂದು ನನಗೆ ಅನ್ನಿಸುತ್ತಿದೆ. ನೀವು ಧೈರ್ಯವಾಗಿರಿ. ಅದರಿಂದ ನಾವು ಕೂಡ ಧೈರ್ಯವಾಗಿರುತ್ತೇವೆ" ಎಂದಳು. ಅವಳ ಮಾತು ನನ್ನ ಒಳಗನ್ನು ಜಾಗೃತಗೊಳಿಸಿತ್ತು. ಆಗ ನನ್ನ ದುಃಖ ಕಡಿಮೆಯಾಯಿತು. ಕಣ್ಣೀರು ನಿಂತಿತು. ಮುಂದಿನ ನನ್ನ ಬದುಕಿನ ಅನೇಕ ಗಂಭೀರ ಸಂದರ್ಭಗಳನ್ನು ನಾನು ಸಮಚಿತ್ತದಿಂದ ನಗು ನಗುತ್ತಾ ನಿಭಾಯಿಸಲು ಸಾಧ್ಯವಾಯಿತು. ಮುಂದೆಂದೂ ನನ್ನ ದೇಹದ ಬಗ್ಗೆ ಮತ್ತು ಅದಕ್ಕಂಟಿದ ರೋಗಗಳ ಬಗ್ಗೆ ನಾನು ಚಿಂತಿಸಲಿಲ್ಲ. ಅವು ಬಂದ ಹಾಗೆ ಸ್ವೀಕರಿಸಿ ಬದುಕಲು ಕಲಿತೆ.

ಮಾರನೆಯ ಸಂಜೆ ಭಾರತ್ ಡಯಾಗ್ನಸ್ಟಿಕ್ ಸೆಂಟರ್‌ನಲ್ಲಿ ಡಾ. ವಿಶ್ವೇಶ್ವರ ಅವರನ್ನು ಭೇಟಿಯಾದೆವು. ಅವರು ಎಕ್ಸ್‌ರೇಯನ್ನು ಪರೀಕ್ಷಿಸಿದರು. ನನ್ನನ್ನು ಮಲಗಿಸಿ ನನ್ನ ಎದೆಯ ಭಾಗದ ತಪಾಸಣೆ ಮಾಡಿದರು. "ನೋವು ಬರುತ್ತಿತ್ತೆ?" ಎಂದು ಕೇಳಿದಾಗ ನನ್ನ ಹಿಂದಿನ ದಿನಗಳ ಅನುಭವವನ್ನು ಹೇಳಿದೆ. ಈಗ ನೋವಿಲ್ಲವೆಂದು ತಿಳಿಸಿದೆ. "ಕೆಮ್ಮಿದೆಯಾ?" ಎಂದು ಕೇಳಿದಾಗ ಇಲ್ಲವೆಂದೆ. ನನ್ನ ಹವ್ಯಾಸಗಳ ಬಗ್ಗೆ ವಿಚಾರಿಸಿದರು. ಧೂಮಪಾನ ಮದ್ಯಪಾನಗಳ ಹವ್ಯಾಸವಿಲ್ಲದಿರುವುದನ್ನು ಕೇಳಿ 'ಗುಡ್' ಎಂದರು. ಅನಂತರ ತಮ್ಮ ಚೇರಿನಲ್ಲಿ ಕುಳಿತು "ಬರೀ ಎಕ್ಸ್‌ರೇ ಒಂದರಿಂದಲೇ ಧಿಡೀರನೆ ಯಾವುದೇ ತೀರ್ಮಾನಕ್ಕೆ ಬರುವುದು ತರವಲ್ಲ. ನಾಳೆ ವಿಕ್ರಂ ಆಸ್ಪತ್ರೆಯಲ್ಲಿ ಒಂದು ಸಿಟಿ ಸ್ಕ್ಯಾನ್ ಮಾಡಿಸಿರಿ. ಅಲ್ಲಿ ಡಾ. ರಾಯಚೂರ್‌ಕರ್ ಅಂಥ ತುಂಬಾ ಒಳ್ಳೆಯ ರೇಡಿಯಾಲಿಜಿಸ್ಟ್ ಇದ್ದಾರೆ. ನಾನು ದೂರವಾಣಿ ಮೂಲಕ ಅವರಿಗೆ ವಿಷಯ

ತಿಳಿಸಿರುತ್ತೇನೆ. ಅವರು ನಿಮ್ಮ ಕೇರ್ ತೆಗೆದುಕೊಂಡು ಸಿಟಿ ಸ್ಕ್ಯಾನ್ ಮಾಡುತ್ತಾರೆ. ಆ ಸಿಟಿ ಸ್ಕ್ಯಾನ್ ಮತ್ತು ಅವರು ನೀಡುವ ವರದಿಯನ್ನು ನಾಳೆ ಸಂಜೆ ತನ್ನಿರಿ. ಅನಂತರ ಮುಂದೇನು ಮಾಡಬೇಕೆಂದು ತೀರ್ಮಾನಿಸೋಣ" ಎಂದು ವಿಕ್ರಂ ಆಸ್ಪತ್ರೆಗೆ ಸಿಟಿ ಸ್ಕ್ಯಾನ್‌ಗಾಗಿ ಒಂದು ಪತ್ರವನ್ನು ಬರೆದು ನನ್ನ ಕೈಗೆ ನೀಡಿದರು.

ವಿಕ್ರಂ ಆಸ್ಪತ್ರೆಗೆ ಬೆಳಿಗ್ಗೆ ಎಂಟೂವರೆ ಹೊತ್ತಿಗೆ ಹೋದೆವು. ಅದರ ರೇಡಿಯಾಲಜಿ ವಿಭಾಗದ ಡಾ. ರಾಯಚೂರ್‌ಕರು ಅವರಿಗೆ ಡಾ. ವಿಶ್ವೇಶ್ವರ ನೀಡಿದ ಪತ್ರವನ್ನು ನೀಡಿದೆ. ಈಗಾಗಲೇ ತಮಗೆ ಡಾ. ವಿಶ್ವೇಶ್ವರ ತಿಳಿಸಿರುವುದಾಗಿ ಹೇಳಿದರು. "ಸ್ಕ್ಯಾನ್‌ಗೆ ಹಣ ಸಂದಾಯ ಮಾಡಿ ಬನ್ನಿ" ಎಂದರು. ನನ್ನ ಮಗಳು ಕೌಂಟರ್‌ನಲ್ಲಿ ಹಣ ಪಾವತಿಸಿದಳು. ಸಿಟಿ ಸ್ಕ್ಯಾನ್ ತೆಗೆಯುವ ಕೊಠಡಿಗೆ ನನ್ನನ್ನು ಕರೆದರು. ಸಿಟಿ ಸ್ಕ್ಯಾನ್‌ನ ಮೊದಲ ಅನುಭವ. ನನ್ನ ಎದೆಯ ಭಾಗದ ಬಟ್ಟೆ ತೆಗೆಸಿ ಯಂತ್ರಕ್ಕೆ ಚಾಚಿಕೊಂಡಿರುವ ಹಾಸಿನ ಮೇಲೆ ಮಲಗಿಸಿದರು. ಡಾ. ರಾಯಚೂರ್‌ಕರ್ ತಂತ್ರಜ್ಞರಿಗೆ ಸೂಕ್ತ ಸೂಚನೆಗಳನ್ನು ನೀಡಿ, ತಮ್ಮ ಕಂಪ್ಯೂಟರ್ ಕೊಠಡಿಗೆ ತೆರಳಿ, ಮಾನಿಟರ್‌ನಲ್ಲಿ ನನ್ನ ದೇಹದ ಹೊಂದಾಣಿಕೆ ಮಾಡಿದರು. ಅನಂತರ 'ಎಸ್' ಎಂದು ಸೂಚನೆ ನೀಡಿದರು. ಯಥಾಪ್ರಕಾರ ಸಿಟಿಸ್ಕ್ಯಾನ್ ಆಯಿತು. ನಾನು ಬಟ್ಟೆ ತೊಟ್ಟು ಹೊರಬಂದೆ. ಸಿಟಿಸ್ಕ್ಯಾನ್ ಮತ್ತು ವರದಿ ಇನ್ನೊಂದೆರಡು ಗಂಟೆಯಲ್ಲಿ ಸಿಗುತ್ತದೆಯೆಂದು ರಾಯಚೂರ್‌ಕರ್ ತಿಳಿಸಿದರು.

ಮಧ್ಯಾಹ್ನ ಮಕ್ಕಳು ಸಿಟಿ ಸ್ಕ್ಯಾನ್ ಮತ್ತು ಅದರ ವರದಿಯನ್ನು ಪಡೆದು ತಂದರು. ಸ್ಕ್ಯಾನ್ ನನಗೇನು ಅರ್ಥವಾಗಲಿಲ್ಲ. ರಿಪೋರ್ಟ್ ಯಥಾ ಪ್ರಕಾರ ನನಗೆ ಅರ್ಥವಾಗದ ವೈದ್ಯಕೀಯ ಪರಿಭಾಷೆಯಲ್ಲಿತ್ತು. ಅದರಲ್ಲಿ ಅಲ್ಲಲ್ಲಿ ಕಾಣುತ್ತಿದ್ದ ಪ್ರಶ್ನಾರ್ಥಕ ಚಿಹ್ನೆಗಳು ಮಾತ್ರ ಎದ್ದು ಕಾಣುತ್ತಿದ್ದವು.

ಸಂಜೆ ಡಾ. ವಿಶ್ವೇಶ್ವರ ದೀಪದ ಬೆಳಕಿನಲ್ಲಿ ಹಿಡಿದು ಸಿಟಿಸ್ಕ್ಯಾನ್ ಅನ್ನು ಅಧ್ಯಯನ ಮಾಡಿದರು. ಒಂದಲ್ಲ ಎರಡು ಸಾರಿ ಅದರ ವರದಿಯನ್ನು ಓದಿದರು. ಅವರು ನನ್ನ ಮಗಳನ್ನು ಕುರಿತು "ರೋಗವಿರುವುದು ನಿಜ, ಪ್ರಾರಂಭದ ಹಂತದಲ್ಲೇ ಗೊತ್ತಾಗಿದೆ. ನಿಮ್ಮ ಅದೃಷ್ಟ, ಗುಣವಾಗುತ್ತೆ. ಆದರೆ ಸಮಸ್ಯೆ ಇರುವುದು ನಿಮ್ಮ ತಂದೆಯವರಿಗೆ ಇರುವುದು ಲಿಂಪೋಮಾನ ಅಥವಾ ಥೈಮೋಮಾನ ಅನ್ನುವುದು ಗೊತ್ತಾಗುತ್ತಿಲ್ಲ. ಎರಡರ ಲಕ್ಷಣಗಳು ಇವೆಯೆಂದು ಎಕ್ಸ್‌ರೇ ಮತ್ತು ಸಿಟಿ ಸ್ಕ್ಯಾನ್ ರಿಪೋರ್ಟ್‌ಗಳು ಹೇಳುತ್ತಿವೆ. ನಾವು ಯಾವುದಕ್ಕೆ ಅಂತಾ ಟ್ರೀಟ್‌ಮೆಂಟ್ ನೀಡುವುದು? ಕಾಯಿಲೆ ಯಾವುದೆಂದು ಕನ್‌ಫರ್ಮ್ ಮಾಡಿಕೊಂಡು ಟ್ರೀಟ್‌ಮೆಂಟ್ ಮಾಡಬೇಕು" ಎಂದರು. ನಾನು ಅವರನ್ನೊಮ್ಮೆ ನನ್ನ ಮಗಳನ್ನೊಮ್ಮೆ ನೋಡಿದೆ.

ಡಾ. ವಿಶ್ವೇಶ್ವರ "ನಿಮ್ಮ ಎದೆಯಲ್ಲಿರುವ ಗೆಡ್ಡೆಯ ಟಿಶ್ಯುವನ್ನು FNAC[೧೫] ಮೂಲಕ ಮಾಡಿಸಿ ತೆಗೆದು ಲ್ಯಾಬ್‌ಗೆ ಕಳಿಸಿ, ನಿಮಗಿರೋದು ಲಿಂಪೋಮಾನ ಅಥವಾ ಥೈಮೋಮಾನಾ ಅಂತ ಖಚಿತಪಡಿಸಿಕೊಳ್ಳಬೇಕು. ನಾನು ಮತ್ತೆ ಡಾ. ರಾಯಚೂರ್‌ಕರ್‌ರವರಿಗೆ ಪತ್ರ ಕೊಡುತ್ತೇನೆ. ರಾತ್ರಿ ಫೋನಿನಲ್ಲಿಯೂ ಮಾತನಾಡಿರುತ್ತೇನೆ. FNACಯನ್ನು ಮತ್ತೆ ಸಿಟಿಗೈಡ್‌ನಲ್ಲಿ ಮಾಡಬೇಕು. ಅದನ್ನು ಸಿಟಿ ಸ್ಕ್ಯಾನ್ ಗೈಡೆಡ್ ಫಂಚ್ FNAC ಅಂತ ಕರೀತಾರೆ. ನೀವು ತಡಮಾಡುವಂತಿಲ್ಲ. ಈ FNAC ನಾಳೇನೇ ಆಗಬೇಕು" ಎಂದರು. ಡಾಕ್ಟರರ ಮಾತಿಗೆ ನಾವು ಇದಿರು ಆಡುವಂತಿಲ್ಲ. ಅವರು ಕೂಡ ನನ್ನ ಮೇಲಿನ ಕನ್‌ಸರ್ನ್‌ನಿಂದಲೇ ಹೇಳಿದ್ದಾರೆ.

ಅದರ ಮಾರನೆಯ ದಿನ ವಿಕ್ರಂ ಆಸ್ಪತ್ರೆಯ ರೇಡಿಯಾಲಿಜಿ ವಿಭಾಗದಲ್ಲಿ ನಾನು ಸಿಟಿ ಸ್ಕ್ಯಾನ್ ಗೈಡೆಡ್ ಫಂಚ್ FNAC ಮಾಡಿಸಿಕೊಂಡೆ. ಈಗಂತು ಸ್ವತಃ ಡಾ. ರಾಯಚೂರ್‌ಕರ್ ಅವರೇ ನಿಂತು ಸಿಟಿಯಂತ್ರದ ನೆರವಿನಿಂದ ನನ್ನ ಎದೆಯ ಒಳಭಾಗದಲ್ಲಿರುವ ಗೆಡ್ಡೆಯ ಟಿಶ್ಯುವನ್ನು ನೀಡಲ್ ಮೂಲಕ ಹೊರ ತೆಗೆದರು. ಈ ಕ್ರಿಯೆ ದೈಹಿಕವಾಗಿ ತುಸು ಹೆಚ್ಚು ನೋವು ನೀಡುತ್ತದೆ. ನನ್ನ ಕಣ್ಣೆದುರೆ ಎರಡು ಇಂಚಿಗೂ ಉದ್ದವಿರುವ ದಪ್ಪನೆಯ ಸೂಜಿ ನನ್ನ ಎದೆಯನ್ನೂ ಸೀಳಿಕೊಂಡು ಒಳಹೋಗಿ ನನ್ನಲ್ಲಿರುವ ಗೆಡ್ಡೆಯ ಟಿಶ್ಯುವನ್ನು ಬಗೆದು ತೆಗೆದುಕೊಂಡು ಹೊರಬರುತ್ತದೆ. ಆ ಭಾಗದಲ್ಲಿ ತುಸು ಅರವಳಿಕೆಯನ್ನು ನೀಡಿದ್ದರೂ ನೋವಿನ ಅನುಭವದಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ.

ವಿಕ್ರಂ ಆಸ್ಪತ್ರೆಯ ಲ್ಯಾಬ್‌ನಲ್ಲಿ FNACಯ ಪರೀಕ್ಷೆ ಮಾಡಿ ವರದಿಯನ್ನು ನೀಡಲಾಯಿತು. ಆ ವರದಿಯನ್ನು ನೋಡಿದ ಡಾ. ವಿಶ್ವೇಶ್ವರ ಯಾವುದೇ ತೀರ್ಮಾನಕ್ಕೆ ಬರಲಾಗದೆ ಅಸಹಾಯಕರಾದರು. ಏಕೆಂದರೆ FNACಯ ಆ ವರದಿಯೂ ಕೂಡ ಲಿಂಪೋಮಾ ಥೈಮೋಮಾಗಳ ಬಗ್ಗೆ ಖಚಿತವಾದ ತೀರ್ಮಾನಕ್ಕೆ ಬರದೆ, ಎರಡು ಕಾಯಿಲೆಗಳ ಗುಣಲಕ್ಷಣಗಳಿವೆಯೆಂದು ತಿಳಿಸಿ, ಪ್ರಶ್ನಾರ್ಥಕ ಚಿಹ್ನೆ ಬಳಸಿತ್ತು. ಡಾ. ವಿಶ್ವೇಶ್ವರ ಅವರು "ಈ FNACಯ ಟಿಶ್ಯುವನ್ನು ಮತ್ತೊಂದೆರಡು ಲ್ಯಾಬ್‌ಗೆ ಪರೀಕ್ಷೆ ಕಳಿಸಿ, ಅವುಗಳ ಅಭಿಪ್ರಾಯ ಪಡಿಯೋಣ. ಅನಂತರ ತಡಮಾಡದೆ ಟ್ರೀಟ್‌ಮೆಂಟ್ ಶುರುಮಾಡೋಣ" ಎಂದರು.

ಭಾರತ್ ಡಯಾಗ್ನಸ್ಟಿಕ್ ಸೆಂಟರ್‌ನಲ್ಲಿ ಮತ್ತು ರವಿ ಡಯಾಗ್ನಸ್ಟಿಕ್ ಸೆಂಟರ್‌ನಲ್ಲಿ FNAC ಟಿಶ್ಯೂವಿನ ಪರೀಕ್ಷೆ ಮಾಡಿಸಲಾಯಿತು. ಇದರಿಂದ ಏನೂ ಪ್ರಯೋಜನವಾಗಲಿಲ್ಲ. ಆ ಎರಡು ಲ್ಯಾಬ್‌ಗಳು ಕೂಡ ಅಡ್ಡಗೋಡೆ ಮೇಲೆ ದೀಪವಿಟ್ಟು ವರದಿ ನೀಡಿದವು.

ಡಾ. ವಿಶ್ವೇಶ್ವರ ಟ್ರೀಟ್‌ಮೆಂಟ್ ಪ್ರಾರಂಭಿಸಿದರು. ಮೊದಲನೆಯ ಕೀಮೋಥೆರಪಿ[೧೬] ಆಯಿತು. ಆದರೆ ಡಾ. ವಿಶ್ವೇಶ್ವರ ಅವರಿಗೆ ರೋಗದ ಮೂಲಕ್ಕೆ ಚಿಕಿತ್ಸೆ ನೀಡುತ್ತಿಲ್ಲವೆಂಬ ಅನುಮಾನ ಮತ್ತು ತಳಮಳವಿತ್ತು. FNAC ಕ್ರಿಯೆಯ ನೀಡಲ್‌ಗೆ ಸಿಕ್ಕಿರುವ ಗೆಡ್ಡೆಯ ಟಿಶ್ಯು ಪರೀಕ್ಷೆಗೆ ಸಾಕಾಗುವಷ್ಟು ಇಲ್ಲದಿರಬಹುದು ಅಥವಾ ರೋಗದ ಖಚಿತ ಚಿತ್ರಕೊಡುವ ಟಿಶ್ಯು ನೀಡಲ್‌ಗೆ ಸಿಗದಿರಬಹುದು ಎಂಬ ಅನುಮಾನ ಬಂತು. ಆಗ ಅವರು ನಮಗೆ ವಿಕ್ರಂ ಆಸ್ಪತ್ರೆಯಲ್ಲಿ ಸಿಟಿ ಸ್ಕ್ಯಾನ್ ಗೈಡೆಡ್ ಪಂಚ್ ಬಯಾಪ್ಸಿ[೧೭] ಮಾಡಿಸಲು ಹೇಳಿದರು. FNACಯಲ್ಲಿ ಎದೆಯಾಳಕ್ಕೆ ನೀಡಲ್ ಹೋದರೆ, ಬಯಾಪ್ಸಿಯಲ್ಲಿ ಹರಿತವಾದ ಅಂಚುಳ್ಳ ಕೊಳವೆಯೊಂದು ಹೋಗುತ್ತದೆ. ಆ ಕೊಳವೆ ತನ್ನಲ್ಲಿ ಗೆಡ್ಡೆಯ ಸಾಕಷ್ಟು ಟಿಶ್ಯುವನ್ನು ಅಗೆದು ತರುತ್ತದೆ. ಡಾ. ರಾಯಚೂರ್‌ಕರ್ ಅವರು ಈ ಬಯಾಪ್ಸಿಯನ್ನು ಅಷ್ಟೇ ನಿಗಾ ವಹಿಸಿ ಮಾಡಿದರು. ವಿಕ್ರಂ ಆಸ್ಪತ್ರೆಯ ಪೆಥಾಲಜಿ ಲ್ಯಾಬ್ ಈ ಬಯಾಪ್ಸಿ ಟಿಶ್ಯುವನ್ನು ಪರೀಕ್ಷಿಸಿ ಮತ್ತದೇ ಅಡ್ಡಗೋಡೆಯ ಮೇಲಿನ ದೀಪದಂಥ ವರದಿಯನ್ನು ನೀಡಿತು. ಡಾ. ವಿಶ್ವೇಶ್ವರ ಮತ್ತೆರಡು ಅಭಿಪ್ರಾಯಗಳನ್ನು ಬೇರೆ ಪೆಥಾಲಜಿ ಲ್ಯಾಬ್‌ಗಳಿಂದ ತರಿಸಿದರು. ಅಲ್ಲಿಯೂ ಅದೇ ಬಗೆಯ ಅಭಿಪ್ರಾಯ ಕಂಡುಬಂತು.

ಮತ್ತೆ ಅವರು ಚಿಕಿತ್ಸೆಗೆ ತಡಮಾಡಲಿಲ್ಲ. ನನಗೆ ಪ್ರತಿ ಇಪ್ಪತ್ತೊಂದು ದಿನಕ್ಕೊಮ್ಮೆ ಕೀಮೋಥೆರಪಿ ಚಿಕಿತ್ಸೆಯನ್ನು ನೀಡಲು ಪ್ರಾರಂಭಿಸಿದರು. ಆದರೆ ನನ್ನಲ್ಲಿರುವ ಕ್ಯಾನ್ಸರ್‌ನ ನಿಜವಾದ ಸ್ವರೂಪವೆಂಥಾದ್ದು ಎಂಬುದನ್ನು ಅರಿಯುವ ಅವರ ಪ್ರಯತ್ನ ನಿಲ್ಲಿಸಲಿಲ್ಲ. ಬೆಂಗಳೂರಿನ ಇನ್‌ಸ್ಟಿಟ್ಯೂಟ್ ಆಫ್ ಆಂಕಾಲಜಿಯಿಂದ ಬಯಾಪ್ಸಿಯ ವರದಿ ತರುವಂತೆ ನನ್ನ ಮಗಳು ಮತ್ತು ಮಗನನ್ನು ಪತ್ರ ಸಮೇತ ಕಳಿಸಿದರು. ಅಲ್ಲಿಂದ ವರದಿ ಥೈಮೋಮಾ ಇರಬಹುದೇ ಎಂಬ ಅನುಮಾನವನ್ನು ಮಾತ್ರ ವ್ಯಕ್ತಪಡಿಸುವಷ್ಟು ಪ್ರಗತಿ ತೋರಿತು. ಡಾ. ವಿಶ್ವೇಶ್ವರ ಅಷ್ಟಕ್ಕೆ ಸುಮ್ಮನಾಗದೆ ನನ್ನ ಬಯಾಪ್ಸಿಯನ್ನು ಹೈದರಾಬಾದ್‌ನ ಆಂಕಾಲಜಿ ರಿಸರ್ಚ್ ಇನ್‌ಸ್ಟಿಟ್ಯೂಟ್‌ಗೆ ಕಳಿಸಿದರು. ಅಲ್ಲಿಂದ ವರದಿ ಬರುವ ಹೊತ್ತಿಗೆ ನನ್ನ ಎರಡನೆಯ ಕೀಮೋಥೆರಪಿ ಸೈಕಲ್ ಮುಗಿದಿತ್ತು. ಆ ವರದಿಯು ನಿಖರತೆಯಿಂದ ಕೂಡಿರಲಿಲ್ಲ. ಪ್ರಶ್ನಾರ್ಥಕ ಚಿಹ್ನೆಗಳು ಎದ್ದು ಕಾಣುತ್ತಿದ್ದವು.

ಆಗ ತಾನೆ ಮೈಸೂರಿನ ಕುವೆಂಪು ನಗರದಲ್ಲಿ ಬಿಜಿಎಸ್ ಅಪೊಲೊ ಆಸ್ಪತ್ರೆ ಪ್ರಾರಂಭವಾಗಿತ್ತು. ಅಲ್ಲಿನ ಆಂಕಾಲಜಿ ವಿಭಾಗಕ್ಕೆ ಬೆಂಗಳೂರಿನಿಂದ ಡಾ. ವೇಣುಗೋಪಾಲ್ ಎಂಬ ತಜ್ಞರು ಆಗ ತಾನೆ ಕೆಲಸಕ್ಕೆ ಬಂದಿದ್ದರು. ಡಾ. ವಿಶ್ವೇಶ್ವರ ಅವರು ನನ್ನ ಕೇಸಿನ ಗೋಜಲು ವಿಷಯವನ್ನು ಅವರಲ್ಲಿ ವಿವರಿಸಿ ನನ್ನ

ಬಯಾಪ್ಸಿಯನ್ನು ಅವರಲ್ಲಿಗೆ ಕಳಿಸಿದರು. ಡಾ. ವೇಣುಗೋಪಾಲ್ ಅವರು ನನ್ನ ಬಯಾಪ್ಸಿಯನ್ನು ಕೂಲಂಕಷವಾಗಿ ಪರೀಕ್ಷಿಸಿ, ಯಾವುದೇ ಅನುಮಾನಕ್ಕೆ ಎಡೆಕೊಡದಂತೆ ಇದು "ಥೈಮೋಮಾ" ಎಂದು ಸಕಾರಣವಾಗಿ ತಮ್ಮ ವರದಿಯಲ್ಲಿ ವಿವರಿಸಿದ್ದರು. ಟಿಶ್ಯುವಿನ ಗುಣ ಲಕ್ಷಣ ಸ್ವರೂಪಗಳಿಂದ ಅವರು ಆ ತೀರ್ಮಾನಕ್ಕೆ ಬಂದಿದ್ದರು. ಇದು ಹರಡುವ ಕಾಯಿಲೆಯಲ್ಲ, ತಾನು ನಿಂತಲ್ಲೇ ಇದ್ದು, ವಿಕಸನ ಹೊಂದುವ ಗೆಡ್ಡೆಯೆಂದು ತಿಳಿಸಿದ್ದರು. ಆ ವರದಿಯನ್ನು ಓದಿದ ಡಾ. ವಿಶ್ವೇಶ್ವರ ನೆಮ್ಮದಿಯ ನಿಟ್ಟುಸಿರು ಬಿಟ್ಟು "ಭಯ ಪಡುವಂಥದ್ದೇನಿಲ್ಲ. ಇದು ಅಪಾಯಕಾರಿಯೇನಲ್ಲ. ಸುಲಭವಾಗಿ ಗುಣಪಡಿಸಬಹುದು" ಎಂದು ನಮಗೆ ಹೇಳಿದರು.

ಥೈಮೋಮಾ ಒಂದು ಗೆಡ್ಡೆ. ಅದನ್ನು ಆಪರೇಶನ್ ಮಾಡಿ ತೆಗೆಯಬಹುದು. ಹಾಗೆ ತೆಗೆದು ಹಾಕಿದರೆ ಒಳ್ಳೆಯದು - ಒಂದೇ ಸರ್ತಿಗೆ ಸಮಸ್ಯೆ ಪರಿಹಾರ ಆಗುವ ಸಾಧ್ಯತೆಯಿರುತ್ತದೆ. ಅದನ್ನು ಈಗಲೇ ಏಕೆ ತೆಗೆಸಬಾರದು ಎಂದು ಚಿಂತಿಸಿದ ಡಾ. ವಿಶ್ವೇಶ್ವರ ಭಾರತ್ ಕ್ಯಾನ್ಸರ್ ಆಸ್ಪತ್ರೆಯಲ್ಲೇ ಇದ್ದ ಪ್ರಸಿದ್ಧ ಕ್ಯಾನ್ಸರ್ ಶಸ್ತ್ರ ಚಿಕಿತ್ಸಕರಾದ ಡಾ. ಅನಿಲ್ ಥಾಮಸ್ ಅವರಿಗೆ ನನ್ನ ಕೇಸನ್ನು ರೆಫರ್ ಮಾಡಿದರು. ಡಾ. ಅನಿಲ್‌ಥಾಮಸ್ ಅವರು ಈಗಾಗಲೇ ತೆಗೆದಿರುವ ಎಕ್ಸ್‌ರೇ ಮತ್ತು ಸಿಟಿ ಸ್ಕ್ಯಾನ್‌ಗಳನ್ನು ಅಧ್ಯಯನ ಮಾಡಿದರು. ಟೇಬಲ್ಲಿನ ಮೇಲೆ ನನ್ನನ್ನು ಮಲಗಿಸಿ, ನನ್ನ ಎದೆಯ ಭಾಗವನ್ನು ಸೂಕ್ಷ್ಮವಾಗಿ ತಮ್ಮ ಬೆರಳುಗಳಿಂದ ಪರೀಕ್ಷಿಸಿ ಮತ್ತೆ ಎಕ್ಸ್‌ರೇ ಮತ್ತು ಸಿಟಿ ಸ್ಕ್ಯಾನ್‌ಗಳನ್ನು ನೋಡಿದರು. ಅವರ ಹಣೆಯ ಮೇಲೆ ಆಶಾದಾಯಕ ಗೆರೆಗಳು ಮೂಡಲಿಲ್ಲ. ನನ್ನ ಮತ್ತು ನನ್ನ ಮನೆಯವರ ಕಡೆ ತಿರುಗಿ "ಇದು ಥೈಮೋಮಾ ಗೆಡ್ಡೆಯೇನೋ ಸರಿ. ಆದರದು ತುಂಬ ಸೂಕ್ಷ್ಮವಾದ ಜಾಗದಲ್ಲಿದೆ. ತುಂಬಾ ಮೇಜರ್ ಸರ್ಜರಿ ಬಯಸುತ್ತದೆ. ಆ ಗೆಡ್ಡೆ ಅನ್ನನಾಳ ಶ್ವಾಸನಾಳಗಳಿಗೆ ಹೊಂದಿಕೊಂಡಂತೆ ಹೃದಯ ಮತ್ತು ಶ್ವಾಸಕೋಶಗಳ ನಡುವೆ ಇದೆ. ಆಪರೇಶನ್ ತುಂಬಾ ರಿಸ್ಕಿ. ತೊಂದರೆಯಾಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ" ಎಂದು ಹೇಳಿದರು. ಅನಂತರ ಬೇರೆ ಬೇರೆ ಲ್ಯಾಬ್‌ಗಳಿಂದ ಬಂದ ಬಯಾಪ್ಸಿ ವರದಿಗಳನ್ನು ಮತ್ತು ಡಾ. ವಿಶ್ವೇಶ್ವರ ಅವರ ಟಿಪ್ಪಣಿಯನ್ನು ಓದಿದರು. "ಡಾ. ವಿಶ್ವೇಶ್ವರ ಆಗಲೇ ಕೀಮೋಥೆರಪಿ ಪ್ರಾರಂಭಮಾಡಿದ್ದಾರೆ. ಮೂರು ಸೈಕಲ್‌ಗಳಾಗಿವೆ. ಅದರ ಪರಿಣಾಮದಿಂದ ಗೆಡ್ಡೆ ಸುಂಡುತ್ತಿರುವುದು ಇತ್ತೀಚಿನ ಎಕ್ಸ್‌ರೇಗಳಿಂದ ಕಂಡು ಬರುತ್ತಿದೆ. ಈ ಕೀಮೋಥೆರಪಿಯಿಂದಲೇ ಈ ಗೆಡ್ಡೆ ಸುಂಡಿಹೋಗಬಹುದು. ಯಾರಿಗೆ ಗೊತ್ತು? ನಿಮ್ಮ ಅದೃಷ್ಟ ಹೇಗಿದೆಯೋ? ನೀವು ಆಪರೇಶನ್‌ಗೆ ಒಳಗಾಗುವುದು ಬೇಡವೆಂಬುದು ನನ್ನ ಸಲಹೆ. ಒಳ್ಳೆಯದಾಗಲಿ, ಬನ್ನಿ" ಎಂದು ನಮ್ಮನ್ನು ಕಳಿಸಿದರು.

ಈ ನಡುವೆ ನನ್ನ ಹಿರಿಯ ಮಿತ್ರರೂ ಖ್ಯಾತ ಶಸ್ತ್ರಚಿಕಿತ್ಸಕರೂ ಮೈಸೂರಿನ ಶಾಂತವೇರಿ ಗೋಪಾಲಗೌಡ ಆಸ್ಪತ್ರೆಯ ಮುಖ್ಯರೂ ಆದ ಡಾ. ಎಚ್.ಸಿ. ವಿಷ್ಣುಮೂರ್ತಿ ಅವರ ಬಗ್ಗೆ ನಾನು ಪ್ರಸ್ತಾಪಿಸಲೇಬೇಕು. ಅವರಿಗೆ ಮೊದಲಿನಿಂದಲೂ ನನ್ನ ಮೇಲೆ ಅತೀವವಾದ ಸ್ನೇಹ, ವಿಶ್ವಾಸ. ಅವರು ಶಾಂತವೇರಿ ಗೋಪಾಲಗೌಡರನ್ನು ಅವರ ಕೊನೆಯ ಕಾಲದಲ್ಲಿ ಚೆನ್ನಾಗಿ ನೋಡಿಕೊಂಡು ಉಪಚರಿಸಿದ್ದರು. ಸಮಾಜವಾದೀ ಸಿದ್ಧಾಂತದ ಹಿನ್ನಲೆಯಿಂದ ಬಂದಿದ್ದ ಅವರು ಮತ್ತು ನಾನು ಅನೇಕ ಸಮಾಜವಾದಿ ಸಮಾವೇಶಗಳಲ್ಲಿ, ಶಿಬಿರಗಳಲ್ಲಿ ಭಾಗವಹಿಸಿದ್ದೆವು. ಅನೇಕ ಚಳವಳಿಗಳನ್ನು ಸಂಘಟಿಸಿದ್ದೆವು. ಅವರು ಸಮಾಜವಾದೀ ಕಾರ್ಯಚಟುವಟಿಕೆಗಳಿಗೆ ಯಥೇಚ್ಛವಾಗಿ ಧನಸಹಾಯ ಮಾಡಿ ಪ್ರೋತ್ಸಾಹ ಮಾಡುತ್ತಿದ್ದರು. ಅವರಿಗೆ ನನಗೆ ಕ್ಯಾನ್ಸರ್ ಆಗಿರುವುದು ತಿಳಿದುಬಂದು, ನನ್ನನ್ನು ನೋಡಲು ನನ್ನ ಮನೆಗೆ ಬಂದರು. ನನ್ನ ಎಲ್ಲಾ ರೋಗಸಂಬಂಧ ವರದಿಗಳನ್ನೂ, ಎಕ್ಸ್‌ರೇ ಮತ್ತು ಸಿಟಿ ಸ್ಕ್ಯಾನ್‌ಗಳನ್ನೂ ಪರಿಶೀಲಿಸಿದರು. "ತಡ ಮಾಡುವುದು ಬೇಡ. ಈಗಲೇ ಈ ಗೆಡ್ಡೆಯನ್ನು ತೆಗೆಯುವುದು ಸೂಕ್ತ. ಈಗ ಅದು ಕೀಮೋಥೆರಪಿಯ ಕಾರಣದಿಂದ ತುಸು ಮಂಕಾದಂತೆ ಕಾಣುತ್ತದೆ. ಮುಂದೆ ಎಂದಾದರೂ ಮತ್ತೆ ಧುತ್ತನೆ ಬೆಳೆಯಲು ಆರಂಭಿಸಬಹುದು" ಎಂದು ಹೇಳಿ ನನ್ನ ಮಗಳ ಕಡೆ ತಿರುಗಿ "ನಾಳೆ ನಿಮ್ಮ ತಂದೆಯವರನ್ನು ನಮ್ಮ ಆಸ್ಪತ್ರೆಗೆ ಕರೆತನ್ನಿ" ಎಂದು ಹೇಳಿದರು.

ನಾವು ಮಾರನೆಯ ದಿನ ಅವರ ಆಸ್ಪತ್ರೆಗೆ ಹೋದಾಗ ಅವರು ನಮ್ಮ ನಿರೀಕ್ಷೆಯಲ್ಲೇ ಇದ್ದರು. ನಾವು ಅವರ ಛೇಂಬರಿಗೆ ಹೋದ ಕೂಡಲೇ ಅವರ ಮಗ ಡಾ. ಸಂತೃಪ್ತನನ್ನು ಕರೆಸಿದರು. ಡಾ. ಸಂತೃಪ್ತ ಆಗ ತಾನೆ ಎಂ.ಎಸ್. ಮುಗಿಸಿದ್ದರು. ಅಪ್ಪ ಮಗ ಮತ್ತೊಮ್ಮೆ ನನ್ನ ಎಕ್ಸ್‌ರೇ ಮತ್ತು ಸಿಟಿ ಸ್ಕ್ಯಾನ್‌ಗಳನ್ನು ಪರಿಶೀಲಿಸಿ ಗೆಡ್ಡೆ ಇರುವ ನಿರ್ದಿಷ್ಟ ಜಾಗವನ್ನೂ ಗುರುತು ಮಾಡಿಕೊಂಡರು. "ಶಿವರಾಮ್, ನಾನು ಯೋಚನೆ ಮಾಡಿದ್ದೇನೆ. ಬೆಂಗಳೂರಿನ ವಿಲ್ಸನ್‌ಗಾರ್ಡನ್ ಬಳಿಯಿರುವ ಆಸ್ಪತ್ರೆಯಲ್ಲಿ ನಿಮ್ಮ ಆಪರೇಶನ್ ಮಾಡಿಸೋಣ. ನಾನು ಕೂಡ ಒಂದೆರಡುದಿನ ಆ ಸಮಯದಲ್ಲಿ ನಿಮ್ಮ ಜೊತೆಯಲ್ಲಿದ್ದು ಆಪರೇಶನ್ ಯಶಸ್ವಿಯಾಗುವಂತೆ ನೋಡಿಕೊಳ್ಳುತ್ತೇನೆ. ಆ ಆಸ್ಪತ್ರೆಯಲ್ಲಿ ನನಗೆ ತಿಳಿದಿರುವ ಥೊರಾಸಿಕ್ ಸರ್ಜನ್ ಇದ್ದಾರೆ. ಇಂಥ ಕೇಸ್‌ಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ನಾನು ಇಂದೇ ಅವರೊಡನೆ ಮಾತನಾಡುತ್ತೇನೆ. ವಾರ ಹದಿನೈದು ದಿನಗಳಲ್ಲಿ ಆಪರೇಶನ್ ಆಗಿಬಿಡಬೇಕು"- ಎಂದು ನುಡಿದು "ಈ ಬಗ್ಗೆ ನೀವೇನಂತೀರ" ಎಂದರು. ನಾನು ಹೇಳುವುದಕ್ಕೂ ಅಸಹಾಯಕನಾಗಿದ್ದೆ. ಅವರು ಆಗಲೇ ತೀರ್ಮಾನಕ್ಕೆ ಬಂದಾಗಿತ್ತು.

ನಾನು ನನ್ನ ಮಗಳ ಕಡೆ ನೋಡಿದೆ. ಅವಳು ಡಾಕ್ಟರ್‌ನ್ನು ನೋಡುತ್ತಾ ಆಗಲಿ ಎಂಬಂತೆ ತಲೆ ಅಲ್ಲಾಡಿಸಿದಳು. ವಿಷ್ಣುಮೂರ್ತಿಯವರು ಮುಂದುವರಿದು "ಅದಕ್ಕೆ ಮೊದಲು ನಾನು ಡಾ. ವಿಶ್ವೇಶ್ವರ ಅವರ ಜೊತೆ ಮಾತನಾಡಿ ಕೇಸಿನ ಪೂರ್ಣ ವಿವರ ತಿಳಿಯುತ್ತೇನೆ" ಎಂದರು. ನಾವು ಆಗಲಿಯೆಂಬಂತೆ ನಮ್ಮ ಅಭಿಪ್ರಾಯ ತಿಳಿಸಿ ಆಸ್ಪತ್ರೆಯಿಂದ ಹೊರ ಬಂದವು.

ಅಂದು ಸಂಜೆ ಆರರ ಹೊತ್ತಿಗೆ ಡಾ. ವಿಷ್ಣುಮೂರ್ತಿ ಅವರಿಂದ ನನಗೆ ದೂರವಾಣಿ ಕರೆ ಬಂತು. "ನಾನು ಡಾ. ವಿಶ್ವೇಶ್ವರ ಅವರೊಡನೆ ಮಾತನಾಡಿದೆ. ಅವರು ಈಗ ಆಪರೇಶನ್ ಬೇಡವೆನ್ನುತ್ತಾರೆ. ನಿಮ್ಮ ಕೇಸ್ ಪ್ರಾರಂಭದ ಹಂತದಲ್ಲಿರುವುದರಿಂದ ಈಗ ನೀಡುತ್ತಿರುವ ಚಿಕಿತ್ಸೆಯಿಂದಲೇ ಗುಣವಾಗುತ್ತದೆ. ಆಪರೇಶನ್ ತರಹದ ರಿಸ್ಕ್ ಆಲೋಚನೆ ಈಗ ಬೇಡ ಎಂದರು. ಡಾ. ವಿಶ್ವೇಶ್ವರ ಆ ಕ್ಷೇತ್ರದಲ್ಲಿ ತಜ್ಞರು. ಅವರ ಮಾತಿಗೆ ಮನ್ನಣೆ ನೀಡಬೇಕು. ಆದ್ದರಿಂದ ಸಧ್ಯಕ್ಕೆ ಆಪರೇಶನ್ ಯೋಜನೆಯನ್ನು ಕೈ ಬಿಡೋಣ" ಎಂದರು. ನಾನು 'ಆಯಿತು' ಎಂದು ಹೇಳಿ ಅವರು ನನ್ನಲ್ಲಿ ತೋರುತ್ತಿರುವ ಕಳಕಳಿಯ ಬಗ್ಗೆ ಧನ್ಯವಾದಗಳನ್ನು ಅರ್ಪಿಸಿದೆ. ಡಾ. ವಿಷ್ಣುಮೂರ್ತಿ ಅವರ ನಿಷ್ಕಲ್ಮಶ ಸ್ನೇಹಕ್ಕೆ ನನ್ನಲ್ಲಿ ಮಾತುಗಳಿರಲಿಲ್ಲ.

ನನಗೆ ಕ್ಯಾನ್ಸರ್ ಇದೆಯೆಂದು ತಿಳಿದು ಬಂದಿದ್ದು ೨೦೦೩ರ ಚಳಿಗಾಲದಲ್ಲಿ. ರೋಗದ ನಿರ್ದಿಷ್ಟತೆಯನ್ನು ತಿಳಿಯಲು ಒಂದು ತಿಂಗಳಷ್ಟು ಸಮಯ ಕಳೆದು ವ್ಯರ್ಥಮಾಡಿಕೊಂಡ ಮೇಲೆ ಡಾ. ವಿಶ್ವೇಶ್ವರ ೨೦೦೪ರ ಜನವರಿ ಕೊನೆಯ ವಾರದಲ್ಲಿ ಕೀಮೋಥೆರಪಿ ಚಿಕಿತ್ಸೆ ನೀಡಲು ಆರಂಭಿಸಿದರು. ನಿಮಗೆ ಈಗಾಗಲೇ ತಿಳಿದಿರುವಂತೆ ಚಿಕಿತ್ಸೆಯ ಜೊತೆ ಜೊತೆಯಲ್ಲೇ ಕಾಯಿಲೆಯ ನಿಜಸ್ವರೂಪವನ್ನು ಅದರ ನಿಜವಾದ ಹೆಸರನ್ನು ತಿಳಿಯಲು ಪರೀಕ್ಷೆಗಳು ನಡೆಯುತ್ತಲೇ ಇದ್ದವು. ಅದು ಥೈಮೋಮಾ ಎಂದು ತಿಳಿದು ಬರುವ ಹೊತ್ತಿಗೆ ಮೂರು ಕೀಮೋಥೆರಪಿಗಳ ಸೈಕಲ್‌ಗಳಾಗಿದ್ದವು. ಅನಂತರವೂ ಮುಂದುವರಿದು ಕೀಮೋಥೆರಪಿಗಳ ಆರು ಸೈಕಲ್‌ಗಳನ್ನು ಪೂರ್ಣಗೊಳಿಸಲಾಯಿತು. ಜೂನ್ ತಿಂಗಳ ಕೊನೆಯವಾರದಲ್ಲಿ ನನ್ನ ಆರನೆಯ ಕೀಮೋಥೆರಪಿ ಮುಗಿದಾದ ಇಪ್ಪತ್ತು ದಿನಗಳಲ್ಲಿ ತೆಗೆಸಿದ ನನ್ನ ಎದೆಯ ಭಾಗದ ಎಕ್ಸ್‌ರೇಯನ್ನು ಪರಿಶೀಲಿಸಿದ ಡಾ. ವಿಶ್ವೇಶ್ವರ ತಮ್ಮ ಸಂತೃಪ್ತಿಯ ನಗುಮೊಗವನ್ನು ನನ್ನತ್ತ ತಿರುಗಿಸಿದರು. "ನಿಮಗೆ ನನ್ನ ಅಭಿನಂದನೆಗಳು. ರೋಗದ ಯಾವ ಲಕ್ಷಣವೂ ಇಲ್ಲದಂತೆ ಗೆಡ್ಡೆ ಮಾಯವಾಗಿದೆ. ಇನ್ನು ನೀವು ನೆಮ್ಮದಿಯಿಂದ ಆರಾಮವಾಗಿರಬಹುದು. ನೀವು ಕ್ಯಾನ್ಸರ್ ಗುಣಮುಖರಾಗಿದ್ದೀರಿ. ಪ್ರತಿ ಆರು ತಿಂಗಳಿಗೊಮ್ಮೆ ನಿಮ್ಮ ಎದೆಯ ಭಾಗದ ಎಕ್ಸ್‌ರೇ ತೆಗೆದು ಪರಿಶೀಲಿಸೋಣ. ಮತ್ತೆ ಔಷಧವೇನೂ

ಬೇಕಾಗಿಲ್ಲ. ನಿಮಗೆ ಒಳ್ಳೆಯದಾಗಲಿ. ಹೋಗಿ ಬನ್ನಿ" ಎಂದು ನನ್ನ ಬೆನ್ನುತಟ್ಟಿ ಕಳಿಸಿದರು.

ಆಗ ರಾತ್ರಿ ಏಳೂವರೆಯ ಸಮಯ. ಮೈಸೂರಿನ ಇರ್ವಿನ್ ರಸ್ತೆಗೆ ಕಾಲಿಟ್ಟೆ, ಆ ರಸ್ತೆಯ ಭಯಾನಕ ಟ್ರಾಫಿಕ್ ನಡುವೆಯೂ ನನಗೆ ತಣ್ಣನೆಯ ಗಾಳಿ ಬೀಸಿದ ಅನುಭವವಾಯಿತು. ನನ್ನ ಮಗಳು ಆಗ ಬೆಂಗಳೂರಿನ ಆಕ್ಸ್‌ಫರ್ಡ್ ಡೆಂಟಲ್ ಕಾಲೇಜಿನಲ್ಲಿ ಎಂ.ಡಿ.ಎಸ್. ಸ್ನಾತಕೋತ್ತರ ಪದವಿ ಮಾಡುತ್ತಿದ್ದಳು. ಅವಳಿಗೆ ಫೋನ್ ಮಾಡಿ ವಿಷಯ ತಿಳಿಸಿದೆ. ಸುವರ್ಣಳಿಗೆ ವಿಷಯ ತಿಳಿಸಿದೆ. ಅವಳಿಗೆ ಸಂತೋಷ ವಾಗಿತ್ತು. ನಾನು ಅದೇ ರಸ್ತೆಯಲ್ಲಿದ್ದ ಮನಸುಖಲಾಲ್ ಮಿಠಾಯಿವಾಲ್ ಸಿಹಿ ಅಂಗಡಿಯಿಂದ ಮನೆಗೆ ಸಿಹಿ ಕಟ್ಟಿಸಿಕೊಂಡು ಹೋದೆ*

ಆ ದಿನಗಳು ಕಳೆದು ಹತ್ತು ವರ್ಷಗಳಾಗಿವೆ. ಈಗ ಮಯೇಸ್ತೇನಿಯಾ ಗ್ರೇವಿಸ್ ಎಂಬ ವಿನೂತನ ಕಾಯಿಲೆಯಿಂದ ಮಾಂಸಖಂಡಗಳನ್ನು ಕಳೆದುಕೊಂಡು ನನ್ನ ಅಂಗಾಂಗಗಳು ಕಾರ್ಯ ನಿರ್ವಹಣೆಯಲ್ಲಿ ಕೆಲಸ ಮಾಡುವುದನ್ನು ನಿಲ್ಲಿಸುವಂಥ ಸ್ಥಿತಿಗೆ ಬಂದಿವೆ. ಅದರಲ್ಲೂ ಮುಖ್ಯವಾಗಿ ನನ್ನ ಶ್ವಾಸಕೋಶದ ಭಾಗದ ಸ್ನಾಯುಗಳು, ಕುತ್ತಿಗೆಯ ಸ್ನಾಯುಗಳು ಹಾಗೂ ತೊಡೆಯ ಸ್ನಾಯುಗಳು ವಿಫಲವಾಗುವ ಹಂತಕ್ಕೆ ಬಂದಿವೆ. ಈ ಕಾರಣದಿಂದ ಇಂದು ನಾನು ಅಪೊಲೊ ಆಸ್ಪತ್ರೆಯ ಎಂಐಸಿಯುನ ಕ್ಯಾಬಿನ್ ನಂ. ೧೦ರಲ್ಲಿ ರೋಗಿಯಾಗಿ ಮಲಗಿ ಚಿಕಿತ್ಸೆ ಪಡೆಯುತ್ತಿದ್ದೇನೆ. ಐವಿಐಜಿ ಔಷಧ ನೀಡಿದುದರಿಂದ ನನ್ನ ಉಸಿರಾಟದ ಪ್ರಕ್ರಿಯೆ ನಿಧಾನವಾಗಿ ಸುಧಾರಣೆ ಯಾಗುತ್ತಿತ್ತು. ಆದರೆ ವೈದ್ಯರು ನಿರೀಕ್ಷೆ ಮಾಡಿದ್ದ ವೇಗ ಆ ಸುಧಾರಣೆಯಲ್ಲಿರಲಿಲ್ಲ.

---

*ಈಗ್ಗೆ ಹತ್ತು ವರ್ಷಗಳ ಹಿಂದೆ ನನಗಾಗಿದ್ದ ಕ್ಯಾನ್ಸರ್ ಪೀಡೆಯಿಂದ ಹೊರ ಬಂದ ಬಗೆಯನ್ನು ಇಲ್ಲಿ ಸಂಕ್ಷಿಪ್ತವಾಗಿ ನಿರೂಪಿಸಿದ್ದೇನೆ. ಈ ಕಾಯಿಲೆ ಬಂದ ನಂತರ ಅದನ್ನು ನಾನು ಮತ್ತು ನನ್ನ ಮನೆಯವರು ನಿರ್ವಹಿಸಿ ನಿಭಾಯಿಸಿದ ಬಗ್ಗೆ ನನಗಾಗಿರುವ ಅನುಭವವನ್ನು ಬೇರೆಯೇ ಬರೆಯಬೇಕಾಗಿದೆ. ಕ್ಯಾನ್ಸರ್ ಎಂಬುದು ಅನಿಷ್ಟ ಕಾಯಿಲೆಯೆಂಬ ಒಂದು ಬಗೆಯ ಕೆಟ್ಟ ಟ್ಯಾಬುವನ್ನು ಸಮಾಜದಲ್ಲಿ ಅಂಟಿಸಿಕೊಂಡಿದೆ. ಅದು ಮನುಷ್ಯ ದೇಹಕ್ಕೆ ಬರುವ ಇನ್ನಿತರ ಕಾಯಿಲೆಗಳಾದ ಕಿಡ್ನಿ, ಲಿವರ್, ಹೃದಯ ಸಂಬಂಧೀ ಕಾಯಿಲೆಗಳಂತೆ ಒಂದು ಕಾಯಿಲೆ ಅಷ್ಟೇ. ಅರಿವು ನಮ್ಮ ಸಮಾಜಕ್ಕೆ ಇನ್ನೂ ಮೂಡಿಲ್ಲವೆಂಬುದು ಸತ್ಯ. ಇದರಲ್ಲಿ ಸಾವು ತುಸು ಬೇಗ ಬರಬಹುದಷ್ಟೇ. ಎಲ್ಲದರಲ್ಲೂ ಸಾವು ನಿಶ್ಚಿತ ಸತ್ಯ ತಾನೆ?

ಆದರೆ ಈ ಅರಿವು ಇಲ್ಲದ ಸಮಾಜ ಕ್ಯಾನ್ಸರ್ ರೋಗಿಗಳ ಜೊತೆ ನಡೆದುಕೊಳ್ಳುವ ಬಗ್ಗೆ ನನಗಾಗಿರುವ ಅನುಭವವನ್ನು ಬೇರೆಯೇ ಬರೆಯಬೇಕು. ಜೊತೆಗೆ ನಾನು ಕಂಡ ಹೃದಯವಂತ ವೈದ್ಯರಾದ ಡಾ. ವಿಶ್ವೇಶ್ವರ ಅವರ ಬಗ್ಗೆಯೂ ಕೂಡ.

ನಾನು ಈ ಎಂಐಸಿಯು ನಲ್ಲಿ ಸೇರಿ ಹದಿನೈದು ದಿನಗಳಾದರೂ ನನ್ನನ್ನು ವೆಂಟಿಲೇಟರ್ ಗಾಳಿಯಿಂದ ಮುಕ್ತಗೊಳಿಸಲಾಗಿರಲಿಲ್ಲ. ಕನಿಷ್ಠ ಅರ್ಧ ನನ್ನ ಉಸಿರು ಮತ್ತರ್ಧ ವೆಂಟಿಲೇಟರ್ ಗಾಳಿಯಿಂದ ಉಸಿರಾಟ ಪ್ರಕ್ರಿಯೆ ನಡೆಯುವಷ್ಟು ಸುಧಾರಣೆಯಾದದು ವೈದ್ಯರಿಗೆ ತೃಪ್ತಿ ನೀಡಿರಲಿಲ್ಲ.

ಏಕೆ ಹೀಗಾಗುತ್ತಿದೆ? ಇನ್ನೆಷ್ಟು ದಿನ ರೋಗಿಯನ್ನು ವೆಂಟಿಲೇಟರ್ ನಲ್ಲಿಡುವುದು? ಅದು ಅನಿವಾರ್ಯವಾಗಬಾರದು. ರೋಗಿ ಗುಣಮುಖನಾಗಿ ಸ್ವತಂತ್ರವಾಗಿ ಉಸಿರಾಡುವ ಕ್ರಿಯೆಯಲ್ಲಿ ತೊಡಗಿದಾಗ ಮಾತ್ರ ಅವನು ಅಪಾಯದಿಂದ ಪಾರಾಗುತ್ತಿದ್ದಾನೆಂದು ಅರ್ಥ. ಆದರೆ ನನ್ನ ವಿಚಾರದಲ್ಲಿ ಅಂಥ ಆಶಾಭಾವನೆ ಮೂಡುವಂಥ ಬೆಳವಣಿಗೆ ಆಗಲಿಲ್ಲ. ಕ್ರಿಸ್‌ಮಸ್ ಬಂದು ಹೋಯಿತು, ಹೊಸ ವರ್ಷದ ಆಚರಣೆಯೂ ಆಯಿತು. ನನ್ನ ಬಾಳಿಗೆ ೨೦೧೧ನೇ ಇಸವಿಯ ಪರಿಚಯವೂ ಆಯಿತು. ಡಾ. ಹರೀಶ್‌ನಾಯಕ್ ನನಗೆ ಕೃತಕ ಉಸಿರಾಟವನ್ನು ತುಸು ತುಸುವೇ ಕಡಿಮೆಮಾಡುತ್ತಾ, ನಾನು ನನ್ನ ಉಸಿರಾಟ ಪ್ರಕ್ರಿಯೆಯಲ್ಲಿ ತೊಡಗುವಲ್ಲಿ ನಿರತನಾಗಲು ವೆಂಟಿಲೇಟರ್ ಮತ್ತು ನನ್ನ ನಡುವೆ ಹೊಂದಾಣಿಕೆಯನ್ನು ನಡೆಸುತ್ತಿದ್ದರು. ಆದರೆ ಸುಮಾರು ಇಪ್ಪತ್ತೈದು ದಿನಗಳು ಕಳೆದರೂ ನಾನು ಸ್ವತಂತ್ರನಾಗಿ ಉಸಿರಾಡಲು ಅಸಮರ್ಥನಾದಾಗ ಡಾ. ಆಮೀರ್ ಮತ್ತು ಡಾ. ಹರೀಶ್ ನಾಯಕ್ ಚಿಂತಿತರಾದರು. ನೀಡುತ್ತಿರುವ ಔಷಧ ನೀಡಬೇಕಾದ ವೇಗದಲ್ಲಿ ಪರಿಣಾಮವನ್ನು ಉಂಟು ಮಾಡದಿರುವುದು ಏಕೆಂಬುದು ಅವರನ್ನು ಕಾಡುತ್ತಿರುವ ಮುಖ್ಯ ಪ್ರಶ್ನೆಯಾಗಿತ್ತು. ಆಗ ಅವರಿಗೆ ಪದೆ ಪದೆ ಇದಕ್ಕೆ ಕಾರಣ ನನ್ನ ಎದೆಯಲ್ಲಿರುವ ಗಡ್ಡೆ ಇರಬಹುದೇ ಎಂಬ ಅನುಮಾನ ಕಾಡಲಾರಂಭಿಸಿತು. ಏಕೆಂದರೆ ಅದು ಉತ್ಪನ್ನ ಮಾಡುತ್ತಿರುವ ಆಂಟಿಬಾಡಿಗಳು ದೇಹದ ಸಹಜ ಕ್ರಿಯೆಗಳನ್ನು ಮಂಕುಗೊಳಿಸು ತ್ತಿರಬಹುದು. ಇದರಿಂದಾಗಿ ದೇಹದಲ್ಲಿ ಆಟೋ ಇಮ್ಯುನೋ ಡಿಸ್ ಆರ್ಡರ್ ಉಂಟಾಗಿ ದೇಹದ ವಿವಿಧ ಭಾಗಗಳು ತಮ್ಮ ಸಹಜ ಕ್ರಿಯೆಯನ್ನು ನಿರ್ವಹಿಸಲು ವಿಫಲವಾಗುತ್ತಿವೆ. ಆದ್ದರಿಂದ ಆ ಗ್ಲ್ಯಾಂಡ್ ಅನ್ನು ಸರ್ಜರಿಯ ಮೂಲಕ ತೆಗೆದರೆ ಹೇಗೆ? ಇದು ವೈದ್ಯರನ್ನು ಕಾಡುತ್ತಿರುವ ಸಮಸ್ಯೆಯಾಗಿತ್ತು.

ನಾನು ಎಂಐಸಿಯುಗೆ ದಾಖಲಾದ ಒಂದು ವಾರದಲ್ಲೇ ನನಗೆ ಸಿಟಿ ಗೈಡೆಡ್ ಪಂಚ್ ಬಯಾಪ್ಸಿಯನ್ನು ಅಪೊಲೊ ಆಸ್ಪತ್ರೆಯಲ್ಲೂ ಮಾಡಿಸಲಾಗಿತ್ತು. ಆ ದಿನ ನನಗೆ ಇನ್ನೂ ಚೆನ್ನಾಗಿ ನೆನಪಿದೆ; ಅಲ್ಲಿನ ಘಟನಾ ವಿವರಗಳು ನನ್ನ ಕಣ್ಮುಂದೆ ಬರುತ್ತಿವೆ. ಸಿಟಿ ಸ್ಕ್ಯಾನ್‌ಗೆ ಕರೆದುಕೊಂಡು ಹೋದ ಹಾಗೆಯೇ ಈಗಲೂ ಸಹ ನನ್ನನ್ನು ಸಕಲ ಎಚ್ಚರಿಕೆಯ ಸಲಕರಣೆಗಳ ಸಮೇತ ಕರೆದೊಯ್ಯಲಾಯಿತು. ಕಳೆದ ಸಾರಿ ನನ್ನ

ಜೊತೆ ಬ್ರದರ್ ಇದ್ದರೆ, ಈ ಬಾರಿ ಸಿಸ್ಟರ್ ಇದ್ದಳು. ಆಕೆ ಕನ್ನಡಕ ಧರಿಸುತ್ತಿದ್ದಳು. ಅವಳು ನಡೆಯುವಾಗ ತುಸು ಬಾಗಿ ಕಾಲುಗಳನ್ನು ತುಸು ತಿರುಗಿಸಿ ಹಾಕುತ್ತಿದ್ದಳು. ಆಕೆ ನನ್ನ ಕೃತಕ ಆಮ್ಲಜನಕದ ಪೋಂ ಪೋಂ ಬಲೂನನ್ನು ಹಿಡಿದು ನಿಧಾನವಾಗಿ ಅದುಮಿ ಬಿಡುತ್ತಿದ್ದಳು. ಸಿಟಿ ಸ್ಕ್ಯಾನ್ ಸೆಂಟರ್‌ನಲ್ಲಿ ಅವಳು ಮತ್ತು ಇತರರು ವಿಕಿರಣ ನಿರೋಧಕ ಗೌನ್‌ಗಳನ್ನು ತೊಟ್ಟರು. ಸಿಟಿ ಯಂತ್ರದ ಮೇಲೆ ನನ್ನನ್ನು ಮಲಗಿಸಿ, ನನ್ನ ಎದೆಯ ಭಾಗವನ್ನು ಸರಿಯಾಗಿ ಬರುವಂತೆ ಹೊಂದಿಸಲಾಯಿತು. ಕಂಪ್ಯೂಟರ್ ಸಹಾಯದಿಂದ ನನ್ನ ಎದೆಯಲ್ಲಿ ಗೆಡ್ಡೆ ಇರುವ ಜಾಗವನ್ನು ಗುರುತು ಮಾಡಿಕೊಳ್ಳಲಾಯಿತು. ನಾನು ನನ್ನ ಸಿಸ್ಟರ್ ಅನ್ನೂ ನನ್ನ ಸಿಟಿ ಗೈಡೆಡ್ ಬಯಾಪ್ಸಿ ಮಾಡುವ ತಂತ್ರಜ್ಞನನ್ನೂ ಗಮನಿಸುತ್ತಿದ್ದೆ. ಆ ತಂತ್ರಜ್ಞನ ಹೆಸರು 'ವಿ' ಎಂದು ನನಗೆ ತಿಳಿದು ಬಂತು. ಆತ ನನ್ನ ಎದೆಯಭಾಗದ ಒಂದು ಇಂಚು ಬಲಭಾಗದಲ್ಲಿ ಗುರುತು ಹಾಕಿದ್ದ ಜಾಗದಲ್ಲಿ ಬಯಾಪ್ಸಿ ಕೊಳವೆಯನ್ನು ದೇಹದೊಳಕ್ಕಿಳಿಸಲು ಅಡ್ಜೆಸ್ಟ್ ಮಾಡುತ್ತಿದ್ದ. ಬಯಾಪ್ಸಿ ಕೊಳವೆಯ ಗಾತ್ರವನ್ನು ಮತ್ತು ಅದು ನನ್ನ ಎದೆಯೊಳಕ್ಕೆ ಇಳಿದು ಟಿಶ್ಯು ಸಮೇತ ಮೇಲಕ್ಕೆ ಬರುತ್ತದೆಯೆಂಬ ಕಲ್ಪನೆಯು ಸಿಸ್ಟರ್‌ಳನ್ನು ಹೆದರಿಸಿಬಿಟ್ಟಿತು. ಆಕೆ "ನನ್ನ ಕೈಲಿ ನೋಡಕಾಗಲ್ಲ. ನಾನು ಕಣ್ಣು ಮುಚ್ಚಿಕೊಳ್ಳುತ್ತೇನೆ" ಎಂದಳು. "ಆಗದಿದ್ದರೆ ಕಣ್ಣು ಮುಚ್ಚಿಕೋ, ಆದರೆ ಬಲೂನ್ ಅದುಮುವುದನ್ನು ನಿಲ್ಲಿಸಬೇಡ" ಎಂದು 'ವಿ' ಎಚ್ಚರಿಸಿದ. ಆಕೆ ಕಣ್ಣು ಮುಚ್ಚಿ ಮುಖವನ್ನು ಬಲಕ್ಕೆ ತಿರುಗಿಸಿ ಬಲೂನ್ ಒತ್ತುತ್ತಿದ್ದಳು. ನಾನು 'ವಿ'ಯ ಮುಖವನ್ನು ಗಮನಿಸುತ್ತಿದ್ದೆ. ಆತನ ಹಣೆಯ ಮೇಲೆ ತೆಳುವಾದ ಬೆವರ ಹನಿಸಾಲುಗಳು ಮೂಡಿದ್ದವು. ಬಯಾಪ್ಸಿ ಕೊಳವೆ ಗುರುತು ಮಾಡಿದ ನನ್ನ ಚರ್ಮವನ್ನು ಮೃದುವಾಗಿ ಸ್ಪರ್ಶಿಸಿತು. 'ವಿ' ಕಂಪ್ಯೂಟರ್ ಕೊಠಡಿಯ ಕಡೆ ನೋಡಿದ. ಸರಿಯಾಗಿದೆ ಎಂಬ ಸೂಚನೆ ಅಲ್ಲಿಂದ ಬಂತು. 'ವಿ' ಯಾವುದೋ ಗುಂಡಿ ಒತ್ತಿದ. ಬಯಾಪ್ಸಿ ಕೊಳವೆ ಸುರುಳಿ ಸುತ್ತುತ್ತ ಬೈರಿಗೆಯ ರೀತಿ ಕ್ಷಣಾರ್ಧದಲ್ಲಿ ನನ್ನ ದೇಹದೊಳಗೆ ನುಗ್ಗಿ ಗೆಡ್ಡೆಯನ್ನು ಭೇದಿಸಿ, ಅದರ ಟಿಶ್ಯುವನ್ನು ತುಂಬಿಕೊಂಡು ಮೇಲೆ ಬಂತು. ಯಂತ್ರದ ಒಳಗಿನಿಂದ ನನ್ನ ದೇಹ ಹೊರಬಂತು. ಕಣ್ಣುಮುಚ್ಚಿ ನಿಂತ ಸಿಸ್ಟರ್ "ಇಷ್ಟು ಬೇಗ ಆಗಿಹೋಯಿತಾ" ಅಂತ ಕಣ್ಣು ತೆರೆದು ಕನ್ನಡಕದೊಳಗಿನಿಂದ ಬೆರಗು ವ್ಯಕ್ತಪಡಿಸಿದಳು.

ಹೀಗೆ ಪಡೆದ ನನ್ನ ಗೆಡ್ಡೆಯ ಟಿಶ್ಯುವನ್ನು ಮತ್ತೆ ಅದು ಥೈಮೋಮಾ ಗೆಡ್ಡೆಯೆಂದು ಖಚಿತಪಡಿಸಿಕೊಳ್ಳಲು ಬೇರೆ ಒಂದೆರಡು ಫೆಥಾಲಜಿ ಲ್ಯಾಬ್‌ಗೆ ಕಳಿಸಲಾಯಿತು. ಹತ್ತು ವರ್ಷದ ಹಿಂದೆ ಅಡ್ಡ ಗೋಡೆಯ ಮೇಲೆ ದೀಪವಿಟ್ಟಂಥ ಬಂದ ವರದಿಗಳ ರೀತಿ ಈ ಸಾರಿ ಬರಲಿಲ್ಲ. ಎಲ್ಲ ಕಡೆಯಿಂದಲೂ ಅದು

ಥೈಮೋಮಾವೆಂದೂ ಅದು ಬಿನೈನ್ (Benign)[೧೮] ಆದ್ದರಿಂದ ತಕ್ಷಣದ ಅಪಾಯವಿಲ್ಲವೆಂದೂ ವರದಿ ಬಂತು. ಅದು ದೇಹದ ಇತರೆ ಭಾಗಗಳಿಗೆ ಹರಡುವ ಗುಣಹೊಂದಿಲ್ಲದದುರಿಂದ ಅದರ ಪಾಡಿಗೆ ಅದನ್ನು ಬಿಡಬಹುದಿತ್ತು. ಆದರೆ ಅದು ಉತ್ಪನ್ನ ಮಾಡುತ್ತಿರುವ ಆ್ಯಂಟಿ ಬಾಡಿಗಳು ನನ್ನ ದೇಹದ ಬಿಳಿ ರಕ್ತಕಣಗಳನ್ನು ನಿಷ್ಕ್ರಿಯಗೊಳಿಸುತ್ತಿರುವುದರಿಂದ ನನ್ನ ದೇಹದ ಇಮ್ಯುನ್ ಶಕ್ತಿಯು ಕುಂಠಿತ ಗೊಂಡಿದೆ. ಆ ಕಾರಣದಿಂದಲೇ ನನ್ನ ಉಸಿರಾಟದ ಪ್ರಕ್ರಿಯೆ ಸುಧಾರಣೆಗೊಳ್ಳುತ್ತಿಲ್ಲ. ಡಾ. ಆಮೀರ್ ಮತ್ತು ಡಾ. ಹರೀಶ್‌ನಾಯಕ್ ನನ್ನ ಸ್ವಂತ ಶ್ವಾಸಕ್ರಿಯೆಯ ಮೇಲೆ ನಾನು ಉಸಿರಾಡಲು ಪ್ರಯತ್ನಿಸುವಂತೆ ಮಾಡಿ ಸೋತಿದ್ದರು. ಆದ್ದರಿಂದ ಅವರು ಮತ್ತೆ ಆಂಕಾಲಜಿ ವಿಭಾಗದ ವೈದ್ಯರಿಗೆ ಶಸ್ತ್ರಕ್ರಿಯೆಯ ಸಾಧ್ಯತೆ ಬಗ್ಗೆ ಸಲಹೆ ನೀಡಲು ಕೇಳಿದರು. ಒಂದು ಅಪರಾಹ್ನ ಮೂರು ಗಂಟೆ ಇರಬಹುದು. ಆಗ ನನ್ನನ್ನು ಎಂಐಸಿಯುನ ಭಾಗವಾಗಿ ಹೊಂದಿಕೊಂಡಂತಿದ್ದ ಹೆಚ್‌ಡಿಯು (High Dependency Unit)[೧೯] ಕ್ಯಾಬನ್ ಅಲ್ಲಿದ್ದೆ. ನನ್ನನ್ನು ಆಗ ವೆಂಟಿಲೇಟರ್‌ನಿಂದ ಮುಕ್ತಗೊಳಿಸಿ ಬೈಪಾಸ್[೨೦] ಎಂಬ ಉಸಿರು ನೀಡುವ ಯಂತ್ರಕ್ಕೆ ಜೋಡಿಸಿ ಉಸಿರು ನೀಡುತ್ತಿದ್ದರು. ಈ ಯಂತ್ರ ಕೇವಲ ಗಾಳಿಯನ್ನು ನನ್ನ ಶ್ವಾಸಕೋಶಗಳಿಗೆ ಪಂಪ್ ಮಾಡುತ್ತಿತ್ತು. ಹೀಗೆ ದೇಹದೊಳಕ್ಕೆ ಬಂದ ಗಾಳಿಯನ್ನು ನಾನು ಸ್ವಂತ ಬಲದಿಂದ ಹೊರಕ್ಕೆ ಕಳಿಸಬೇಕಾಗಿತ್ತು. ಈ ಬಗೆಯ ಪ್ರಕ್ರಿಯೆಗೆ ಒಳಗಾಗಿ ಒಂದು ವಾರದ ಮೇಲಾಗಿತ್ತು. ಅಲ್ಲಿಗೆ ಆಂಕಾಲಜಿಸ್ಟ್, ಆಂಕಾಲಜಿ ಸರ್ಜನ್ ಮತ್ತು ಎದೆಗೂಡಿನ ಶಸ್ತ್ರಚಿಕಿತ್ಸಕ - ಮೂವರೂ ಬಂದರು. ನನ್ನ ಕೇಸ್‌ಶೀಟನ್ನು ಮೂವರೂ ಅಧ್ಯಯನ ಮಾಡಿದರು. ನನ್ನ ಎಕ್ಸ್‌ರೇಗಳು, ಸಿಟಿ ಸ್ಕ್ಯಾನ್‌ಗಳನ್ನು ಪರಿಶೀಲಿಸಿದರು. ಹಾಗೆಯೇ ನನ್ನ ಹಾಸಿಗೆಯ ಬಳಿ ಬಂದು ನನ್ನ ದೇಹಸ್ಥಿತಿಯನ್ನು ಪರಿಶೀಲಿಸಿದರು. ಮತ್ತೆ ಅವರು ನನ್ನ ಕೇಸ್‌ಶೀಟ್ ಮತ್ತು ಎಕ್ಸ್‌ರೇಗಳನ್ನಿಡಿದು ನನ್ನ ಟೇಬಲ್ ಬಳಿ ನಿಂತು ಮಾತನಾಡತೊಡಗಿದರು:

"ಪೇಶೆಂಟ್ ಸ್ಥಿತಿ ತೀರಾ ಡೆಲಿಕೇಟ್ ಆಗಿದೆ. ಈಗ ಅವರಿಗೆ ಆಪರೇಶನ್ ಮಾಡಬಹುದು. ಆದರೆ ಅದನ್ನು ತಡೆದುಕೊಳ್ಳುವ ಶಕ್ತಿ ರೋಗಿಗಿದೆ ಎಂದು ಅನ್ನಿಸುವುದಿಲ್ಲ."

"ಆಪರೇಶನ್ ಎಷ್ಟು ಹೊತ್ತು ತೆಗೆದುಕೊಳ್ಳಬಹುದು?"

"ಇದು ಮೇಜರ್ ಸರ್ಜರಿ, ಕನಿಷ್ಠ ಐದಾರು ಗಂಟೆ ಹಿಡಿಯಬಹುದು"

"ಅಂದರೆ ಅನೇಸ್ತಿಯಾ....?"

"ಇವರಿಗೆ ಜನರಲ್ ಅನೇಸ್ತಿಯಾ ನೀಡೇ ಸರ್ಜರಿ ಮಾಡಬೇಕು. ಎರಡು ಮೂರು

ಗಂಟೆಯಲ್ಲಿ ಆಗದಿರುವುದರಿಂದ ಪೇಶೆಂಟ್‌ಗೆ ಗಟ್ಟಿ ಸ್ಟಾಮಿನಾ ಬೇಕು"

"ಈ ಪೇಶೆಂಟ್‌ಗೆ ಆ ಶಕ್ತಿ ಇಲ್ಲ. ಇವರಿಗೆ ಮಯೇಸ್ತೇನಿಯಾ ಗ್ರೇವಿಸ್ ಇರೋದ್ರಿಂದ ಈ ಸ್ಥಿತಿಯಲ್ಲಿ ಸರ್ಜರಿ ತುಂಬಾ ರಿಸ್ಕಿ. ಅದನ್ನು ತಡೆದುಕೊಳ್ಳುವ ಶಕ್ತಿ ಇಲ್ಲ ಅಂತ ನನಗನ್ನಿಸಿದೆ. ಈಗಲೇ ಸರ್ಜರಿ ಮಾಡಿದರೆ ಸರ್ಜರಿ ಟೇಬಲ್ ಮೇಲೆ ಸಾಯುವ ಅವಕಾಶ ಅಧಿಕ. ಫಿಸಿಷಿಯನ್ ಮತ್ತು ನ್ಯೂರೋಫಿಸಿಷಿಯನ್ ಓಕೆ ಅಂದರೆ ಮತ್ತು ರೋಗಿಯ ಮನೆಯವರು ಒಪ್ಪಿಗೆ ನೀಡಿದರೆ ಸರ್ಜರಿ ಮಾಡಬಹುದು. ಆದರೆ ಬದುಕುವ ಚಾನ್ಸ್ ಫಿಫ್ಟಿಗಿಂತ ಕಡಿಮೆ".

ನಾನು ಅವರ ಮಾತನ್ನು ಕೇಳಿಸಿಕೊಳ್ಳುತ್ತಿದ್ದೆ. ಅವರ ಸಂಭಾಷಣೆ ಇಂಗ್ಲಿಷ್‌ನಲ್ಲಿದ್ದರೂ ಮಧ್ಯೆ ಮಧ್ಯೆ ಕನ್ನಡ ಇಣುಕಿ ಹೋಗುತ್ತಿತ್ತು. ಆದರೆ ನನಗೆ ಅವರ ಮಾತುಗಳು ಇಷ್ಟವಾಗಲಿಲ್ಲ. ಗಂಭೀರ ಸ್ಥಿತಿಯಲ್ಲಿರುವ ರೋಗಿಯೆದುರಿಗೆ ಅವನು ಬದುಕುವ ಅವಕಾಶಗಳ ಬಗ್ಗೆ ಚರ್ಚಿಸಿ ತೀರ್ಮಾನಕ್ಕೆ ಬರುವುದು ವೈದ್ಯಧರ್ಮಕ್ಕೆ ವಿರುದ್ಧವಾದುದೆಂದು ನನಗನ್ನಿಸಿತು. ಮೊದಲೇ ರೋಗದಿಂದ ಜರ್ಜರಿತನಾದ ರೋಗಿ ಇಂಥ ಮಾತುಗಳನ್ನು ಕೇಳಿ ಮತ್ತಷ್ಟು ಹತಾಶನಾಗಿ ಜೀವದ ಆಸೆಯನ್ನು ಕಳೆದುಕೊಳ್ಳುವುದಿಲ್ಲವೆ?

ಅವರು ತುಸುಹೊತ್ತಿನಲ್ಲಿ ಅಲ್ಲಿಂದ ತೆರಳಿದರು. ಅವರ ಮಾತಿನಿಂದ ಒಂದು ಮಾತಂತು ಸ್ಪಷ್ಟವಾಗಿತ್ತು. ಈಗಿನ ನನ್ನ ದೇಹಸ್ಥಿತಿ ಸರ್ಜರಿಯನ್ನು ತಡೆದುಕೊಳ್ಳುವ ಶಕ್ತಿಯನ್ನು ಹೊಂದಿಲ್ಲ. ಈಗ ಸರ್ಜರಿ ಮಾಡುವುದು ಜೀವಕ್ಕೆ ಅಪಾಯ. ಬಹುಶಃ ಇದೇ ಮಾತುಗಳನ್ನು ಆ ಮೂರು ಮಂದಿ ತರುಣ ಡಾಕ್ಟರುಗಳು ನನ್ನ ಕೇಸ್‌ಶೀಟ್‌ನಲ್ಲಿ ಬರೆದಿದ್ದರು ಎಂದು ತೋರುತ್ತದೆ. ಡಾ. ಆಮೀರ್ ಮತ್ತು ಡಾ. ಹರೀಶ್ ನಾಯಕ್ "ಸದ್ಯಕ್ಕೆ ಸರ್ಜರಿ ಬೇಡ, ಮಯೇಸ್ತೇನಿಯಾ ಗ್ರೇವಿಸ್ ಗುಣವಾಗಲಿ. ಒಂದೆರಡು ವರ್ಷಗಳು ಕಳೆದ ನಂತರ ದೇಹ ಫಿಟ್ ಆದ ಮೇಲೆ ಗೆಡ್ಡೆಯನ್ನು ತೆಗೆಯುವುದರ ಬಗ್ಗೆ ತೀರ್ಮಾನಕ್ಕೆ ಬರುವುದು ಉಚಿತ" ಎಂಬ ನಿಲುವಿದೆ ಬಂದರು. ನನ್ನ ಆರೋಗ್ಯ ಉತ್ತಮಗೊಳ್ಳುವಿಕೆಯ ಇನ್ನಿತರ ಸಾಧ್ಯತೆಗಳ ಬಗ್ಗೆ ಅವರು ಗಮನ ಹರಿಸಿದರು.

ಎಂಐಸಿಯುನಲ್ಲಿ ನನ್ನ ಚಿಕಿತ್ಸೆ ಪ್ರಾರಂಭವಾಗಿ ಒಂದು ತಿಂಗಳು ಕಳೆದರೂ ನಾನು ಸ್ವತಂತ್ರವಾಗಿ ಉಸಿರಾಡಿ ಜೀವಿಸುವಷ್ಟು ಉಸಿರಾಟ ಪ್ರಕ್ರಿಯೆ ಸಾಧ್ಯವಾಗದಿದ್ದದ್ದು ವೈದ್ಯರ ಚಿಂತೆಗೆ ಕಾರಣವಾಯಿತು. ಈ ಸ್ಥಿತಿಗೆ ಬಹುಶಃ ಕಾರಣವಾಗಿರುವ ಆ್ಯಂಟಿ ಬಾಡಿಗಳನ್ನು ಉತ್ಪನ್ನ ಮಾಡುತ್ತಿರುವ ಗ್ಲಾಂಡ್ ಅನ್ನು ನಿಷ್ಕ್ರಿಯಗೊಳಿಸುವುದು ಹೇಗೆ? ಅಥವಾ ಅದು ಹೊರ ಸೂಸುತ್ತಿರುವ ಆ್ಯಂಟಿ ಬಾಡಿಗಳನ್ನೇ ಮಂಕುಗೊಳಿಸುವುದು ಹೇಗೆ? ಐವಿಐಜಿಯಿಂದ ಗುಣವಾಗುತ್ತಿರುವ

ಸೂಚನೆಗಳು ಸಿಕ್ಕಿದ್ದರೂ ಪರಿಣಾಮಕಾರಿಯಾಗಿ ಆಗುತ್ತಿಲ್ಲವೆಂದು ವೈದ್ಯರಿಗೆ ಅನಿಸಿತು. ಅದಕ್ಕೆ ರಕ್ತದಲ್ಲಿರುವ ಈ ಆ್ಯಂಟಿಬಾಡಿಗಳನ್ನು ರಕ್ತದಿಂದಲೇ ತೆಗೆದು ಹಾಕಿದರೆ ಹೇಗೆ? ಪ್ಲಾಸ್ಮ ಫೆರಿಸಿಸ್ (Plasma Pherisis)[೨೧] ಚಿಕಿತ್ಸೆಯನ್ನು ನೀಡಿದರೆ ಹೇಗೆ? ಪ್ಲಾಸ್ಮ ಫೆರಿಸಿಸ್ ಚಿಕಿತ್ಸಾ ಕ್ರಿಯೆಯಲ್ಲಿ ಡಯಾಲಿಸಿಸ್ ಮೂಲಕ ರಕ್ತವನ್ನು ಹೊರತೆಗೆಯುತ್ತಾ ಅದರಲ್ಲಿರುವ ಆ್ಯಂಟಿ ಬಾಡಿಗಳನ್ನು ನಾಶಗೊಳಿಸುತ್ತಾ ರಕ್ತವನ್ನು ಶುದ್ಧಗೊಳಿಸುವುದು ನಡೆಯುತ್ತದೆ. ಈ ಚಿಕಿತ್ಸೆ ಐವಿಐಜಿಗಿಂತ ಕಡಿಮೆ ಖರ್ಚಿನಲ್ಲಿ ಆಗಬಹುದು. ಈ ಚಿಕಿತ್ಸೆಯನ್ನು ತಿಂಗಳಿಗೊಂದರಂತೆ ಮೂರು ಸೈಕಲ್ಲುಗಳಲ್ಲಿ ನಡೆಸಬೇಕಾಗುತ್ತದೆ.

ಆದರೆ ಮತ್ತೆ ಪ್ರಶ್ನೆ ಹಾಗೇ ಉಳಿದುಕೊಳ್ಳತೊಡಗಿತು. ಈ ಪ್ಲಾಸ್ಮ ಫೆರಿಸಸ್‌ನ ಪರಿಣಾಮ ಒಂದು ತಿಂಗಳು ಇರಬಹುದು. ಅನಂತರ? ಅನಂತರ ಉತ್ಪನ್ನವಾಗುವ ಆ್ಯಂಟಿ ಬಾಡಿಗಳು ಮತ್ತೆ ರಕ್ತದಲ್ಲಿ ಸೇರುವುದಿಲ್ಲವೆ? ಆಗ ಏನು ಮಾಡುವುದು? ಪದೇ ಪದೇ ರಕ್ತವನ್ನು ಡಯಾಲಿಸಿಸ್ ಪ್ರಕ್ರಿಯೆಗೊಳಪಡಿಸುವುದರಿಂದ ಆಗಬಹುದಾದ ಅಡ್ಡ ಪರಿಣಾಮಗಳನ್ನು ತಡೆಯುವುದು ಸಾಧ್ಯವೆ? ಜೊತೆಗೆ ಡಯಾಲಿಸಿಸ್ ಪ್ರಕ್ರಿಯೆಗೆ ಒಳಗಾದಾಗ ಬರುವ ಎಲ್ಲಾ ಪೂರಕ ಸೋಂಕುಗಳು ದೇಹಕ್ಕೆ ಹೊಸದಾಗಿ ಅಂಟಿಕೊಳ್ಳಬಹುದು. ಈ ಬಗೆಯ ಎಲ್ಲಾ ಸಾಧಕ ಬಾಧಕಗಳನ್ನು ಪರಿಭಾವಿಸಿದ ಡಾ. ಆಮೀರ್ ಮತ್ತು ಡಾ. ಹರೀಶ್ ನಾಯಕ್ ಐವಿಐಜಿಯನ್ನೇ ಮತ್ತೆರಡು ಸೈಕಲ್ಲುಗಳಲ್ಲಿ ಮುಂದುವರಿಸುವುದು ಸೂಕ್ತವೆಂಬ ತೀರ್ಮಾನಕ್ಕೆ ಬಂದರು. ಈ ಐವಿಐಜಿ ಔಷಧವು ಮಯೇಸ್ತೇನಿಯಾ ಗ್ರೇವಿಸ್‌ನ ಗುಣಕ್ಕಾಗಿ ನೀಡುತ್ತಿರುವ ಅಜಥೈಯೋಪ್ರೈನ್ (Azathio prine) ಔಷಧವು ಗುಣಾತ್ಮಕವಾಗಿ ಕೆಲಸಮಾಡಲು ಚುರುಕಾಗುವಂತೆ ಪ್ರೇರೇಪಿಸುತ್ತದೆ. ಈ ಔಷಧದ ಜೊತೆಗೆ ಸ್ಟಿರಾಯ್ಡ್ ಮತ್ತು ಪಿರಿಡೋಸ್ಟಿಗ್ಮೈನ್ ಔಷಧಗಳು ಚುರುಕಾಗಿ ದೇಹದಲ್ಲಿ ಉತ್ಪನ್ನವಾಗುತ್ತಿರುವ ಆ್ಯಂಟಿ ಬಾಡಿಗಳನ್ನು ಸಮರ್ಥವಾಗಿ ನಿರ್ವಹಿಸಲು ಸಾಧ್ಯವಾಗುತ್ತದೆ.

ವೈದ್ಯರು ತೆಗೆದುಕೊಂಡ ಈ ತೀರ್ಮಾನ ಫಲಕಾರಿಯಾಗುವಂತೆ ಕಂಡು ಬರತೊಡಗಿತು. ತಲಾ ಇಪ್ಪತ್ತು ದಿನಗಳ ಅಂತರದಲ್ಲಿ ಇನ್ನೆರಡು ಸಾರಿ ಐವಿಐಜಿಯನ್ನು ಐದು ಬಾಟಲುಗಳ ಪ್ರಮಾಣದಲ್ಲಿ ನೀಡಲಾಯಿತು. ನಿಧಾನವಾಗಿಯಾದರೂ ನನ್ನ ಎದೆಯ ಸ್ನಾಯುಗಳು ಅಲುಗಾಡಿ ಕೆಲಸ ಮಾಡಲು ಪ್ರಾರಂಭಮಾಡಿದವು. ಸುಮಾರು ಐವತ್ತು ದಿನಗಳ ನನ್ನ ಆಸ್ಪತ್ರೆಯ ವಾಸದ ಹೊತ್ತಿಗೆ ಸಂಪೂರ್ಣವಾಗಿ ನಾನು ಸರಾಗವಾಗಿ ಯಾವುದೇ ಕೃತಕ ಯಂತ್ರದ ಸಹಾಯವಿಲ್ಲದೆ ಉಸಿರಾಡಲು ಸಾಧ್ಯವಾಯಿತು. ತಡವಾದರೂ ಈ ಮಟ್ಟಕ್ಕೆ ಗುಣವಾಯಿತಲ್ಲ ಎಂದು ನನ್ನ ವೈದ್ಯರು ಮತ್ತು ನನ್ನ ಮನೆಯವರು ಸಮಾಧಾನದ ಉಸಿರುಬಿಟ್ಟರು.

ನಾನು ಐವತ್ತನಾಲ್ಕು ದಿನಗಳ ನಂತರ ಪ್ರತಿ ಹತ್ತು ದಿನಗಳಿಗೊಮ್ಮೆ ವೈದ್ಯರ ಬಳಿ ತಪಾಸಣೆಗೆಂದು ಹೋಗುತ್ತಿದ್ದೆ. ಒಮ್ಮೆ ನಾನು ಡಾ. ಆಮೀರ್ ರವರೊಡನೆ ನನ್ನ ಎದೆಯಲ್ಲಿರುವ ಥೈಮೋಮಾ ಗೆಡ್ಡೆಯ ಬಗ್ಗೆ ಮಾತನಾಡುತ್ತಾ "ಈ ಕ್ಯಾನ್ಸರ್ ಗೆಡ್ಡೆಯನ್ನು ತೆಗೆದುಹಾಕಿದರೆ ನನ್ನ ಮನಸ್ಸಿಗೆ ನೆಮ್ಮದಿ ಬರುತ್ತದೆ" ಎಂದೆ. ಅದಕ್ಕೆ ಅವರು "ಅದರ ಬಗ್ಗೆ ಏಕೆ ಚಿಂತೆ ಮಾಡುತ್ತಿರುವಿರಿ? ಅದು ನಿಮ್ಮೊಡನೆ ಹತ್ತು ವರ್ಷದಿಂದ ಇದೆ. ಇದ್ದ ಹಾಗೆಯೇ ಬಹುಶಃ ಇದೆ. ಈ ಬಗೆಯ ಗೆಡ್ಡೆಗಳು ಇಲ್ಲದೆಯೂ ದೇಹದಲ್ಲಿ ಆ್ಯಂಟಿ ಬಾಡಿಗಳು ಉತ್ಪನ್ನವಾಗುತ್ತವೆ. ಈ ಆ್ಯಂಟಿ ಬಾಡಿಗಳು ಅಗತ್ಯಕ್ಕಿಂತ ಜಾಸ್ತಿಯಾಗಬಾರದು ಅಷ್ಟೆ.

ನಿಮಗಿರುವುದು ಗೆಡ್ಡೆ. ದೇಹದಲ್ಲಿ ಬರಬಹುದಾದ ಗೆಡ್ಡೆಗಳೆಲ್ಲಾ ಕ್ಯಾನ್ಸರ್ ಗೆಡ್ಡೆಗಳಲ್ಲ. ನಿಮಗಿರುವ ಈ ಥೈಮೋಮಾ ಗೆಡ್ಡೆ ಬಿನೈನ್(Benine). ಅದು ದೇಹದ ಇತರ ಭಾಗಗಳಿಗೆ ಹರಡುವುದಿಲ್ಲ. ಅದು ಇದ್ದಲ್ಲಿಯೇ ಇದ್ದು ಬಿಡುತ್ತದೆ. ಕೆಲವೊಮ್ಮೆ ದಪ್ಪಗಾಗುತ್ತದೆ. ನನ್ನ ಪ್ರಕಾರ ಅದು ಕ್ಯಾನ್ಸರ್ ಅಲ್ಲ, ನೀವೂ ಅಷ್ಟೆ. ನನಗೆ ಕ್ಯಾನ್ಸರ್ ಇದೆಯೆಂದು ಹೇಳಬೇಕಾದ ಅವಶ್ಯಕತೆಯಿಲ್ಲ. ನಿಮಗಿರುವುದು ಕ್ಯಾನ್ಸರ್ ಅಲ್ಲ" ಎಂದು ತಿಳಿಸಿ, ನನ್ನನ್ನು ತಮ್ಮ ಸಾಂತ್ವನ ನೋಟದಿಂದ ನೋಡಿದರು.

೭. ಎದೆ ಕರಗಿಸುವ ಆರ್ತನಾದವೂ ಉಗ್ರ ನರಸಿಂಹನ ಘರ್ಜನೆಯೂ

ಅಪೊಲೊ ಆಸ್ಪತ್ರೆಯ ಎಂಐಸಿಯುಗೆ ದಾಖಲಾದ ಮೊದಲ ರಾತ್ರಿ ನನಗೆ ನಿದ್ರೆ ಬರಲಿಲ್ಲ. ಪ್ರಕಾಶಮಾನವಾದ ದಟ್ಟ ಬೆಳಕಿರುತ್ತಿದ್ದುದರಿಂದ ಕಣ್ಣು ಕುಕ್ಕು ವಂತಾಗುತ್ತಿತ್ತು. ಅನೇಕ ಬಾರಿ ಕಣ್ಣು ಮುಚ್ಚಿದರೂ ಬೆಳಕಿನ ತೀವ್ರತೆಯ ಅನುಭವ ಉಂಟಾಗುತ್ತಿತ್ತು. ರಾತ್ರಿ ಯಾಗಿದೆಯೆಂದು ಗೊತ್ತಾಗುತ್ತಿದ್ದುದು ಕೆಲವು ಲಕ್ಷಣಗಳಿಂದ. ಹಗಲು ಹೊತ್ತು ರೋಗಿಗಳನ್ನು ನೋಡಲು ಬಂದು ಹೋಗುವ ವೈದ್ಯರು ಮತ್ತು ಸಂದರ್ಶಕ ರಿರುತ್ತಿದ್ದರು. ಒಟ್ಟಾರೆಯಾಗಿ ಹಗಲಿಗೇ ಇರುವ ಒಂದು ಬಗೆಯ ಎಚ್ಚರದ ಮಿಡಿತಗಳಿರುತ್ತಿದ್ದವು. ರಾತ್ರಿಗೂ ಅದರದೇ ಆದ ಗುಣಸ್ವರೂಪಗಳಿರುತ್ತವೆ. ಸಹಜವಾಗಿ ಒಂದು ಬಗೆಯ ನಿಶ್ಶಬ್ದತೆ ಹಾಗೂ ಮೌನ ಜೀವಿಗಳನ್ನು ಆಕ್ರಮಿಸಿಕೊಂಡು ಬಿಡುತ್ತದೆ. ಅವರು ರಾತ್ರಿ ಹೊತ್ತು ಪ್ರಜ್ಞಾಪೂರ್ವಕವಾಗಿ ಎಚ್ಚರದಿಂದ್ದರೂ ಅವರಲ್ಲಿ ಸಹಜವಾದ ಚುರುಕುತನ ಕಡಿಮೆಯಾಗುತ್ತದೆ. ಅವರ ಕಣ್ಣುಗಳು ಮುಚ್ಚಿಕೊಳ್ಳಲು ಯತ್ನಿಸುತ್ತವೆ. ದೇಹ ಒಂದು ಕಡೆ ಕೂತುಕೊಳ್ಳಲು ಹಾತೊರೆಯುತ್ತದೆ. ಒಟ್ಟಾರೆ ಸುತ್ತಲ ಪರಿಸರವೇ ತುಸು ಜಡತ್ವದ ಕಡೆ ವಾಲುತ್ತದೆ.

ಇದರ ಜೊತೆಗೆ ಈ ಆಸ್ಪತ್ರೆಯ ಐಸಿಯುನಲ್ಲಿ ನಡುರಾತ್ರಿ ಒಂದರಿಂದ ಮೂರರವರೆಗೆ ಕೆಲವು ದೀಪಗಳನ್ನು ಆರಿಸುತ್ತಿದ್ದರು. ಕೆಲವು ಬ್ರದರ್‌ಗಳು ಸಿಸ್ಟರ್‌ಗಳು ಕುರ್ಚಿಗಳಲ್ಲಿ ಕುಳಿತು ತೂಕಡಿಸುತ್ತಿದ್ದರು. ಕೆಲವು ಸಿಸ್ಟರ್‌ಗಳು ಮೂರು ನಾಲ್ಕು ಜನ ಗುಂಪಲ್ಲಿ ಕುಳಿತು ಪಿಸುಮಾತಲ್ಲಿ ಮಾತನಾಡಿಕೊಳ್ಳುತ್ತಿದ್ದರು. ಇವು ಈ

ಐಸಿಯುನ ರಾತ್ರಿಯ ಕೆಲವು ಲಕ್ಷಣಗಳು.

ನನಗೆ ಮೊದಲ ರಾತ್ರಿ ಇರಲಿ ಅಲ್ಲಿರುವ ತನಕ ಇಡೀ ರಾತ್ರಿಯಲ್ಲಿ ಒಂದೆರಡು ತಾಸು ನಿದ್ದೆ ಬಂದಿದ್ದರೆ ಹೆಚ್ಚು! ಅದಕ್ಕೆ ಐಸಿಯುಗೆ ಇರುವ ಒಂದು ಬಗೆಯ ಉಸಿರು ಬಿಗಿಹಿಡಿದಂತಹ ವಾತಾವರಣ ಇರಬಹುದು. ಐಸಿಯುನಲ್ಲಿ ನೀರವ ಮೌನವಿದ್ದುದನ್ನು ನನ್ನ ವಾಸ್ತವ್ಯದ ಅವಧಿಯಲ್ಲಿ ನಾನು ಕಾಣಲಿಲ್ಲ. ಸಾವಿನ ಸಂದರ್ಭಗಳು ಉಂಟಾದಾಗ ಅಲ್ಲಿ ಅತ್ಯಂತ ಚುರುಕಿನ ಚಟುವಟಿಕೆ ಮೂಡಿಬಿಡುತ್ತಿತ್ತು. ಅಲ್ಲಿರುವ ರೋಗಿಗಳೆಲ್ಲರೂ ಹೆಚ್ಚು ಕಡಿಮೆ ಸಾವು ಬದುಕಿನ ನಡುವಿನ ಗಂಭೀರ ಸ್ಥಿತಿಯಲ್ಲೇ ಇರುತ್ತಿದ್ದರು. ಸಾವಿನ ವಿಷಯ ಮಾತನಾಡುವಾಗ ನಾವು ಅಲ್ಲಿ ಎಲ್ಲರೂ ಸಾವು ಸಮೀಪಿಸುತ್ತಿರುವ ವೃದ್ಧರು ಭಾವಿಸುವಂತಿಲ್ಲವಲ್ಲ. ವೃದ್ಧರಿಗಿಂತ ನನ್ನ ಅನುಭವದಲ್ಲಿ ಪ್ರೌಢರೇ ಅಧಿಕವಾಗಿರುತ್ತಿದ್ದರು. ಅಲ್ಲಿ ಮಕ್ಕಳಿಗೇನೂ ಕೊರತೆಯಿರುತ್ತಿರಲಿಲ್ಲ. ತರುಣರು ಕೂಡ ಅಧಿಕ ಸಂಖ್ಯೆಯಲ್ಲಿ ದಾಖಲಾಗುತ್ತಿದ್ದರು. ಈ ರೀತಿಯ ವಿವಿಧ ವಯೋಮಾನದ ರೋಗಿಗಳು ಈ ಐಸಿಯುಗೆ ನಾನಾ ಕಾರಣಗಳಿಂದ ದಾಖಲಾಗುತ್ತಿದ್ದರು. ಅದರ ವಿವರಗಳನ್ನು ಮುಂದಿನ ಅಧ್ಯಾಯಗಳಲ್ಲಿ ವಿವರಿಸುತ್ತೇನೆ.

ಮೊದಲರಾತ್ರಿ ನನ್ನನ್ನು ತೀರಾ ವ್ಯಾಕುಲಗೊಳಿಸಿ ನಿದ್ರೆಯಿಂದ ದೂರ ಮಾಡಿದ್ದು ಒಂದು ಆರ್ತಧ್ವನಿ. ಅದು ನನ್ನ ಕ್ಯಾಬಿನ್‌ನ ಸನಿಹದಲ್ಲೇ ಹೊರಹೊಮ್ಮುತ್ತಿತ್ತು. ಆ ಧ್ವನಿ ಬ್ರದರ್‌ಗಳನ್ನು ಬೇಡುತ್ತಿದ್ದ ವಿಷಯ ನನ್ನನ್ನು ವಿಹ್ವಲಗೊಳಿಸಿತ್ತು. ಆ ಧ್ವನಿಯ ಶಬ್ದ ಸ್ವರೂಪದಿಂದ ಆ ಧ್ವನಿಯ ಒಡೆಯ ಇಪ್ಪತ್ತು ಇಪ್ಪತ್ತೈದರ ತರುಣನಿರಬಹುದೆಂದು ನಾನು ಊಹಿಸಬಲ್ಲವನಾಗಿದ್ದೆ. ಆ ಧ್ವನಿ ತನ್ನ ದೀರ್ಘ ಕಂಚಿನ ಸ್ವರದಿಂದ ಇಡೀ ಐಸಿಯು ಅನ್ನು ಎಚ್ಚರಿಸುವ ಕೆಲಸ ಮಾಡುತ್ತಿತ್ತು. ನಿರಂತರವಾಗಿ ಐದಾರು ಗಂಟೆಗಳ ಕಾಲ ಒಂದೇ ಬೇಡಿಕೆಯನ್ನು ಗಟ್ಟಿ ಸ್ವರದಲ್ಲಿ ಮಂಡಿಸುತ್ತಿದ್ದುದರಿಂದ ಐಸಿಯುನ ಇತರ ಪ್ರಜ್ಞೆಯಿರುವ ರೋಗಿಗಳ ನಿದ್ರೆ ಹರಣವಾಗುತ್ತಿತ್ತು. ಆ ಧ್ವನಿಯ ಏರುಸ್ವರ ದಿನೇ ದಿನೇ ಆರ್ತನಾದವಾಗಿ ದುರ್ಬಲವಾದುದನ್ನು ಕಂಡು ಚಕಿತನಾಗಿದ್ದೇನೆ.

"ನನಗೆ ಊಟಬೇಕು, ಊಟ ಕೊಡ್ರಿ, ಊಟ"

"ಆಗ್ಲೆ ನೀಡಿದೆವಲ್ಲ?"

"ಅದೇನು ಊಟಾನ? ಮನುಷ್ಯರು ತಿನ್ನುವಂಗಿತ್ತಾ?"

"ಸ್ಲೈಟು, ಹಣ್ಣು, ಚಪಾತಿ, ಅನ್ನ, ಪಲ್ಯ, ಮೊಸರು - ಎಲ್ಲಾ ಇತ್ತಲ್ಲ"

"ನನಗೆ ಅದು ಇಷ್ಟವಾಗೋಲ್ಲ, ದಿನಾ ಒಂದೇ ಥರಾ, ನನಗೆ ನಾನ್‌ವೆಜ್ ತರಿಸಿಕೊಡಿ"

"ಆಸ್ಪತ್ರೇಲಿ ನಾನ್ ವೇಜ್ ಸಿಗೋಲ್ಲ. ಅಲ್ಲದೆ ಅದನ್ನು ನೀನು ತಿನ್ನುವಂತಿಲ್ಲ."

"ಯಾಕೆ ತಿನ್ನಬಾರದು? ನಮ್ಮಪ್ಪನ್ಗೆ ಹೇಳಿ ತಂದ್ಕೊಡ್ತಾರೆ"

ಈ ಬೇಡಿಕೆಯೆಲ್ಲಾ ಆ ಧ್ವನಿಯದು. ಉತ್ತರ ಬ್ರದರ್ ನೀಡುತ್ತಿದ್ದುದು. ಬ್ರದರ್ ಅವನು ಕೇಳಿದಾಗಲೆಲ್ಲಾ ತಂದು ಕೊಡಲು ಸಾಧ್ಯವಿರಲಿಲ್ಲ. ಇಲ್ಲಿ ಊಟ, ಹಾಲು, ಗಂಜಿ - ಎಲ್ಲವೂ ಸಮಯಬದ್ಧ! ಈ ಸಮಯ ಬದ್ಧತೆಯಲ್ಲಿ ಆರೋಗ್ಯ ಕಾಪಾಡುವ ವೈದ್ಯಕೀಯ ಕಾಳಜಿ ಇರುತ್ತಿತ್ತು. ಆದರೆ ಆ ಧ್ವನಿ ಅವರ ಮಾತನ್ನು ಕೇಳಬೇಕಲ್ಲ? ಆ ಧ್ವನಿಯದು ಒಂದೇ ಸಮನೆ ಊಟದ ಬೇಡಿಕೆ!

ನನಗೆ ಒಂದೆರಡು ದಿನಗಳಲ್ಲೇ ಬ್ರದರ್‌ಗಳು ಅವನ ಹೆಸರ್ಹಿಡಿದು ಕರೆಯುತ್ತಿದ್ದನ್ನು ಗ್ರಹಿಸಿ ಅವನ ಹೆಸರು ಅನಿಲ್ ಎಂದು ತಿಳಿಯಿತು. ಬ್ರದರ್‌ಗಳ ಮಾತುಕತೆಗಳು ಮತ್ತು ಅನಿಲನ ಸ್ವಗತಗಳಿಂದ ಅವನು ಮಾದಕ ಔಷಧಿಗಳ ವ್ಯಸನಿಯೆಂದು ತಿಳಿಯಿತು. ಅತಿಯಾದ ಸೇವನೆಯಿಂದ ಅವನ ದೇಹಸ್ಥಿತಿ ಗಂಭೀರ ನೆಲೆಗೆ ಬಂದುದರಿಂದ ಈಗ ಈ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದ. ಬ್ರದರ್‌ಗಳು ಅವನ ಬೇಡಿಕೆಯನ್ನು ನಿರ್ಲಕ್ಷ್ಯ ಮಾಡಿದಾಗ ಅವನ ಅಳು ಮತ್ತು ಕೂಗುವಿಕೆ ಮತ್ತೊಂದು ಸ್ವರೂಪವನ್ನು ಪಡೆಯುತ್ತಿತ್ತು. ಅವನ ಬೇಡಿಕೆಯು ತನ್ನ ಹಕ್ಕೊತ್ತಾಯ ಸ್ಥಿತಿಯನ್ನು ಕಳೆದುಕೊಂಡು ದೀನತೆಯ ಮಟ್ಟಕ್ಕೆ ಮುಟ್ಟುತ್ತಿತ್ತು.

"ಅಣ್ಣ, ದೀಪಕಣ್ಣ, ನನಗೆ ನೀರು ಕೊಡಣ್ಣ"

"ನೀನು ಗಲಾಟೆ ಮಾಡುವುದಿಲ್ಲವೆಂದು ಮಾತು ಕೊಟ್ಟರೆ ನೀರು ಕೊಡುತ್ತೇನೆ"

"ನಮ್ಮ ತಾಯಾಣೆಗೂ ಗಲಾಟೆ ಮಾಡೋಲ್ಲ, ನೀರು ಕೊಡಣ್ಣ". ಬ್ರದರ್ ನೀರು ನೀಡುತ್ತಾನೆ. ಅನಿಲ್‌ನ ಧ್ವನಿ ಒಂದೈದು ನಿಮಿಷ ಸುಮ್ಮನಿರುತ್ತದೆ. ಅನಂತರ ಅದು ಬೇರೆ ಬೇಡಿಕೆಯಾಗಿ ಹೊರಹೊಮ್ಮುತ್ತದೆ.

"ನನ್ನ ಕೈಕಾಲುಗಳನ್ನು ಬಿಚ್ಚಿ ರಜತಣ್ಣ. ನಿನ್ನ ಕಾಲು ಮುಟ್ಟಿ ನಮಸ್ಕಾರ ಮಾಡುತ್ತೇನೆ ರಜತಣ್ಣ, ನನ್ನ ಕೈಕಾಲುಗಳನ್ನು ಬಿಚ್ಚಿ".

"ಅದು ಮಾತ್ರ ಆಗೋಲ್ಲ ಅನಿಲ. ಸುಮ್ಮನೆ ಮಲಗಿಕೋ. ನಿನ್ನೆ ನೀನು ಕೇಳಿದೆಯೆಂದು ನಾನು ಕಟ್ಟು ಬಿಚ್ಚಿದುದಕ್ಕೆ ನೀನು ಮಾಡಿದ್ದೇನು? ಐವಿಲೈನ್ ಕಿತ್ತು ಹಾಕಿದೆ? ಮಂಚದ ಮೇಲಿಂದ ಕೆಳಕ್ಕೆ ಬಿದ್ದೆ. ನಮಗೆ ಡಾಕ್ಟರ್ ಬಯ್ಯುತ್ತಾರೆ. ಆದ್ದರಿಂದ ನಿನ್ನ ಕಟ್ಟುಗಳನ್ನು ಬಿಚ್ಚಲು ಸಾಧ್ಯವಿಲ್ಲ."

ಅನಿಲ ಹತಾಶನಾಗುತ್ತಾನೆ. ಅವನ ಕಿರುಚಾಟ ಅಧಿಕವಾಗುತ್ತದೆ.

"ನನಗೆ ಹಸಿವು. ಹೊಟ್ಟೆ ಹಸಿವು. ಚಿಕ್ಕಪ್ಪಾ ನನಗೆ ಊಟ ಬೇಕು, ಚಿಕ್ಕಮ್ಮ ನನಗೆ ಊಟ ಬೇಕು, ಇವರು ನನಗೆ ಊಟ ಕೊಡೋಲ್ಲ, ನನಗೆ ಹಸಿವಾಗ್ತಿದೆ,

ನಾನು ಸತ್ತೋಗ್ತೀನಿ, ಹಸಿವು, ಹಸಿವು, ರಜತಣ್ಣ ನನಗೆ ನೀರು ಬೇಕು, ನೀರು, ನೀರು".

ಅನಿಲ ತನ್ನ ರೋದನದಲ್ಲಿ ತನ್ನ ನೆಂಟರಿಷ್ಟರನ್ನೆಲ್ಲಾ ಕರೆಯುತ್ತಿದ್ದ. ಬಂಧು ಬಳಗ ಎಲ್ಲರನ್ನೂ ಅವನು ತನ್ನ ಹಸಿವನ್ನು ನೀಗಿಸಿರೆಂದು ಮೊರೆಯಿಡುತ್ತಿದ್ದ. ಆರಂಭದಲ್ಲಿ ಬ್ರದರ್‌ಗಳನ್ನು ಜಬರ್‌ದಸ್ತಿನಿಂದ ಊಟ ನೀಡಿರೆಂದು ಒತ್ತಾಯ ಮಾಡುತ್ತಿದವನು ಕೊನೆ ಕೊನೆಗೆ ಅಳುತ್ತಾ ನೀರು ಊಟಗಳಿಗೆ ಮೊರೆಯಿಡುತ್ತಿದ್ದನು.

"ಇಲ್ಲಿಗೆ ಎಲ್ಲರ ಅಮ್ಮಂದಿರೂ ಬರುತ್ತಾರೆ. ನನ್ನ ಮಮ್ಮಿ ಯಾಕೆ ಬಂದಿಲ್ಲ, ರಜತಣ್ಣ?"

"ಬೆಳಿಗ್ಗೆ ಬರ್‍ತಾರೆ, ಅನಿಲ, ಈಗ ಸುಮ್ಮನೆ ಮಲಗಿಕೋ"

"ಬೆಳಿಗ್ಗೆ ಗ್ಯಾರಂಟಿ ಬರ್‍ತಾರ? ನಿನ್ನೇನು ಹೀಗೆ ಹೇಳಿದ್ದೆ. ಇವತ್ತು ಮಮ್ಮಿ ಬರಲೇ ಇಲ್ಲ. ನಾಳೆ ಬರ್‍ತಾರ?"

"ನಿಮ್ಮ ತಂದೆ ಹೇಳಿದ್ದಾರೆ ಅನಿಲ. ನಿಮ್ಮ ಮಮ್ಮಿ ನಾಳೆ ಬರ್‍ತಾರಂತೆ, ನೋಡು. ನೀನು ಕಿರುಚೋದ್ರಿಂದ ಬೇರೆ ಪೇಶೆಂಟ್‌ಗಳಿಗೆ ತೊಂದರೆಯಾಗ್ತಿದೆ. ಅವರು ಮಲಗಬಾರದ?"

"ಆಯ್ತು, ಸುಮ್ಮನಿರ್‍ತೀನಿ. ನನಗೆ ನೀರು ಬೇಕು ನೀರು ಕೊಡು"

"ಯಾವಾಗಲೂ ಹಂಗೇ ಕೇಳ್ತೀಯಾ ಅನಿಲ. ನೀರು ಕುಡಿದ ಮೇಲೆ ಮತ್ತೆ ಗಲಾಟೆ ಪ್ರಾರಂಭ ಮಾಡ್ತೀಯ. ಜೊತೆಗೆ ಪದೆ ಪದೆ ಒಂದಕ್ಕೆ ಹೋಗ್ಬೇಕು ಅಂತೀಯಾ."

ಇಡೀ ರಾತ್ರಿ ಇದೇ ರೀತಿಯಲ್ಲಿ ಅನಿಲನ ಬೇಡಿಕೆಯ ಆರ್ತಧ್ವನಿ ಮತ್ತು ಬ್ರದರ್ ರಜತ್‌ನ ಸಮಾಧಾನ ಮುಂದುವರಿಯುತ್ತಿತ್ತು. ಬೆಳಕಿನ ಜಾವದ ಹೊತ್ತಿಗೆ ಅನಿಲನಿಗೆ ಸುಸ್ತಾಗಿ ಮಲಗುತ್ತಿದ್ದ.

ಒಂದು ದಿನ ಅವನ ತಂದೆ ಅವನನ್ನು ನೋಡಲು ಬಂದರು. ಅವರ ಮಾತು ಕತೆಯಿಂದ ಅವರು ಅವನ ತಂದೆಯೆಂದು ನನಗೆ ಮನವರಿಕೆಯಾಯಿತು. ಅವರದು ಮೃದುವಾದ ಧ್ವನಿ. ಸಾಂತ್ವನ ಹೇಳುವ ರೀತಿಯೂ ಮನ ಕರಗಿಸುವಂತಿತ್ತು. ಈ ಮಗ ಅವರಿಗೆ ಸಾಕಷ್ಟು ಮಾನಸಿಕ ನೋವು ನೀಡಿರುವುದು ಅವನ ಇಂದಿನ ಸ್ಥಿತಿಯೇ ಹೇಳುತ್ತಿತ್ತು. ಅನಿಲನಲ್ಲಿ ಈಗ ಮೊದಲ ಆರ್ಭಟವೂ ಇರಲಿಲ್ಲ. ಐಸಿಯು ಅವನನ್ನು ಸಾಕಷ್ಟು ದುರ್ಬಲಗೊಳಿಸಿತ್ತು.

"ಡ್ಯಾಡೀ ನನಗೆ ಮನೆ ಊಟ ಬೇಕು"

"ಐಸಿಯುನಿಂದ ವಾರ್ಡ್‌ಗೆ ಶಿಫ್ಟ್ ಆದ ನಂತರ ತಂದು ಕೊಡುತ್ತೇನೆ, ಈಗ ಇವರು ನೀಡುವುದನ್ನು ಉಣ್ಣು"

"ಡ್ಯಾಡೀ, ಮಮ್ಮಿ ಯಾಕೆ ನನ್ನನ್ನು ನೋಡಲು ಬರ್ತಿಲ್ಲ"

"ಕೆಲಸಕ್ಕೆ ಹೋಗಬಾರದೆ? ಶನಿವಾರ ಬರ್ತ್ತಾಳೆ. ಭಾನುವಾರ ನಿನ್ನನ್ನು ಬಂದು ನೋಡ್ತಾಳೆ"

"ಡ್ಯಾಡೀ ನಾನು ತುಂಬಾ ಕೆಟ್ಟವನು ಅಲ್ಲವೇ? ನಾನು ನಿಮಗೆ, ಮಮ್ಮಿಗೆ, ಅಣ್ಣನಿಗೆ ತುಂಬಾ ನೋವು ಕೊಟ್‌ಬುಟ್ಟೆ"

"ಅಳಬೇಡ ಅನಿಲ. ಎಲ್ಲಾ ಸರಿ ಹೋಗುತ್ತದೆ - ನೀನು ಹಳೇ ಚಾಳಿನ್ನೆಲ್ಲಾ ಬಿಡಬೇಕು. ಒಳ್ಳೆಯವನಾಗಬೇಕು"

"ಇನ್ಮುಂದೆ ಹಂಗೆಲ್ಲಾ ಮಾಡಲ್ಲ ಡ್ಯಾಡೀ. ಮಮ್ಮಿಗೆ ಬಯ್ಯಲ್ಲ, ಹೊಡೆಯೋಲ್ಲ" - ನೋವು ತುಂಬಿದ ಒಳಗಿನ ಧ್ವನಿ.

"ಅನಿಲ, ನಾವು ಇಷ್ಟೆಲ್ಲಾ ಕಷ್ಟಪಡ್ತಿರೋದು ಯಾರಿಗೋಸ್ಕರ ಹೇಳು? ಮಕ್ಕಳು ನಿಮಗೋಸ್ಕರ ಅಲ್ಲವೆ? ನೀವು ಓದಿ ಬುದ್ಧಿವಂತರಾಗಿ ನಿಮ್ಮ ಕಾಲಮೇಲೆ ನೀವು ನಿಂತರೆ ನಮಗೆ ನೆಮ್ಮದಿ ಅಲ್ಲವೆ? ನೋಡು, ನಿನ್ನಿಂದ ಎಲ್ಲರಿಗೂ ಬೇಸರವಾಗಿದೆ".

"ಇನ್ಮೇಲೆ ಹಂಗೆಲ್ಲಾ ಮಾಡಲ್ಲ, ಒಳ್ಳೆಯವನಾಗ್ತೇನೆ"

"ನಮಗೂ ವಯಸ್ಸಾಗ್ತಿದೆ. ನಮ್ಮನ್ನು ನೀವೇ ತಾನೇ ನೋಡ್ಕೋಬೇಕಾದೋರು. ನಾವು ಮಾಡಿರೋದೆಲ್ಲಾ ಯಾರಿಗೆ? ನಿಮಗೆ ತಾನೆ?"

"ಇಲ್ಲ ಡ್ಯಾಡೀ, ಇನ್ಮುಂದೆ ಹಿಂಗೆಲ್ಲಾ ಮಾಡಲ್ಲ. ನಾನು ಒಳ್ಳೆಯವನಾಗ್ತೀನಿ. ನಿಮ್ಮನ್ನು ಮಮ್ಮಿಯನ್ನು ಚೆನ್ನಾಗಿ ನೋಡ್ಕೋತ್ತೀನಿ" - ಅನಿಲನ ಭರವಸೆಯ ಮಾತುಗಳು.

ಮಗನ ಮಾತುಗಳನ್ನು ಕೇಳಿ ಅನಿಲನ ತಂದೆಯ ಕಣ್ಣಲ್ಲಿ ಒಂದೆರಡು ಹನಿ ನೀರು ಬಂದಿರಬೇಕು.

ಹೀಗಿರಲೊಂದು ದಿನ ಬೆಳಿಗ್ಗೆ ನನ್ನನ್ನು ನೋಡಲು ಬಂದ ನನ್ನ ಮಕ್ಕಳು "ನಾವು ಕುಳಿತುಕೊಳ್ಳುವ ವಿಸಿಟರ್ಸ್ ಜಾಗದಲ್ಲಿ ಸಿಕ್ಕಾಪಟ್ಟೆ ಜನ ಇದ್ದಾರೆ. ಬಹುಪಾಲು ಎಲ್ಲರೂ ಗ್ರಾಮೀಣ ಪ್ರದೇಶದವರು. ತುಂಬಾ ಗಲಾಟೆ ಮಾಡ್ತಾರಪ್ಪ. ಅವರ ಕಡೆಯವರಲ್ಲೊಬ್ಬ ರಾತ್ರಿ ಈ ಎಂಐಸಿಯುಗೆ ದಾಖಲಾಗಿದ್ದಾನೆ. ಬಹುಶಃ ಮರಿ ರಾಜಕಾರಣಿ ಇರಬೇಕು" ಎಂದರು. ರಾತ್ರಿ ಯಾರೋ ಹೊಸ ಪೇಶೆಂಟ್ ದಾಖಲಾಗಿರಬೇಕು. ಒಂದು ದಿನಕ್ಕೆ ನಾಲ್ಕೈದು ಜನ ಬಂದು ಸೇರುತ್ತಿದ್ದರು. ಅದೇ ರೀತಿ ನಾಲ್ಕೈದು ಜನ ಆರೋಗ್ಯ ಸುಧಾರಣೆಯಾಗಿ ವಾರ್ಡುಗಳಿಗೋ ಅಥವಾ ಚಿಕಿತ್ಸೆ ಫಲಕಾರಿಯಾಗದೆ ಮೃತರಾಗಿಯೋ ಹೊರ ಹೋಗುತ್ತಾರೆ. ರಾತ್ರಿ ಬಂದು ದಾಖಲಾಗಿರುವ ಹೊಸ ರೋಗಿ ಯಾರೆಂದು ನನಗೆ ಆ ತಕ್ಷಣ ಗೊತ್ತಾಗಲಿಲ್ಲ. ಇಪ್ಪತ್ತು

ಕ್ಯಾಬಿನ್‌ನಲ್ಲಿರುವ ಇಪ್ಪತ್ತು ಬೆಡ್‌ಗಳಲ್ಲಿ ರೋಗಿಗಳು ಸದಾ ಬಂದು ಹೋಗುತ್ತಿದ್ದರು. ಬಹುಪಾಲು ಈ ಎಂಐಸಿಯುಗೆ ದಾಖಲಾಗುವ ರೋಗಿಗಳಿಗೆ ದಾಖಲಾಗುವ ಸಮಯದಲ್ಲಿ ಪ್ರಜ್ಞೆ ಇರುವುದಿಲ್ಲ. ಅದರಲ್ಲೂ ಅಪಘಾತದಲ್ಲಿ ಗಂಭೀರ ಸ್ವರೂಪದ ಗಾಯಗಳಾಗಿರುವವರಿಗೆ ಅರವಳಿಕೆ ನೀಡಿರುವುದರಿಂದ ಅವರು ನಿದ್ರೆಯಲ್ಲಿ ಅಥವಾ ಗಾಢ ಮಂಪರಿನಲ್ಲಿರುತ್ತಾರೆ. ನನ್ನ ಮಗ ಮುಂದುವರಿದು "ರಾತ್ರಿ ಕಾರಿನಲ್ಲಿ ಬರುವಾಗ ಎದುರಿಗೆ ಬರುತ್ತಿದ್ದ ಲಾರಿಗೆ ಡಿಕ್ಕಿ ಹೊಡೆದಿದ್ದಾರೆ. ಕಾರಿನಲ್ಲಿದ್ದ ಎಲ್ಲರಿಗೂ ಪೆಟ್ಟಾಗಿದೆ. ಈತನಿಗೆ ತೀವ್ರತರವಾದ ಗಾಯಗಳಾಗಿರುವುದರಿಂದ ಇಲ್ಲಿಗೆ ದಾಖಲಾಗಿದ್ದಾನೆ. ಈ ಸುದ್ದಿ 'ಆಂದೋಲನ'ದಲ್ಲಿಯೂ ಬಂದಿದೆ" ಎಂದನು.

ಈ ಮರಿ ರಾಜಕಾರಣಿಯ ಹೆಸರು ಸಿದ್ಧರಾಜು ಅಂತ. ಈತ ಇಲ್ಲಿರುವಷ್ಟು ದಿನ ಹಗಲಿನಲ್ಲಿ ಸದ್ದಿಲ್ಲದೆ ಇರುತ್ತಿದ್ದ. ರಾತ್ರಿಯ ಹೊತ್ತು ಅವನು ಮಾತಿನ ಪ್ರತಾಪ ತೋರುತ್ತಿದ್ದ. ಅವನದು ಗಡುಸಾದ ಧ್ವನಿ. ಯಾವುದೇ ಮೈಕಿನ ನೆರವಿಲ್ಲದೆ ಅವನ ಧ್ವನಿಗೆ ಬಯಲಿನಲ್ಲಿರುವ ನೂರಾರು ಜನರನ್ನು ತಲುಪುವ ಶಕ್ತಿಯಿತ್ತು. ಅವನ ರಾತ್ರಿ ಹೊತ್ತಿನ ಆರ್ಭಟದ ಮಾತುಗಳಲ್ಲಿ ಅವನೊಬ್ಬ ತಾಲ್ಲೂಕು ಪಂಚಾಯಿತಿಯ ಮಾಜಿ ಸದಸ್ಯನೆಂದು ತಿಳಿದು ಬಂತು. ಈಗಿನ ಸಂಸದರಿಗೂ ಶಾಸಕರಿಗೂ ಹತ್ತಿರ ದಲ್ಲಿರುವಂತೆ ಕಂಡಿತು. ಅವನು ಮೂಲತಃ ಬೇಸಾಯಗಾರನಾದರೂ ಅದನ್ನು ಅವನು ಮಾಡುತ್ತಿರಲಿಲ್ಲ. ಬಹುಬೇಗ ಹಣ ಮಾಡುವ ಮರಳು ಸಾಗಿಸಿ ಮಾರಾಟ ಮಾಡುವ ಅಕ್ರಮ ದಂಧೆಯಲ್ಲಿ ತೊಡಗಿಸಿಕೊಂಡಿದ್ದನು. ನದಿಯಲ್ಲಿ ಸುಲಭವಾಗಿ ಮರಳು ತೆಗೆದು ಮಾರಾಟದ ಹತೋಟಿ ಇಲ್ಲದ ಮರಳುಗಾರಿಕೆಯ ಮೇಲೆ ಸರ್ಕಾರ ಈಗ ನಿಯಂತ್ರಣವೇರಿತ್ತು. ಮೈಸೂರಿಗೆ ಹೊಸದಾಗಿ ಬಂದಿರುವ ಡಿಸಿ ಕಾನೂನನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದುದರಿಂದ ಅಕ್ರಮ ಮರಳುಗಾರಿಕೆಯ ದಂಧೆಯು ಕಾವೇರಿ ನದಿ ತೀರದಲ್ಲಿ ಗುಪ್ತವಾಗಿ ಆದರೆ ಬಿರುಸಾಗಿ ನಡೆಯುತ್ತಿತ್ತು. ತೀವ್ರ ಭರದಲ್ಲಿ ನಗರಗಳಲ್ಲಿ ನಿರ್ಮಾಣಗೊಳ್ಳುತ್ತಿರುವ ಕಟ್ಟಡಗಳಿಗೆ ಸಮಯಕ್ಕೆ ಸರಿಯಾಗಿ ಮರಳು ಸಿಗುತ್ತಿರಲಿಲ್ಲವಾಗಿ, ಅಕ್ರಮ ದಂಧೆಗೆ ಒಳ್ಳೆಯ ಬೇಡಿಕೆಯಿತ್ತು. ಒಂದಕ್ಕೆ ಎರಡು ಬೆಲೆ ಸಿಗುತ್ತಿತ್ತು. ಹೀಗೆ ಅಕ್ರಮ ಮರಳುಗಾರಿಕೆ ದಂಧೆ ಮಾಡುವವರಿಗೆ ರಾಜಕಾರಣಿಗಳ ಆಶೀರ್ವಾದ ಇತ್ತು. ಏಕೆಂದರೆ ಚುನಾವಣಾ ಸಂದರ್ಭದಲ್ಲಿ ಇಂಥವರಿಂದ ಅವರಿಗೆ ಗಂಟು ಗಂಟು ಚುನಾವಣಾ ಫಂಡು ದೊರಕುತ್ತಿತ್ತು. ಮೊನ್ನೆ ರಾತ್ರಿ ಸಿದ್ಧರಾಜನ ಮರಳು ಲಾರಿಯನ್ನು ಪೊಲೀಸರು ಹಿಡಿದಿದ್ದಾರೆಂದು ಸುದ್ದಿ ಬಂದಾಗ ಸಿದ್ಧರಾಜ ಗೆಳೆಯರೊಡನೆ ಕಾರಿನಲ್ಲಿ ಹೋಗುವಾಗ ಎದುರಿಗೆ ಬರುತ್ತಿದ್ದ ಕಲ್ಲು ತುಂಬಿದ ಲಾರಿಗೆ ಡಿಕ್ಕಿ ಹೊಡೆದಿದ್ದರು.

ಸಿದ್ಧರಾಜನಿಗೆ ಏಕ ಕಾಲದಲ್ಲಿ ಜಾಗೃತ ಪ್ರಜ್ಞೆ ಮತ್ತು ಸುಪ್ತ ಪ್ರಜ್ಞೆಗಳು ಕೆಲಸ ಮಾಡುತ್ತಿದ್ದವು. ಅವನು ಬ್ರದರ್‌ಗಳ ಜೊತೆ ಮಾತನಾಡುತ್ತಿದ್ದನು, ಜೊತೆ ಜೊತೆಯಲ್ಲೇ ತನ್ನ ಪರಿಸರದ ಒಡನಾಡಿಗಳ ಜೊತೆ ಮತ್ತು ತನ್ನ ಪತ್ನಿಯ ಜೊತೆ ವ್ಯವಹರಿಸುತ್ತಿರುವ ಹಾಗೆ ಮಾತನಾಡುತ್ತಿದ್ದನು. ಅನೇಕ ಸಂದರ್ಭಗಳಲ್ಲಿ ಜಾಗೃತ ಮತ್ತು ಸುಪ್ತ ಪ್ರಜ್ಞೆಗಳು ಒಂದಕ್ಕೊಂದು ಬೆರೆತು ಕೇಳುಗರಿಗೆ ಗೊಂದಲವನ್ನುಂಟು ಮಾಡುತ್ತಿದ್ದವು. ಅವನು ಸುಪ್ತಾವಸ್ಥೆಯಲ್ಲಿ ಮಾತನಾಡುತ್ತಿದ್ದ ಮಾತುಗಳು ಅವನ ಕಾಳ ದಂಧೆಯ ಅನೇಕ ಸತ್ಯಗಳನ್ನು ಬಯಲು ಮಾಡುತ್ತಿದ್ದವು. ಬಹುಶಃ ಅವನು ಈ ಸ್ಥಿತಿಯಲ್ಲಿರದೆ ಜಾಗೃತಾವಸ್ಥೆಯಲ್ಲಿರುತ್ತಿದ್ದರೆ ಬಹಿರಂಗವಾಗಿ ಅವನು ಮಾತನಾಡಲು ಸಾಧ್ಯವೇ ಆಗುತ್ತಿರಲಿಲ್ಲ. ಅವನ ಕೆಲವು ಡೈಲಾಗುಗಳನ್ನು ಮುಂದೆ ಕಾಣಿಸಿದ್ದೇನೆ.

"ನಾನು ಬೇಡ ಅಂದೆ, ನೀನ್ ಕೇಳಲಿಲ್ಲ. ಬಡ್ಡೀ ಮಗ ಅದೆಂಥಾ ಟೀ ಕೊಟ್ಟನೋ. ನನಗೆ ಅವಾಗನಿಂದ ತಲೆನೋವು, ಹೊಟ್ಟೆ ಬೇರೆ ತೊಳಿಸ್ತಾ ಅದೆ". "ಏಯ್ ಬ್ರದರ್, ಯಾಕ್ಲ ನನ್ನ ಕೈ ಕಟ್ಟಿ ಹಾಕಿದ್ದೀಯಾ? ಬಿಡಿಸ್ಲಾ, ಬಿಡಿಸ್ದೆ ಹೋದರೆ ಎದ್ದು ಬಂದು ಎದೆಗೆ ಒದೀತೀನ್ ನೋಡು".

"ಈ ತಿಂಗಳಲ್ಲಿ ಒಟ್ಟು ಇಪ್ಪತ್ತೆರಡು ಲೋಡ್ ಬುಟ್ಟಿದೀನಿ. ಒಳ್ಳೇ ಬಿಸಿನೆಸ್ಸು. ಬಡ್ಡೀಮಕ್ಳು ಪೋಲೀಸ್ನೋರಿಗೆ ಎಷ್ಟು ಕೊಟ್ಟರೂ ತೃಪ್ತಿ ಇಲ್ಲ. ರಾಜಕಾರಣದಲ್ಲಿರೋ ನಮಗೇ ಹಿಂಗಾಡಿಸ್ತಾರೆ. ಇಲ್ದಿದ್ದರೆ ಹೆಂಗೆ?"

"ಲೇ ಬ್ರದರ್, ಬಿಚ್ಲಾ ಕೈನಾ. ಹೇಳೋದು ಕೇಳಿಸಲ್ಲವೆ? ಮಕ್ಳ ಹೊರಗೆ ಹೋದ ಮೇಲೆ ನಿಮಗೆಲ್ಲಾ ಮಾಡಿಸ್ತೀನಿ ತಾಳಿ"

"ನೋಡು ಬೆಳಿಗ್ಗೆ ಬೆಳಿಗ್ಗೇನೆ ನಂಗೆ ಟೀ ಆಗಲ್ಲ ಅಂದೆ. ಅವನು ಕೇಳಲಿಲ್ಲ. ವಸಿ ಕುಡಿಯಣ್ಣ ಅಂತಾ ಬಲವಂತ ಮಾಡ್ದ. ಕುಡೀದೆ ಹೋದ್ರೆ ರಾತ್ರಿಗೆ ಲೋಡ್‌ಗೆ ಆಳು ಕಳಿಸ್ದೆ ಹೋದ್ರೆ ಅಂತ ಒಂದು ಚೂರು ಕುಡಿದೆ. ಬಡ್ಡಿ ಮಗಂದು ವಾಂತಿ ಬತ್ತಾ ಅದೆ."

"ಯಾಕ್ಲ ಹಂಗೆ ನಿಂತಿದ್ದೀಯಾ? ಕಿವಿ ಕೇಳಿಸಲ್ವೆ? ನಾನು ಎಂಪಿ ಸಾಹೇಬ್ರಿಗೆ ಹೇಳಿ ನಿಮಗೆಲ್ಲಾ ಸರಿಯಾಗಿ ಮಾಡಿಸ್ತೀನಿ"

"ನನಗೆ ಬೆಳಿಗ್ಗೆ ಎದ್ದು ಹೊಟ್ಟೇಗೇನಾದರೂ ತಿಂದು, ಒಂದು ಕ್ವಾಟರ್ರು ಹಾಕಿದ್ದರೆ ಈ ತಲೆನೋವು ಇರ್ತಿರಲಿಲ್ಲ. ಹಾಳಾದ್ದು ಟೀ ಕುಡಿದು ಹಾಳಾದೆ"

"ಏಯ್ ಬ್ರದರ್, ಎಲ್ಲೋಗಿದ್ದ್ಲ. ನೀರ್ ಕೊಡು ಅಂತ ಹೇಳಿದ್ದು ಕೇಳಿಸ್ಲಿಲ್ಲವೆ? ಬೇಗ ತಕೋ ಬಾರ್ಲ".

"ಹಾಕ್ಲ ಕಾರ್ಡ್. ಪಾಯಿಂಟ್‌ಗೆ ಹತ್ತು ರೂಪಾಯಿ. ಲೇ ಇವಳೇ, ಎಲ್ಲರಿಗೂ ಬಜ್ಜಿ ಮಾಡ್ಕೊಬಾರಮ್ಮಿ"

"ಏನಮ್ಮಿ ನಿನ್ನ ಗೊಣಗಾಟ? ಬಾಯ್ಮುಚ್ಚುಕೊಂಡು ನೀರ್ ತಕ್ಕೊಂಡು ಬಾ. ನಿನಗೇನು ಕಡಿಮೆ ಮಾಡಿದ್ದೇನು? ತಂದು ತಂದು ಹಾಕೊಲ್ವೆ? ಕೇಳ್ ಕೇಳ್ದಂಗೆ ಸೀರೆ ಒಡವೆ ಬ್ಯಾರೆ. ಮಾಡಾಕೇನು ದಾಡಿ ನಿಂಗೆ?"

"ಹಂಗೇನೆ ನಾನು. ನಾನು ಹೊರಗೋಗಿ ಇಸ್ಪೀಟು ಆಡೋಲ್ಲ. ಮನೇಲೆ ಆಡೋದು. ನಿಂದೇನು? ನನ್ನಿಷ್ಟ. ನಾನು ಹೇಳ್ದಷ್ಟು ಮಾಡ್ಕೊಂಡ್ ಹೋಗು"

"ಲೇ ಬ್ರದರ್, ಎಲ್ಲಾ? ನಾನಾಗ್ಲೆ ಹೇಳೀದೀನಿ. ನೀನು ಕೊಡೋ ದರಿದ್ರಾನ ನಾನು ತಿನ್ನಲ್ಲ. ದುಡ್ಡು ಕೊಡ್ತೀನಿ ಬಿರ್ಯಾನಿ ತರಿಸ್ಕೊಡು ಅಂತಾ ಹೇಳಿಲ್ಲವೆ? ಎಲ್ಲಾ ಬಿರ್ಯಾನಿ? ಗರುಡಗಂಬ ನಿಂತಂಗೆ ನಿಂತಿದ್ದಿಯಲ್ಲ"

"ಏನೇ ಅದು ನಿಂದು? ಮಕ್ಕಳು ನಮ್ಮನ್ನೋಡಿ ಹಾಳಾಯ್ತುವ? ಅಯ್ಯೋ ಬಡ್ಡೀದೆ, ಹಾಳಾಗದೊ ಉದ್ದಾರ ಆಗೋದು ಎಲ್ಲ ಆಗ್ಲೆ ಭಗವಂತ ಬರೆದು ಕಳಿಸವ್ನೆ. ಅವ್ಕೆ ಊಟ ಹಾಕಿ ಆ ಕಡೆ ರೂಮ್ನಲ್ಲಿ ಮಲಗಿಸು. ನೀನು ಅಲ್ಲೇ ಬಿದ್ಕೋ. ಆಃ ಬಿದ್ಕೋಳಕ್ಮುಂಚೆ ನನ್ನ ಬ್ಯಾಗಲ್ಲಿ ಚಿಪ್ಸ್, ಬಾಟಲ್ ಅವೆ, ಅವ್ನ ತಂದು ಇಲ್ಲಿ ಇಡು. ಹಂಗೆ ನೀರು, ಲೋಟ"

"ಲೇ ಗೊಣಗಬೇಡ. ನನ್ನ ಜೋತೇಲಿ ಇರೋಕಿಷ್ಟ ಇಲ್ದಿದ್ರೆ ಮಕ್ಕಳ್ನ ಕರ್ಕೊಂಡು ನಿಮ್ಮಪ್ಪನ ಮನೇಗೆ ಹೋಗು. ನಂಗೊತ್ತು ಬದುಕೋದು ಹ್ಯಾಗಂತ"

"ಏನ್ಲ ಅದು ಬ್ರದರ್, ಬಾಯಿಗೆ ಉಯ್ತ ಇದೀಯಲ್ಲ? ನನ್ನ ನಾಲಿಗೆ ಎಕ್ಕುಟ್ಕೋಯ್ತು?"

"ಅವಳ್ದಾಯ್ತು, ನಿಂದೇನವ್ವ. ಒಂದ್ಕಡೆ ಮೂಲೇಲಿ ಬಿದ್ಕೋಳೋಕೆ ಆಗಲ್ವೆ? ಹೌದು, ನಾನು ಮನೇಲೆ ಇಸ್ಪೀಟ್ ಆಡೋದು? ಏನೀಗ? ನಿನಗೆ ಇಷ್ಟ ಇದ್ರೆ ಇರು, ಇಲ್ದಿದ್ರೆ ನಿನ್ನ ಮೊದಲ ಮಗನ ಮನೆಗೆ ಹೋಗು".

"ಏನ್ಲಾ, ಅವಾಗ್ನಿಂದ ನೋಡ್ತಾ ಇದೀನಿ ಈ ತೋಳ್ ತಪ್ಪಿದರೆ ಆ ತೋಳು, ಆ ತೋಳ್ ತಪ್ಪಿದರೆ ಈ ತೋಳು, ಒಂದೇ ಸಮನೆ ಚುಚ್ತಾ ಇದೀಯ. ನೋವಾಗುತ್ತೆ ಅಂತ ಗೊತ್ತಾಗಲ್ವೆ? ಮಕ್ಳ ನಿಮಗೆಲ್ಲಾ ಕಾದದೆ ಇರಿ."

ಈ ಡೈಲಾಗುಗಳೆಲ್ಲವೂ ಸಿದ್ದರಾಜನ ಬಾಯಿಂದ ತಾರಕ ಸ್ವರದಲ್ಲಿ ಬರುತ್ತಿದ್ದವು. ಅವನ ಮಾತುಗಳಲ್ಲಿದ್ದ ರೋಷ ಎಷ್ಟಿತ್ತೆಂದರೆ, ಅವನ ಕಟ್ಟುಗಳನ್ನು ಸಡಿಲಿಸಿದ್ದರೆ, ಎದ್ದು ಬಂದು ಹೊಡೆದೇ ಬಿಡುತ್ತಿದ್ದನೋ ಏನೋ? ಮೊದಲ ಎರಡು ಮೂರು ರಾತ್ರಿ ಇದ್ದ ಅವನ ಆರ್ಭಟ ದಿನೇ ದಿನೇ ಕ್ಷೀಣಿಸತೊಡಗಿತು. ಕೊನೆ

ಕೊನೆಗಂತು ಅವನು ಇದ್ದಾನೆಂದು ಕೂಡ ಗೊತ್ತಾಗುತ್ತಿರಲಿಲ್ಲ. ಈ ಐಸಿಯುಗೆ ರೋಗಿಯನ್ನು ಮೆತ್ತಗಾಗಿಸುವ ಪಳಗಿಸುವ ಗುಣವಿದೆ. ಕೈಕಾಲುಗಳ ಬಂಧನ, ಮಂಪರುಕಾರಕ ಔಷಧಿಗಳು, ನಾನಾ ಪರೀಕ್ಷೆಗಳಿಗೆಂದು ದಿನಕ್ಕೆ ಐದಾರು ಬಾರಿ ಸೂಜಿಯಿಂದ ಹೀರಲ್ಪಡುವ ರಕ್ತ, ತೂಕ ಅಳತೆ ಮಾಡಿ ಆಸ್ಪತ್ರೆಯೇ ನೀಡುವ ಆಹಾರ - ಇವೆಲ್ಲವೂ ರೋಗಿಯನ್ನು ಮತ್ತಷ್ಟು ಮೆತ್ತಗಾಗಿಸುತ್ತವೆ. ಜೊತೆಗೆ ಸಾವು ಬದುಕಿನ ವಿಷಣ್ಣ ವಾತಾವರಣವಿರುವ ಐಸಿಯುಗೆ ದಾಖಲಾಗಿರುವ ರೋಗಿಗೆ ಹೆದರಿಕೆ, ಹತಾಶೆಗಳು ನಿಧಾನವಾಗಿ ಆಕ್ರಮಿಸಿಕೊಳ್ಳ ತೊಡಗುತ್ತವೆ. ಆಗ ಅವನು ಸಹಜವಾಗಿಯೇ ದೈಹಿಕವಾಗಿ ಮಾನಸಿಕವಾಗಿ ದುರ್ಬಲನಾಗುತ್ತಾ ಸಾಗುತ್ತಾನೆ. ಪ್ರಾರಂಭದಲ್ಲಿ ಸಿಂಹದಂತೆ ಘರ್ಜಿಸುತ್ತಿದ್ದ ಸಿದ್ಧರಾಜನ ಧ್ವನಿ ನಂತರ ಆರ್ತನಾದವಾಗಿ, ಕಡೆಗೆ ನರಳಾಟಿಕೆಯ ರೂಪ ಪಡೆಯಿತು.

ಈ ಐಸಿಯುವಿನಲ್ಲಿ ನನ್ನನ್ನು ತುಂಬಾ ಮನ ಕರಗುವಂತೆ ಮಾಡಿದ್ದು ಒಂದು ಮಗುವಿನ ಅಳು. ಅದರ ಮಾತುಗಳಿಂದ ಅದರ ವಯಸ್ಸನ್ನು ನಾನು ಒಂದೂವರೆ ಯಿಂದ ಎರಡು ವರ್ಷವಿರಬಹುದೆಂದು ಗುರುತಿಸಿದ್ದೆ. ಈ ಚಿಕ್ಕ ವಯಸ್ಸಿನಲ್ಲಿ ಐಸಿಯುಗೆ ದಾಖಲಾಗುವಂಥ ಗಂಭೀರ ಸ್ಥಿತಿ ಏನಾಗಿತ್ತೋ ನಾನರಿಯೆ. ಆ ಮಗುವಿನ ಜೊತೆಯಲ್ಲಿ ಅದರ ತಾಯಿ ಕೂಡ ಇದ್ದಳು. ಐಸಿಯುವಿನಲ್ಲಿ ರೋಗಿಯ ಜೊತೆ ಆತನ ಕಡೆಯ ಯಾರೂ ಇರುವಂತಿಲ್ಲ. ರೋಗಿಯ ಎಲ್ಲ ಆರೈಕೆಯನ್ನೂ ನರ್ಸುಗಳೇ ನೋಡಿಕೊಳ್ಳುತ್ತಾರೆ. ಆದರೆ, ಈ ಕೇಸು ಒಂದು ಅಪವಾದವೆಂದು ಭಾವಿಸಬೇಕು. ಏಕೆಂದರೆ ಆ ಮಗು ಏನನ್ನೂ ಅರ್ಥಮಾಡಿಕೊಳ್ಳಲಾಗದ ವಯಸ್ಸಿನದು. ನರ್ಸುಗಳಿಗೆ ಅದರ ಆರೈಕೆ ಕಷ್ಟವಾಗುತ್ತಿತ್ತೆಂದು ತೋರುತ್ತದೆ. ಅದಕ್ಕೆ ಅದರ ಜೊತೆ ಅದರ ಅಮ್ಮ ಇರಲು ಆಸ್ಪತ್ರೆ ಅವಕಾಶ ಮಾಡಿಕೊಟ್ಟಿತ್ತು. ಮಗುವಿನ ಔಷಧೋಪಚಾರ ಮತ್ತಿತರ ಚಿಕಿತ್ಸಾ ಸಮಯದಲ್ಲಿ ಅಮ್ಮನಿದ್ದರೆ ಅನುಕೂಲವಾಗುತ್ತಿತ್ತು. ಮಗುವಿನ ಮನಸ್ಸನ್ನು ಅಮ್ಮನೂ ಅಮ್ಮನ ಮನಸ್ಸನ್ನೂ ಮಗುವೂ ಅರ್ಥ ಮಾಡಿಕೊಂಡ ಹಾಗೆ ಇನ್ನಾರು ತಾನೆ ಅರ್ಥ ಮಾಡಿಕೊಂಡಾರು? ವೈದ್ಯರಿಗೆ ಮಗುವಿನ ಜೊತೆಯಲ್ಲಿ ಅಮ್ಮನಿದ್ದರೆ ಚಿಕಿತ್ಸೆ ಸುಲಭವಾಗುತ್ತಿತ್ತು.

ಆ ಮಗುವಿನ ತಾಯಿಗೆ ಸುಮಾರು ಮೂವತ್ತರ ಹರೆಯ. ಹಗಲ ಹೊತ್ತು ಆಕೆ ಬಾತ್‌ರೂಮಿಗೆ ಹೋಗಿ ಬರುವಾಗ ನಾನು ಅವಳನ್ನು ಗಮನಿಸಿದ್ದೆ. ಆದರೆ ಅವಳ ಮಗುವನ್ನು ನೋಡಲಾಗಲಿಲ್ಲ. ಆ ಮಗುವಿಗೆ ಏನು ನೋವಾಗುತ್ತಿತ್ತೋ ಏನೋ? ಸದಾ ನೋವು ನೋವೆಂದು ಅಳುತ್ತಿತ್ತು. ಅಮ್ಮ ಸದಾ ಸಮಾಧಾನ ಮಾಡುವ ಸಾಂತ್ವನದ ಮಾತನಾಡುತ್ತಿದ್ದಳು. ಆ ಮಗು "ಅಪ್ಪ ಏಕೆ ಬರಲ್ಲ ನಂಗೆ ಅಪ್ಪ ಬೇಕು"

ಎಂದು ಕೇಳುತ್ತಿತ್ತು.

"ಮಲಗು ಚಿನ್ನ, ಅಪ್ಪ ಬೆಳಿಗ್ಗೆ ಬರ್ತ್ತಾರೆ" ಅಮ್ಮನ ಮಾತು.

"ಸುಳ್ಳು, ಸುಳ್ಳು ದಿನಾ ಹಂಗೆ ಹೇಳ್ತಿಯಾ, ಅಪ್ಪ ಬರಲ್ಲ".

"ಇಲ್ಲ ಚಿನ್ನ, ಗ್ಯಾರಂಟಿ ಬೆಳಿಗ್ಗೆ ಬರ್ತಾರೆ."

"ಬೆಳಿಗ್ಗೆ ಬೇಡ, ನನಗೀಗಲೇ ಅಪ್ಪ ಬೇಕು."

- ಮಗುವಿನ ರೋದನ ತಾರಕಕ್ಕೇರುತ್ತದೆ. ಅಮ್ಮನ ಸಮಾಧಾನದ ಮಾತುಗಳು ಆ ಧ್ವನಿಯ ನಡುವೆ ಕಿರಿದಾಗುತ್ತದೆ. ಸಿಸ್ಟರ್‌ಗಳು ಆ ಮಗುವಿನ ಬಳಿ ಧಾವಿಸುತ್ತಾರೆ. ಅದರ ಅಮ್ಮನ ಜೊತೆ ಸೇರಿ ಅವರೂ ಸಮಾಧಾನ ಮಾಡುತ್ತಾರೆ, ಯಾರು ಏನೇ ಹೇಳಿದರೂ ಮಗು ಮಾತ್ರ ಅಳು ನಿಲ್ಲಿಸುವುದಿಲ್ಲ. ತನ್ನ ಬೇಡಿಕೆಯನ್ನು ತಗ್ಗಿಸುವುದಿಲ್ಲ. ಅಮ್ಮನ ಸಾಂತ್ವನ, ಸಿಸ್ಟರ್‌ಗಳ ಬೆಣ್ಣೆ ಮಾತುಗಳು ಮಗುವಿನ ಅಳು - ಎಲ್ಲವೂ ಮಿಳಿತವಾಗಿ ಐಸಿಯುವಿನ ರಾತ್ರಿಯಲ್ಲಿ ಎದೆ ಕರಗಿಸುವ ಸನ್ನಿವೇಶವನ್ನೂ ನಿರ್ಮಾಣ ಮಾಡುತ್ತಿದ್ದವು. ರಾತ್ರಿಯಿಡೀ ಆ ಮಗು ಅಳುವುದನ್ನು ಕೇಳುತ್ತಿದ್ದಾಗ ನನಗೆ ಜಿ.ಎಸ್. ಶಿವರುದ್ರಪ್ಪನವರ "ಎಲ್ಲೋ ಮಗು ಅಳುತ್ತಿದೆ" ಎಂಬ ಕವನದ ಸಾಲು ಬಂದು ಅಪ್ಪಳಿಸುತ್ತಿತ್ತು.

ಒಂದು ದಿನ ರಾತ್ರಿ. ಗಂಟೆ ಸರಿ ಹೊತ್ತಿನ ಮೇಲಾಗಿರಬೇಕು. ಮಗು ಅಳುತ್ತಾ ಅವರ ಅಮ್ಮನ ಬಳಿ ಬಂದು ಹೊಸ ಬೇಡಿಕೆಯನ್ನಿಟ್ಟಿತು. "ನನಗೆ ಆಡಲು ಬಾಲ್ ಬೇಕು".

"ಯಾವ ಬಾಲ್ ಚಿನ್ನ?" ತಾಯಿಯ ಪ್ರಶ್ನೆ

"ಅದೇ ಬಣ್ಣ ಬಣ್ಣದ್ದು, ಬಿಳಿ ಹಸಿರು ಗೆರೆಗಳಿರುತ್ತವಲ್ಲ ಅದು"

"ಅಪ್ಪಂಗೆ ಹೇಳ್ತೀನಿ ತರ್ತಾರೆ".

"ನನಗೀಗಲೇ ಬೇಕು. ನಾನು ಆಡಬೇಕು. ನೀನು ಇಲ್ಲಿರೋ ಆಂಟೀರು ಎಲ್ಲರೂ ಬೋರು. ನಂಗೆ ಬಾಲ್ ಕೊಟ್ರೆ ನಾನು ಅಳೋದಿಲ್ಲ. ಆಡಿಕೊಳ್ತೀನಿ"

"ಖಂಡಿತ ಬಾಲ್ ಅಪ್ಪ ತರ್ತಾರೆ. ಆದ್ರೆ ಈಗ ಅವರು ಎಲ್ಲಿಂದ ತರ್ತಾರೆ? ರಾತ್ರಿಯಲ್ವ? ಅಂಗಡಿಗಳೆಲ್ಲಾ ಬಾಗಿಲು ಹಾಕಿರ್ತಾರೆ. ಅಪ್ಪ, ಬೆಳಿಗ್ಗೆ ಅಂಗಡಿ ಬಾಗಿಲು ತೆಗೆಯೋವರ್ಗೂ ಕಾದು ಬಾಲ್ ತರ್ತಾರೆ"

"ಇಲ್ಲ. ಸುಳ್ಳು. ನಾನು ಅಳಬಾರ್ದು ಅಂತ ನೀನು ಹೇಳ್ತಾ ಇದ್ದೀಯಾ. ಅಪ್ಪನಿಗೆ ಈಗಲೇ ಫೋನ್ ಮಾಡು."

ಐಸಿಯುವಿನಲ್ಲಿ ರೋಗಿ ಫೋನ್ ಇಟ್ಟುಕೊಳ್ಳುವಂತಿಲ್ಲ. ಅಮ್ಮ ಎಲ್ಲಿಂದ ಫೋನ್ ತಂದಾಳು? ಆದರೆ ಎಲ್ಲ ಬ್ರದರ್ ಸಿಸ್ಟರ್‌ಗಳ ಬಳಿ ಫೋನ್‌ಗಳಿರುತ್ತಿದ್ದವು.

ಮಗು ಅಳು ನಿಲ್ಲಿಸಿ ಮಲಗಿದರೆ ಸಾಕೆಂದು ಬಯಸುವ ಸಿಸ್ಟರ್‌ಗಳು ಅವರ ಅಮ್ಮನಿಗೆ ಫೋನ್ ನೀಡಿ ಫೋನ್ ಮಾಡಿ" ಎಂದು ಹೇಳಿದರು. ಅದರಮ್ಮ ಆ ನಡುರಾತ್ರಿಯಲ್ಲಿ ಗಂಡನಿಗೆ ನಿಜಕ್ಕೂ ಫೋನ್ ಮಾಡಿದಳೋ ಅಥವಾ ಫೋನ್ ಮಾಡಿದ ರೀತಿಯಲ್ಲಿ ಅಭಿನಯಿಸಿದಳೋ ನನಗೆ ತಿಳಿಯದು. ಆದರೆ ಅವಳು ಫೋನ್ ಮಾಡಿ ತನ್ನ ಗಂಡನಿಗೆ ಮಗುವಿನ ಬೇಡಿಕೆಯನ್ನು ತಿಳಿಸಿ, "ಬೆಳಿಗ್ಗೆ ಬರುವಾಗ ಬಾಲ್ ಮರೆಯದೆ ತನ್ನಿ ಪಾಪು ತುಂಬಾ ಕೇಳ್ತಿದೆ" ಎಂದು ಹೇಳಿದ್ದು ಮಾತ್ರ ಸತ್ಯವಾಗಿತ್ತು.

ಮಾರನೆಯ ಬೆಳಿಗ್ಗೆ ಹತ್ತುಗಂಟೆಯ ಹೊತ್ತಿಗೆ ಆ ಮಗುವಿನ ಅಪ್ಪ ಬಂದನೆಂದು ತೋರುತ್ತದೆ. ಬಹುಶಃ ಬಾಲನ್ನೂ ತಂದಿರಬೇಕು. ಮಗುವಿನ ಅಳು ತುಸು ತಹಬದಿಗೆ ಬಂದಿತ್ತು. ನನಗೀಗ ಚೋದ್ಯವಾಗುತ್ತಿದೆ - ನನಗೆ ಕೊನೆಗೂ ಆ ಮಗು ಹೆಣ್ಣೋ ಗಂಡೋ ಎಂದು ತಿಳಿಯದೆ ಹೋಯಿತು. ನಾನೇ ಅದನ್ನು ಅರಿಯುವ ಪ್ರಯತ್ನ ಮಾಡಲಿಲ್ಲವೆ? ಆ ಮಗು ಐಸಿಯುವಿನಲ್ಲಿ ನಾಲ್ಕೈದು ದಿನ ಇದ್ದು ಅನಂತರ ವಾರ್ಡಿಗೆ ವರ್ಗಾವಣೆಗೊಂಡಿತ್ತು. ಮಗು ಹೋದ ಮೇಲೆ ಅದರ ಮುಗ್ಧ ಮಾತು ಮತ್ತು ಅಳುವನ್ನು ಕೇಳದೆ ನನಗೆ ಏನೋ ಒಳ್ಳೆಯದನ್ನು ಕಳೆದುಕೊಡ ಅನುಭವವಾಯಿತು.

೮. ರಾಮು ಅಣ್ಣ.... ಭಾಗ್ಯ ಅಕ್ಕ....

ಐಸಿಯುನ ಶ್ರಮ ಸಂಸ್ಕೃತಿ ಮತ್ತು ಪರಸ್ಪರ ಅವರು ನೀಡುತ್ತಿದ್ದ ಗೌರವ ನನಗೆ ವಿಶೇಷವೆನ್ನಿಸಿತು. ಇಲ್ಲಿನ ಕೆಲವು ನರ್ಸು ಗಳು ಡ್ಯೂಟಿ ಡಾಕ್ಟರ್‌ಗಳನ್ನು ಏಕವಚನ ದಲ್ಲಿ ಕರೆಯುತ್ತಿದ್ದರು ಎಂಬ ಅಂಶವೇ ಇಲ್ಲಿನ ಸಮಾನ ಮನೋನೆಲೆಯನ್ನು ನಮಗೆ ಮುಟ್ಟಿಸುತ್ತದೆ. ನರ್ಸುಗಳು ಪರಸ್ಪರ ಏಕವಚನದಲ್ಲಿ ಮಾತನಾಡಿ ಕೊಳ್ಳುವುದು ಅಚ್ಚರಿಯ ಸಂಗತಿಯೇನಲ್ಲ. ಆದರೆ ವೃತ್ತಿಯಲ್ಲಿ ತುಸು ಎತ್ತರದಲ್ಲಿದ್ದ ಡ್ಯೂಟಿ ಡಾಕ್ಟರ್‌ಗಳು ಮತ್ತು ನರ್ಸುಗಳಲ್ಲಿ ಒಂದು ಬಗೆಯ ಹೊಂದಾಣಿಕೆ ಇತ್ತು. ಹಾಗಂತ ನರ್ಸುಗಳು ಡಾಕ್ಟರುಗಳು ನೀಡಿದ ಸಲಿಗೆಯನ್ನು ದುರುಪಯೋಗಪಡಿಸಿ ಕೊಂಡದ್ದು ಮತ್ತು ಆ ಕಾರಣದಿಂದ ಮನಸ್ತಾಪ ಮೂಡಿದ್ದನ್ನು ನಾನು ಕಂಡಿಲ್ಲ. ನರ್ಸುಗಳಲ್ಲಿ ಬ್ರದರ್‌ಗಳು ಸಿಸ್ಟರ್‌ಗಳನ್ನು ಹೆಸರ್ಹಿಡಿದು ಕರೆಯುತ್ತಿದ್ದರು. ಯಾರೋ ತೀರಾ ಹಿರಿಯ ಸಿಸ್ಟರ್‌ಗಳನ್ನು ಅವರ ಹೆಸರಿನ ಜೊತೆ 'ಸಿಸ್ಟರ್' ಸೇರಿಸಿ ಕರೆಯುತ್ತಿದ್ದರು.

ನಾನು ಇಲ್ಲಿಗೆ ಬಂದ ಮೊದಲೆರಡು ದಿನ ಸರಿಯಾಗಿ ಗ್ರಹಿಸಿರಲಿಲ್ಲವೆಂದು ತೋರುತ್ತದೆ. ಸದಾ ಚಟುವಟಿಕೆಯಿಂದ ಕೂಡಿರುವ ಐಸಿಯುನಲ್ಲಿ ಸಿಸ್ಟರ್‌ಗಳು "ಅಣ್ಣಾ" ಎಂದು ಕರೆಯುವುದನ್ನು ಕೇಳಿಸಿಕೊಳ್ಳತೊಡಗಿದೆ. ಜೊತೆಯಲ್ಲೇ "ಅಕ್ಕಾ" ಎಂಬ ಕೂಗು ಕೂಡ ನನಗೆ ಆಪ್ಯಾಯಮಾನವಾಗಿ ತೋರಿತು. ಈ ನರ್ಸುಗಳು ಯಾರನ್ನೂ ಕುರಿತು "ಅಣ್ಣಾ" "ಅಕ್ಕಾ" ಎಂದು ಕರೆಯುತ್ತಾರೆಂಬ ಕುತೂಹಲ. ಅವರು ಆ ವಿಸ್ತಾರವಾದ ಐಸಿಯುನಲ್ಲಿ ಪದೆ ಪದೆ ಕೇಳಿ ಬರುತ್ತಿದ್ದ

ಪದಗಳೇ ಅವಾಗಿದ್ದವು. ಪ್ರತಿಯೊಬ್ಬ ಬ್ರದರ್ ಮತ್ತು ಸಿಸ್ಟರ್‌ಗೂ ಅನಿವಾರ್ಯವಾಗಿ ಸಹಾಯಕ್ಕೆ ಬೇಕಾಗಿದ್ದ ಆ "ಅಣ್ಣ ಅಕ್ಕ" ಗಳು ಕರೆದ ತಕ್ಷಣ ನೆರವಿಗೆ ಧಾವಿಸುತ್ತಿದ್ದರು. ಅವರೇ ಅಲ್ಲಿ ಕೆಲಸ ಮಾಡುತ್ತಿದ್ದ ನಾಲ್ಕನೇ ದರ್ಜೆ ನೌಕರರು. ನನಗೆ ತುಂಬಾ ಸಂತೋಷವಾಯಿತು. ನಮ್ಮ ದೇಶದಲ್ಲಿ ಶ್ರಮದ ಜಾಗಗಳಲ್ಲಿ ನಾಲ್ಕನೇ ದರ್ಜೆ ನೌಕರರನ್ನು ತುಂಬಾ ಹಗುರವಾಗಿ ಕಂಡು ಏಕವಚನದಲ್ಲಿ ಮಾತನಾಡಿಸುವ ಪರಿಪಾಠವಿದೆ. ಅವರು ಮೇಲಿನವರಿಗೆ ಸಹ ಉದ್ಯೋಗಿಗಳಂತೆ ಕಾಣುವುದು ತೀರಾ ಅಪರೂಪ. ಅವರನ್ನು ಮೇಲಿನವರೆಲ್ಲರೂ ಜವಾನರಂತೆ ಕಂಡು ನಡೆಸಿಕೊಳ್ಳುವುದೇ ಹೆಚ್ಚು. ಆದರೆ ಈ ಅಪೊಲೊ ಆಸ್ಪತ್ರೆಯು ವಿಶೇಷವಾಗಿ ಅವರನ್ನು ಗೌರವದಿಂದ ಕರೆದು ನಡೆಸಿಕೊಳ್ಳುವ ಪರಿಯಿಂದ ಕಂಡುಬಂತು. ನರ್ಸುಗಳು ಈ ನೌಕರರನ್ನು ಬಾಯ್ತುಂಬ "ಅಣ್ಣ ಅಕ್ಕ" ಸೇರಿಸಿ ಕರೆಯುವುದು ನನಗೆ ಸಂತೋಷ ತಂದಿತು. "ರಾಮು ಅಣ್ಣ", "ಸಿಂಹ ಅಣ್ಣ" "ಭಾಗ್ಯ ಅಕ್ಕ", "ಮಂಗಳ ಅಕ್ಕ" "ಗಾಯತ್ರಿ ಅಕ್ಕ"- ಹೀಗೆ ಅವರನ್ನು ಬಾಯ್ತುಂಬ ಕರೆಯಲಾಗುತ್ತಿತ್ತು.

ಬಹುಶಃ ನನಗೆ "ಅಣ್ಣ ಅಕ್ಕ" ಎಂಬ ಸಂಬೋಧನೆಗಳು ಇಷ್ಟವಾಗಲು ನಾನು ಓದಿದ ಸಾಹಿತ್ಯವೂ ಕಾರಣವಾಗಿರಬೇಕು. ಏಕೆಂದರೆ ಕನ್ನಡ ಸಂಸ್ಕೃತಿಯಲ್ಲಿ "ಅಣ್ಣ ಅಕ್ಕ" ಎಂದರೆ ವಿಶೇಷವಾದ ಅರ್ಥ ಪ್ರಾಪ್ತವಾಗಿ ಪರಂಪರೆಯ ಸಂಬಂಧ ಬೆಸೆದುಕೊಳ್ಳುತ್ತಿತ್ತು. ನಮ್ಮ ಗ್ರಾಮೀಣ ಸಂಸ್ಕೃತಿಯಲ್ಲಿ "ಅಣ್ಣ, ಅಕ್ಕ" ಸಂಬೋಧನಾ ಪದಗಳು ರಕ್ತ ಸಂಬಂಧದ ಆತ್ಮೀಯತೆಯನ್ನು ಸೂಚಿಸುತ್ತವೆ. ನಮ್ಮ ವಚನ ಸಂಸ್ಕೃತಿಯ ಬಹು ಮುಖ್ಯರಾದ ಬಸವಣ್ಣ, ಅಕ್ಕಮಹಾದೇವಿಯರು ನೆನಪಾಗಿ ಹೃದಯ ಮುದಗೊಳ್ಳುತ್ತದೆ.

ನಾನು ಬೇರೆ ಆಸ್ಪತ್ರೆಗಳಲ್ಲಿ ನಾಲ್ಕನೇ ದರ್ಜೆ ನೌಕರರನ್ನು "ಅಣ್ಣ ಅಕ್ಕ" ರೆಂದು ಗೌರವ ನೀಡಿ ಕರೆಯುವುದನ್ನು ಕಂಡಿಲ್ಲ. ಮೈಸೂರಿನ ಕಾಮಾಕ್ಷಿ ಆಸ್ಪತ್ರೆ ಬಸಪ್ಪ ಆಸ್ಪತ್ರೆ ಮತ್ತು ವಿಕ್ರಂ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದ ಅನುಭವ ನನಗಿತ್ತು. ಅದರಲ್ಲೂ ಬಸಪ್ಪ ಮತ್ತು ವಿಕ್ರಂ ಆಸ್ಪತ್ರೆಗಳ ಐಸಿಯುಗಳಲ್ಲಿ ನಾನು ಇದ್ದೆ. ಅಲ್ಲಿಯೂ ನಾಲ್ಕನೇ ದರ್ಜೆ ನೌಕರರು ಅನಿವಾರ್ಯವಾಗಿ ಇದ್ದರು. ಆದರೆ ಅವರ ಮೇಲಿನವರು ಇಂಥ ಗೌರವ ನೀಡಿ ಕರೆದುದನ್ನು ನಾನು ಗಮನಿಸಿಲ್ಲ. ಅಪೊಲೊ ಆಸ್ಪತ್ರೆಯಲ್ಲಿ ಗಂಡಸರು ಹಸಿರು ಶರ್ಟು ತೆಳು ಎಲ್ಲೋ ಪ್ಯಾಂಟು ಧರಿಸುತ್ತಿದ್ದರು. ಶರ್ಟಿನ ಕಾಲರ್ ಮತ್ತು ಗುಂಡಿಗಳ ಜಾಗದಲ್ಲಿ ತೆಳು ಹಳದಿ ಪಟ್ಟಿ ಇರುತ್ತಿತ್ತು. ಹೆಂಗಸರು ಹಸಿರು ಸೀರೆ ಧರಿಸಿ, ಎದೆಯ ಭಾಗದಲ್ಲಿ ಹಳದಿ ಬಣ್ಣದ ತೋಳಿಲ್ಲದ ಏಪ್ರಾನ್ ಧರಿಸುತ್ತಿದ್ದರು. ಸದಾ ಹಸನ್ಮುಖಿಗಳಾದ ಇವರು ರೋಗಿಗಳನ್ನು

ಪ್ರೀತಿಯಿಂದ ಶುಶ್ರೂಷೆ ಮಾಡುತ್ತಿದ್ದರು. ಐಸಿಯುನ ಬಹುಪಾಲು ಎಲ್ಲ ರೋಗಿಗಳು ಮಲಮೂತ್ರಗಳನ್ನು ಹಾಸಿಗೆಯಲ್ಲೇ ಮಾಡುತ್ತಿದ್ದರು. ನಳಿಗೆಯ ಮೂಲಕ ಒಂದು ಪ್ಲಾಸ್ಟಿಕ್ ಚೀಲಕ್ಕೆ ಮೂತ್ರ ಬಂದು ತುಂಬಿಕೊಳ್ಳುವ ವ್ಯವಸ್ಥೆ ಇತ್ತು. ರೋಗಿಗಳ ಕುಂಡಿ ಸೊಂಟವನ್ನು ಸುತ್ತುವರಿದು ಕಟ್ಟಿದ್ದ ಡೈಪರ್ ಚಡ್ಡಿಗಳಲ್ಲಿ ಮಲ ವಿಸರ್ಜನೆಯಾಗುತ್ತಿತ್ತು. ಪ್ರಜ್ಞೆ ಇರುವ ರೋಗಿಗಳು ಮಲ ವಿಸರ್ಜನೆಯಾಗಿದೆಯೆಂದು ಬ್ರದರ್ ಸಿಸ್ಟರ್‌ಗಳಿಗೆ ಸೂಚನೆ ನೀಡಿದರೆ, ಪ್ರಜ್ಞೆ ಇಲ್ಲದ ರೋಗಿಗಳು ತಮ್ಮ ಪಾಡಿಗೆ ತಾವು ಯಾವ ಸೂಚನೆಯೂ ಇಲ್ಲದೆ ವಿಸರ್ಜನೆ ಮಾಡುತ್ತಿದ್ದರು. ಇಂಥ ಸಂದರ್ಭದಲ್ಲಿ ನರ್ಸುಗಳು ನಾಲ್ಕನೇ ದರ್ಜೆ ನೌಕರರನ್ನು ಕರೆಯುತ್ತಿದ್ದರು. ಸಾಮಾನ್ಯವಾಗಿ ಗಂಡು ರೋಗಿಗಳಿಗೆ 'ಅಣ್ಣಗಳು', ಹೆಣ್ಣು ರೋಗಿಗಳಿಗೆ 'ಅಕ್ಕಗಳು' ಸ್ವಚ್ಛತೆಯ ಕಾರ್ಯವನ್ನು ಮಾಡುತ್ತಿದ್ದರು. ಮಲದಿಂದ ಒದ್ದೆಯಾಗಿರುವ ಡೈಪರ್‌ಗಳನ್ನು ಕಳೆದು, ಕುಂಡಿಗಳನ್ನು 'ಈಸಿವಾಶ್' ಎಂಬ ತೇವಾಂಶದಿಂದ ಕೂಡಿದ ಪೇಪರ್ ಟವಲ್ಲಿನಿಂದ ಒರೆಸಿ, ಅನಂತರ ಮತ್ತೆ ಹೊಸ ಡೈಪರ್‌ಗಳನ್ನು ಸೊಂಟಕ್ಕೆ ಕಟ್ಟಬೇಕಾಗಿತ್ತು. ಕೆಲವು ರೋಗಿಗಳಂತು ಗಂಟೆ ಗಂಟೆಗೂ ಡೈಪರ್‌ನ್ನು ಗಲೀಜು ಮಾಡಿಕೊಳ್ಳುತ್ತಿದ್ದರು. ಅದನ್ನು ಕಂಡ ಬ್ರದರ್‌ಗಳು 'ಅಣ್ಣಾ' ಎಂದೋ 'ಅಕ್ಕಾ' ಎಂದು ಕರೆಯುತ್ತಿದ್ದರು. ಆದರೆ ಯಾವುದೇ ಬೇಸರವಿಲ್ಲದೆ ರೋಗಿಯ ಸೇವೆಯನ್ನು ಮಾಡುತ್ತಿದ್ದ ಅವರನ್ನು ಕಂಡು ಮನಸ್ಸಿನಲ್ಲೇ ವಂದಿಸಿದ್ದೇನೆ. ಅವರು ರೋಗಿಗಳ ಜೊತೆ ವರ್ತಿಸುವ ರೀತಿಯೂ ನಯವಾಗಿತ್ತು. ರೋಗಿಗೆ ನೋವಾಗದಂತೆ, ಅವನನ್ನೂ ಎತ್ತುವ, ಪಕ್ಕಕ್ಕೆ ಹೊರಳಿಸುವ, ಕುಳ್ಳರಿಸುವ ಕೆಲಸವನ್ನು ಮಾಡುತ್ತಿದ್ದರು. ಆ ಸಂದರ್ಭದಲ್ಲಿ ರೋಗಿಯೊಡನೆ ಮೃದುವಾಗಿ ಮಾತನಾಡುತ್ತಿದ್ದರು. ಇವರ ಈ ಬೇಸರಪಟ್ಟುಕೊಳ್ಳದ ಕೆಲಸವನ್ನೂ ಕಂಡು, ಅನೇಕ ಮನೆಗಳಲ್ಲಿ ಹಿರಿಯರು ಕೈಕಾಲು ಬಿದ್ದು ಹಾಸಿಗೆ ಹಿಡಿದಾಗ ಮನೆಯವರು ನಿಕೃಷ್ಟವಾಗಿ ಅಸಹ್ಯಪಟ್ಟು ರೇಗಾಡುವುದು ನೆನಪಿಗೆ ಬಂತು. ಇವರು ಸಂಬಳ ಪಡೆಯುವ ನೌಕರಿರಬಹುದು. ಆದರೆ ಇಲ್ಲಿ ಕಾಟಾಚಾರದ ಕೆಲಸ ತುಸು ಅಪರೂಪವೆಂದು ನಾನು ಸ್ವತಃ ಅನುಭವದಿಂದ ಕಂಡುಕೊಂಡಿದ್ದೇನೆ.

ಈ 'ಅಣ್ಣಗಳು ಅಕ್ಕಗಳು' ಕೇವಲ ರೋಗಿಗಳ ಸ್ವಚ್ಛತೆಯ ಕೆಲಸ ಮಾಡುತ್ತಿರಲಿಲ್ಲ. ಐಸಿಯುವನ್ನು ದಿನಕ್ಕೆ ಮೂರು ಬಾರಿ ಕ್ರಿಮಿನಿರೋಧಕ ದ್ರಾವಣದಿಂದ ತಮಗೆ ನೀಡಿದ ಮಾಪ್‌ಕಿಂಗ್‌ಗಳ ಮೂಲಕ ಸ್ವಚ್ಛಗೊಳಿಸುತ್ತಿದ್ದರು. ಪ್ರತಿ ಕ್ಯಾಬಿನ್‌ನಲ್ಲಿ ಇಟ್ಟಿರುತ್ತಿದ್ದ ಎರಡು ಪ್ಲಾಸ್ಟಿಕ್ ಬುಟ್ಟಿಗಳಲ್ಲಿ ತುಂಬುತ್ತಿದ್ದ ತ್ಯಾಜ್ಯವನ್ನು ತೆಗೆಯಬೇಕಾಗಿತ್ತು. ಆ ಬುಟ್ಟಿಗಳಲ್ಲಿರುವ ತ್ಯಾಜ್ಯದಲ್ಲಿ ಪ್ಲಾಸ್ಟಿಕ್,

ಗಾಜು ಮತ್ತು ಹತ್ತಿಗಳನ್ನು ಬೇರೆ ಬೇರೆ ಮಾಡಬೇಕಾಗಿತ್ತು. ನರ್ಸುಗಳು ರೋಗಿಗಳಿಂದ ಸಂಗ್ರಹಿಸಿದ ರಕ್ತ, ಕಫ, ಮಲಮೂತ್ರಗಳ ಮಾದರಿಗಳನ್ನು ಪೆಥಾಲಜಿ ಲ್ಯಾಬ್‌ಗೆ ಕೊಟ್ಟು ಬರಬೇಕಾಗಿತ್ತು. ಅದರ ಮಧ್ಯೆ ಡ್ಯೂಟಿ ಡಾಕ್ಟರ್‌ಗಳು, ನರ್ಸುಗಳಿಗೆ ತಿಂಡಿ, ಟೀ ತಂದುಕೊಡುವ ಕೆಲಸವನ್ನು ಮಾಡಬೇಕಾಗಿತ್ತು.

ಐಸಿಯು ಮೂರು ಪಾಳಿಯಲ್ಲಿ ನಡೆಯುತ್ತಿತ್ತು. ಈ 'ಅಣ್ಣ ಅಕ್ಕ'ಗಳು ಪ್ರತಿ ಪಾಳಿಯಲ್ಲಿ ನಾಲ್ಕು ಜನವಿರುತ್ತಿದ್ದರು. ಅವರಲ್ಲಿ ಇಬ್ಬರು ಹೆಂಗಸರು, ಇಬ್ಬರು ಗಂಡಸರು. ಸದಾ ಫಳ ಫಳನೆ ಮಿರುಗುವ ಐಸಿಯುವಿನ ಆಹ್ಲಾದಕರ ಸ್ವಚ್ಛತೆಯನ್ನು ಕಂಡಾಗ ಈ ಕೆಲಸಗಾರರ ಬದ್ಧತೆ ನನಗೆ ಬೆರಗು ಮೂಡಿಸುತ್ತಿತ್ತು.

ಅಪೊಲೊ ಆಸ್ಪತ್ರೆಯಲ್ಲಿ ಈ ನಾಲ್ಕನೇ ದರ್ಜೆ ನೌಕರರು ಹೊರಗುತ್ತಿಗೆಯ ನೌಕರರಾಗಿದ್ದರು. ಯಾವುದೋ ಏಜನ್ಸಿಗೆ ಆಸ್ಪತ್ರೆಯ ಆಡಳಿತ ವ್ಯವಸ್ಥೆ ಸ್ವಚ್ಛತಾ ಕಾರ್ಯವನ್ನು ಹೊರಗುತ್ತಿಗೆ ನೀಡಿತ್ತು. ಹೀಗಾಗಿ ಇವರಿಗೆ ಸೇವಾ ಭದ್ರತೆಯಾಗಲೀ ಗೌರವಯುತವಾದ ವೇತನವಾಗಲೀ ಬರುತ್ತಿರಲಿಲ್ಲ. ಏಜನ್ಸಿಯು ಇವರ ವೇತನದಲ್ಲಿ ಪಿಎಫ್, ಇಎಸ್‌ಐ ಮತ್ತಿತರ ಕಡಿತಗಳನ್ನು ಮಾಡಿ ಸಂಬಳ ನೀಡುತ್ತಿತ್ತು. ಒಂದು ದಿನ ಅವರು ಮಾತನಾಡಿಕೊಳ್ಳುತ್ತಿದ್ದುದನ್ನು ಕೇಳಿ ಅವರ ಮಾಹೆಯಾನ ಸಂಬಳ ನಾಲ್ಕುವರೆ ಸಾವಿರವೆಂದು ತಿಳಿದು ಕೊಂಡೆ. ಅವರ ಕೆಲಸವನ್ನು ಕಂಡಿದ್ದ ನನಗೆ ಅವರಿಗೆ ಬರುತ್ತಿದ್ದ ಸಂಬಳ ತಿಳಿದಾಗ ಬೆಚ್ಚುವಂತಾಯಿತು. ಶ್ರಮಕ್ಕೆ ತಕ್ಕ ವೇತನ ನಮ್ಮ ಸಮಾಜದಲ್ಲಿ ಎಂದು ಜಾರಿಗೆ ಬರುತ್ತದೋ ಎಂದು ಚಿಂತಿಸಿದೆ. ಒಂದು ರಾತ್ರಿ ಅವರು ಮಾತನಾಡಿಕೊಳ್ಳುತ್ತಿದ್ದಾಗ ಓವರ್‌ಟೈಮ್ ಕೆಲಸದ ವಿಷಯ ಅವರ ಪ್ರಸ್ತಾಪಕ್ಕೆ ಬಂತು. ಒಂದು ಪಾಳಿ ಓವರ್ ಟೈಮ್ ಮಾಡಿದರೆ ಎಪ್ಪತ್ತೈದು ರೂಪಾಯಿ ಬರುತ್ತದಂತೆ. ಆ ಎಪ್ಪತ್ತೈದು ರೂಪಾಯಿಗಳಿಗೆ ಅವರು ಓವರ್‌ಟೈಮ್ ಮಾಡಲು ಸಿದ್ಧರಿದ್ದರು. ಒಂದು ಪಾಳಿ ಎಂದರೆ ಸುಮಾರು ಎಂಟು ಗಂಟೆಗಳ ದುಡಿತ. ಅದರಲ್ಲೂ ರಾತ್ರಿಪಾಳಿ ಎಂದರೆ ಹೆಚ್ಚು ಕೆಲಸ.

ಅವರ ಸಾಂಸಾರಿಕ ಬದುಕು ಹೇಗಿದೆಯೋ ನನಗೆ ಸರಿಯಾಗಿ ತಿಳಿಯಲಿಲ್ಲ. ಮನೆಯ ನೋವು ಮತ್ತು ಒತ್ತಡಗಳು ಅವರ ಮುಖದ ಮೇಲೆ ಸುಳಿದಾಡಿದ್ದು ಅಪರೂಪ. ಒಂದು ರಾತ್ರಿ ಹನ್ನೊಂದರ ಸಮಯ. ನನ್ನ ಉಸ್ತುವಾರಿ ಆ ದಿನ ಸಿಸ್ಟರ್ ಪಾಲಿಗೆ ಬಂದಿತ್ತು. ರಾತ್ರಿ ಮಲಗುವ ಮುನ್ನ ನನ್ನ ಗೌನನ್ನು ಬಿಚ್ಚಿ ನನ್ನ ಬೆನ್ನಿಗೆ ಪೌಡರ್ ಹಚ್ಚಿ, ಮೃದುವಾಗಿ ತಮ್ಮ ಕೈಗಳಿಂದ ತಾಪನ ಮಾಡುವ ಕ್ರಿಯೆ. ಸಿಸ್ಟರ್ ತನ್ನ ಸಹಾಯಕ್ಕೆ ಅಕ್ಕನನ್ನು ಕರೆದಳು. ಅವರಿಬ್ಬರೂ ನಯವಾಗಿ ನನ್ನ ದೇಹದ ವಿವಿಧ ಭಾಗಗಳಿಗೆ ಪೌಡರ್ ಹಚ್ಚಿ ಮೃದುವಾಗಿ ತಮ್ಮ ಕೈಗಳಿಂದ ತಾಡನ

ಮಾಡುತ್ತಿದ್ದರು. ಆಗ ಅಕ್ಕ ಸಿಸ್ಟರ್‌ಳನ್ನು ಕುರಿತು "ನನಗೆ ಜೀವನದಲ್ಲಿ ಏನಿದೆ? ನನಗೀಗ ನಲವತ್ತು, ಮಕ್ಕಳಾಗಲಿಲ್ಲ ಎಂಬ ಕೊರಗು. ಆಸ್ಪತ್ರೇಲಿ ನಿಮ್ಮಂಥ ಮಕ್ಕಳನ್ನು ಕಂಡಾಗ ನಮಗೂ ಇಂಥ ಮಗಳಿರಬಾರದಿತ್ತೇ ಅಂತ ಅನ್ನಿಸುತ್ತೆ. ಇನ್ನು ಮಕ್ಕಳಾಗುವ ವಯಸ್ಸು ಮುಗೀತಾಬಂತು. ಬರೀ ದುಡಿಯೋದು, ತಿನ್ನೋದು, ಮಲಗೋದು- ಇದೇ ಆಯ್ತು ಬದುಕು" ಎಂದು ದುಃಖ ತೋಡಿಕೊಳ್ಳುತ್ತಿದ್ದಳು. ಅವಳ ಮಾತನ್ನು ಕೇಳಿಸಿಕೊಂಡ ನನಗೆ ಬದುಕು ವಿಚಿತ್ರವೆನ್ನಿಸಿತು. ಬಡತನದ ಬದುಕಲ್ಲೂ ತಮ್ಮದೇ ಆದ ಮಕ್ಕಳನ್ನು ಬಯಸುವ ಆಸೆಯ ರಹಸ್ಯವೇನು? ಬಹುಶಃ ಸಂಕುಲ ಮುಂದುವರಿಕೆಯ ಪ್ರಕೃತಿಯ ಸತ್ಯ ಇದೆ ಇರಬಹುದೆ?

ಈ ಆಸ್ಪತ್ರೆಯ ಐಸಿಯುನಲ್ಲಿ ಕೆಲಸ ಮಾಡುತ್ತಿರುವ ನಾಲ್ಕನೇ ದರ್ಜೆ ನೌಕರರ ಬದ್ಧತೆಯನ್ನು ಇಡೀ ಆಸ್ಪತ್ರೆಯ ಎಲ್ಲ ಈ ಬಗೆಯ ನೌಕರರಿಗೆ ಅನ್ವಯಗೊಳಿಸಿ ಮಾತನಾಡುವುದು ತುಸು ಕಷ್ಟವಾಗಬಹುದೆಂದು, ನಾನು ಐಸಿಯುನಿಂದ ವಾರ್ಡ್‌ಗೆ ಶಿಫ್ಟ್ ಆದ ನಂತರ ತಿಳಿಯಿತು. ಅಪೊಲೊ ಆಸ್ಪತ್ರೆಯ ಅನೆಕ್ಸರ್ ಸ್ಪೆಷಲ್ ವಾರ್ಡ್‌ನಲ್ಲಿ ನಾನು ಸುಮಾರು ಒಂದು ತಿಂಗಳು ಇದ್ದೆ. ಈ ವಾರ್ಡಿನಲ್ಲಿ ಬೈಪಾಸ್ ಯಂತ್ರದ ಮೂಲಕ ಕೃತಕ ಉಸಿರನ್ನು ನೀಡಿ, ಆಗಾಗ್ಗೆ ನನ್ನ ಸ್ವಂತ ಉಸಿರಾಟವನ್ನು ಸುಧಾರಿಸಿಕೊಳ್ಳುವ ದಿಕ್ಕಿನಲ್ಲಿ ಚಿಕಿತ್ಸೆಯನ್ನು ನೀಡುತ್ತಿದ್ದರು. ನಾನು ತೀರ ದುರ್ಬಲನಾಗಿದ್ದೆ. ಎದ್ದು ನಿಂತುಕೊಳ್ಳುವ, ಕುಳಿತು ಸುತ್ತ ತಿರುಗುವ ಪ್ರಕ್ರಿಯೆ ಸಾಧ್ಯವಾಗುತ್ತಿರಲಿಲ್ಲ. ನನ್ನ ಮೂಗಿನೊಳಕ್ಕೆ ಜೋಡಿಸಿದ್ದ ರೈಲ್ಸ್ ಟ್ಯೂಬ್‌ನ ಮೂಲಕ ಆಹಾರ ಮತ್ತು ಔಷಧ ನೀಡಲಾಗುತ್ತಿತ್ತು.

ಇಲ್ಲಿ ಎಂಐಸಿಯುನಂತೆ ಬ್ರದರ್‌ಗಳೇ ಬೆಳಿಗ್ಗೆ ಹೊತ್ತು ಈಸಿಬಾತ್ ಮಾಡಿಸುತ್ತಿರಲಿಲ್ಲ. ಅದಕ್ಕಾಗಿ 'ಅಣ್ಣ' ಬೆಳಿಗ್ಗೆ ಆರರ ಹೊತ್ತಿಗೆ ಬರುತ್ತಿದ್ದ. ಕೆಲವು 'ಅಣ್ಣ'ಗಳು ಹೃದಯವಂತರಾಗಿರುತ್ತಿದ್ದರು. ಆದರೆ ಒಂದಿಬ್ಬರು 'ಅಣ್ಣ'ಗಳು ಮಾತ್ರ ಮಹಾ ಖದೀಮರಾಗಿದ್ದರು. ಅವರು ಬೆಳಿಗ್ಗೆ ಬಂದು ನನ್ನ ಗೌನ್ ಮತ್ತು ಡೈಪರ್‌ಗಳನ್ನು ಬಿಚ್ಚಿ, ಬೆತ್ತಲುಗೊಳಿಸಿ, ಕೇವಲ ಒಂದೇ ಒಂದು ತೇವಾಂಶ ಭರಿತ ಈಸಿಬಾತ್ ಕಾಗದದಲ್ಲಿ ನನ್ನ ತಲೆ, ಮುಖ, ಬೆನ್ನು, ಹೊಟ್ಟೆ, ಕುಂಡಿ, ಕೈಕಾಲುಗಳನ್ನು ಒರೆಸಿದ ಮಂತ್ರ ಮಾಡಿ 'ಬಾತ್ ಆಯಿತು ಎಂದು ಹೇಳಿ ಹೊರಡುತ್ತಿದ್ದರು. ಐಸಿಯುನಲ್ಲಿ 'ಬಾತ್' ತೆಗೆದುಕೊಳ್ಳುತ್ತಿದ್ದ ಅನುಭವ ನನಗಿತ್ತು. ಆ ಬ್ರದರ್‌ಗಳು ತೆಗೆದುಕೊಳ್ಳುತ್ತಿದ್ದ ನಿಗ ನನಗೆ ಗೊತ್ತಿತ್ತು. ಇವರ ಈ ಕಳ್ಳಾಟ, ಬದ್ಧತೆಯಿಲ್ಲದ ಕ್ರಿಯೆ ನನ್ನ ಮೇಲೆ ಏನೂ ಪರಿಣಾಮ ಬೀರಲಿಲ್ಲ. ಏಕೆಂದರೆ, ಎಲ್ಲ ಕಡೆಯೂ ಇಂತಹ ಒಂದಿಬ್ಬರು ಇದ್ದೇ ಇರುತ್ತಾರೆ. ಇಂಥವರನ್ನು ದೃಷ್ಟಿಯಲ್ಲಿಟ್ಟುಕೊಂಡು ಇಡೀ ಸೇವಾ ಮನೋಧರ್ಮದಿಂದ ದುಡಿಯುವವರನ್ನು ಮಾಪನ ಮಾಡಬಾರದೆಂದು ನಾನು ತಿಳಿದಿದ್ದೆ.

೯. ಇಲ್ಲಿ ಮನುಷ್ಯರಿಗೂ ಹಾಕುತ್ತಾರೆ, ಮೂಗುದಾರ!

ಈ ಆಸ್ಪತ್ರೆಯಲ್ಲಿ ನಾನು ಹೆಚ್ಚು ಕಡಿಮೆ ಎರಡು ತಿಂಗಳಿದ್ದೆ. ಈ ಅವಧಿಯಲ್ಲಿ ನನ್ನನ್ನು ನಾನು ನೋಡಿ ಕೊಳ್ಳುವುದಕ್ಕೆ ಸಾಧ್ಯವೇ ಆಗಲಿಲ್ಲ. ನಾನು ಐಸಿಯು ಮತ್ತು ಎಚ್‌ಡಿಯುನಲ್ಲಿದ್ದ ಅವಧಿಯಲ್ಲಿ ನನ್ನಲ್ಲಿ ಚಲನೆಯೇ ಇರಲಿಲ್ಲ. ಮಲಗಿದ್ದ ಕಡೆ ಹಾಸಿಗೆಯಲ್ಲೇ ಎಲ್ಲವೂ ಆಗುತ್ತಿತ್ತು. ಆ ತೋಳು ತಪ್ಪಿ ಈ ತೋಳಿಗೆ ಸದಾ ಹಾಕುತ್ತಿದ್ದ ಐವಿಲೈನ್ ಮೂಲಕ ದ್ರವರೂಪದ ಔಷಧಗಳು ದೇಹದೊಳಕ್ಕೆ ಹೋಗುತ್ತಿದ್ದವು. ಇನ್ನು ಆಹಾರ ಮತ್ತು ಪುಡಿಯಾದ ಮಾತ್ರೆಗಳು ರೈಲ್ಸ್ ಟ್ಯೂಬ್‌ನ ಮೂಲಕ ಜಠರ ಪ್ರವೇಶ ಮಾಡುತ್ತಿದ್ದವು. ಐಸಿಯುನಲ್ಲಿದ್ದ ಶೌಚಾಲಯಕ್ಕೆ ನಾನು ಹೋಗುವ ಸಂದರ್ಭ ಸೃಷ್ಟಿಯಾಗಲಿಲ್ಲ. ಒಮ್ಮೆ ಎಚ್‌ಡಿಯುನಲ್ಲಿದ್ದ ಶೌಚಾಲಯಕ್ಕೆ ಕೊನೆಯ ದಿನಗಳಲ್ಲಿ ನನ್ನನ್ನು ಕರೆದು ಕೊಂಡು ಹೋದ ನೆನಪಿದೆ. ಆದರೆ ಅಲ್ಲಿ ಕನ್ನಡಿ ಇರಲಿಲ್ಲ. ಅಲ್ಲಿ ಮಾತ್ರವಲ್ಲ ಐಸಿಯುನಲ್ಲಿ ಸಹಾ ಕನ್ನಡಿ ಇರಲಿಲ್ಲವೆಂದು ನನಗೆ ತಿಳಿದುಬಂತು. ಬಹುಶಃ ಅತೀವ ಕಾಯಿಲೆಯಿಂದ ದಿನೇ ದಿನೇ ಕೃಶವಾಗುತ್ತಿರುವ ರೋಗಿ ಕನ್ನಡಿಯಲ್ಲಿ ತನ್ನ ಮುಖವನ್ನು ನೋಡಿಕೊಳ್ಳುವುದು ಅವನ ಹಿತದೃಷ್ಟಿಯಿಂದ ಅಷ್ಟು ಒಳ್ಳೆಯದಲ್ಲವೆಂದು ಈ ವ್ಯವಸ್ಥೆ ಮಾಡಿರಬಹುದು. ಅನೇಕ ಸಂದರ್ಭದಲ್ಲಿ ದೈಹಿಕವಾಗಿ ದೃಢಕಾಯನಾಗಿ ಪ್ರವೇಶ ಮಾಡಿದ ರೋಗಿ, ಗುಣಮುಖನಾಗಿ ಐಸಿಯುನಿಂದ ಹೊರಹೋಗುವಾಗ ಸಾಕಷ್ಟು ಕೃಶನಾಗಿರುತ್ತಾನೆ. ಇಲ್ಲಿನ ಲೆಕ್ಕಾಚಾರದ ಆಹಾರಕ್ರಮ, ತೆಗೆದುಕೊಳ್ಳುವ ಔಷಧಗಳು, ಮಲಗಿದ್ದಲ್ಲೇ

ಮಲಗಿ ಆವರಿಸಿಕೊಳ್ಳುವ ಜಡತ್ವ, ಐಸಿಯುನಂಥ ಸಾವಿನ ಕರೆಯಂಚಿನಲ್ಲಿರುವ ತಾಣ ಉಂಟುಮಾಡುವ ಮಾನಸಿಕ ಪರಿಣಾಮ - ಇವೆಲ್ಲವೂ ರೋಗಿಯನ್ನು ಸಾಕಷ್ಟು ಕೃಶಮಾಡುತ್ತವೆ. ರೋಗಿ ವಾರ್ಡ್‌ಗೆ ಶಿಫ್ಟ್ ಆದಾಗ ತನ್ನ ಮನೆಯವರ ಜೊತೆ ಇರಬಹುದೆಂಬ ಒಂದಂಶವನ್ನು ಬಿಟ್ಟರೆ, ಉಳಿದ ವಾತಾವರಣವೆಲ್ಲವೂ ಹೆಚ್ಚು ಕಡಿಮೆ ಒಂದೇ ರೀತಿಯಲ್ಲಿ ಇರುತ್ತದೆ. ಐಸಿಯುನ ಉಸಿರುಗಟ್ಟಿಸುವ ಬಿಗಿಯಾದ ನಿಗಾ ವಾರ್ಡ್‌ನಲ್ಲಿರುವುದಿಲ್ಲವೆಂಬುದು ಸತ್ಯ. ಏಕೆಂದರೆ, ವಾರ್ಡ್‌ನಲ್ಲಿ ಪ್ರಾಣಾಪಾಯದ ಬೆದರಿಕೆಯಿರುವುದಿಲ್ಲ. ಆ ಘಟ್ಟವನ್ನು ಧಾಟಿ ರೋಗಿ ವಾರ್ಡ್‌ಗೆ ಬಂದಿರುತ್ತಾನೆ. ಆದರೆ ಆಸ್ಪತ್ರೆ ಶುಶ್ರೂಶೆಯ ಕ್ರಮದಲ್ಲಿ ಇಲ್ಲಿ ವ್ಯತ್ಯಾಸ ಮಾಡುವುದಿಲ್ಲ.

ಇಂಥ ವಾತಾವರಣದಲ್ಲಿ ತಿಂಗಳುಗಟ್ಟಲೆ ಕಳೆದ ನನಗೆ 'ನಾನು ಹೇಗೆ ಕಾಣಿಸುತ್ತೇನೆ' ಎಂದು ನೋಡಿಕೊಳ್ಳುವ ಕುತೂಹಲವಿತ್ತು. ಆದರೆ ಕನ್ನಡಿಯ ಮುಂದೆ ನಿಂತು ನನ್ನ ದೇಹವನ್ನು ನೋಡಿಕೊಳ್ಳುವ ಅವಕಾಶ ನನಗೆ ಮನೆಗೆ ಬರುವವರೆಗೂ ಸಿಗಲಿಲ್ಲ. ಆದರೆ ದಿನದ ಇಪ್ಪತ್ತಾಲ್ಕು ಗಂಟೆ ಮಲಗಿದ್ದಲ್ಲೇ ಮಲಗಿ ಜಡತ್ವ ಬಡಿದುಕೊಂಡಿದ್ದ ನನಗೆ ನಾನು ಹೇಗೆ ಕಾಣಬಹುದೆಂಬ ಕಲ್ಪನೆಯಿತ್ತು. ನಾನು ನನ್ನ ಕಣ್ಣುಗಳಿಂದ ನನ್ನ ಕೈಕಾಲುಗಳನ್ನು ಮತ್ತು ಎದೆಹೊಟ್ಟೆ ಭಾಗಗಳನ್ನು ನೋಡಿಕೊಳ್ಳಬಲ್ಲವನಾಗಿದ್ದೆ. ನನ್ನ ಕಣ್ಣಿಗೆ ಕಾಣುತ್ತಿದ್ದ ಈ ಭಾಗಗಳು ತಮ್ಮ ಆಕರ್ಷಣೆಯನ್ನು ಕಳೆದುಕೊಂಡುಕೊಂಡು ಕೃಶವಾಗಿದ್ದವು. ಪ್ರಖರವಾದ ಬೆಳಕಲ್ಲಿ ನನ್ನ ಕೈಕಾಲುಗಳ ಮಾಂಸಖಂಡಗಳು ಸುಂಡಿಹೋಗಿ, ಅಲ್ಲಿನ ನನ್ನ ಚರ್ಮ ಸುಕ್ಕುಗಟ್ಟಿ ನೇತಾಡುತ್ತಿರುವುದು ಕಾಣುತ್ತಿತ್ತು. ತೊಡೆ, ಮೀನಖಂಡ, ತೋಳುಗಳ ಚರ್ಮ ಅಕ್ಷರಶಃ ನೇತಾಡುತ್ತಿತ್ತು. ಅದು ಕಳೆಗೆಟ್ಟು ಅನೇಕ ದಿನ ನೀರು ಕಾಣದೆ ಸುಕ್ಕು ಸುಕ್ಕಾಗಿ ವರಕೆ ವರಕೆಯಾಗಿ ಮಡಚಿಕೊಂಡಿತ್ತು. ಉಬ್ಬಿಕೊಂಡಿದ್ದ ನನ್ನ ಎದೆಯ ಭಾಗದ ಮಾಂಸಖಂಡಗಳು ನಾಪತ್ತೆಯಾಗಿ ಆ ಭಾಗ ಎಲಬುಗೂಡಾಗಿತ್ತು. ಮುಟ್ಟಿಕೊಂಡರೆ ಕಿಬ್ಬರಿ ಮೂಳೆಗಳು ಬೆರಳುಗಳಿಗೆ ತಾಡನ ಮಾಡುತ್ತಿದ್ದವು. ನನ್ನ ಜಠರ ಮತ್ತು ಕಿಬ್ಬೊಟ್ಟೆಗಳು ಬೆನ್ನಿಗೆ ಅಂಟಿಕೊಂಡ ಭಾವ ಬರುತ್ತಿತ್ತು.

ನನಗೆ ಈಗ ಆಶ್ಚರ್ಯವಾಗುತ್ತದೆ. ಆಸ್ಪತ್ರೆಯಲ್ಲಿದ್ದಷ್ಟು ದಿನ ನನಗೆ ಹಸಿವು ಓಂಗಿಹೋಗಿತ್ತು. 'ನನಗೆ ಹಸಿವಾಗುತ್ತಿದೆ - ಆಹಾರ ನೀಡಿ' ಎಂದು ನಾನು ಎಂದೂ ಬ್ರದರ್‌ಗಳನ್ನು ಕೇಳಿರಲಿಲ್ಲ. ಸುಮಾರು ಎರಡು ತಿಂಗಳು ನನ್ನ ಬಾಯಿಗೆ ನೀರಡಿಕೆ ಆಗಲಿಲ್ಲ. ನೀರು ಕುಡಿಯಬೇಕೆಂಬ ಬಯಕೆಯೂ ಬರಲಿಲ್ಲ. ಐಸಿಯು ಸಂಪೂರ್ಣವಾಗಿ ನನ್ನನ್ನು ತನ್ನ ವಶಕ್ಕೆ ತೆಗೆದುಕೊಂಡು, ಅದರ ಪ್ರಯೋಗಕ್ಕನುಗುಣವಾಗಿ ನನ್ನನ್ನು ಆಡಿಸಿಕೊಳ್ಳುತ್ತಿತ್ತು. ಒಂದರ್ಥದಲ್ಲಿ ನಾನು

ನನ್ನ ಮನಸ್ಸು ಮತ್ತು ದೇಹವನ್ನು ಅವರಿಗೆ ಒಪ್ಪಿಸಿದ್ದೆ. ಒಪ್ಪಿಸಲೇಬೇಕು. ಏಕೆಂದರೆ, ಐಸಿಯುನಲ್ಲಿ ನಿಮ್ಮ ಮನಸ್ಸು ಮತ್ತು ದೇಹಗಳು ಅಲ್ಲಿನ ಪ್ರಯೋಗಗಳಿಗೆ ಅರ್ಪಿತವಾಗದಿದ್ದಲ್ಲಿ ರೋಗ ಬೇಗ ಗುಣವಾಗುವುದಿಲ್ಲ. ಪ್ರತಿರೋಧ ಒಡ್ಡಿದರೆ ಅಪಾಯ ಕಟ್ಟಿಟ್ಟಬುತ್ತಿ!

ಅದು ೨೦೧೪ರ ಹೊಸ ವರ್ಷದ ಮೊದಲ ದಿನ. ನನ್ನ ಮಕ್ಕಳು ಪತ್ನಿ ನಾನು ಬೇಗ ಗುಣವಾಗಲಿ ಎಂದು ಒಂದು ಶುಭಾಶಯ ಪತ್ರ ನೀಡಿ ನನ್ನ ಮನಸ್ಸಿಗೆ ಮುದನೀಡಿದರು. ಆ ಸಂದರ್ಭದಲ್ಲಿ ನಮ್ಮ ಕುಟುಂಬದ ಗ್ರೂಪ್ ಫೋಟೋವನ್ನು ತಮ್ಮ ಮೊಬೈಲ್‌ನಿಂದ ತೆಗೆದರು. ಅನಂತರ ಆ ಚಿತ್ರವನ್ನು ನನಗೆ ತೋರಿಸಿದರು. ನಾನು ಸುಮಾರು ಅರ್ಧ ತಿಂಗಳ ನಂತರ ನನ್ನ ಮುಖವನ್ನು ನೋಡುತ್ತಿದ್ದೆ. ಖಂಡಿತ ನನ್ನ ಗುರುತು ನನಗೆ ಸಿಗಲಿಲ್ಲ. ನನ್ನ ಕುಟುಂಬದವರು ಸುತ್ತ ನಿಂತಿದ್ದು, ನಾನು ಹಾಸಿಗೆಯ ಮೇಲೆ ನಲವತ್ತೈದು ಡಿಗ್ರಿ ದೇಹದ ಮುಂಭಾಗವನ್ನು ಎತ್ತರಿಸಿಕೊಂಡು ಮಲಗಿದ್ದೆ. ಆದರೆ.. ಆದರೆ.. ಆ ಮುಖ ನನ್ನದೇ ಎಂಬುದನ್ನು ಒಪ್ಪಿಕೊಳ್ಳಲು ತಕ್ಷಣ ನನ್ನ ಮನಸ್ಸು ನಿರಾಕರಿಸಿತು. ಆ ಮುಖವನ್ನು ನಾನು ಎಂದೂ ಕಂಡಿರಲಿಲ್ಲ. ಆದರೆ ಇದು ವಾಸ್ತವ. ಆ ಚಿತ್ರದಲ್ಲಿದ್ದುದು ನಾನೆ! ಏಕೆಂದರೆ ನನ್ನ ಮನಸ್ಸು ಮತ್ತು ಪ್ರಾಣಗಳು ಆ ದೇಹದಲ್ಲಿ ತುಯ್ದಾಡುತ್ತಿದ್ದವು. ನನ್ನ ಅಕ್ಕ ಪಕ್ಕ ನನ್ನ ಕುಟುಂಬ ನನಗೆ ಶುಭಾಶಯ ಹೇಳುತ್ತಾ ನಿಂತಿತ್ತು.

ನನ್ನ ಮುಖ ಕಳಾಹೀನವಾಗಿ ಬತ್ತಿಹೋಗಿತ್ತು. ಕಣ್ಣು ಗುಡ್ಡೆಗಳು ಎದ್ದು ಕಾಣುತ್ತಿದ್ದವು. ನನ್ನ ಮೂಗಿನೊಳಕ್ಕೆ ಯಾವುದೋ ಟ್ಯೂಬ್ ಹೋಗಿತ್ತು. ಅದು ಹೊರಕ್ಕೆ ಒಂದು ಅಡಿ ಚಾಚಿಕೊಂಡು ನೇತಾಡುತ್ತಿತ್ತು. ನನ್ನ ಬಾಯಿಯಿಂದ ಕೃತಕ ಉಸಿರು ನೀಡಲು ಎದೆಯ ಗೂಡಿಗೆ ಜೋಡಿಸಿದ, ಮತ್ತೊಂದು ಟ್ಯೂಬ್ ಎರಡುಮೂರು ಇಂಚು ಉದ್ದವಾಗಿ ಹೊರಚಾಚಿತ್ತು. ಅದಕ್ಕೆ ಗುಲಾಬಿವರ್ಣದ ಪ್ಲಾಸ್ಟರ್ ಅನ್ನು ಗಟ್ಟಿಯಾಗಿ ಸುತ್ತಿ ಮೇಲಕ್ಕೆ ಎಳೆದು ಮೂಗಿನ ಮೇಲೆ ಅಂಟಿಸಿ, ಅದನ್ನೇ ಮೂಗಿನಿಂದ ಎಡಕ್ಕೆ ಎಳೆದು ಎಡಕಿವಿಯವರೆಗೆ ಅಂಟಿಸಲಾಗಿತ್ತು. ಹೆಚ್ಚು ಕಡಿಮೆ ನನ್ನ ಮುಖ ಟ್ಯೂಬ್‌ಗಳು ಮತ್ತು ಅವಕ್ಕೆ ಅಂಟಿಸಿದ್ದ ಪ್ಲಾಸ್ಟರ್‌ನಿಂದಾಗಿ ಅರೆಬರೆಯಾಗಿ ಕಾಣುತ್ತಿತ್ತು. ಜೊತೆಗೆ ಅರ್ಧ ತಿಂಗಳಲ್ಲಿ ಬೆಳೆದ ನೆರೆತ ಗಡ್ಡ ಬೇರೆ!

ನನ್ನ ಮನೆಯವರು ನನಗೆ ಹೊಸವರ್ಷದ ಶುಭಕೋರಿ ಹೋದ ಮೇಲೆ ನನ್ನ ಮನದ ಪರದೆಯ ಮೇಲೆ ಮತ್ತೆ ನನ್ನ ಚಿತ್ರ ಬಂದಿತು. ನನಗೆ ನಗು ಬಂತು. ಹೌದು, ಈಗ ತೆಗೆದು ತೋರಿದ ಚಿತ್ರವೇ ಸತ್ಯ. ನನ್ನ ಹಳೆಯ ಮೂರ್ತ ಚಿತ್ರ ಈಗ ನಶ್ವರವಾಗಿದೆ. ಆ ಹಳೆಯ ಚಿತ್ರದ ಒಡೆಯನಾದ ಆ ಮುಖ ಮತ್ತು ಆ ದೇಹ ಈಗ

ಭೂತವಾಗಿ ಹೋಗಿದ್ದವು. ಆ ಸೊಬಗು, ಕಳೆ, ಹೊಳಪು ಹೋಗಿ ಧಿಡೀರನೆ ವೃದ್ಧಾಪ್ಯ ಆವರಿಸಿದಂತೆ ಕಂಡಿತು. ಈ ಸತ್ಯದ ಅರಿವೇ ನನಗೆ ನಗು ತರಿಸಿದ್ದು. ಘಳಿಗೆ ಘಳಿಗೆಗೂ ಚಲನೆಗೆ ಒಳಪಡುವ ಕಾಲಗತಿಯಿಂದ ಈ ದೇಹ ತಪ್ಪಿಸಿಕೊಳ್ಳುವುದು ಹೇಗೆ ತಾನೆ ಸಾಧ್ಯ? ವಯಸ್ಸಾದ ಮೇಲೆ ಮರದ ಕೊಂಬೆ ರೆಂಬೆಯಲ್ಲಿ ಹೊಳೆಯುತ್ತಾ ಶೋಭಿಸುತ್ತಿದ್ದ ಎಲೆ ನಿಧಾನವಾಗಿ ಹಳದಿಯಾಗಿ ಸುಕ್ಕುಗಟ್ಟಲೇ ಬೇಕಲ್ಲವೆ? ಈ ಸತ್ಯದ ಅನುಭಾವ ನನ್ನ ಎದೆಗೆ ಅರಿವಾದುದರಿಂದ ನನಗೆ ನಗುಬಂತು.

ನಗು ಬರಲು ಮತ್ತೊಂದು ಭೌತಿಕ ಕಾರಣವೂ ಇತ್ತು. ನನ್ನ ಮೂಗಿನೊಳಕ್ಕೆ ಜೋಡಿಸಿದ್ದ ರೈಲ್ಸ್ ಟ್ಯೂಬ್ (Ryles tube) ಮೂಗಿನಿಂದ ಹೊರಬಿದ್ದ ಬಾಲದಂತೆ ನನ್ನ ಮುಖದ ಮೇಲೆ ಗೋಚರಿಸಿತು. ನಾನು ಯಾವ ಕಡೆ ತಿರುಗಿದರೂ ಅದು ಅತ್ತಿಂದಿತ್ತ ಕುದುರೆಯ ಬಾಲದಂತೆ ಅಲ್ಲಾಡುತ್ತಿತ್ತು. ಬ್ರದರ್‌ಗಳು ನನಗೆ ಆಹಾರವನ್ನು ನೀಡುವ ಸಂದರ್ಭದಲ್ಲಿ ಆ ಟ್ಯೂಬನ್ನು ಮೇಲಕ್ಕೆತ್ತಿ ಹಿಡಿದು, ಅದರ ತುದಿಯಲ್ಲಿದ್ದ ತೂತಿಗೆ ಸಿರಿಂಜೊಂದನ್ನು ಸಿಕ್ಕಿಸಿ, ಅದರ ಮೂಲಕ ದ್ರವರೂಪದ ಆಹಾರವನ್ನು ಹುಯ್ಯುತ್ತಿದ್ದರು. ಒಮ್ಮೊಮ್ಮೆ ಆಹಾರದ್ರವ ಗಟ್ಟಿಯಾಗಿದ್ದಾಗ ಟ್ಯೂಬಿನಲ್ಲಿ ಅದು ಮುಂದಕ್ಕೆ ಚಲಿಸದೆ ಕಟ್ಟಿಕೊಂಡುಬಿಡುತ್ತಿತ್ತು. ಆಗ ಬ್ರದರ್‌ಗಳು ಸಿರಿಂಜಿನ ತುದಿಗೆ ಗೋಲಾಕಾರದ ಪ್ಲಾಸ್ಟಿಕ್ ಬಲೂನ್‌ಅನ್ನು ಇಟ್ಟು ಅದುಮಿ ಪಂಪ್ ಮಾಡುತ್ತಿದ್ದರು. ಈ ಎಲ್ಲ ಕ್ರಿಯೆಗಳು ನಡೆಯುವಾಗ ನನ್ನ ಮುಖ ಆಡಿಸುವಾತನ ಕೈಯಲ್ಲಿ ಆಡುವ ಬೊಂಬೆಯಂತಾಗುತ್ತಿತ್ತು. ಬ್ರದರ್ ಎಳೆದ ಕಡೆ ಮುಖ ತಿರುಗಿಸುವ, ಮೇಲಕ್ಕೆ ಕೆಳಕ್ಕೆ ಎಳೆದಾಗ, ಆ ಎಳೆತಕ್ಕೆ ತಕ್ಕಂತೆ ಮುಖ ಅಲ್ಲಾಡಿಸುವ ಕ್ರಿಯೆ ಅನಾಯಾಸವಾಗಿ ನಡೆಯುತ್ತಿತ್ತು. ಬ್ರದರ್‌ನ ಎಳೆತಕ್ಕೆ ನಾನು ಸಹಕರಿಸದಿದ್ದರೆ ಅಪಾರ ನೋವಾಗುತ್ತಿತ್ತು. ಜೊತೆಗೆ, 'ನೀವು ಹಾಗೆಲ್ಲಾ ಮಾಡಿದರೆ ಮೂಗಿನಿಂದ ಪೈಪ್ ಬಂದು ಬಿಡುತ್ತೆ. ಆಗ ಮತ್ತೊಂದು ರಂಪಾಟವಾಗುತ್ತೆ. ಸಹಕರಿಸಿ' ಎಂದು ಆತ ಎಚ್ಚರಿಕೆ ಬೇರೆ ನೀಡಿ ಎಚ್ಚರಿಸುತ್ತಿದ್ದ.

ನಾನು ಗ್ರಾಮೀಣ ಸಮುದಾಯದಿಂದ ಬಂದವನು. ನಮ್ಮ ಮನೆಯಲ್ಲಿ ದನಕರುಗಳು, ಎಮ್ಮೆ ಕೋಣಗಳು, ಎತ್ತು ಹೋರಿಗಳು ಅಪಾರವಾಗಿದ್ದವು. ಅವುಗಳಿಗೆಲ್ಲಾ ಮೂಗುದಾರ ಹಾಕುತ್ತಿದ್ದರು. ಆ ಮೂಗುದಾರಕ್ಕೆ ಹಗ್ಗವನ್ನು ಕಟ್ಟಿ ಅವು ನಮ್ಮ ಮಾತು ಕೇಳುವಂತೆ ನಿಯಂತ್ರಿಸಲಾಗುತ್ತಿತ್ತು. ಅವು ತಮಗೆ ಇಷ್ಟ ಬಂದ ಕಡೆ ತಿರುಗಿ ಹೋಗಲಾಗುತ್ತಿರಲಿಲ್ಲ. ಆ ಸಂದರ್ಭದಲ್ಲಿ ನಾವು ಹಗ್ಗವನ್ನು ಎಳೆದಾಗ ಮೂಗುದಾರ ಬಿಗಿದು, ಅವುಗಳ ಮೂಗಿನ ಹೊಳ್ಳೆಗೆ ನೋವಾಗುತ್ತಿತ್ತು. ಆಗ ಅವು ನಾವು ಹೇಳಿದ ಹಾಗೆ ಕೇಳುತ್ತಿದ್ದವು. ನನ್ನ ಈಗಿನ ಸ್ಥಿತಿ ಖಂಡಿತವಾಗಿಯೂ

ಮೂಗುದಾರ ಜಡಿಸಿಕೊಂಡ ಪಶುವಿನಂತಾಗಿತ್ತು. ಐಸಿಯುವಿನಲ್ಲಿ ರೋಗಿಗಳಿಗೂ ಮೂಗುದಾರದಂಥ ಟ್ಯೂಬ್ ಅನ್ನು ಹಾಕಿ ರೋಗಿಗಳನ್ನು ಹದ್ದುಬಸ್ತಿಗೆ ತರುತ್ತಿದ್ದರು.

ಈ ರೈಲ್ಸ್ ಟ್ಯೂಬ್ ನನ್ನ ಮೂಗಿನೊಳಕ್ಕೆ ತೂರಿಕೊಂಡು ಸುಮಾರು ಮೂರು ತಿಂಗಳು ಇತ್ತು. ನನಗೆ ಕೃತಕ ಉಸಿರಾಟವನ್ನು ಬಾಯಿಯ ಮೂಲಕ ಹಾಕಿದ್ದ ನಳಿಗೆಯ ಮೂಲಕ ಕೊಡುವುದನ್ನು ನಿಲ್ಲಿಸಿ, ನನ್ನ ಕುತ್ತಿಗೆಯಲ್ಲಿ ರಂಧ್ರಕೊರೆದು ಟ್ರೆಕಿಯಾಸ್ಟಮಿ (Tracheostomy)[೨೨] ಹಾಕಿ ಅದರ ಮೂಲಕ ನೇರವಾಗಿ ಕೃತಕ ಉಸಿರನ್ನು ನೀಡಲು ಶುರು ಮಾಡಿದ್ದ ಮೇಲೆ ನನ್ನ ಮುಖದ ತುಂಬ ಆವರಿಸಿಕೊಂಡಿದ್ದ ಪ್ಲಾಸ್ಟರ್ ಕಡಿಮೆಯಾಯಿತು. ಮುಖದ ಮೇಲೆ ಕೇವಲ ರೈಲ್ಸ್ ಟ್ಯೂಬ್ ಒಂದೇ ಯಜಮಾನನಾಯ್ತು. ಅದು ಆಗಾಗ ಅತ್ತಿಂದಾಡುತ್ತಾ ನನಗೆ ಆತ್ಮೀಯವಾಗತೊಡಗಿತು. ನಾನು ಐಸಿಯುನ ಮೇಲ್ಚಾವಣಿಯನ್ನು ನೋಡುತ್ತಾ, ಕೈಯಲ್ಲಿ ರೈಲ್ಸ್ ಟ್ಯೂಬನ್ನು ಹಿಡಿದು ಸಣ್ಣಗೆ ಆಟವಾಡಿಕೊಳ್ಳುತ್ತಿದ್ದೆ. ನಾನು ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿ ಮನೆಗೆ ಬಂದ ಮೇಲೂ ಈ ಟ್ಯೂಬ್ ನನ್ನ ಮೂಗನ್ನು ಬಿಟ್ಟು ಹೋಗದೆ ತನ್ನ ಕೆಲಸವನ್ನು ನಿರ್ವಹಿಸುತ್ತಿತ್ತು. ಮಾರ್ಚ್ ತಿಂಗಳ ಮೊದಲವಾರದಲ್ಲಿ ಡಾ. ಆಮೀರ್ ಮತ್ತು ಡಾ. ಹರೀಶ್‌ನಾಯಕ್ ಅವರು ನನ್ನ ದೈಹಿಕಸ್ಥಿತಿಯನ್ನು ಗಮನಿಸಿ, ನನ್ನ ಹೊಟ್ಟೆಗೆ ಪೆಗ್ ಟ್ಯೂಬ್ (Percutaneous Endoscopic Gastrostomy)[೨೩] ಅಳವಡಿಸಲು ನಿರ್ಧರಿಸುವ ತೀರ್ಮಾನ ತೆಗೆದುಕೊಂಡರು. ಆಗ ನನ್ನ ಮೂಗಿನಲ್ಲಿ ನೇತಾಡುತ್ತಿದ್ದ ರೈಲ್ಸ್ ಟ್ಯೂಬ್ ನನ್ನನ್ನು ಬಿಟ್ಟುಹೋಯಿತು.

ನನ್ನ ಜಠರಕ್ಕೆ ಜೋಡಿಸಲಾದ ಪೆಗ್‌ಟ್ಯೂಬ್‌ನದು ಇನ್ನೊಂದು ಕಥೆ. ಈ ಟ್ಯೂಬನ್ನು ಹಾಕುವ ಸಮಯದಲ್ಲಿ ನಾನು ಆಸ್ಪತ್ರೆಯ ಒಳರೋಗಿಯಾಗಿರಲಿಲ್ಲ. ಈ ಟ್ಯೂಬನ್ನು ಎಂಡೋಸ್ಕೋಪಿ ವಿಭಾಗದವರು ರೋಗಿಯ ಜಠರಕ್ಕೆ ಜೋಡಿಸುತ್ತಿದ್ದರು. ಜಠರದ ಮೇಲ್ಭಾಗದ ನಡುಮಧ್ಯೆ ರಂಧ್ರವನ್ನು ಕೊರೆದು ಅಲ್ಲಿಗೆ ಈ ಪೆಗ್ ಟ್ಯೂಬನ್ನು ಅಳವಡಿಸಬೇಕು. ಈ ಕ್ರಿಯೆ ಮಾಡಿಸಿಕೊಳ್ಳುವ ನಾನು ಖಾಲಿ ಹೊಟ್ಟೆಯಲ್ಲಿ ಬೆಳಿಗ್ಗೆ ಎಂಡೋಸ್ಕೋಪಿ ವಿಭಾಗಕ್ಕೆ ಹೋದೆ. ಅಲ್ಲಿನ ತಜ್ಞ ವೈದ್ಯ ಡಾ. ಅಬಿದ್ ಸತ್ತಾರ್ ಅರಿವಳಿಕೆ ತಜ್ಞರೊಡಗೂಡಿ ನನಗೆ ಪೆಗ್ ಟ್ಯೂಬ್ ತೊಡಿಸಲು ಸಜ್ಜಾದರು. ಅರಿವಳಿಕೆ ತಜ್ಞ ತುಸು ಮೈಲ್ಡ್ ಆದ ಅರಿವಳಿಕೆಯನ್ನು ನೀಡಿದ. ಏಕೆಂದರೆ, ನನಗೆ ಮಯೇಸ್ತೇನಿಯಾ ಗ್ರೇವಿಸ್ ಕಾಯಿಲೆಯಿರುವುದರಿಂದ ತುಂಬಾ ಎಚ್ಚರಿಕೆಯಿಂದ ಅರಿವಳಿಕೆಯನ್ನು ನೀಡಬೇಕಾಗಿತ್ತು. ಡಾ. ಆಮೀರ್ ಆ ಮೊದಲೇ ಡಾ. ಅಬಿದ್ ಸತ್ತಾರ್ ಅವರಿಗೆ ಆ ಬಗ್ಗೆ ಸೂಕ್ತ ತಿಳಿವಳಿಕೆ ನೀಡಿದ್ದರು. "ಸರ್, ಈ ಟ್ಯೂಬನ್ನು ನಿಮ್ಮ ಬಾಯಿ ಮೂಲಕ ಅನ್ನನಾಳಕ್ಕೆ ತಳ್ಳಿ ಜಠರಕ್ಕೆ ಪ್ರವೇಶಪಡೆದು ಅಲ್ಲಿ

ಪೆಗ್‌ಟ್ಯೂಬ್ ಸರಿಯಾಗಿ ಕಚ್ಚಿಕೊಂಡು ನಿಲ್ಲುವಂತೆ ಅಳವಡಿಸುತ್ತೇವೆ. ನಿಮಗೆ ಅರಿವಳಿಕೆ ನೀಡಿರುವುದರಿಂದ ನಿಮಗೆ ಗೊತ್ತಾಗುವುದಿಲ್ಲ. ಹದಿನೈದು ಇಪ್ಪತ್ತು ನಿಮಿಷದಲ್ಲಿ ನಮ್ಮ ಕೆಲಸ ಮುಗಿಯುತ್ತದೆ" ಎಂದ ಡಾ. ಅಬಿದ್ ಸತ್ತಾರ್ ನನ್ನ ಬಾಯಿಯೊಳಕ್ಕೆ ಒಂದಿಂಚು ದಪ್ಪವಿದ್ದ ಕಪ್ಪು ಪೈಪ್ ಒಂದನ್ನು ತುರುಕಿ ಗಂಟಲಲ್ಲಿ ತಳ್ಳಿ "ನುಂಗಿ ಸರ್, ನುಂಗಿ" ಎಂದರು. ನಾನು ನುಂಗಲು ಯತ್ನಿಸಿದೆ. ಗಂಟಲಲ್ಲಿ ನೋವಾಗುತ್ತಿತ್ತು. "ಪ್ಲೀಸ್ ನುಂಗಿ, ನುಂಗಿ" ಡಾಕ್ಟರ್‌ರ ಧ್ವನಿ ನಿಧಾನವಾಗಿ ನನ್ನ ಕಿವಿಯಿಂದ ಮರೆಯಾಯಿತು.

ನಾನು ಕಣ್ಣು ತೆರೆದಾಗ ಎಂಡೋಸ್ಕೋಪಿ ವಿಭಾಗದ ಹೊರಕೊಠಡಿಯ ಮಂಚದ ಮೇಲೆ ಮಲಗಿದ್ದೆ. ತಲೆ ನೋಯುತ್ತಿತ್ತು. ಮೈಯೆಲ್ಲಾ ನೋವಾದಂತೆ ಮುಲುಗುಡುತ್ತಿತ್ತು. ನನ್ನ ಎದುರಿಗೆ ನನ್ನ ಹೆಂಡತಿ ಮಗ ಇದ್ದರು. ನನ್ನ ತೋಳಿನಲ್ಲಿ ಜೋಡಿಸಿದ್ದ ಐವಿಲೈನಿನಿಂದ ಗ್ಲೂಕೋಸ್ ಡ್ರಿಪ್ ನನ್ನ ದೇಹದೊಳಕ್ಕೆ ಹೋಗುತ್ತಿತ್ತು. "ಎರಡು ಗಂಟೆ ಇಲ್ಲೇ ಇದ್ದು ಹೋಗಲು ಹೇಳಿದ್ದಾರೆ. ನೀವು ಮಲಗಿ ನಿದ್ರಿಸಿರಿ" ಎಂದಳು ಸುವರ್ಣ. ನಾನು ನನ್ನ ಹೊಟ್ಟೆಯ ಮೇಲೆ ಕೈಯಾಡಿಸಿದೆ. ನನ್ನ ಹೊಟ್ಟೆಯ ಮಧ್ಯಭಾಗದದಿಂದ ರೈಲ್ಸ್ ಟ್ಯೂಬ್‌ಗಿಂತ ದಪ್ಪನಾದ ಟ್ಯೂಬ್ ಒಂದು ಹೊರ ಬಂದು ಒಂದು ಅಡಿ ಉದ್ದವಾಗಿ ನೇತಾಡುತ್ತಿತ್ತು.

ನಾನು ನನ್ನ ಮೂಗನ್ನು ಮುಟ್ಟಿ ನೋಡಿದೆ. ಅಲ್ಲಿ ರೈಲ್ಸ್‌ಟ್ಯೂಬ್ ಇರಲಿಲ್ಲ. ನನ್ನ ಮೂಗಿನಿಂದ ಗಂಟಲಿಗೆ ಇಳಿದು ಅನ್ನನಾಳದ ಮೂಲಕ ಜಠರ ಸ್ಪರ್ಶಿಸುತ್ತಿದ್ದ ಆ ಟ್ಯೂಬ್ ಮಾಯವಾಗಿತ್ತು. ಆಸ್ಪತ್ರೆಯವರು ನನಗ್ಹಾಕಿದ್ದ ಮೂಗುದಾರವನ್ನು ತೆಗೆದಿದ್ದರು. ಈಗ ನನ್ನ ಮುಖದ ಮೇಲೆ ಯಾವುದೇ ಪ್ಲಾಸ್ಟರ್ ಅಂಟಿಸಿರಲಿಲ್ಲ. ನನ್ನ ಮುಖ ಸ್ವತಂತ್ರಗೊಂಡಿತ್ತು.

ಸುಮಾರು ಎರಡು ಗಂಟೆಯ ನಂತರ ಎಂಡೋಸ್ಕೋಪಿ ವಿಭಾಗದ ಬ್ರದರ್ ನನ್ನ ಮನೆಯವರಿಗೆ ಪೆಗ್‌ಟ್ಯೂಬ್‌ನಲ್ಲಿ ಹೇಗೆ ಆಹಾರ ನೀಡಬೇಕೆಂದು ತೋರಿಸಲು ಮುಂದಾದ. ಟ್ಯೂಬನ್ನು ಎಡಗೈಲಿ ಹಿಡಿದು ಮೃದುವಾಗಿ ಮೇಲಕ್ಕೆತ್ತಿದ್ದ. ಅದರ ಬುಡ ತುಸು ಅಲ್ಲಾಡಿತು. ಆ ಕೂಡಲೆ ಜಠರದಿಂದ ಪೆಗ್ ಟ್ಯೂಬ್‌ನ ಮೂಲಕ ರಕ್ತ ಹೊರಹೊಮ್ಮಲು ಶುರುವಾಯಿತು. ರಕ್ತವನ್ನು ಕಂಡ ನನ್ನ ಮನೆಯವರಿರಲಿ, ಸ್ವತಃ ಬ್ರದರ್ ಗಾಬರಿಯಾದ. ಪೆಗ್‌ಟ್ಯೂಬನ್ನು ಅಳವಡಿಸುವ ಪ್ರಕ್ರಿಯೆಯಲ್ಲಿ ಏನೋ ಎಡವಟ್ಟಾಗಿದೆ ಎಂಬುದನ್ನು ಅವನ ಕಣ್ಣುಗಳು ಹೇಳುತ್ತಿದ್ದವು. ಟ್ಯೂಬಿನ ತುಂಬ ತುಂಬಿಕೊಂಡ ರಕ್ತವನ್ನು ಹೊರ ತೆಗೆದು ಟ್ಯೂಬಿನ ಕ್ಯಾಪನ್ನು ಭದ್ರಗೊಳಿಸಿ, ಡಾ. ಅಬಿದ್ ಸತ್ತಾರ್‌ಗೆ ತಿಳಿಸಲು ಬ್ರದರ್ ಓಡಿದ.

ಡಾ. ಅಬಿದ್ ಸತ್ತಾರ್ ಬೆಳಗಿನ ತನ್ನ ಕರ್ತವ್ಯ ಮುಗಿಸಿ ಊಟಕ್ಕೆ ಮನೆಗೆ ಹೋಗಿದ್ದರು ಅಂತ ಕಾಣುತ್ತೆ. ಬ್ರದರ್‌ನಿಂದ ಫೋನ್ ಮೂಲಕ ಸುದ್ದಿ ತಿಳಿದು ಅವಸರವಸರವಾಗಿ ಅಲ್ಲಿಗೆ ಬಂದರು. ಮತ್ತೆ ನನ್ನನ್ನು ಎಂಡೋಸ್ಕೋಪಿ ಟೇಬಲ್ಲಿನ ಮೇಲೆ ಮಲಗಿಸಲಾಯಿತು. ಈ ಬಾರಿ ನನಗೆ ಅವರು ಅರಿವಳಿಕೆಯನ್ನು ನೀಡಲು ಸಾಧ್ಯವಿರಲಿಲ್ಲ. ಅರಿವಳಿಕೆಯನ್ನು ತಾಳಿಕೊಳ್ಳುವ ಶಕ್ತಿ ನನ್ನ ದೇಹಕ್ಕೆ ಇರಲಿಲ್ಲ. ಡಾ. ಅಬಿದ್ ಸತ್ತಾರ್ ನನ್ನನ್ನು ಕುರಿತು "ಎರಡೇ ಎರಡು ನಿಮಿಷ ಕೋ ಆಪರೇಟ್ ಮಾಡಿ. ಹೊಟ್ಟೆಯಲ್ಲಿ ಏನಾಗಿದೆಯೆಂದು ನೋಡಿ ಬಿಡುತ್ತೇನೆ" ಎಂದು, ನನ್ನನ್ನು ತುಸು ಎಡಕ್ಕೆ ತಿರುಗಿಸಿ ಎಂಡೋಸ್ಕೋಪಿ ಪೈಪನ್ನು ನನ್ನ ಬಾಯಿಯ ಮೂಲಕ ತುರುಕಲಾರಂಭಿಸಿದರು. "ಪ್ಲೀಸ್ ನುಂಗಿ, ನುಂಗಿ" ಅಂದರು. ನನ್ನ ಹೊಟ್ಟೆ ತೊಳಸಿತು, ವಾಂತಿಮಾಡತೊಡಗಿದೆ. ಅದನ್ನು ಗಮನಿಸಿದ "ಅಕ್ಕ" ನನ್ನ ಬಾಯಿಯ ಬಳಿ ಕಿಡ್ನಿ ಟ್ರೇಯನ್ನು ಹಿಡಿದಳು. ರಕ್ತ! ರಕ್ತ ನನ್ನ ಬಾಯಿಂದ ಹೊರ ಬಂದು ಕಿಡ್ನಿ ಟ್ರೇಯನ್ನು ತುಂಬಿಕೊಳ್ಳತೊಡಗಿತು. ಎಂಡೋಸ್ಕೋಪಿ ಮೂಲಕ ಪೆಗ್‌ಟ್ಯೂಬ್ ಅಳವಡಿಸುವ ಪ್ರಕ್ರಿಯೆಯಲ್ಲಿ ಸೂಕ್ಷ್ಮ ರಕ್ತನಾಳಗಳು ಘಾಸಿಗೊಂಡು ಒಡೆದು ಹೋಗಿತ್ತು. ಅದರಿಂದ ರಕ್ತಸ್ರಾವವಾಗಿ ನನ್ನ ಜಠರದ ತುಂಬ ರಕ್ತ ತುಂಬಿಕೊಂಡಿತ್ತು. ಡಾ. ಅಬಿದ್ ಸತ್ತಾರ್ ಒಡೆದು ಹೋಗಿದ್ದ ರಕ್ತನಾಳದ ಭಾಗವನ್ನು ಪತ್ತೆ ಮಾಡಿ ರಕ್ತ ಒಸರದಂತೆ ಚಿಕಿತ್ಸೆ ಮಾಡಿದರು.

ಈ ವಿಷಯ ಅಷ್ಟು ಹೊತ್ತಿಗಾಗಲೇ ಡಾ. ಆಮೀರ್ ಮತ್ತು ಡಾ. ಹರೀಶ್‌ನಾಯಕ್‌ರವರಿಗೆ ತಿಳಿದು, ಅವರು ಅಲ್ಲಿಗೆ ಬಂದರು. ಸುರಿದ ರಕ್ತ ಮತ್ತು ನನ್ನ ದೈಹಿಕ ಪರಿಸ್ಥಿತಿಯನ್ನು ಕಂಡ ಅವರು ನನ್ನನ್ನು ಮನೆಗೆ ಕಳಿಸಲು ಒಪ್ಪಲಿಲ್ಲ. ನನ್ನನ್ನು ಮತ್ತೆ ಸೂಕ್ತ ಚಿಕಿತ್ಸೆ ಮತ್ತು ಅವಲೋಕನಕ್ಕಾಗಿ ಎಂಐಸಿಯುನ ಹೆಚ್‌ಡಿಯು ವಿಭಾಗಕ್ಕೆ ದಾಖಲು ಮಾಡಲಾಯಿತು. ರಕ್ತಸ್ರಾವವಾಗಿರುವ ಕಾರಣ, ನನ್ನ ರಕ್ತದ ಪ್ರಮಾಣ ಕಡಿಮೆಯಾಗಿತ್ತು. ನಾನು ಹೆಚ್‌ಡಿಯುನಲ್ಲಿ ದಾಖಲಾದ ಕೂಡಲೇ ಅಲ್ಲಿಯೂ ಕೂಡ ಒಂದು ಲೀಟರಿನಷ್ಟು ರಕ್ತವನ್ನು ವಾಂತಿಮಾಡಿಕೊಂಡೆ. ಅದನ್ನು ಕಂಡ ಡಾ. ಹರೀಶ್‌ನಾಯಕ್ ನನಗೆ ಎರಡು ಬಾಟಲ್ ರಕ್ತವನ್ನು ನೀಡಲು ಶಿಫಾರಸ್ಸು ಮಾಡಿದರು. ನನಗೆ ಗ್ಲೂಕೋಸ್ ಮತ್ತು ರಕ್ತವನ್ನು ನೀಡಲಾರಂಭಿಸಿದರು.

ಅಂದು ಶುಕ್ರವಾರ. ಶನಿವಾರ ಮತ್ತೆ ಡಾ. ಅಬಿದ್ ಸತ್ತಾರ್ ನನ್ನ ಜಠರದಲ್ಲಿ ಎಲ್ಲವೂ ಸರಿಯಾಗಿದೆಯೋ ಇಲ್ಲವೋ ಎಂಬುದನ್ನು ಖಾತ್ರಿ ಪಡಿಸಿಕೊಳ್ಳಲು ಮತ್ತೆ ಒಂದು ಎಂಡೋಸ್ಕೋಪಿ ಪ್ರಕ್ರಿಯೆಯನ್ನು ನನ್ನ ಮೇಲೆ ಪ್ರಯೋಗಿಸಿದ್ದರು. ನನ್ನ ಜಠರ ಸುಸ್ಥಿತಿಗೆ ಬಂದಿತ್ತು. ಅದು ಸಂಜೆಯ ಹೊತ್ತು. ಆಗ ತಾನೆ ಬೆಂಗಳೂರಿನಿಂದ

ನನ್ನ ಮಗಳು ನೇರವಾಗಿ ಆಸ್ಪತ್ರೆಗೆ ಬಂದಿದ್ದಳು. ಡಾ. ಸತ್ತಾರ್‌ರವರು ನನ್ನ ಮಕ್ಕಳನ್ನು ಕರೆದು ಎಂಡೋಸ್ಕೋಪಿ ಮಾನಿಟರ್ ಮೂಲಕ ಜಠರವೆಲ್ಲವೂ ಸರಿಯಾಗಿದೆ ಎಂಬುದನ್ನು ತೋರಿಸಿದರು. ಅಲ್ಲಿ ರಕ್ತದ ಯಾವ ಚಿಹ್ನೆಯೂ ಇರಲಿಲ್ಲ. ಡಾ. ಅಬಿದ್ ಸತ್ತಾರ್ ನನ್ನ ಕೇಸ್‌ನಿಂದ ಗಾಬರಿಯಾಗಿದ್ದರು. "ನಾನು ಅಪೊಲೊದಲ್ಲಿ ಆರನೂರ ತೊಂಬತ್ತೊಂಬತ್ತು ಎಂಡೋಸ್ಕೋಪಿಗಳನ್ನು ಮಾಡಿದ್ದೆ. ಎಂದೂ ಹೀಗಾಗಿರಲಿಲ್ಲ. ನನ್ನ ಏಳನೂರನೇ ಕೇಸ್ ಈ ರೀತಿಯಾಯ್ತು" ಅಂತ ವ್ಯಸನಪಟ್ಟರು.

ಡಾ. ಸತ್ತಾರ್ ನನಗೆ ಜೋಡಿಸಲಾಗಿದ್ದ ರೈಲ್ಸ್ ಟ್ಯೂಬ್ ನನ್ನ ಅನ್ನನಾಳ ಮತ್ತು ಜಠರದಲ್ಲಿ ಆಗಲೇ ಸೃಷ್ಟಿ ಮಾಡುತ್ತಿದ್ದ ಅಲ್ಸರ್‌ಗಳನ್ನು ನನ್ನ ಮಕ್ಕಳಿಗೆ ತೋರಿದರು. ಅನ್ನನಾಳದಲ್ಲಿದ್ದ ರೈಲ್ಸ್ ಟ್ಯೂಬ್‌ನ ನಾಳ ಕಿಲುಬುಗಟ್ಟತೊಡಗಿತ್ತು. ಅದನ್ನು ಸರಿಯಾದ ಸಮಯಕ್ಕೆ ತೆಗೆಸಿರುವುದಾಗಿ ಅವರು ಹೇಳಿದರು. ನಾನು ತೆಗೆದುಕೊಳ್ಳುತ್ತಿರುವ ಸ್ಟಿರಾಯ್ಡ್ ಮಾತ್ರೆ ನನ್ನ ಜಠರದ ಸೂಕ್ಷ್ಮ ರಕ್ತನಾಳಗಳನ್ನು ಮತ್ತು ಮಾಂಸಖಂಡಗಳನ್ನು ಮೃದುಗೊಳಿಸಿರುವುದಾಗಿ ಆತಂಕ ವ್ಯಕ್ತಪಡಿಸಿದರು.

ಡಾ. ಆಮೀರ್ ಮೊಹಿನ್ ಸ್ಟಿರಾಯ್ಡ್ ಅನ್ನು ಕುರಿತು "ಅದು ಡಬಲ್ ಎಡ್ಜೆಡ್ ಸ್ವಾರ್ಡ್. ಅನುಕೂಲದ ಜೊತೆ ಅನಾನುಕೂಲ ಹಿಂಬಾಲಿಸುತ್ತದೆ" ಎಂದು ಆಡುತ್ತಿದ್ದ ಮಾತು ನೆನಪಾಯಿತು.

ಹೌದು. ಸ್ಟಿರಾಯ್ಡ್ ನಿಜಕ್ಕೂ 'ಇರ್ವಾಯ್ ಖಡ್ಗ'. ಅದರ ಒಳಿತು ಕೆಡುಕು ಕ್ರಿಯೆಗಳನ್ನು ನಾನು ಸಮನಾಗಿ ಮುಂದಿನ ದಿನಗಳಲ್ಲಿ ಅನುಭವಿಸಿದೆ.

೧೦. ಸೆಕ್ರಿಷನ್ ಮತ್ತು ಸಕ್ಷನ್

ನಮ್ಮ ದೇಹದಲ್ಲಿರುವ ಗ್ರಂಥಿಗಳು ಮತ್ತು ಅಂಗಾಂಶಗಳು ತಮ್ಮಿಂದ ಸ್ರವಿಸುವ ದ್ರವರೂಪದ ವಸ್ತುವನ್ನು ಸೆಕ್ರಿಷನ್ (Secretion) ಎಂದು ಕರೆಯುತ್ತಾರೆ. ನಮ್ಮ ಬಾಯಿಯಲ್ಲಿರುವ ಲಾಲಾಗ್ರಂಥಿಗಳು ಜೊಲ್ಲನ್ನು ಸ್ರವಿಸುತ್ತವೆ. ನಮ್ಮ ಶ್ವಾಸಕೋಶಗಳು ಕಫವನ್ನು ಜಿನುಗಿಸುತ್ತವೆ. ಮರಣಶಯ್ಯೆಯಲ್ಲಿರುವ ರೋಗಿಗಳಲ್ಲಿ ರೋಗ ನಿರೋಧಕ ಅಂಶವಾಗಿ ಅಥವಾ ರೋಗವನ್ನು ಪ್ರತಿರೋಧಿಸುವ ಸಲುವಾಗಿ ಇಂಥ ದ್ರವರೂಪದ ಅನೇಕ ಅಂಶಗಳನ್ನು ನಮ್ಮ ದೇಹದ ಅಂಗಾಂಶಗಳು ಹೊರ ಹಾಕುತ್ತವೆ. ಐಸಿಯುನಲ್ಲಿರುವ ರೋಗಿ ಗಳಲ್ಲಿ - ಅಪಘಾತದಿಂದ ಸಾವಿನಂಚಿನಲ್ಲಿ ರುವವರನ್ನು ಹೊರತುಪಡಿಸಿ - ಬಹುಪಾಲು ಮಂದಿಗೆ ಈ ರಸಗಳು ದೇಹದ ರಂಧ್ರ ಗಳಿಂದ ಹೊರಬರುತ್ತಿರುತ್ತವೆ. ಅದರಲ್ಲಿ ಮುಖ್ಯವಾಗಿ ಬಾಯಿಯಲ್ಲಿ ಉತ್ಪಾದನೆ ಯಾಗುವ ಜೊಲ್ಲು ಮತ್ತು ಶ್ವಾಸಕೋಶ ಗಳಲ್ಲಿ ಉತ್ಪತ್ತಿಯಾಗಿ ಹೊರಬರುವ ಕಫ ರೋಗಿಯನ್ನು ತುಂಬಾ ಕಾಡುತ್ತವೆ.

ರೋಗಿ ಸ್ವತಃ ಜೊಲ್ಲನ್ನು ಹೊರ ಉಗಿಯುವ ಮತ್ತು ಶ್ವಾಸನಾಳದಲ್ಲಿ ಕಟ್ಟುವ ಕಫವನ್ನು ಕೆಮ್ಮಿ ಹೊರತೆಗೆಯುವ ಶಕ್ತಿಯನ್ನು ಈ ಹಂತದಲ್ಲಿ ಕಳೆದುಕೊಂಡಿರುತ್ತಾನೆ. ಇಂಥ ರೋಗಿಗಳು ಕೃತಕ ಉಸಿರಾಟ ಪ್ರಕ್ರಿಯೆಯಲ್ಲಿರುತ್ತಾರೆ, ಇಲ್ಲವೇ, ಕೋಮಾದಲ್ಲಿರುತ್ತಾರೆ. ಅವರ ಬಾಯಿಯಲ್ಲಿ ಮತ್ತು ಗಂಟಲು ಶ್ವಾಸನಾಳಗಳಲ್ಲಿ ಜೊಲ್ಲು ಕಫಗಳು ಕಟ್ಟಿಕೊಂಡು ಅವನ ಉಸಿರಾಟಕ್ಕೆ ಅಡ್ಡಿಯನ್ನುಂಟು

ಮಾಡುತ್ತವೆ. ಅದರಲ್ಲೂ ರೋಗಿಯ ಶ್ವಾಸನಾಳದಲ್ಲಿ ಕಟ್ಟಿಕೊಳ್ಳುವ ಕಫ ಉಸಿರುಕಟ್ಟಿಸಿ ಅವನಿಗೆ ಯಾತನೆಯನ್ನು ನೀಡುತ್ತದೆ. ಕೆಲವೊಮ್ಮೆ ಪ್ರಾಣಾಪಾಯದ ಸ್ಥಿತಿಗೂ ಒಯ್ಯುತ್ತದೆ. ಇಂಥ ಸ್ಥಿತಿಯಲ್ಲಿ ರೋಗಿಯ ಬಾಯಿ ಮತ್ತು ಶ್ವಾಸನಾಳದ ಈ ಕಫವನ್ನು ಯಂತ್ರದ ಸಹಾಯದಿಂದ ಹೊರತೆಗೆಯುವುದು ಅನಿವಾರ್ಯವಾಗುತ್ತದೆ. ಹೀಗೆ ಕಟ್ಟಿಕೊಂಡ ದ್ರವರೂಪದ ಕಫವನ್ನು ಯಂತ್ರದ ಸಹಾಯದಿಂದ ಹೊರತೆಗೆಯುವ ಕ್ರಿಯೆಗೆ 'ಸಕ್ಸನ್' ಎನ್ನುತ್ತಾರೆ.

ಐಸಿಯುನಲ್ಲಿ ಬ್ರದರ್‌ಗಳು ನನ್ನನ್ನು ಕುರಿತು 'ಈ ರೋಗಿಗೆ ಸೆಕ್ರಿಷನ್ ಜಾಸ್ತಿ' ಎಂದು ಮಾತಾಡಿಕೊಳ್ಳುವುದನ್ನು ಕೇಳುತ್ತಿದ್ದೆ. ಅವರು ಪದೆ ಪದೆ ನನ್ನ ಬಾಯಿಯಿಂದ ಕಫ ಮತ್ತು ಜೊಲ್ಲನ್ನು ಹೊರತೆಗೆಯಬೇಕಾಗುತ್ತಿತ್ತು. ಇಲ್ಲದಿದ್ದರೆ ನನ್ನ ಬಾಯಿಯ ತುಂಬ ಗಟ್ಟಿಯಾದ ಜೊಲ್ಲು ತುಂಬಿ ಕಟಬಾಯಿಂದ ಹೊರಬರುತ್ತಿತ್ತು. ನನ್ನ ಶ್ವಾಸನಾಳಗಳು ಕಫದಿಂದ ಭರ್ತಿಯಾಗಿ ಗೊರ್ ಗೊರ್ ಶಬ್ದಮಾಡಿ ನನಗೆ ನೋವುಂಟಾಗುತ್ತಿತ್ತು. ಅಂಗಾತ ಮಲಗಿರುತ್ತಿದ್ದ ನನ್ನನ್ನು ಸ್ವಚ್ಛಗೊಳಿಸಲು ಪಕ್ಕಕ್ಕೆ ವಾಲಿಸಿದಾಗ ನನ್ನ ಬಾಯಿಯಿಂದ ಜೊಲ್ಲು ಹಾಸಿಗೆ ತಲೆದಿಂಬುಗಳನ್ನೂ ತೇವಗೊಳಿಸುತ್ತಿತ್ತು. ತಲೆದಿಂಬು ಮತ್ತು ಹಾಸಿಗೆಯ ಭಾಗ ನೆನೆಯದಿರಲೆಂದು ನರ್ಸುಗಳು ಆ ಭಾಗದಲ್ಲಿ ಪ್ಲಾಸ್ಟಿಕ್‌ನ ಅಂಡರ್ ಪ್ಯಾಡನ್ನು ಹಾಕುತ್ತಿದ್ದರು.

ನನ್ನಲ್ಲಿ ಉತ್ಪತ್ತಿಯಾಗುತ್ತಿದ್ದ ಈ ಕಫ ಮತ್ತು ಜೊಲ್ಲನ್ನು ಹೊರತೆಗೆಯಲು ನರ್ಸುಗಳು ವಿದ್ಯುತ್‌ಚಾಲಿತ ನಿರ್ವಾತ ನಳಿಗೆಯನ್ನು ಬಳಸುತ್ತಿದ್ದರು. ವಿದ್ಯುತ್ ಸಹಾಯದಿಂದ ನಳಿಗೆಯನ್ನು ನಿರ್ವಾತಗೊಳಿಸಿ, ಸ್ರವಿಸುತ್ತಿರುವ ಜೊಲ್ಲಿಗೆ, ಕಫಕ್ಕೆ ಅದನ್ನು ಹಿಡಿದಾಗ ಆ ನಳಿಕೆ ಕ್ಷಣಾರ್ಧದಲ್ಲಿ ಆ ಎಲ್ಲಾ ಕಫ ಮತ್ತು ಜೊಲ್ಲನ್ನು ಹೀರಿ ನಳಿಗೆಗೆ ಅಳವಡಿಸಿರುವ ಟ್ಯೂಬಿನ ಮೂಲಕ ಯಂತ್ರದಲ್ಲಿ ಜೋಡಿಸಿರುವ ಕಾಲು ಅಡಿ ವ್ಯಾಸದ ಗಾಜಿನ ಪ್ರಣಾಳಿಕೆಯಲ್ಲಿ ತುಂಬಿಕೊಳ್ಳುತ್ತಿತ್ತು. ಆ ನಳಿಗೆ ಬಾಯಿ ಮತ್ತು ಗಂಟಲಿನ ಆಳದಲ್ಲಿ ಶ್ವಾಸನಾಳದ ಬಾಯಿಯಲ್ಲಿ ಕಫ ಹೀರುವಾಗ ನನಗೆ ನೋವಾಗುತ್ತಿತ್ತು. "ಈ ನಳಿಕೆಯನ್ನು ಕಚ್ಚಬೇಡಿ" ಎಂದು ನರ್ಸುಗಳು ಸದಾ ಎಚ್ಚರಿಕೆ ನೀಡುತ್ತಿದ್ದರು.

ಸಾಮಾನ್ಯವಾಗಿ ಸಕ್ಸನ್ ಮಾಡುವಾಗ ಇಬ್ಬರು ನರ್ಸುಗಳು ಇರುತ್ತಿದ್ದರು. ಇಬ್ಬರೂ ಕೈಗಳಿಗೆ ಗ್ಲೌಸ್ ಹಾಕಿಕೊಂಡು ನಳಿಗೆಯನ್ನು ರೋಗಿಗೆ ನೋವಾಗದಂತೆ ನಾಜೂಕಾಗಿ ಬಳಸಬೇಕಾಗುತ್ತಿತ್ತು. ನನ್ನ ಅನುಭವದಲ್ಲಿ ಅದರಲ್ಲಿ ಪರಿಣತರಾದವರನ್ನೂ ಅಡ್ಡ ಕಸುಬಿಗಳನ್ನೂ ನೋಡುವಂತಾಯಿತು. ಕೆಲಸ ಗೊತ್ತಿಲ್ಲದ ಅಥವಾ ನಯಗಾರಿಕೆಯಿಲ್ಲದ ನರ್ಸುಗಳು ಬಾಯಿ ಮತ್ತು ಶ್ವಾಸನಾಳದ

ಅಂಗಾಂಶಗಳಿಗೆ ಘಾಸಿಯನ್ನುಂಟು ಮಾಡುತ್ತಿದ್ದರು. ಕಫ ಹೋಗಿ ನಿರಾಳವಾದ ಸ್ಥಿತಿ ಪ್ರಾಪ್ತವಾದ ನೆಮ್ಮದಿ ಆ ಸಂದರ್ಭದಲ್ಲಿ ಬರುತ್ತಿದ್ದರೂ ಅವರುಂಟು ಮಾಡಿದ ಘಾಸಿಯಿಂದ ನೋವು ಅಧಿಕಗೊಳ್ಳುತ್ತಿತ್ತು.

ನಾನು ಐಸಿಯುಗೆ ಸೇರಿ ಹತ್ತು ದಿನಗಳಾದರೂ ನನ್ನ ಉಸಿರಾಟ ಪ್ರಕ್ರಿಯೆ ಸುಧಾರಣೆಯಾಗದುದನ್ನು ಕಂಡು ಡಾ. ಹರೀಶ್‌ನಾಯಕ್ "ಶಿವರಾಮು ಸರ್, ನಿಮ್ಮ ಬಾಯಿ ಮೂಲಕ ಉಸಿರಾಟಕ್ಕೆಂದು ಜೋಡಿಸಿರುವ ಎಂಡೋಟ್ರೇಕಿಯಲ್ ಟ್ಯೂಬ್ (Endotracheal tube)ನ್ನು ತೆಗೆದು ನಿಮ್ಮ ಕುತ್ತಿಗೆಯಲ್ಲಿ ಒಂದು ಸಣ್ಣ ರಂಧ್ರ ಮಾಡಿ ಅಲ್ಲಿಗೆ ಟ್ರೇಕಿಯಾಸ್ಟಮಿ (Tracheostomy) ಟ್ಯೂಬನ್ನು ಜೋಡಿಸುತ್ತೇವೆ. ಅದರಿಂದ ನಿಮ್ಮ ಬಾಯಿ ಮತ್ತು ಗಂಟಲಿಗೆ ಸ್ವಲ್ಪ ಆರಾಮ ಸಿಗುತ್ತದೆ. ನಿಮ್ಮ ಕುತ್ತಿಗೆಯಲ್ಲಿ ಜೋಡಿಸುವ ಟ್ರೇಕಿಯಾಸ್ಟಮಿ ಟ್ಯೂಬಿನಿಂದ ನಿಮಗೆ ಕೃತಕ ಉಸಿರು ನೀಡುವುದು ಸುಲಭವಾಗುತ್ತದೆ" ಎಂದರು. ಅದಕ್ಕೆ ನನ್ನ ಒಪ್ಪಿಗೆ ನೀಡಿದೆ. ಒಂದು ಮಧ್ಯಾಹ್ನ ನನಗೆ ಲಘು ಅರಿವಳಿಕೆ ನೀಡಿ, ನನ್ನ ಕುತ್ತಿಗೆಯಲ್ಲಿ ರಂಧ್ರ ಮಾಡಿ ಅಲ್ಲಿಂದ ಶ್ವಾಸನಾಳಕ್ಕೆ ಯಂತ್ರವೊಂದನ್ನು ಅಳವಡಿಸಿದರು. ನನ್ನ ಕುತ್ತಿಗೆಯಲ್ಲಿದ್ದ ಆ ಯಂತ್ರದ ಬಾಯಿಯಿಂದ ವೆಂಟಿಲೇಟರ್ ಮೂಲಕ ಗಾಳಿಯನ್ನು ನೀಡಲಾರಂಭಿಸಿದರು. ಈ ಅಳವಡಿಕೆಯಿಂದಾಗಿ ನನ್ನ ಬಾಯಿ ತುಸು ಸ್ವಾತಂತ್ರ್ಯವನ್ನು ಕಂಡುಕೊಂಡಿತು. ಆದರೂ ನನ್ನ ಮೂಗಿನಿಂದ ಗಂಟಲ ಮೂಲಕ ಹೋಗಿದ್ದ ರೈಲ್ಸ್ ಟ್ಯೂಬ್ ಅಸಹಜವಾಗಿ ನನ್ನೊಡನೆ ವರ್ತಿಸುತ್ತಿತ್ತು.

ಜನವರಿ ೨೦೧೪ರ ಮೊದಲವಾರದಲ್ಲಿ ನನ್ನ ಕುತ್ತಿಗೆಗೆ ಜೋಡಿಸಿದ ಟ್ರೇಕಿಯಾಸ್ಟಮಿ, ನಾನು ಆಸ್ಪತ್ರೆಯಿಂದ ಬಿಡುಗಡೆಗೊಂಡು ಮನೆಗೆ ಬಂದ ಮೇಲೂ ಎರಡು ತಿಂಗಳು ನನ್ನ ಕತ್ತಿನ ತಳಭಾಗದಲ್ಲಿದ್ದು ತನ್ನ ಅಸ್ತಿತ್ವವನ್ನು ಎಲ್ಲರಿಗೂ ಸಾರುತ್ತಿತ್ತು. ನಾನು ಮನೆಗೆ ಬಂದ ನಂತರವೂ ಅದು ನನಗೆ ಕೃತಕ ಉಸಿರು, ಆಮ್ಲಜನಕ ತೆಗೆದುಕೊಳ್ಳಲು ಸಹಕಾರಿಯಾಗುತ್ತಿತ್ತು.

ಐಸಿಯುನಲ್ಲಿ ನನಗೆ ಟ್ರೇಕಿಯಾಸ್ಟಮಿಯನ್ನು ಹಾಕಿದ ಮೇಲೆ ನರ್ಸುಗಳಿಗೆ ಸಕ್ಷನ್ ಮಾಡುವುದು ತುಸು ಸುಲಭವಾಯಿತು. ನೇರವಾಗಿ ನನ್ನ ಶ್ವಾಸನಾಳದಲ್ಲಿ ಕಟ್ಟಿಕೊಳ್ಳುತ್ತಿದ್ದ ಕಫವನ್ನು ಆಗಿಂದಾಗ್ಗೆ ತೆಗೆಯುತ್ತಿದ್ದರು. ನನ್ನ ಶ್ವಾಸನಾಳದಲ್ಲಿ ಕಫ ತುಂಬಿಕೊಂಡು ಉಸಿರಾಡಲು ಕಷ್ಟವಾದಾಗ ನಾನು ನನ್ನ ಮಂಚದ ಕಂಬಿಗಳನ್ನು ಕುಟ್ಟಿ ಶಬ್ದಮಾಡಿ ನರ್ಸುಗಳ ಗಮನ ಸೆಳೆಯುತ್ತಿದ್ದೆ. ಅವರು ನನ್ನ ಬಳಿ ಬಂದಾಗ ಕೈ ಸನ್ನೆಯ ಮೂಲಕ ನನ್ನ ಶ್ವಾಸನಾಳದಲ್ಲಿ ಕಫ ಕಟ್ಟಿಕೊಂಡಿರುವುದಾಗಿಯೂ ಅದನ್ನು ತೆಗೆಯಬೇಕೆಂದೂ ಸೂಚಿಸುತ್ತಿದ್ದೆ. ಆಗ ಅವರು ಸಕ್ಷನ್ ಮಾಡಿ ಕಫವನ್ನು ಹೊರ

ತೆಗೆಯುತ್ತಿದ್ದರು. ಈ ಸಕ್ಸನ್ ಪ್ರಕ್ರಿಯೆ ಮುಗಿದಾಗ ಸಾಮಾನ್ಯವಾಗಿ ನಾನು ನಿದ್ರೆಗೆ ಜಾರುತ್ತಿದ್ದೆ. ಸಕ್ಸನ್ ಮಾಡುವಾಗ ಆಗುತ್ತಿದ್ದ ಆಯಾಸ ಮತ್ತು ಈ ಕ್ರಿಯೆಯಿಂದ ಶ್ವಾಸನಾಳದಲ್ಲಿ ಕಫ ಕಡಿಮೆಯಾಗಿ ಉಸಿರಾಟ ಸರಾಗವಾಗುತ್ತಿದ್ದ ಕಾರಣದಿಂದ ನನಗೆ ನಿದ್ರೆ ಬರುತ್ತಿತ್ತೆಂದು ತೋರುತ್ತದೆ.

ನನ್ನ ಉಸಿರಾಟ ಕ್ರಿಯೆ ಸುಧಾರಣೆಯಾಗುತ್ತಾ ಹೋದಂತೆ ನನ್ನ ಬಾಯಿಯಿಂದ ಸ್ರವಿಸುತ್ತಿದ್ದ ಜೊಲ್ಲುರಸ ಕಡಿಮೆಯಾಯಿತು. ಕ್ರಮೇಣ ನಿಂತೂ ಹೋಯಿತು. ನಾನು ಯಂತ್ರದ ಸಹಾಯದಿಂದ ಕೃತಕ ಉಸಿರು ಮತ್ತು ಆಮ್ಲಜನಕ ಪಡೆಯುವುದನ್ನು ನಿಲ್ಲಿಸಿ, ನಾನು ನನ್ನ ಸ್ವಂತ ಸ್ನಾಯುಬಲದಿಂದ ಉಸಿರಾಡುವವರೆಗೂ ನನ್ನ ಶ್ವಾಸನಾಳದಲ್ಲಿ ಕಫ ಉತ್ಪತ್ತಿಯಾಗುತ್ತಲೇ ಇತ್ತು. ಈ ಕಫವು ಕೆಲವೊಮ್ಮೆ ತೆಳುವಾಗಿಯೂ ಕೆಲವೊಮ್ಮೆ ಗಟ್ಟಿಯಾಗಿಯೂ ಇರುತ್ತಿತ್ತು. ಗಟ್ಟಿಯಾದಾಗ ಸಕ್ಸನ್ ಮಾಡುವುದು ಕಷ್ಟವಾಗುತ್ತಿತ್ತು. ಆಗ ಕಫ ಹೊರ ತೆಗೆಯುವ ಕ್ರಿಯೆ ತೀವ್ರ ನೋವನ್ನುಂಟು ಮಾಡುತ್ತಿತ್ತು. ಆಗ ಡಾ. ಆಮೀರ್‌ರವರು ಕಫ ತೆಳುವಾಗಲು ಮಾತ್ರೆ ನೀಡುತ್ತಿದ್ದರು.

೧೧. ನನ್ನ ಬುಲ್ಗೇರಿಯನ್ ಗಡ್ಡವೂ ಮುನಿಸ್ವಾಮಿಯೂ....

ನಾನು ಎಂಐಸಿಯುಗೆ ದಾಖಲಾಗಿ ಒಂದು ವಾರವಾಗಿತ್ತು. ನನ್ನ ಮುಖದ ಮೇಲೆ ಗಡ್ಡ ಬೆಳೆದಿತ್ತು. ನಾನು ಕೈಯಾಡಿಸಿ ನೋಡಿದಾಗ ಬೆರಳುಗಳಿಗೆ ಬೆಳೆಯುತ್ತಿದ್ದ ಕುರುಚಲು ಗಡ್ಡ ಸಿಗುತ್ತಿತ್ತು. ಅದರಲ್ಲೂ ನನ್ನ ಗಲ್ಲದ ಭಾಗದಲ್ಲಿ ಕೂದಲು ಉದ್ದ ವಾಗಿಯೇ ಇರುವುದು ಗೊತ್ತಾಗುತ್ತಿತ್ತು. ಕಾರಣ - ನನ್ನ ಬುಲ್ಗೇರಿಯನ್ ಗಡ್ಡ! ನಾನು ಶೇವ್ ಮಾಡಿ ವಾರದ ಮೇಲಾಗಿತ್ತು. ನನ್ನ ಬುಲ್ಗೇರಿಯನ್ ಗಡ್ಡವನ್ನು ಟ್ರಿಮ್‌ಮಾಡಿ ಸುಮಾರು ಹದಿನೈದು ದಿನಗಳೇ ಕಳೆದಿರಬೇಕು. ನನ್ನನ್ನು ನೋಡಿಕೊಳ್ಳುತ್ತಿದ್ದ ಬ್ರದರ್‌ಗಳು ನನ್ನ ಗಡ್ಡದ ಬಗ್ಗೆ ಕಂಪ್ಲೇಟ್ ಮಾಡುತ್ತಿದ್ದರು. ನನಗೆ ವೆಂಟಿಲೇಟರ್‌ನಿಂದ ಸಂಪರ್ಕ ಕಲ್ಪಿಸಿದ್ದ, ನನ್ನ ಬಾಯಿಯೊಳಗಿ ನಿಂದ ಹೊರಚಾಚಿದ್ದ ಎಂಡೋಟ್ರೇಕಿಯಲ್ ಟ್ಯೂಬನ್ನು ಬಿಗಿಗೊಳಿಸಲು ಅದಕ್ಕೆ ಪ್ಲಾಸ್ಟರ್ ಸುತ್ತಿ ಅಲ್ಲಾಡದಂತೆ ನನ್ನ ಗಲ್ಲದ ಮೇಲೆ ಬಿಗಿಯಾಗಿ ಅಂಟಿಸಬೇಕಾಗಿತ್ತು. ಮತ್ತೊಂದು ತುದಿಯ ಪ್ಲಾಸ್ಟರ್ ಟ್ಯೂಬಿನಿಂದ ಪ್ರಾರಂಭವಾಗಿ ಮೂಗಿನ ಮೇಲಿಂದ ಎಡಕ್ಕೆ ಹರಿದು ಕಿವಿಯವರೆಗೆ ಭದ್ರವಾಗಿ ಅಂಟಬೇಕಾಗಿತ್ತು. ಆದರೆ ಕೂದಲು ಉದ್ದ ಬೆಳೆಯುತ್ತಿದ್ದುದರಿಂದ ಕೂದಲ ಮೇಲೆ ಪ್ಲಾಸ್ಟರ್ ಸರಿಯಾಗಿ ಅಂಟುತ್ತಿರಲಿಲ್ಲ. ಎಂಡೋಟ್ರೇಕಿಯಲ್ ಟ್ಯೂಬ್ ಭದ್ರವಾಗಿ ಅಲ್ಲಾಡದೆ ನಿಲ್ಲಲು ಇದರಿಂದ ಸಾಧ್ಯವಾಗುತ್ತಿರಲಿಲ್ಲ. ಆದುದರಿಂದ ಬ್ರದರ್‌ಗಳು ನನ್ನ ಗಡ್ಡದ ಬಗ್ಗೆ ಆಕ್ಷೇಪ ವ್ಯಕ್ತಪಡಿಸುತ್ತಿದ್ದರು.

ನನ್ನ ಗಡ್ಡದ ಕೂದಲ ಮೇಲೆ ದಿನಕ್ಕೆ ಎರಡು ಬಾರಿ ಅಂಟಿಸಿ ತೆಗೆಯುತ್ತಿದ್ದ ಪ್ಲಾಸ್ಟರ್‌ನಿಂದ ನನಗೆ ಅಪಾರ ನೋವಾಗುತ್ತಿತ್ತು. ಕೆನ್ನೆ ಮತ್ತು ಗಲ್ಲದ ಮೇಲೆ ಅಂಟಿಸಿದ್ದ ಪ್ಲಾಸ್ಟರ್ ಅನ್ನು ಕೀಳುವಾಗ ಚಳ್ಳನೆ ನನಗೆ ನೋವಾಗುತ್ತಿತ್ತು. ಕೆಲವು ಬ್ರದರ್‌ಗಳು "ನೋವಾಗುತ್ತಾ ಸರ್, ಮೆಲ್ಲಗೆ ಕೀಳುತ್ತೇನೆ" ಎಂದು ಕೀಳುವ ಮೊದಲು ಪ್ಲಾಸ್ಟರ್ ಮೇಲೆ ಮೊದಲು ಸ್ಟೆರೇಲ್‌ವಾಟರ್ ಅನ್ನು ಹಾಕಿ ನೆನಸಿ ನಂತರ ಕೀಳುತ್ತಿದ್ದರು. ಆಗ ತುಸು ಕಡಿಮೆ ನೋವಾಗುತ್ತಿತ್ತು. ಇನ್ನು ಕೆಲವು ಬ್ರದರ್‌ಗಳು "ಸರ್, ನಿಧಾನಕ್ಕೆ ಕೀಳುತ್ತಿದ್ದರೆ ನಿಮಗೆ ಜಾಸ್ತಿ ನೋವಾಗುತ್ತೆ, ತಟಕ್ಕನೆ ಒಂದೇ ಸಮನೆ ಕಿತ್ತು ಬಿಡ್ತೀನಿ. ಆಗ ನಿಮಗೆ ನೋವು ಹೆಚ್ಚು ಗೊತ್ತಾಗುವುದಿಲ್ಲ" ಎಂದು ಹೇಳಿ, ಕೂದಲ ಮೇಲೆ ಅಂಟಿ ಕೊಂಡಿದ್ದ ಪ್ಲಾಸ್ಟರ್ ಅನ್ನು ತಟಕ್ಕನೆ ಒಂದೇ ಉಸುರಲ್ಲಿ ಕಿತ್ತು ಎಳೆದು ಬಿಡುತ್ತಿದ್ದರು. ಅದು ಕೆಲವೇ ಕ್ಷಣವಾದರೂ ಅಸಾಧ್ಯವಾದ ನೋವಾಗುತ್ತಿತ್ತು.

ಹೀಗಿರುವಾಗ ಒಂದು ಸಂಜೆ ನನ್ನನ್ನು ಪರೀಕ್ಷಿಸಲು ಬಂದ ಡಾ. ಆಮೀರ್ ಅವರು ಬ್ರದರ್‌ನನ್ನು ಕುರಿತು "ಮೊದಲು ಬಾರ್‌ಬರನನ್ನು ಕರೆಸಿ ಪೇಶೆಂಟ್‌ಗೆ ಶೇವ್ ಮಾಡಿಸಿ. ಪೇಶೆಂಟ್ ಯಾವಾಗಲೂ ಪ್ರೆಶ್ ಆಗಿ ಪ್ರೆಸೆಂಟಬಲ್ ಆಗಿರಬೇಕು" ಎಂದು ಹೇಳಿದರು. ಬ್ರದರ್ "ಆಯ್ತು ಸಾರ್" ಎಂದ. ಆನಂತರ ಬ್ರದರ್ ಕ್ಷೌರಿಕನಿಗೆ ಕರೆ ಮಾಡಿರಬೇಕು.

ಅಂದು ರಾತ್ರಿ ಹನ್ನೆರಡರ ಸಮಯದಲ್ಲಿ ಹಡಪದ ಡಬ್ಬಿಯನ್ನಿಡಿದು ಮುನಿಸ್ವಾಮಿ ನನ್ನ ಕ್ಯಾಬಿನ್‌ನಲ್ಲಿ ಪ್ರತ್ಯಕ್ಷನಾದ. ದೀಪದ ಬೆಳಕಲ್ಲಿ ನಾನು ಅವನನ್ನು ನೋಡಿದೆ. ಏಕೋ ಏನೋ ಅವನನ್ನು ನೋಡಿದ ತಕ್ಷಣ ಕ್ಷೌರಿಕನೆಂದು ಅನ್ನಿಸಿತು. ಬಹುಶಃ ಅವನ ಕೈಯಲ್ಲಿದ್ದ ಹಡಪದ ಡಬ್ಬ ಕಾರಣವಿರಬಹುದು. ಅವನು ನನ್ನನ್ನು ಒಮ್ಮೆ ನೋಡಿದ. ಅವನು ನನ್ನನ್ನು ನೋಡುತ್ತಿದ್ದ ಎನ್ನುವುದಕ್ಕಿಂತ ನನ್ನ ಗಡ್ಡವನ್ನು 'ಎಷ್ಟು ಬೆಳೆದಿದೆ' ಎಂದು ಅಜಮಾಯಿಸಿ ಮಾಡಿ ನೋಡುತ್ತಿದ್ದ. ಅನಂತರ ಐಸಿಯುನ ಮಧ್ಯಭಾಗದ ಕುರ್ಚಿಯಲ್ಲಿ ಕುಳಿತಿದ್ದ ನರ್ಸ್ ಇನ್‌ಚಾರ್ಜ್ ಹಿರಿಯ ನರ್ಸ್‌ನನ್ನು ಕುರಿತು "ಯಾರಪ್ಪ ಇಲ್ಲಿ, ಈ ಪೇಶೆಂಟ್ ಇನ್‌ಚಾರ್ಜ್?" ಎಂದು ಪ್ರಶ್ನಿಸಿದ. ಪಕ್ಕದ ಕ್ಯಾಬಿನ್‌ನಲ್ಲಿದ್ದ ರೋಗಿಯ ಸೇವೆಯಲ್ಲಿದ್ದ ಬ್ರದರ್ ಬಂದ. ಅವನು ಮುನಿಸ್ವಾಮಿಯನ್ನು ನೋಡಿ "ಆರು ಗಂಟೇಲಿ ಪೋನ್ ಮಾಡಿರುವುದು? ಈಗ ಬಂದಿದ್ದೀಯಲ್ಲ?" ಎಂದನು. "ನನಗೆ ಈಗ ಕಳಿಸಿದರು ಬಂದಿದ್ದೀನಿ, ಬೇಕಾದರೆ ಕಂಪ್ಲೇಟ್ ಮಾಡು" ಎಂದು ಮುನಿಸ್ವಾಮಿ ತಿರುಗಿ ರೇಗುವಂತೆ ಹೇಳಿದ.

ಈ ಮಾತುಕತೆಗಳಿಂದ ಐಸಿಯುಗೆ ಮುನಿಸ್ವಾಮಿ ಬಂದಿರುವುದು ಎಲ್ಲ

ನರ್ಸುಗಳಿಗೂ ಗೊತ್ತಾಯಿತು. ಅವರು ತಂತಮ್ಮ ಕ್ಯಾಬಿನ್‌ಗಳ ಮುಂದೆ ನಿಂತು ಅಥವಾ ನನ್ನ ಕ್ಯಾಬಿನ್ ಬಳಿ ಬಂದು ಮುನಿಸ್ವಾಮಿಯನ್ನು ಮಾತಿಗೆಳೆಯುವ ಪ್ರಯತ್ನ ಮಾಡಿದರು. ಅವರು ಅವನನ್ನು 'ಮುನಿಸ್ವಾಮಿ' ಎಂದು ಕರೆಯುತ್ತಿದ್ದುದರಿಂದ ಅವನ ಹೆಸರು ಅದು ಇರಬಹುದೆಂದು ನಾನು ಭಾವಿಸಿದೆ. ಮುನಿಸ್ವಾಮಿಯ ಆಗಮನದಿಂದ ಐಸಿಯುಗೆ ಒಂದು ಬಗೆಯ ಲವಲವಿಕೆ ಪ್ರಾಪ್ತವಾಯಿತು. ಒಂದೇ ಬಗೆಯ ಕೆಲಸದ ಏಕತಾನತೆಯಲ್ಲಿರುತ್ತಿದ್ದ ನರ್ಸುಗಳಿಗೆ ಮುನಿಸ್ವಾಮಿಯನ್ನು ಮಾತನಾಡಿಸಲು, ಕಿಚಾಯಿಸಲು, ತಮಾಷೆ ಮಾಡಲು ಸುಲಭವಾಗಿ ದೊರೆತಂತೆ ಭಾಸವಾಯಿತು. ಕೆಲವರು ಹೆಂಡತಿ ಮಕ್ಕಳ ಬಗ್ಗೆ ವಿಚಾರಿಸಿದರೆ, ಇನ್ನು ಕೆಲವರು ಅವನು ಇತ್ತೀಚಿಗೆ ನೋಡಿದ ಸಿನಿಮಾ ಯಾವುದೆಂದು ವಿಚಾರಿಸಿದರು. ಒಬ್ಬ ಬ್ರದರ್ ಅಂತು ಅವನ ಬಳಿಗೆ ಬಂದು, ಅವನು ಹಾಕಿದ್ದ ಶರ್ಟಿನ ದೊಡ್ಡಳತೆಯ ಬಗ್ಗೆ ಲೇವಡಿ ಮಾಡಿದ. ಹೀಗೆ ಐದಾರು ನಿಮಿಷ ಕಳೆಯಿತು.

ಬ್ರದರ್‌ಗಳ ಮಾತುಗಳಿಗೆ ಮುನಿಸ್ವಾಮಿ ಕೋಪಗೊಂಡಂತೆ ತೋರಲಿಲ್ಲ. ಅವನ ಮುಖದಲ್ಲಿ ತೆಳುವಾದ ನಗೆಯೊಂದು ಸುಳಿದಾಡುತ್ತಿತ್ತು. ಆತನಲ್ಲಿ "ಇವರು ಸ್ವಲ್ಪ ಹೊತ್ತು ಮಾತನಾಡಿಕೊಳ್ತಾರೆ ಮಾತಾಡಿಕೊಂಡು ಹೋಗಲಿ" ಎಂಬ ಭಾವವಿತ್ತು. ಅದು ಅವನ ಅನುಭವ ಜನ್ಯವಾದ ತಿಳಿವಳಿಕೆಯಾಗಿತ್ತು. ಬ್ರದರ್‌ಗಳು ಹೆಚ್ಚು ಹೊತ್ತು ತಮಾಷೆ ಮಾಡಿಕೊಂಡು ಇರುವಂತಿರಲಿಲ್ಲ. ಇದು ಸಾವಿನೊಡನೆ ಹೋರಾಟ ನಡೆಸುತ್ತಿರುವ ತೀವ್ರ ನಿಗಾ ಘಟಕ. ಪ್ರತಿಕ್ಷಣ ರೋಗಿಯನ್ನು ಗಮನಿಸುತ್ತಿರಬೇಕು. ಆ ಜವಾಬ್ದಾರಿ ಇಲ್ಲಿನ ನರ್ಸುಗಳಿಗಿತ್ತು. ಅವರು ತುಸು ಹೊತ್ತಿನಲ್ಲಿಯೇ ತಂತಮ್ಮ ಕೆಲಸದಲ್ಲಿ ನಿರತರಾದರು.

ಒಂದೈದು ನಿಮಿಷ ನಡೆದ ಈ ಆಹ್ಲಾದಕರ ಚಟುವಟಿಕೆಯ ನಂತರ ನಾನು ಮುನಿಸ್ವಾಮಿಯನ್ನು ಮತ್ತೊಮ್ಮೆ ನೋಡಿದೆ. ಅವನದು ಸಾಧಾರಣ ಮೈಕಟ್ಟು. ಸುಮಾರು ನಲವತ್ತರ ಆಜುಬಾಜಿನ ವಯಸ್ಸು. ಅವನು ಹಾಕಿದ್ದ ಶರ್ಟು ಪ್ಯಾಂಟುಗಳೇ ಅವನ ಆರ್ಥಿಕ ಮಟ್ಟವನ್ನು ಸಾರುತ್ತಿದ್ದವು. ಐದು ಅಡಿ ಮೂರು ಅಂಗುಲದಷ್ಟು ಎತ್ತರವಿರಬಹುದಾದ ಅವನ ಕಣ್ಣುಗಳಲ್ಲಿ ವಿಶೇಷವಾದ ಕಾಂತಿ ಇತ್ತು. ಅವನ ತುಟಿಯ ಮೇಲೆ ತೆಳುವಾದ ಮೀಸೆಯಿತ್ತು. ನನಗೆ ಅನೇಕ ದಿನಗಳ ನಂತರ ಅವನಿಂದಲೇ ನನಗೆ ತಿಳಿದದ್ದು-ಅವನ ಹೆಸರು ಮುನಿಸ್ವಾಮಿ ಅಲ್ಲ. "ಈ ಐಸಿಯು ಹುಡುಗರು ಹಂಗೆ ಕರ್‌ಕೋತಾರೆ. ಕರ್‍ಕೊಂಡ್ರೆ ಕರ್‍ಕೊಳ್ಳಲಿ ಅಂತ ನಾನು ಸುಮ್ನಾಗಿದ್ದೀನಿ" ಎಂದು ಅವನು ಒಂದು ದಿನ ಹೇಳಿದ್ದ. ಅವನ ಹೆಸರು ಸೋಮಶೇಖರ ಅಂತ ನನಗೆ ತಿಳಿಯಿತು.

ಬ್ರದರ್ ನನ್ನ ಮುಖಕ್ಷೌರಕ್ಕೆ ಬೇಕಾದ ಭಂಗಿಯಲ್ಲಿ ನನ್ನನ್ನು ಕೂರಿಸಲು ಮುನಿಸ್ವಾಮಿಗೆ ಸಹಕರಿಸಿದ. ಐಸಿಯುನ ಶೌಚಾಲಯದಿಂದ ಆತ ಬಿಸಿನೀರು ತಂದಿದ್ದ. ಬ್ರದರ್ ಮೊದಲು ನನ್ನ ಮುಖದ ಮೇಲೆ ಅಂಟಿಸಿದ್ದ ಪ್ಲಾಸ್ಟರ್ ಅನ್ನು ಕಿತ್ತು ಕ್ಷೌರಕ್ಕೆ ಜಾಗ ಕಲ್ಪಿಸಿದ. ಮುನಿಸ್ವಾಮಿ ನನ್ನ ಬೆಳೆದ ಗಡ್ಡದ ಮೇಲೆ ಬಿಸಿ ನೀರನ್ನು ಸವರಿದ. ಅನಂತರ ತನ್ನ ಡಬ್ಬದಿಂದ ಶೇವಿಂಗ್ ಕ್ರೀಮನ್ನು ತೆಗೆದು, ನೀರಿಗೆ ಅದ್ದಿ ಒದ್ದೆಯಾಗಿದ್ದ ಬ್ರೆಷ್‌ನ ತುದಿಗೆ ಇಟ್ಟು, ಅನಂತರ ಬ್ರೆಷ್‌ನಿಂದ ನನ್ನ ಗಲ್ಲ, ಕೆನ್ನೆಯ ತುಂಬ ನೊರೆಬರಿಸತೊಡಗಿದ. ಆದರೆ ಅವನ ಕೆಲಸ ಸುಗಮವಾಗಿ ಸಾಗುತ್ತಿರಲಿಲ್ಲ. ನನ್ನ ಮೂಗಿನಿಂದ ನೇತಾಡುತ್ತಿದ್ದ ರೈಲ್ಸ್ ಟ್ಯೂಬ್ ಮತ್ತು ಬಾಯಿಯೊಳಗಿನಿಂದ ಹೊರ ಚಾಚಿದ್ದ ಎಂಡೋ ಟ್ರೇಕಿಯಲ್ ಟ್ಯೂಬ್‌ಗಳು ಅವನ ಕೆಲಸಕ್ಕೆ ಅಡ್ಡಿಯನ್ನುಂಟು ಮಾಡುತ್ತಿದ್ದವು. ನನ್ನ ಬಲ ತುಟಿಯ ಕೆಳಭಾಗದಲ್ಲಿ ಹಾಗೂ ನನ್ನ ಎರಡಮೂಗಿನ ತೆಳಭಾಗದಲ್ಲಿ ಬೆಳೆದಿದ್ದ ಕೂದಲನ್ನು ಸರಿಯಾಗಿ ಶೇವ್ ಮಾಡಲಾಗಲಿಲ್ಲ.

ಮಾತುಬಾರದ ನನ್ನ ಅಭಿಪ್ರಾಯ ಕೇಳುವ ಸ್ಥಿತಿಯಲ್ಲಿ ಮುನಿಸ್ವಾಮಿಯಾಗಲೀ ಬ್ರದರ್ ಆಗಲೀ ಇರಲಿಲ್ಲ. ಮುನಿಸ್ವಾಮಿ ತನ್ನ ಕೆಲಸ ಮುಗಿಸುವವನಂತೆ ನನ್ನ ಮೀಸೆ ಮತ್ತು ಬುಲ್ಗೇರಿಯನ್ ಗಡ್ಡವನ್ನು ಯಾವ ಮುಲಾಜೂ ಇಲ್ಲದಂತೆ ಶೇವ್ ಮಾಡಿ ಬಿಸಾಕಿದ! ಬ್ರದರ್‌ಗೂ ಅದೇ ಬೇಕಾಗಿತ್ತು. ಅವನಿಗೆ ನನ್ನ ಮುಖದ ಮೇಲೆ ಬಿಗಿಯಾಗಿ ಪ್ಲಾಸ್ಟರ್ ಅಂಟಿಸುವುದು ಮುಖ್ಯವಾಗಿತ್ತು. ನಾನು ಮನಸ್ಸಿನಲ್ಲಿ ನನ್ನ ಮುಖದ ಮೇಲೆ ನೀಟಾಗಿ ಕಾಣುತ್ತಿದ್ದ ಬುಲ್ಗೇರಿಯನ್ ಗಡ್ಡದ ಕಲ್ಪನೆ ಮಾಡಿಕೊಳ್ಳುತ್ತಿದ್ದೆ. ಈಗ ಮೀಸೆ ಗಡ್ಡಗಳಿಲ್ಲದ ನನ್ನ ಮುಖವನ್ನು ಕಲ್ಪಿಸಿಕೊಳ್ಳಲು ವಿಫಲನಾಗುತ್ತಿದ್ದೆ. ಮುನಿಸ್ವಾಮಿ ಶೇವ್ ಆದ ನಂತರ ಈಸಿ ವಾಶ್ ತೇವಾಂಶಭರಿತ ಕಾಗದದಿಂದ ನನ್ನ ಗಡ್ಡ ಒರೆಸಿ ತನ್ನ ಕೆಲಸವಾಯಿತೆಂದು ಹೊರಟ. ನಾನು ನನ್ನ ಬೆರಳುಗಳಿಂದ ಶೇವ್‌ಮಾಡಿದ ನನ್ನ ಕೆನ್ನೆ, ಗಲ್ಲಗಳನ್ನು ಮುಟ್ಟಿಕೊಂಡೆ. ಕೆಲವು ಕಡೆ ಶೇವ್ ನುಣುಪಾಗಿಯೂ ಹಲವು ಕಡೆ ತರಿತರಿಯಾಗಿಯೂ ಇತ್ತು. ನನ್ನ ತುಟಿಯ ಮೇಲೆ ಮೂಗಿನ ಕೆಳಗೆ ಕೂದಲುಗಳು ಕೈಗೆ ಮುಟ್ಟುವಷ್ಟು ಉದ್ದವಾಗಿದ್ದವು. ಇದ್ದಕ್ಕಿದ್ದಂತೆ ನನ್ನ ಎಡಮೂಗಿನ ಹೊಳ್ಳೆಯ ಕೆಳಗೆ ನನ್ನ ಕೈನಿಂತಿತು. ಅಲ್ಲಿ ತೇವ. ಬೆರಳು ತೆಗೆದು ನೋಡಿದೆ. ರಕ್ತ! ಬ್ರದರ್‌ಗೆ ಸನ್ನೆ ಮಾಡಿ ತೋರಿಸಿದೆ. ಬ್ರದರ್ ತುಟಿಯ ಮೇಲೆ ರಕ್ತ ಬರುತ್ತಿದ್ದ ಜಾಗವನ್ನು ಪರೀಕ್ಷಿಸಿ, ಆ ಭಾಗವನ್ನು ಸ್ಟೆರೇಲ್‌ವಾಟರ್‌ನಲ್ಲಿ ಅದ್ದಿದ ಹತ್ತಿಯಿಂದ ಒರೆಸಿ, ಶುದ್ಧಗೊಳಿಸಿದ. ನನ್ನ ಎಡಮೂಗಿನ ಹೊಳ್ಳೆಯ ತಳಭಾಗದಲ್ಲಿದ್ದ ಕಾರಳ್ಳನ್ನು ಮುನಿಸ್ವಾಮಿ ಗಮನಿಸದೆ ಬ್ಲೇಡಿನಿಂದ ಒರೆಸಿ ಹಾಕಿದ್ದ!

ನನ್ನ ವಯಸ್ಸಿನ ಸುಮಾರು ಮೂವತ್ತೈದು ವರ್ಷಗಳ ಕಾಲ ನನ್ನ ಕೆನ್ನೆಯ ಮೇಲೆ ಗಡ್ಡವಿತ್ತು. ಗಡ್ಡವಿಲ್ಲದ ನನ್ನನ್ನು ನನ್ನ ಪರಿಚಿತರಾರೂ ಗುರುತಿಸುತ್ತಿರಲಿಲ್ಲ. ಅಷ್ಟೇ ಏಕೆ? ಗಡ್ಡವಿಲ್ಲದ ನನ್ನ ಮೋರೆಯನ್ನು ನಾನು ಕೂಡ ಕಲ್ಪಿಸಿಕೊಳ್ಳಲು ವಿಫಲನಾಗುತ್ತಿದ್ದೆ. ನನ್ನ ಬುಲ್ಗೇರಿಯನ್ ಗಡ್ಡದ ಆಯಸ್ಸು ಸುಮಾರು ಹದಿನಾಲ್ಕು ಹದಿನೈದು ವರ್ಷಗಳದ್ದಾಗಿರಬೇಕು. ಗಡ್ಡ ಬಿಡುತ್ತಿದ್ದ ನನ್ನನ್ನು ಒಮ್ಮೆ ನನ್ನ ಮಗಳು "ಒಮ್ಮೆ ನೀವು ಬುಲ್ಗೇರಿಯನ್ ಗಡ್ಡ ಬಿಟ್ಟು ಏಕೆ ನೋಡಬಾರದು?" ಎಂದು ಹೇಳಿದಳು. ಮಗಳ ಮಾತನ್ನು ಮಾನ್ಯಮಾಡಿ ಬುಲ್ಗೇರಿಯನ್ ಗಡ್ಡಬಿಟ್ಟು ನೋಡಿದೆ. ನನ್ನ ಮುಖಕ್ಕೆ ಒಪ್ಪುತ್ತದೆ ಎಂದೆನ್ನಿಸಿತು. ನನ್ನ ಹೆಂಡತಿ ಮಕ್ಕಳು, ಸ್ನೇಹಿತರು ಸಮ್ಮತಿ ಸೂಚಿಸಿದರು. ಕಳೆದ ಹದಿನೈದು ವರ್ಷಗಳಿಂದ ನನ್ನ ಮುಖವನ್ನು ಅಲಂಕಾರ ಗೊಳಿಸಿದ್ದ ಬುಲ್ಗೇರಿಯನ್ ಗಡ್ಡವನ್ನು ಮುನಿಸ್ವಾಮಿ ಒಂದು ಕ್ಷಣದಲ್ಲಿ ಕ್ಷೌರ ಮಾಡಿದ್ದ. ಹಾಗೆ ಮಾಡುವ ಮುನ್ನ ನನ್ನ ಅಭಿಪ್ರಾಯವನ್ನು ಅವನು ಕೇಳಿರಲಿಲ್ಲ. ಒಂದು ವೇಳೆ ಕೇಳಿದ್ದಲ್ಲಿ ನನ್ನ ಅಭಿಪ್ರಾಯ ತಿಳಿಸಲು ನನ್ನ ಗಂಟಲಲ್ಲಿ ಮಾತುಗಳೇ ಬರುತ್ತಿರಲಿಲ್ಲ!

ಐಸಿಯುಗೆ ಮುನಿಸ್ವಾಮಿ ಒಬ್ಬನೇ ಕ್ಷೌರಕ್ಕೆ ಬರುತ್ತಿರಲಿಲ್ಲ. ಅವನಂತೆ ಇನ್ನೂ ಮೂರು ನಾಲ್ಕು ಜನರಿದ್ದರು. ಅವರೆಲ್ಲರೂ ಯೂನಿಫಾರಂ ತೊಟ್ಟಿರುತ್ತಿದ್ದರು. ನಂತರದ ದಿನಗಳಲ್ಲಿ ಮುನಿಸ್ವಾಮಿಯೂ ಯೂನಿಫಾರಂ ಹಾಕಿರುವುದನ್ನು ನೋಡಿದ್ದೇನೆ. ಎರಡು ತಿಂಗಳಷ್ಟು ಕಾಲ ಈ ಆಸ್ಪತ್ರೆಯಲ್ಲಿದ್ದ ನನಗೆ ಅವರು ಪರಿಚಿತರಾದರು. ನನಗೆ ವಾರಕ್ಕೊಮ್ಮೆ ಶೇವ್ ಮಾಡಲು ಯಾರಾದರೊಬ್ಬರು ಬರುತ್ತಿದ್ದರು. ಅವರಲ್ಲಿ 'ಅ' ಎಂಬಾತನು ನನ್ನ ಬಳಿಗೆ ಬಂದಾಗಲೆಲ್ಲಾ ಅವನ ಜೇಬಿನಲ್ಲಿದ್ದ ಮೊಬೈಲ್‌ನಿಂದ ಕನ್ನಡ ಚಿತ್ರಗೀತೆಗಳು ಹೊರಹೊಮ್ಮುತ್ತಿದ್ದವು.

ಅಪೊಲೋದಲ್ಲಿದ್ದ ಕ್ಷೌರಿಕರು ನಾಲ್ಕನೇ ದರ್ಜೆ ನೌಕರರಿಗೆ ಸಮನಾಗಿದ್ದರು. ಅವರು ಕೂಡ ಹೊರಗುತ್ತಿಗೆ ಪಡೆದಿದ್ದ ಏಜೆನ್ಸಿಯ ಅಧೀನದಲ್ಲಿರು. 'ಅ' ಹೇಳುತ್ತಿದ್ದ ಪ್ರಕಾರ ಏಜೆನ್ಸಿ ಅವರಿಗೆ ತುಂಬಾ ಕಡಿಮೆ ವೇತನ ನೀಡುತ್ತಿತ್ತು. ಹೀಗಾಗಿ ಕ್ಷೌರಿಕರು ವಾರ್ಡುಗಳಲ್ಲಿರುತ್ತಿದ್ದ ರೋಗಿಗಳ ಬಂಧುಗಳಿಂದ ಹತ್ತೋ ಇಪ್ಪತ್ತೋ ರೂಪಾಯಿಗಳ ಭಕ್ಷೀಸನ್ನು ನಿರೀಕ್ಷೆ ಮಾಡುತ್ತಿದ್ದರು. ತಮ್ಮ ಕೆಲಸ ಮುಗಿಸಿದ ನಂತರದ ಅವರ ಭಾವಗಳಲ್ಲಿ ಅದು ಸ್ಪಷ್ಟವಾಗಿ ವ್ಯಕ್ತವಾಗುತ್ತಿತ್ತು.

ನಾನು ವಾರ್ಡಿನಲ್ಲಿದ್ದಾಗ ನನ್ನ ಹೆಂಡತಿ ನೀಡಿದ ಕನ್ನಡಿಯಲ್ಲಿ ನನ್ನ ಮುಖ ನೋಡಿಕೊಂಡೆ, ನನಗೆ ನನ್ನ ಗುರುತು ಮೂಡಲಿಲ್ಲ! ನನ್ನ ಮನಸ್ಸು ಆರೋಗ್ಯ ದೃಢಕಾಯದಿಂದ ಮುಖವನ್ನು ನಿರೀಕ್ಷೆ ಮಾಡುತ್ತಿತ್ತು. ಅದರ ಜೊತೆಗೆ ನನ್ನ ಮುಖದ

ಅವಿಭಾಜ್ಯ ಅಂಗವಾಗಿದ್ದ ಗಡ್ಡ ಮೀಸೆಗಳಿಲ್ಲದಿರುವುದು ಸಹ ನನಗೆ ನನ್ನನ್ನು ಅಪರಿಚಿತನನ್ನಾಗಿಸಿಬಿಟ್ಟಿತ್ತು!

ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಆಗಿ ಮನೆಗೆ ಬಂದ ಮೇಲೆ ನಾನು ನನಗೆ ಪ್ರಿಯವಾದ ಬುಲ್ಗೇರಿಯನ್ ಗಡ್ಡವನ್ನು ಮತ್ತೆ ಬಿಟ್ಟೆ. ಅದು ನನ್ನ ರೂಪವನ್ನು ಮತ್ತೆ ನನಗೆ ತಂದುಕೊಟ್ಟಿತು. ಅಷ್ಟೇ ಅಲ್ಲ, ಕಾಯಿಲೆಯಿಂದ ಸುಂಡಿಹೋಗಿ ಬತ್ತಿಹೋಗಿದ್ದ ನನ್ನ ಮುಖದ ತಗ್ಗುಗಳನ್ನು ಮರೆಮಾಡಿ ಕಳೆಮೂಡಿಸಲು ಸಹಕಾರಿಯಾಗಿತ್ತು.

೧೨. ಒಣ ಕಣ್ಣಿಗೆ ತಾಜಾ ಕಣ್ಣೀರ ಹನಿಗಳು

ಎಂಐಸಿಯುನಲ್ಲಿ ನನಗೆ ನನ್ನ ಒಣ ಕಣ್ಣು (Dry Eyes)ಗಳಿಗೆ ನರ್ಸುಗಳಿಂದ ಗಂಟೆಗೊಮ್ಮೆ ಐ ಡ್ರಾಪ್ಸ್‌ಗಳನ್ನು ಹಾಕಿಸಿ ಕೊಳ್ಳುವುದೇ ಒಂದು ಕೆಲಸವಾಯಿತು. ಐಸಿಯುನಲ್ಲಿ ನರ್ಸುಗಳು ಮೂರು ಪಾಳಿಗಳಲ್ಲಿ ಕೆಲಸ ಮಾಡುತ್ತಿದ್ದರು. ಪಾಳಿ ಬದಲಾಗುವ ಸಂದರ್ಭದಲ್ಲಿ ಮುಂದೆ ಬರುತ್ತಿರುವ ನರ್ಸಿಗೆ ಈಗಿರುವವರು ಚಾರ್ಜ್ ನೀಡುವಾಗ ಆ ವಿಷಯವನ್ನು ಹೇಳಬೇಕಾಗಿತ್ತು. ಆದರೆ ಬಹಳ ಜನರು ಅದನ್ನು ಹೇಳುತ್ತಿರಲಿಲ್ಲ. ಏಕೆಂದರೆ, ನನ್ನ ಕೇಸ್‌ಶೀಟ್‌ನಲ್ಲಿ ಐ ಡ್ರಾಪ್ಸ್‌ಗಳ ಬಗ್ಗೆ ಬರವಣಿಗೆ ಇರುತ್ತಿರಲಿಲ್ಲ. ಅದು ನನ್ನ ಕೋರಿಕೆಯ ಮೇರೆಗೆ ತಪ್ಪದೆ ನಡೆಯುತ್ತಿದ್ದ ಕೆಲಸ. ಅನೇಕ ಸಂದರ್ಭಗಳಲ್ಲಿ ಚಾರ್ಜ್ ಕೊಡುವ ನರ್ಸು ಹೇಳಿದ್ದರೂ ಹೊಸದಾಗಿ ಬರುವವರು ಮರೆತುಬಿಡುತ್ತಿದ್ದರು. ಆದರೆ ಒಂದು ಗಂಟೆಯ ಹೊತ್ತಿಗೆಲ್ಲ ನನ್ನ ಕಣ್ಣುಗಳು ಒಣಗಿ ಉರಿ ಜಾಸ್ತಿಯಾಗು ತ್ತಿತ್ತು. ಆಗ ನಾನು ನನ್ನ ಮಂಚದ ಕಂಬಿಯನ್ನು ಕುಟ್ಟಿ ನರ್ಸನ್ನು ಕರೆದು ಕೈ ಸನ್ನೆಯ ಮೂಲಕ ಕಣ್ಣಿಗೆ ಐ ಡ್ರಾಪ್ಸ್ ಹಾಕುವಂತೆ ಹೇಳಬೇಕಾಗಿತ್ತು. ಕೆಲವರು ಬೇಗ ನನ್ನ ಸನ್ನೆಯನ್ನು ಅರ್ಥಮಾಡಿಕೊಂಡು ಡ್ರಾಪ್ಸ್ ಹಾಕುತ್ತಿದ್ದರು. ಆದರೆ ಕೆಲವರಿಗೆ ನನ್ನ ಸನ್ನೆ ಅರ್ಥವಾಗುತ್ತಿರಲಿಲ್ಲ. ಆಗ ನಾನು ಒಂದು ಹಾಳೆಯಲ್ಲಿ ಬರೆದು ತಿಳಿಸಬೇಕಾಗಿತ್ತು.

ನನ್ನ ದೀರ್ಘ ಅವಧಿಯ ಐಸಿಯುನ ವಾಸದ ಕಾರಣದಿಂದಾಗಿ ಬಹುಪಾಲು ಎಲ್ಲ ನರ್ಸುಗಳಿಗೂ ಸ್ವಲ್ಪ

ದಿನಗಳ ನಂತರ ನನ್ನ ಕಣ್ಣಿನ ಸಮಸ್ಯೆ ಅರ್ಥವಾಗಿತ್ತು. ಅವರು ನನ್ನ ಸನ್ನೆಯನ್ನು ನೋಡಿದ ತಕ್ಷಣ ಐ ಡ್ರಾಪ್ಸ್ ಅನ್ನು ಹಾಕಿ ನನ್ನ ಕಣ್ಣಿನ ಉರಿಯನ್ನು ಕಡಿಮೆ ಮಾಡುತ್ತಿದ್ದರು. ಅವರಿಗೆ ನನ್ನ ಒಣ ಕಣ್ಣಿನ ಸಮಸ್ಯೆ ಅಂಥಾ ತಲೆಕೆಡಿಸಿಕೊಳ್ಳುವ ವಿಷಯವಾಗಿರಲಿಲ್ಲ. ಕಣ್ಣು ಮಾತ್ರವಲ್ಲ ಪ್ರಾಣ ತೆಗೆಯುವ ಗಂಭೀರ ಕಾಯಿಲೆಯನ್ನು ಹೊರತುಪಡಿಸಿ ಮಿಕ್ಕ ಎಲ್ಲವೂ ಅವರಿಗೆ ನಿರ್ಲಕ್ಷ್ಯ ಮಾಡಲಾರದ ಆದರೆ ಗಂಭೀರವಾಗಿ ತೆಗೆದುಕೊಳ್ಳಬೇಕಾಗಿಲ್ಲದ ಸಮಸ್ಯೆಗಳಾಗಿದ್ದವು. ಇದು ಐಸಿಯುನ ಪ್ರಧಾನ ಗುರಿಯೂ ಆಗಿತ್ತು. ಐಸಿಯುನ ಮುಖ್ಯ ಧ್ಯೇಯ - ಪ್ರಾಣ ಉಳಿಸುವುದು. ಉಳಿದವು ಅನಂತರ ನಿಧಾನಕ್ಕೆ ಪರಿಹರಿಸಿ ಕೊಳ್ಳಬಹುದಾದ ಸಮಸ್ಯೆಗಳು!

ಐಸಿಯುನ ನರ್ಸುಗಳು ನನ್ನ ಒಣ ಕಣ್ಣಿಗೆ ಡ್ರಾಪ್ಸ್‌ಗಳನ್ನು ಹಾಕುವಾಗ ನಾನಾ ರೀತಿಯ ಸೂಚನೆಗಳನ್ನು ನನಗೆ ನೀಡುತ್ತಿದ್ದರು.

"ಕಣ್ಣಿಗೆ ಡ್ರಾಪ್ಸ್ ಹಾಕಿಸಿಕೊಂಡ ಮೇಲೆ ಐದು ನಿಮಿಷ ಕಣ್ಣನ್ನು ಮುಚ್ಚಿಕೊಂಡೇ ಇರಬೇಕು"

"ಕಣ್ಣಿಗೆ ಒಂದೇ ಒಂದು ಡ್ರಾಪ್ ಹಾಕುವುದರಿಂದ ಏನೂ ಪ್ರಯೋಜನವಿಲ್ಲ. ಕನಿಷ್ಠ ಪಕ್ಷ ಒಂದು ಕಣ್ಣಿಗೆ ಎರಡು ತೊಟ್ಟನ್ನಾದರೂ ಹಾಕಿಸಿಕೊಳ್ಳಬೇಕು"

"ತಲೆಯನ್ನು ಸ್ವಲ್ಪ ಮೇಲಕ್ಕೆ ಮಾಡಿಕೊಂಡು ಡ್ರಾಪ್ಸ್ ಹಾಕಿಸಿಕೊಂಡು ಕಣ್ಣು ಮುಚ್ಚಿಕೊಂಡಿರಬೇಕು"

"ಕುಳಿತುಕೊಂಡು ಹಾಕಿಸಿಕೊಳ್ಳುವುದಕ್ಕಿಂತ ಮಲಗಿಕೊಂಡು ಹಾಕಿಸಿಕೊಳ್ಳುವುದು ಉತ್ತಮ"

ಅವರು ನೀಡುತ್ತಿದ್ದ ಸಲಹೆ ಸೂಚನೆಗಳನ್ನು ನಾನು ಮೌನವಾಗೇ ಸ್ವೀಕರಿಸುತ್ತಿದ್ದೆ. 'ಅದು ಹಾಗಲ್ಲ, ಹೀಗೆ' ಅಂತ ಹೇಳಲು ನನಗೆ ಮಾತೇ ಇರಲಿಲ್ಲ! ಐ ಡ್ರಾಪ್ಸ್ ಹಾಕುವಾಗ ಕೆಲವು ನರ್ಸುಗಳು ಎಚ್ಚರಿಕೆಯಿಂದ ಬಾಟಲಿನ ತುದಿ ನನ್ನ ಕಣ್ಣಿಗೆ ಸೋಕದಂತೆ ನಿಗಾ ಇಡುತ್ತಿದ್ದರು. ಕೆಲವರು ಜನ್ಮತಃ ಒರಟಾಗಿದ್ದುದರಿಂದ ನನ್ನ ರೆಪ್ಪೆ ಮತ್ತು ಗುಡ್ಡೆಗಳಿಗೆ ಬಾಟಲಿಯ ಮೂತಿಯನ್ನು ಸೋಕಿಸಿ ನೋವು ತರುತ್ತಿದ್ದರು. ಹತ್ತಾರು ಜನರ ಕೈನಿಂದ ಐ ಡ್ರಾಪ್ಸ್ ಹಾಕಿಸಿಕೊಂಡ ನನಗೆ ಕಣ್ಣಿಗೆ ಡ್ರಾಪ್ಸ್ ಹಾಕುವುದು ಒಂದು ಕಲೆ ಎಂದು ಗೊತ್ತಾಯಿತು.

ಒಂದು ದಿನ ರಾತ್ರಿ ಹನ್ನೊಂದರ ಸಮಯವಿರಬಹುದು. ನನ್ನ ಕ್ಯಾಬಿನ್ ಉಸ್ತುವಾರಿಯಲ್ಲಿದ್ದ ಬ್ರದರ್‌ಗೆ ನನ್ನ ಕಣ್ಣಿಗೆ ಡ್ರಾಪ್ಸ್ ಹಾಕುವಂತೆ ಹೇಳಿದೆ. ಆತ ಹಸಿರು ಪ್ಲಾಸ್ಟಿಕ್‌ನಲ್ಲಿದ್ದ ರಿಫ್ರೆಶ್‌ಟಿಯರ್ಸ್ ಡ್ರಾಪ್ಸ್ ಅನ್ನು ನನ್ನ ಕಣ್ಣಿಗೆ ಹಾಕಬೇಕಿತ್ತು. ನನ್ನ ತಲೆಯ ಹಿಂಭಾಗದಲ್ಲಿದ್ದ ಕಬೋರ್ಡ್‌ನಲ್ಲಿ ಸದಾ ಔಷಧಗಳನ್ನು

ಇಡಲಾಗುತ್ತಿತ್ತು. ಅಲ್ಲಿ ಅವನು ಐ ಡ್ರಾಪ್ಸ್ ಅನ್ನು ತೆಗೆದು ನನ್ನ ಕಣ್ಣಿಗೆ ತೊಟ್ಟಿಕ್ಕಿಸಬೇಕಾಗಿತ್ತು. ನಾನು ಅವನು ಹಸಿರು ಬಾಟಲಿಯನ್ನು ನನ್ನ ಕಣ್ಣಿನ ಬಳಿಗೆ ತಂದು ತೊಟ್ಟಿಕ್ಕಿಸುವುದನ್ನೇ ಕಾಯುತ್ತಿದ್ದೆ. ಅವನು ಕಣ್ಣ ಮುಂದೆ ಬಾಟಲಿಯೊಂದನ್ನು ಹಿಡಿದು, ಅದರ ಮೂತಿಯಿಂದ ಕಣ್ಣಿಗೆ ಡ್ರಾಪ್ಸ್ ಹಾಕಲು ಯತ್ನಿಸುತ್ತಿದ್ದ. ಅದನ್ನು ನೋಡಿದ ಕೂಡಲೆ ನನಗೆ ಭಯವಾಯಿತು! ಅವನ ಕೈಯಲ್ಲಿದ್ದುದು ಹಸಿರು ಬಾಟಲಿಯಲ್ಲ ಬೆಳ್ಳಗಿತ್ತು. ತಕ್ಷಣ ಅದು ಐ ಡ್ರಾಪ್ಸ್ ಅಲ್ಲವೆಂದು ನನಗೆ ಗೊತ್ತಾಯಿತು. ಜೊತೆಗೆ ಅವನ ಕೈಯಲ್ಲಿದ್ದ ಔಷಧ ಏನೆಂಬುದು ಕೂಡ ತಿಳಿಯಿತು. ಅದು ಬಾಯಿಯಲ್ಲಿದ್ದ ಒಸಡು ಮತ್ತು ಕವಟೆಗಳ ಹುಣ್ಣುಗಳ ನೋವು ಶಮನಕ್ಕೆ ಹಚ್ಚುವ ಜೈಟೀ(Zytee) ಎನ್ನುವ ಸೋಂಕು ನಿವಾರಕ ಜೆಲ್ಲು! ಅದು ಕಣ್ಣಿಗೆ ಬಿದ್ದರೆ ಏನಾಗುತ್ತಿತ್ತೋ ನನಗೆ ಗೊತ್ತಿಲ್ಲ. ಒಳ್ಳೆಯದಂತು ಆಗುತ್ತಿರಲಿಲ್ಲ. ಮೊದಲೇ ಅದು ಗಟ್ಟಿಯಾದ ಜೆಲ್ಲು. ಖಂಡಿತವಾಗಿ ಅದು ಮೆತ್ತಿಕೊಂಡು ನನಗೆ ಮತ್ತೊಂದು ಬಗೆಯ ತೊಂದರೆಗೆ ಸಿಲುಕಿಸುತ್ತಿತ್ತು. ಆದರೆ ಅವನ ಕೈಯಲ್ಲಿದ್ದ ಆ ಬಾಟಲಿಯ ಜೆಲ್ಲು ಹಾಗೂ ಅದು ನನ್ನ ಕಣ್ಣಿಗೆ ಬೀಳಲೆಂದು ಬಾಟಲಿಯನ್ನು ಅದುಮುತ್ತಿದ್ದ ಅವನ ಬೆರಳುಗಳು ದೊಡ್ಡ ಗಾತ್ರದಲ್ಲಿ ಕಂಡು, ತಕ್ಷಣ ಕಣ್ಣು ಮುಚ್ಚಿ, ಅತ್ತ ಇತ್ತ ತಲೆ ಅಲ್ಲಾಡಿಸಿದೆ. ತಕ್ಷಣ ಅವನಿಗೆ ಏನೆಂಬುದು ಅರ್ಥವಾಗಲಿಲ್ಲ. ನಾನು ನನ್ನ ಕೈಯಿಂದ ಅವನ ಕೈಯನ್ನ ತಡೆದು ಡ್ರಾಪ್ಸ್ ಹಾಕಬೇಡವೆಂದು ತಿಳಿಸಿದೆ. ಅವನು ಪ್ರಶ್ನಾರ್ಥಕವಾಗಿ ನನ್ನನ್ನು ನೋಡಿದ. ನಾನು ಅವನಿಗೆ ಪೆನ್ನೂ ಪೇಪರ್ ಕೊಡುವಂತೆ ಕೇಳಿದೆ. ಆಗಲೂ ಅವನು ನನ್ನನ್ನು ಒಂದು ಬಗೆಯಲ್ಲಿ ನೋಡುತ್ತಾ ಹೋಗಿ, ಒಂದು ಚೂರು ಪೇಪರ್ ತಂದು, ತನ್ನ ಜೇಬಿನಿಂದ ಪೆನ್ನು ತೆಗೆದು ನೀಡಿದ. ಆ ಪೇಪರಲ್ಲಿ ನಾನು "ನೀವು ಹಾಕುತ್ತಿರುವುದು ಐ ಡ್ರಾಪ್ಸ್ ಅಲ್ಲ, ಮೌತ್ ಅಲ್ಸರ್ ಜೆಲ್" ಎಂದು ಬರೆದು ನೀಡಿದೆ. ಅದನ್ನು ಓದಿದ ಮೇಲೆ ಅವನಿಗೆ ನಿಜಕ್ಕೂ ಗಾಬರಿಯಾಯಿತೆಂದು ತೋರುತ್ತದೆ. ಜೈಟೀ ಜೆಲ್ಲು ಬಾಟಲಿಯನ್ನೂ ಮತ್ತೊಮ್ಮೆ ನೋಡಿ, ಅದರ ಮೇಲೆ ಬರೆದ ವಾಕ್ಯಗಳನ್ನೂ ಓದಿದ. "ಸಾರಿ ಸಾರ್, ಕತ್ತಲೆಯಲ್ಲಿ ಗೊತ್ತಾಗಲಿಲ್ಲ, ಸಾರಿ" ಎಂದ. ಐಸಿಯುನ ಪ್ರಕಾಶಮಾನವಾದ ಬೆಳಕು ನನ್ನ ಕಣ್ಣು ಕುಕ್ಕುತ್ತಿತ್ತು. ಓದದೆ ಜೈಟೀ ಜೆಲ್ಲನ್ನು ಐ ಡ್ರಾಪ್ಸ್ ಎಂದು ಬಗೆದು ನನ್ನ ಕಣ್ಣಿಗೆ ಹಾಕಲು ಬಂದದ್ದು ಅವನ ಬೇಜವಾಬ್ದಾರಿತನ. ಔಷಧೋಪಚಾರ ಮಾಡುವ ನರ್ಸಿನ ಮೂಲ ಮಂತ್ರವಾದ ನಿಗಾ ಮತ್ತು ಎಚ್ಚರಿಕೆಗಳು ಅವನಲ್ಲಿರಲಿಲ್ಲ ಎಂದು ಮಾತ್ರ ಹೇಳಬಲ್ಲೆ.

ಅನಂತರ ರಿಫ್ರೆಶ್ ಐ ಡ್ರಾಪ್ಸ್ ಬಾಟಲಿಯನ್ನು ಕಬೋರ್ಡ್‌ನಿಂದ ತೆಗೆದು, ಅದನ್ನು ಓದಿ ನನ್ನ ಎರಡೂ ಕಣ್ಣುಗಳಿಗೂ ಎರಡೆರಡು ತೊಟ್ಟುಗಳನ್ನು ಹಾಕಿದನು.

ಮುಂದಿನ ದಿನಗಳಲ್ಲಿ ಆತ ನನ್ನ ಕ್ಯಾಬಿನ್ ಉಸ್ತುವಾರಿಗೆ ಬಂದಾಗಲೆಲ್ಲ ಸಾಮಾನ್ಯಕ್ಕಿಂತ ತುಸು ಹೆಚ್ಚು ಎಚ್ಚರಿಕೆ ವಹಿಸುತ್ತಿದ್ದುದು ಅವನ ನಡವಳಿಕೆಯಿಂದ ಗೊತ್ತಾಗುತ್ತಿತ್ತು.

ನನಗೆ ನನ್ನ ಒಣಕಣ್ಣುಗಳು ನೀಡುತ್ತಿದ್ದ ತೊಂದರೆಯನ್ನು ಗಮನಿಸುತ್ತಿದ್ದ ಡಾ. ಆಮೀರ್‌ರವರು ತಾವು ವಿಸಿಟಿಂಗ್‌ಗೆ ಬಂದಾಗಲೆಲ್ಲಾ ಬ್ರದರ್‌ಗಳಿಗೆ "ಅವರ ಕಣ್ಣುಗಳನ್ನೂ ಗಮನಿಸಿ ಐ ಡ್ರಾಪ್ಸ್ ಹಾಕುತ್ತಿರಬೇಕು" ಎಂದು ತಾಕೀತು ಮಾಡುತ್ತಿದ್ದರು. ಡಾ. ಹರೀಶ್ ನಾಯಕ್ ಅವರು "ನೇತ್ರ ತಜ್ಞರಿಗೆ ಬರಹೇಳಿ ಇವರ ಕಣ್ಣುಗಳಿಗೆ ಚಿಕಿತ್ಸೆ ನೀಡುವ ವ್ಯವಸ್ಥೆ ಮಾಡಿರಿ" ಎಂದು ಮಾತಿನಲ್ಲಿ ಹೇಳಿದ್ದಲ್ಲದೆ ನನ್ನ ಕೇಸ್‌ಶೀಟಿನಲ್ಲಿ ಅದನ್ನು ದಾಖಲು ಮಾಡಿದರು. ಬ್ರದರ್ ತಕ್ಷಣ ನೇತ್ರತಜ್ಞರನ್ನು ಸಂಪರ್ಕಿಸಲು ಪ್ರಯತ್ನಿಸಿದ. ನೇತ್ರತಜ್ಞರು ಎರಡು ದಿನವಾದರೂ ಸಿಗಲಿಲ್ಲ. ಕೊನೆಗೆ ಅವರ ಕಛೇರಿ ಮತ್ತು ಮನೆಗೆ ಆ ಬಗ್ಗೆ ಸಂದೇಶ ಕಳುಹಿಸಿದ. ಪ್ರತಿ ಸಾರಿ ಡಾ. ಹರೀಶ್ ನಾಯಕ್ ಬಂದಾಗಲೆಲ್ಲಾ "ನೇತ್ರ ತಜ್ಞರು ಬಂದಿದ್ದರೆ?" ಎಂದು ಬ್ರದರ್‌ನನ್ನು ಪ್ರಶ್ನಿಸುತ್ತಿದ್ದರು.

ಮೂರನೆಯ ದಿನ ಸಂಜೆ ಐದು ಗಂಟೆಯ ಹೊತ್ತಿನಲ್ಲಿ ನನ್ನ ಕ್ಯಾಬಿನ್‌ನ ಮುಂದೆ ಮಹಿಳೆಯೊಬ್ಬರು ಬಂದರು. ಸುಮಾರು ನಲವತ್ತರ ಆಜುಬಾಜಿನ ವಯಸ್ಸಿರಬಹುದು. "ನಾನು ಡಾ. ಲಕ್ಷ್ಮಿ. ಐ ಸ್ಪೆಷಲಿಸ್ಟ್. ಏನು ನಿಮ್ಮ ಕಣ್ಣಿನ ತೊಂದರೆ?" ಎಂದು ನನ್ನನ್ನು ಪ್ರಶ್ನಿಸಿದರು. ಅವರಾಡುತ್ತಿದ್ದ ಕನ್ನಡವು ಅವರ ಮಾತೃಭಾಷೆ ಬೇರೆ ಯಾವುದೋ ಇರಬೇಕು ಎಂದು ಅನ್ನಿಸಿತು. ಅವರ ಕನ್ನಡ ಉಚ್ಚಾರಣೆಯ ಆಧಾರದ ಮೇಲೆ ಅವರು ತಮಿಳರಿರಬಹುದೆಂದು ನಾನು ಭಾವಿಸಿದೆ. ನಾನು ಒಂದು ಹಾಳೆಯಲ್ಲಿ ನನಗೆ ಡ್ರೈ ಇದೆಯೆಂದು ಬರೆದು ತೋರಿಸಿದೆ. ಆಕೆಗೆ ಕನ್ನಡ ಓದಲು ಬರುವುದಿಲ್ಲವೆಂದು ತಿಳಿಯಿತು. ಅನಂತರ ಅದನ್ನೇ ಇಂಗ್ಲಿಷ್‌ನಲ್ಲಿ ಬರೆದು ತಿಳಿಸಿದೆ. "ಏನು ಔಷಧಿ ಬಳಸುತ್ತಿರುವಿರಿ?" ಎಂದು ಕೇಳಿದರು. 'ರಿಫ್ರೆಶ್ ಟಿಯರ್ಸ್ ಡ್ರಾಪ್ಸ್ ಮತ್ತು ಲ್ಯಾಕ್ರಿಜೆಲ್' ಎಂದು ಬರೆದು ತಿಳಿಸಿದೆ. ಬ್ರದರ್‌ಗೆ ಅವರ ಟಾರ್ಚ್ ನೀಡುವಂತೆ ಕೇಳಿದರು. ಬ್ರದರ್ ಟಾರ್ಚ್ ತಂದು ನೀಡಿದ. ಡಾಕ್ಟರ್ ನನ್ನ ಕಣ್ಣುಗಳಿಗೆ ಬೆಳಕು ಬಿಟ್ಟು ಅರೆಕ್ಷಣದಲ್ಲಿ ವೀಕ್ಷಣೆ ಮಾಡಿ, "ಯಸ್, ಯು ಹ್ಯಾವ್ ಡ್ರೈ ಐಸ್. ಕಂಟಿನ್ಯೂ ದ ಸೇಮ್ ಡ್ರಗ್ಸ್" ಎಂದು ನನಗೆ ಹೇಳಿ, ನನ್ನ ಕೇಸ್ ಶೀಟಿನಲ್ಲಿ ಅದನ್ನೇ ಬರೆದು ಜಾಗ ಖಾಲಿ ಮಾಡಿದರು.

ನನಗೆ ನಗು ಬಂತು. ಈ ತಜ್ಞೆಗಾಗಿ ನಾವು ಮೂರು ದಿನ ಕಾದಿದ್ದೆವು. ಆಕೆಯ ಪರೀಕ್ಷಾ ವಿಧಾನವೂ ಕೂಡ ನೇತ್ರ ತಜ್ಞರ ರೀತಿಯಲ್ಲಿರಲಿಲ್ಲ. ನಾನು ಕಳೆದ ಏಳೆಂಟು

ತಿಂಗಳಿಂದ ಏನು ಔಷಧ ತೆಗೆದುಕೊಳ್ಳುತ್ತಿದ್ದೆನೋ ಅದನ್ನೇ ಮುಂದುವರಿಸಲು ಹೇಳಿ ಹೋದ ಅವರನ್ನು ನಾನು ದೂಷಿಸುತ್ತಿಲ್ಲ. ಬಹುಶಃ ನಾನು ಹಿಂದೆ ತೋರಿಸಿದ್ದ ನೇತ್ರ ತಜ್ಞರು ನೀಡಿದ್ದ ಔಷಧಗಳು ಸರಿ ಇದ್ದಿರಬಹುದೆಂದು ಆಕೆಗೆ ಅನಿಸಿರಬೇಕು.

ನನಗೆ ೨೦೧೩ರ ಮೇ ತಿಂಗಳಲ್ಲಿ ಕಣ್ಣುಗಳು ಉರಿಯಲು ಪ್ರಾರಂಭಿಸಿದವು. ಅದರಲ್ಲೂ ಮುಚ್ಚಿಕೊಂಡಾಗ ಚುಚ್ಚುತ್ತಿದ್ದವು. ಉರಿಯನ್ನು ತಡೆಯಲು ಅಸಾಧ್ಯವಾದಾಗ ನೇತ್ರ ತಜ್ಞರಾದ ಡಾ. ಡಿ.ಎನ್. ಪ್ರಕಾಶ್ ಅವರ ಬಳಿ ಹೋದೆ. ಡಾ. ಪ್ರಕಾಶ್ ನನ್ನ ಕಣ್ಣುಗಳನ್ನು ಪರೀಕ್ಷಿಸಿ, "ನಿಮ್ಮ ಕಣ್ಣುಗಳು ಡ್ರೈ ಐಸ್ ಆಗಿವೆ. ಪ್ರತಿ ಒಂದು ಗಂಟೆಗೊಮ್ಮೆ ಈ ಲ್ಯೂಬ್ರಿಕೆಂಟ್ ಐ ಡ್ರಾಪ್ಸ್ ಹಾಕಿರಿ" ಎಂದು ಐ ಮಿಸ್ಟ್ ಎಂಬ ಐ ಡ್ರಾಪ್ಸ್ ಬರೆದುಕೊಟ್ಟರು.

"ನನಗೇಕೆ ಡ್ರೈ ಐ ಆಗಿದೆ" ಎಂದು ಅವರನ್ನು ಕೇಳಿದೆ.

"ನಿಮಗಾಗಿರುವ ಲೇಕನ್ ಪ್ಲೇನಸ್‌ನ ಪ್ರಭಾವ ಇದು. ಈಗ ಪ್ರಾರಂಭವಾಗಿದೆ. ನಿಮ್ಮ ಕಣ್ಣಿನ ರೆಪ್ಪೆಗಳ ಒಳಚರ್ಮವಾದ ಮ್ಯೂಕೋಶವನ್ನು ಲೇಕನ್ ಪ್ಲೇನಸ್ ಹಾಳು ಮಾಡಿಬಿಡುತ್ತೆ. ಕೆಲವರಿಗೆ ರೆಪ್ಪೆಯ ಒಳಭಾಗದಲ್ಲಿ ಲೀಸನ್ (ಗುಳ್ಳೆ)ಗಳು ಆಗಬಹುದು" ಎಂದರು. ತುಂಬಾ ಎಚ್ಚರಿಕೆಯಿಂದ ಕಣ್ಣುಗಳ ನಿರ್ವಹಣೆ ಮಾಡಬೇಕೆಂದು ಹೇಳಿದ್ದಲ್ಲದೆ, ತಿಂಗಳಿಗೊಮ್ಮೆ ಕಡ್ಡಾಯವಾಗಿ ತಮ್ಮ ಬಳಿ ಬಂದು ಕಣ್ಣು ತಪಾಸಣೆ ಮಾಡಿಸಿಕೊಳ್ಳಬೇಕೆಂದು ಕಳಕಳಿಯಿಂದ ಹೇಳಿದರು.

ಅವರ ಊಹೆ ನಿಜವಾಗತೊಡಗಿತು. ಒಂದು ತಿಂಗಳಲ್ಲಿ ನನ್ನ ಕಣ್ಣುಗಳ ಒಳರೆಪ್ಪೆಯ ಅಂಚಿನಲ್ಲಿ ರವೆಗಾತ್ರದ ಗುಳ್ಳೆಗಳಾಗಿ ಅಪಾರವಾದ ಯಾತನೆಯನ್ನು ನೀಡಲಾರಂಭಿಸಿದವು. ಪ್ರಾಕಾಶ್‌ರವರು ಅವುಗಳ ಶಮನಕ್ಕೆ ತಕ್ಕ ಔಷಧ ನೀಡುತ್ತಾ ನನ್ನ ಕಣ್ಣುಗಳ ಬಗ್ಗೆ ತೀವ್ರ ನಿಗಾ ವಹಿಸಿದರು. ರಾತ್ರಿ ನಾನು ಮಲಗುವ ಮುನ್ನ ಕಣ್ಣಿಗೆ ಹಚ್ಚಿಕೊಳ್ಳಲು ಲ್ಯಾಕ್ರಿಜೆಲ್ ಎಂಬ ಔಷಧವನ್ನು ನೀಡಿದರು. ಅದರಿಂದ ನನ್ನ ಯಾತನೆ ತುಸು ಶಮನವಾಯಿತು. "ನಿಮ್ಮ ಚಿಕಿತ್ಸೆಯ ಅಂಗವಾಗಿ ನೀಡುತ್ತಿರುವ ಸ್ಟಿರಾಯ್ಡ್ ಮುಂದೆ ನಿಮ್ಮ ಕಣ್ಣುಗಳಿಗೆ ತೊಂದರೆ ನೀಡಬಹುದು. ಅದು ಕ್ಯಾಟರಾಕ್ಟ್ ಉಂಟುಮಾಡುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಯಾವುದಕ್ಕೂ ನೀವು ಎಚ್ಚರಿಕೆಯಿಂದಿರಬೇಕು" ಎಂದರು. ಅವರ ಎಚ್ಚರಿಕೆಯ ಮಾತುಗಳು ಮುಂದಿನ ದಿನಗಳಲ್ಲಿ ನಿಜವಾದದ್ದು ಮಾತ್ರ ಸತ್ಯ!

ಡಾ. ಪ್ರಕಾಶ್ ವೃತ್ತಿಯಲ್ಲಿ ವೈದ್ಯರಾದರೂ ಅವರಿಗೆ ಸಾಹಿತ್ಯ ಕಲೆ ಇತ್ಯಾದಿ ಸಾಂಸ್ಕೃತಿಕ ವಿಷಯಗಳಲ್ಲಿ ಅತೀವವಾದ ಆಸಕ್ತಿಯಿತ್ತು. ಈ ಕಾರಣದಿಂದಲೇ ಬರಹಗಾರನಾದ ನನ್ನನ್ನು ಕಂಡರೆ ಅವರಿಗೆ ವಿಶೇಷ ಪ್ರೀತಿಯಿತ್ತು. ನನ್ನ ಕಣ್ಣಿನ

ಆರೋಗ್ಯದ ಬಗ್ಗೆ ಕಳಕಳಿ ಇತ್ತು. ಒಬ್ಬ ಲೇಖಕನಾದವನಿಗೆ ಕಣ್ಣುಗಳ ಮಹತ್ವ ಎಷ್ಟಿರತ್ತದೆಂದು ಅವರಿಗೆ ತಿಳಿದಿತ್ತು. ಆದುದರಿಂದಲೇ ನನ್ನ ಕಣ್ಣಿನ ವಿಷಯದಲ್ಲಿ ಅನುಮಾನ ಪ್ರಾಪ್ತವಾದಾಗ ಬೇರೊಬ್ಬ ನೇತ್ರ ತಜ್ಞರಿಂದ ಮತ್ತೊಂದು ಅಭಿಪ್ರಾಯ ಪಡೆಯಲು ಸೂಚಿಸುತ್ತಿದ್ದರು. ಹೀಗೆ ಅವರು ಸೂಚಿಸಿದ ಮತ್ತೊಬ್ಬ ನೇತ್ರ ತಜ್ಞರೆ ಡಾ. ಮಹೇಶ್‌ಕುಮಾರ್. ಅವರು ನನ್ನ ಡ್ರೈ ಐಸ್‌ಗೆ ಐಮಿಸ್ಟ್ ಐ ಡ್ರಾಪ್ಸ್ ಬದಲು ರಿಪ್ರೆಶ್ ಟಿಯರ್ಸ್ ಬಳಸಲು ಸೂಚಿಸಿದ್ದರು. ಅದರಂತೆ ನಾನು ನನ್ನ ಡ್ರೈ ಐ ಗಳ ಉರಿ ನಿವಾರಣೆಗೆ ಅಂದಿನಿಂದ ರಿಪ್ರೆಶ್‌ಟಿಯರ್ಸ್ ಮತ್ತು ಲ್ಯಾಕ್ರಿಜೆಲ್ ಬಳಸುತ್ತಿದ್ದೆ.

೧೩. ಮೂಗನ ಕಾಡಿದರೇನು? ಸವಿ ಮಾತನು ಆಡುವನೇನು?

ನಾನು ಕಾಮಾಕ್ಷಿ ಆಸ್ಪತ್ರೆಯಲ್ಲಿ ದಾಖಲಾದ ಮಾರನೆಯ ಬೆಳಿಗ್ಗೆ ನನಗೆ ಮಾತನಾಡಲು ಆಗುತ್ತಿಲ್ಲವೆಂದು ಗೊತ್ತಾಯಿತು. ಅದಕ್ಕೆ ಕಾರಣವೇನೆಂದು ನನಗೆ ನಿಧಾನಕ್ಕೆ ತಿಳಿಯಿತು. ನನಗೆ ಕೃತಕ ಉಸಿರಾಟ ನೀಡಲು ಎಂಡೋಟ್ರೇಕಿಯಲ್ ಟ್ಯೂಬನ್ನು ನನ್ನ ಗಂಟಲಿನ ಮೂಲಕ ಶ್ವಾಸನಾಳಕ್ಕೆ ಜೋಡಿಸಿದ್ದರು. ಆ ಟ್ಯೂಬ್ ನನ್ನ ಧ್ವನಿ ಪೆಟ್ಟಿಗೆಯನ್ನು ಅದುಮಿರುತ್ತಿರು ತ್ತಿತ್ತು. ಇದರಿಂದಾಗಿ ನನಗೆ ಮಾತಾಡಲು ಆಗುತ್ತಿರಲಿಲ್ಲ. ಈ ಎಂಡೋಟ್ರೇಕಿಯಲ್ ಟ್ಯೂಬು ನನ್ನ ಗಂಟಲಲ್ಲಿ ಸುಮಾರು ಇಪ್ಪತ್ತು ದಿನದ ಮೇಲಿತ್ತು. ಅನಂತರ ನನ್ನ ಕುತ್ತಿಗೆಯಲ್ಲಿ ರಂಧ್ರ ಕೊರೆದು ಆ ಮೂಲಕ ಟ್ರೇಕಿಯಾಸ್ಟಮಿ ಮಾಡಿದಾಗ ನನ್ನ ಬಾಯಿಯಿಂದ ಎಂಡೋಟ್ರೇಕಿಯಲ್ ಟ್ಯೂಬನ್ನು ತೆಗೆಯಲಾಯಿತು. ಆದರೆ ಟ್ರೇಕಿಯಾಸ್ಟಮಿಯ ಪ್ಲಾಸ್ಟಿಕ್ ಟ್ಯೂಬು ಕೂಡ ನನ್ನ ಧ್ವನಿಪೆಟ್ಟಿಗೆಯನ್ನು ಅದುಮಿ ಮುಚ್ಚಿದುದರಿಂದ ನನಗೆ ಮಾತನಾಡಲು ಆಗುತ್ತಿರಲಿಲ್ಲ. ಮಾತು ಹಾಗಿರಲಿ, ಕನಿಷ್ಠ ಧ್ವನಿಯನ್ನು ಕೂಡ ಹೊರಡಿಸಲು ಆಗುತ್ತಿರಲಿಲ್ಲ. ಹುಟ್ಟಾ ಮೂಗನಾದವನು ಕೆಲವು ಧ್ವನಿಗಳನ್ನಾದರೂ ಹೊರಡಿಸುತ್ತಾನೆ. ಆದರೆ ನನಗೆ ನನ್ನ ಬಾಯಿಯಿಂದ ಯಾವುದೇ ಧ್ವನಿ ಹೊರಡಿಸಲು ಸಾಧ್ಯವಾಗದೆ ಹೆಚ್ಚು ಕಡಿಮೆ ಎರಡು ತಿಂಗಳಿದ್ದೆ ಎಂಬುದು ನನಗೇ ಆಶ್ಚರ್ಯಕರ ಸಂಗತಿಯಾಗಿ ಇಂದು ನನಗೆ ತೋರುತ್ತಿದೆ.

ಮೂಲತಃ ತುಸು ವಾಚಾಳಿಯಾದ ನನಗೆ ನನ್ನ ಧ್ವನಿ ಮತ್ತು ಅದರ ಮಾತುಗಾರಿಕೆಯಿಂದ ವಿದ್ಯಾರ್ಥಿಗಳಿಂದ

ಮತ್ತು ಸಾರ್ವಜನಿಕರಿಂದ ಮೆಚ್ಚುಗೆ ಲಭ್ಯವಾಗುತ್ತಿತ್ತು. ತರಗತಿಗಳಲ್ಲಿ ನನ್ನ ಧ್ವನಿಯ ಏರಿಳಿತ, ಭಾವಕ್ಕೆ ತಕ್ಕ ರಾಗಾಭಿನಯಗಳು ವಿದ್ಯಾರ್ಥಿಗಳನ್ನು ಸೆಳೆದಿದ್ದವು ಎಂಬುದು ನನ್ನ ಮೂವತ್ತೈದು ವರ್ಷದ ಬೋಧನಾನುಭವದಲ್ಲಿ ತಿಳಿದ ವಿಷಯವಾಗಿತ್ತು. ಇನ್ನೂರು ಮುನ್ನೂರು ಜನರಿರುವ ಸಾರ್ವಜನಿಕ ಸಭೆಯಲ್ಲಿ ಮೈಕಿನ ಸಹಾಯವಿಲ್ಲದೆ, ಏರು ಧ್ವನಿಯಲ್ಲಿ ನಿರರ್ಗಳವಾಗಿ ಮಾತನಾಡುತ್ತಿದ್ದೆ. ನನ್ನ ಮಾತಿನ ಮೋಡಿಯಲ್ಲಿ ಅವರನ್ನು ಕಟ್ಟಿ ಹಾಕುತ್ತಿದ್ದೆ. ನನ್ನ ಯೌವ್ವನ ಮತ್ತು ಪ್ರೌಢಾವಸ್ಥೆಯಲ್ಲಿ ನಾನು ಮಾಡಿದ ಬೀದಿ ಭಾಷಣಗಳು, ಬಹಿರಂಗ ಸಭೆಗಳ ಭಾಷಣಗಳು - ನನಗೆ ನನ್ನ ಮಾತುಗಾರಿಕೆಯ ಬಗ್ಗೆ ಹೆಮ್ಮೆ ಮೂಡಿಸಿದ್ದವು. ವಿದ್ಯಾರ್ಥಿಗಳು, ಸ್ನೇಹಿತರು ಮತ್ತು ಸಾರ್ವಜನಿಕರು ನನ್ನ ಧ್ವನಿಯ ಬಗ್ಗೆ ಮೆಚ್ಚಿ ಮಾತನಾಡಿದಾಗ ಸಂತೋಷವಾಗುತ್ತಿತ್ತು. ಆ ಸಂತೋಷದ ಹಿಂದೆ ನನ್ನ ಧ್ವನಿಯ ಬಗ್ಗೆ ವ್ಯಾಮೋಹವೂ ಕೆಲಸ ಮಾಡುತ್ತಿತ್ತು. ಅದರಿಂದ ತುಸು ಅಹಂಕಾರ - ನಾನು ಒಳ್ಳೆಯ ಭಾಷಣಕಾರನೆಂಬ - ಬಂದಿದ್ದರೂ ಆಶ್ಚರ್ಯವಿಲ್ಲ.

ಈ ಬರೆಹವನ್ನು ಬರೆಯುತ್ತಿರುವ ನನಗೀಗ ನನ್ನ ಮೊದಲ ಆ ಧ್ವನಿಯಿದೆ ಎಂದು ಹೇಳಲು ಧೈರ್ಯಬರುತ್ತಿಲ್ಲ. ನನ್ನ ಗಡಸು ಧೀರ ಧ್ವನಿಯ ಬದಲು ಈಗ ನಾನು ಮಾತನಾಡಿದಾಗ ತೀರಾ ಸುಸ್ತಾದ, ಬಳಲಿದ ಕ್ಷೀಣ ಧ್ವನಿ ನನ್ನ ಗಂಟಲಿಂದ ಹೊರಹೊಮ್ಮುತ್ತಿದೆ. ನನಗೆ ನನ್ನ ಧ್ವನಿಯ ಬಗೆಗಿದ್ದ ಅಭಿಮಾನ - ಅಹಂಕಾರ?- ಸಂಪೂರ್ಣ ತೊಡೆದು ಹೋಗಿದೆ. ಮುಂದಿನ ದಿನಗಳಲ್ಲಿ ನನ್ನ ಆ ಧ್ವನಿ ಬರುತ್ತದೆಯೋ ಇಲ್ಲವೋ ಈಗ ನನಗೆ ಗೊತ್ತಿಲ್ಲ. ಆದರೆ ಈಗ ಆ ಧ್ವನಿಯ ವೈಭವವಿಲ್ಲವೆಂಬುದು ಮಾತ್ರ ಸತ್ಯವಾಗಿದೆ.

ಎರಡು ತಿಂಗಳಿಗಿಂತ ಕಡಿಮೆ ಅವಧಿಯ ಆ ನನ್ನ ಮೂಕನ ಸ್ಥಿತಿ ಮಾತ್ರ ನನ್ನ ಒಳಗಿನ ಧ್ವನಿ ಮತ್ತಷ್ಟು ಎಚ್ಚರಗೊಳ್ಳಲು ಸಹಕಾರಿಯಾಯಿತು. ಮಾತು ಬಲ್ಲವನಿಗೆ ಮಾತ್ರ ಮಾತಿನ ಮಹಿಮೆ ತಿಳಿಯುತ್ತದೆ. ಮಾತು ಕಳೆದುಕೊಂಡ ಸುಮಾರು ದಿನ ಕೇವಲ ಕೈಸನ್ನೆಯ ಮೂಲಕ ಇತರರೊಡನೆ ವ್ಯವಹರಿಸುವುದು ಎಷ್ಟು ಕಷ್ಟವೆಂಬುದು ನನಗೆ ಅರಿವಾಯಿತು. ನಾನೇನೊ ಕೇಳಿದರೆ ಬೇರೆಯವರು ಇನ್ನೇನೋ ತಿಳಿಯುವುದು, ಅವರ ತಿಳಿವಳಿಕೆಯನ್ನು ಸರಿಮಾಡಲು ಮತ್ತಷ್ಟು ಸನ್ನೆಗಳ ಮೂಲಕ ಸಂವಹನಗೊಳಿಸಲು ಎಣಗುವುದು ನಡೆಯುತ್ತಲೇ ಇತ್ತು. ಕೆಲವು ನರ್ಸುಗಳು ಚಾಣಾಕ್ಷರಿದ್ದು ಬೇಗ ಅರ್ಥಮಾಡಿಕೊಳ್ಳುತ್ತಿದ್ದರು. ಆದರೆ ಕೆಲವರು ಅರ್ಥಮಾಡಿಕೊಳ್ಳದೆ ಸತಾಯಿಸುತ್ತಿದ್ದರು. ನನ್ನ ಈ ಸನ್ನೆಯ ಕಷ್ಟವನ್ನು ನೋಡಲಾರದೆ, ನನ್ನ ಮಕ್ಕಳು ನನಗೆ ಬರೆದು ತಿಳಿಸಲು ಒಂದು ನೋಟ್ ಪ್ಯಾಡನ್ನೂ

ಪೆನ್ನನ್ನೂ ನೀಡಿದರು. ಇದರಿಂದ ನರ್ಸುಗಳು ಮತ್ತು ಇತರರೊಡನೆ ನನ್ನ ಸಂವಹನ ಸುಲಭವಾಯಿತು. ಆದರೂ ಕೆಲವು ಸಿಸ್ಟರ್‌ಗಳಿಗೆ ಕನ್ನಡ ಬರುತ್ತಿರಲಿಲ್ಲ. ಮಲೆಯಾಳಿಗಳಾದ ಅವರಿಗೆ ನೆಟ್ಟಗೆ ಇಂಗ್ಲೀಷು ಬರುತ್ತಿರಲಿಲ್ಲ. ಅಂಥವರಿಗೆ ಕನ್ನಡಕ್ಕಿಂತ ಇಂಗ್ಲೀಷ್ ವಾಸಿಯಾಗಿತ್ತು.

ಆ ಅವಧಿಯಲ್ಲಿ ನನ್ನ ನಾಲಗೆಗೆ ಕೆಲಸವೇ ಇರಲಿಲ್ಲ. ಆಹಾರ ಅಗಿಯುವುದು, ನಾಲಗೆಯಿಂದ ಹೊರಳಿಸಿ ನುಂಗುವುದು ಈ ಯಾವ ಕ್ರಿಯೆಗಳೂ ಇರಲಿಲ್ಲ. ಅದರ ಜೊತೆಗೆ ಮಾತು ಕೂಡ ಆಡುವಂತಿರಲಿಲ್ಲವಾಗಿ ನನ್ನ ಬಾಯಿ ಹೆಚ್ಚುಕಡಿಮೆ ಕೆಲಸವಿಲ್ಲದೆ ಬಂದ್ ಆಗಿತ್ತು. ನನಗೆ ಆಶ್ಚರ್ಯವಾಗುತ್ತಿದೆ - ಸುಮಾರು ಮೂರು ತಿಂಗಳು ನಾನು ಬಾಯಿ ಮೂಲಕ ನೀರನ್ನೂ ಸಹ ಕುಡಿದಿರಲಿಲ್ಲ.

ನನಗೆ ಮಾತನಾಡಲು ಆಗುತ್ತಿರಲಿಲ್ಲವಾಗಿ ನಾನು ಅನೇಕ ಸಲ ನನ್ನ ಭಾವನೆಗಳನ್ನು ವ್ಯಕ್ತಪಡಿಸಲು ವಿಫಲನಾಗುತ್ತಿದ್ದೆ. ಆದರೆ ಆ ಎರಡು ತಿಂಗಳಲ್ಲಿ ನನ್ನ ಇತರೆ ಇಂದ್ರಿಯಗಳು ಹೆಚ್ಚು ಜಾಗೃತವಾಗಿದ್ದವು. ನನ್ನ ಧೀಶಕ್ತಿ ತುಂಬ ಚುರುಕಾಗಿತ್ತು. ನನ್ನ ಕಾಯಿಲೆಯ ಬಗ್ಗೆ, ನನ್ನ ಆರೋಗ್ಯದ ಸ್ಥಿತಿಯ ಬಗ್ಗೆ ಇತರರು ವ್ಯಕ್ತಪಡಿಸುತ್ತಿದ್ದ ಅಭಿಪ್ರಾಯಗಳನ್ನು ಬಹು ಸುಲಭವಾಗಿ ಗ್ರಹಿಸುತ್ತಿದ್ದೆ. ನನಗೆ ತಿಳಿಯಬಾರದೆಂದು ಅವರು ಮಾಡುತ್ತಿದ್ದ ಕೃತಕಾಭಿನಯವು ನನಗೆ ಅರ್ಥವಾಗುತ್ತಿತ್ತು. ನನ್ನ ಮಕ್ಕಳು ನನಗೆ ಟಿಪ್ಪಣಿ ಬರೆದು ಸಂವಹನಿಸಲು ತಂದುಕೊಟ್ಟಿದ್ದ ನೋಟ್ ಪ್ಯಾಡ್‌ನಲ್ಲಿ ನಾನು ಮಾಡಿರುವ ಟಿಪ್ಪಣಿಗಳನ್ನು ಈಗ ನೋಡಿದರೆ ನನ್ನ ಇತರೆ ಇಂದ್ರಿಯಗಳು ಚುರುಕುಗೊಂಡಿರುವುದು ವ್ಯಕ್ತವಾಗುತ್ತದೆ. ಕುರುಡರು ಮತ್ತು ಮೂಗರು ತಮಗಿರುವ ಇಂದ್ರಿಯಗಳ ಮೂಲಕ ಚುರುಕಾಗಿ ಬದುಕು ಮಾಡುವ ಶಕ್ತಿ ಎಂಥಾದ್ದೆಂಬ ಅರಿವು ನನಗಾಯಿತು.

ಸ್ಪೆಷಲ್ ವಾರ್ಡ್‌ನಲ್ಲಿದ್ದಾಗ ಒಮ್ಮೆ ಒಬ್ಬ 'ಅಣ್ಣ'ನನ್ನನ್ನು ಮೂಗನೆಂದೇ ತಿಳಿದು ನನ್ನೊಡನೆ ಸನ್ನೆಗಳ ಮೂಲಕ ಹಾಗೂ ಧ್ವನಿಗಳ ಮೂಲಕ ಸಂವಾದಿಸಲು ಪ್ರಯತ್ನಿಸುತ್ತಿದ್ದ. ಅದನ್ನು ನೋಡಿದ ಅಲ್ಲೇ ಇದ್ದ ನನ್ನ ಮಗನು "ಅವರಿಗೆ ಮಾತು ಬರುತ್ತದೆ, ಕಿವಿ ಚೆನ್ನಾಗಿ ಕೇಳಿಸುತ್ತದೆ, ನೀವು ಮಾತನಾಡಿ" ಎಂದು ವಿವರಿಸಿ ಹೇಳಬೇಕಾಯಿತು.

ನಾನು ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಲು ಇನ್ನೇನು ಹತ್ತು ದಿನ ಇರುವಾಗ ಡಾ. ಹರೀಶ್ ನಾಯಕ್ ಅವರು "ಈಗಿರುವ ನಿಮ್ಮ ಟ್ರೇಕಿಯಾಸ್ಟಮಿ ಟ್ಯೂಬನ್ನು ಅಳವಡಿಸಿ ಒಂದೂವರೆ ತಿಂಗಳಾಗುತ್ತಾ ಬಂತು. ಅದನ್ನು ಬದಲಾಯಿಸುವುದು ಒಳ್ಳೆಯದು. ನೀವು ಒಪ್ಪಿದರೆ ಸ್ಪೀಕಿಂಗ್ ಟ್ಯೂಬನ್ನು ಹಾಕುತ್ತೇನೆ. ಅದರಿಂದ ಮಧ್ಯೆ

ಮಧ್ಯೆ ನೀವು ಮಾತನಾಡಬಹುದು" ಎಂದರು. ನಾನು ಸಂತೋಷದಿಂದ ಒಪ್ಪಿಗೆ ನೀಡಿದೆ. ಅದಾದ ಎರಡು ದಿನಕ್ಕೆ ನನ್ನಲ್ಲಿ ಜೋಡಿಸಿದ್ದ ಟ್ರೇಕಿಯಾಸ್ಟಮಿ ಟ್ಯೂಬನ್ನು ತೆಗೆದು, ಹೊಸ ಟ್ರೇಕಿಯಾಸ್ಟಮಿ ಟ್ಯೂಬನ್ನು ನನ್ನ ಕುತ್ತಿಗೆಯ ಮೂಲಕ ಶ್ವಾಸನಾಳಕ್ಕೆ ಜೋಡಿಸಲಾಯಿತು. ಈ ಹೊಸ ಟ್ರೇಕಿಯಾಸ್ಟಮಿ ಸಿಸ್ಟಂನಲ್ಲಿ ಎರಡು ಟ್ಯೂಬ್‌ಗಳಿದ್ದವು. ಒಂದು ಟ್ಯೂಬನ್ನು ಉಸಿರು ಮತ್ತು ಆಮ್ಲಜನಕ ತೆಗೆದುಕೊಳ್ಳುವಾಗ ಜೋಡಿಸಿಕೊಳ್ಳಬೇಕಾಗಿತ್ತು. ಇನ್ನೊಂದು ಟ್ಯೂಬನ್ನು ನನ್ನ ಸ್ವಂತ ಉಸಿರಾಡುವ ಸಂದರ್ಭದಲ್ಲಿ ಜೋಡಿಸಿಕೊಳ್ಳಬೇಕಾಗಿತ್ತು. ಈ ಟ್ಯೂಬಿನ ಉಬ್ಬಿದ ಭಾಗದಲ್ಲಿ ತುಸು ರಂಧ್ರ ಮಾಡಲಾಗಿತ್ತು. ಈ ರಂಧ್ರದ ಜಾಗವು ನನ್ನ ಗಂಟಲಿನ ಧ್ವನಿಪೆಟ್ಟಿಗೆಯನ್ನು ಅದುಮದೆ ಸ್ವತಂತ್ರಗೊಳಿಸುತ್ತಿತ್ತು. ಆಗ ನನಗೆ ಮಾತನಾಡಲು ಸಾಧ್ಯವಾಗುತ್ತಿತ್ತು.

ಸುಮಾರು ಒಂದು ತಿಂಗಳು ಇಪ್ಪತ್ತು ದಿನಗಳ ನಂತರ ನನ್ನ ಧ್ವನಿಯನ್ನು ಕೇಳಿದಾಗ ನನಗೆ ಸಂತೋಷವಾಯಿತು. ನನಗಿಂತ ನನ್ನ ಹೆಂಡತಿ ಮಕ್ಕಳಿಗೆ ತುಂಬಾ ಸಂತಸವಾಯಿತು. ನನಗೆ ಸಂತೋಷವಾಯಿತು ನಿಜ. ಆದರೆ ನನ್ನ ಧ್ವನಿಯು ನನ್ನದೇ ಎಂದು ನನಗೆ ಅನುಮಾನ ಕಾಡಿತು. ಅಷ್ಟು ಕ್ಷೀಣವಾಗಿ ಭಿನ್ನವಾಗಿ ಆ ಧ್ವನಿಯಿತ್ತು. ನನ್ನ ಧ್ವನಿ ನನಗೇ ಅಪರಿಚಿತವೆನ್ನಿಸಿದ್ದು ಮಾತ್ರ ಸತ್ಯ.

ಈ ಸ್ಪೀಕಿಂಗ್ ಟ್ಯೂಬ್ ನಾನು ಆಸ್ಪತ್ರೆಯಿಂದ ಬಿಡುಗಡೆಗೊಂಡು ಮನೆಗೆ ಬಂದ ಮೇಲೂ ನನ್ನ ಗಂಟಲೊಳಗಿತ್ತು. ನನ್ನ ಉಸಿರಾಟ ಪ್ರಕ್ರಿಯೆ ಸಹಜ ಸ್ಥಿತಿಗೆ ಏಪ್ರಿಲ್ ತಿಂಗಳಲ್ಲಿ ಬಂತು. ಆ ತಿಂಗಳ ಕೊನೆಯಲ್ಲಿ ನನ್ನ ಗಂಟಲಲ್ಲಿದ್ದ ಟ್ರೇಕಿಯಾಸ್ಟಮಿ ಟ್ಯೂಬನ್ನು ತೆಗೆಯಲಾಯಿತು. ಆ ಟ್ಯೂಬನ್ನು ಜೋಡಿಸಲು ನನ್ನ ಕುತ್ತಿಗೆಯಲ್ಲಿ ಮಾಡಿದ್ದ ರಂಧ್ರ ನಮ್ಮ ದೇಶದ ಹಳೆಯ ಎರಡು ಪೈಸೆಯಗಲವಿತ್ತು. ಒಂದು ಹದಿನೈದು ದಿನಗಳ ಒಳಗೆ ಆ ರಂಧ್ರ ತನಗೆ ತಾನು ಕೂಡಿಕೊಳ್ಳುವುದೆಂದೂ, ಅಲ್ಲಿಯವರೆಗೆ ಆ ರಂಧ್ರದ ಮೇಲೆ ಗಾಳಿ ಸೋರುವಿಕೆಯನ್ನು ತಡಗಟ್ಟಲು ಭದ್ರವಾಗಿ ಶುದ್ಧ ಹತ್ತಿಯನ್ನಿಟ್ಟು ಬ್ಯಾಂಡೇಜ್ ಮಾಡುತ್ತಿರಬೇಕೆಂದೂ ಆಸ್ಪತ್ರೆಯ ನರ್ಸುಗಳು ಸಲಹೆ ನೀಡಿದರು. ಅದೇ ರೀತಿ ಪ್ರತಿ ದಿನ ಬ್ಯಾಂಡೇಜ್ ಮಾಡಲಾಗುತ್ತಿತ್ತು. ಹದಿನೈದು ದಿನಗಳಾದ ಮೇಲೆ ರಂಧ್ರ ಕೂಡಿಕೊಂಡಿದೆಯೆಂದು ಡಾ. ಹರೀಶ್‌ನಾಯಕ್ ಹೇಳಿ, ಬ್ಯಾಂಡೇಜನ್ನು ತೆಗೆದುಹಾಕಿದರು.

ಆದರೆ ನಾನು ಕೆಮ್ಮಿದಾಗ, ಜೋರಾಗಿ ಮಾತನಾಡಿದಾಗ ಆ ರಂಧ್ರ ಮತ್ತೆ ತೆರೆದುಕೊಳ್ಳುತ್ತಿತ್ತು. ನಾನು ಮಾತನಾಡುವಾಗ ಕುತ್ತಿಗೆಯ ಭಾಗದಿಂದ ಗಾಳಿ ಬುಸುಬುಸನೆ ಹೊರ ಬರುತ್ತಿತ್ತು. ಇದರಿಂದ ನನಗೆ ಮಾತನಾಡಲು ಕಷ್ಟವಾಗುತ್ತಿತ್ತು. ಇದನ್ನು ನೋಡಿದ ಡಾ. ಆಮೀರ್ ಮೊಹಿನ್ ಅವರು ಅದಕ್ಕೆ ಹೊಲಿಗೆ ಹಾಕುವುದು

ಸೂಕ್ತವೆಂದು ತಿಳಿಸಿ, ಡಾ. ನಾರಾಯಣ ಹೆಗಡೆ ಎಂಬ ಪ್ಲಾಸ್ಟಿಕ್ ಸರ್ಜನ್‌ಗೆ ಫೋನ್ ಮಾಡಿ, ಹೊಲಿಗೆ ಹಾಕುವಂತೆ ಸೂಚಿಸಿದರು. ಜೂನ್ ತಿಂಗಳ ಮೂರನೆಯ ವಾರದಲ್ಲಿ ಅವರು ನನ್ನ ಕುತ್ತಿಗೆಯಲ್ಲಾಗಿದ್ದ ಟ್ರೇಕಿಯಾಸ್ಟಮಿ ರಂಧ್ರವನ್ನ ಹೊಲೆದು ಮುಚ್ಚಿದರು. ಅದರಿಂದ ನಾನು ಸರಾಗವಾಗಿ ಮಾತನಾಡಲು ಸಾಧ್ಯವಾಯಿತು. ಆದರೂ ನನ್ನ ಧ್ವನಿಯ ಆ ಹಿಂದಿನ ದಿನದ ಸೊಗಸು ಅಲ್ಲಿರಲಿಲ್ಲ.

ಮೂಕನ ಸ್ಥಿತಿ ಎಂಥ ಅಸಹಾಯಕವೆಂದು ನಾನೇ ಸ್ವತಃ ಅನುಭವಿಸಿದೆ. ನನ್ನ ಮೂಕನ ಸ್ಥಿತಿಯ ಆ ದಿನಗಳಲ್ಲಿ ನನಗೆ ಪದೆ ಪದೇ ಡಾ. ರಾಜಕುಮಾರ್ ಅವರು ಹಾಡಿರುವ "ಮೂಗನ ಕಾಡಿದರೇನು? ಸವಿಮಾತನು ಆಡುವನೇನು?" ಎಂಬ ಹಾಡಿನ ಸಾಲು ನೆನಪಿಗೆ ಬರುತ್ತಿತ್ತು.

೧೪. ಎಂಐಸಿಯು : ಸಾವು ಬದುಕಿನ ತ್ರಿಶಂಕು ನೆಲೆ

ಅಪೊಲೊ ಆಸ್ಪತ್ರೆಯ ಎಂಐಸಿಯು ಸುಮಾರು ನೂರು ಅಡಿ ಉದ್ದ, ಐವತ್ತು ಅಡಿ ಅಗಲವಿದೆ. ಇದು ನನ್ನ ಕಣ್ಣ ಅಂದಾಜು. ತುಸು ಹೆಚ್ಚು ಕಡಿಮೆ ಇದ್ದೀತು. ಈ ಎಂಐಸಿಯು ಎರಡು ಭಾಗಗಳಲ್ಲಿ ವಿಭಜಿತಗೊಂಡಿದೆ. ಮೊದಲ ಭಾಗ ದೊಡ್ಡದಿದ್ದು ಇಪ್ಪತ್ತು ಕ್ಯಾಬಿನ್‌ಗಳನ್ನು ಹೊಂದಿದೆ. ಈ ಭಾಗಕ್ಕೆ ಹೊಂದಿಕೊಂಡಂತೆ ಹೆಚ್‌ಡಿಯು ಘಟಕವಿದೆ. (ಹೈ ಡಿಪಂಡೆನ್ಸಿ ಯೂನಿಟ್) ಇದರಲ್ಲಿ ಎಂಟು ಕ್ಯಾಬಿನ್‌ಗಳಿವೆ. ಎಂಐಸಿಯುನಲ್ಲಿ ಸೇರಿದ ರೋಗಿಗಳು ತುಸು ಉತ್ತಮ ಆರೋಗ್ಯ ರೂಢಿಸಿಕೊಂಡಾದನಂತರ ಹೆಚ್‌ಡಿಯು ಘಟಕಕ್ಕೆ ವರ್ಗಾಯಿಸುತ್ತಾರೆ. ಏಕೆಂದರೆ, ಇಂಥ ರೋಗಿಗಳು ವಾರ್ಡ್‌ಗಳಿಗೆ ಶಿಫ್ಟ್ ಮಾಡುವಷ್ಟು ಗುಣಮುಖರಾಗುವುದಿಲ್ಲ. ಅವರನ್ನು ತೀವ್ರ ನಿಗಾ ಘಟಕದ ಮಗ್ಗುಲಲ್ಲೇ ಇಟ್ಟುಕೊಂಡು ಚಿಕಿತ್ಸೆ ಮುಂದುವರಿಸಿ ಅವಲೋಕಿಸುತ್ತಿರಬೇಕಾಗುತ್ತದೆ. ಈ ಘಟಕದಲ್ಲಿ ರೋಗಿಯ ಸುಧಾರಣೆ ಯಾದಂತೆ, ಆತನಿಗೆ ತೀವ್ರ ನಿಗಾ ಅವಶ್ಯಕತೆ ಇಲ್ಲ ಎನ್ನಿಸಿದಾಗ ವಾರ್ಡ್‌ಗೆ ಶಿಫ್ಟ್ ಆಗಲು ಅನುಮತಿ ದೊರೆಯುತ್ತದೆ.

ನಾನು ಎಂಐಸಿಯು ಘಟಕವನ್ನು ಸಾವು ಬದುಕಿನ ತ್ರಿಶಂಕು ನೆಲೆಯೆಂದು ಕರೆಯುತ್ತೇನೆ. ಇಲ್ಲಿಗೆ ಬಂದು ದಾಖಲಾಗುವ ರೋಗಿಯ ಆರೋಗ್ಯ ತೀರ ಗಂಭೀರ ಸ್ವರೂಪದಲ್ಲಿರುತ್ತದೆ. ಅವನ ಜೀವ ಅಡ್ಡಗೋಡೆಯ ಮೇಲೆ ಕೂತಿರುತ್ತದೆ. ಇಲ್ಲಿ ಅವನ ರೋಗ ಗುಣವಾದರೆ ಅವನು ಮನೆಗೆ ಮರಳುತ್ತಾನೆ. ಇಲ್ಲದಿದ್ದರೆ, ಸತ್ತು ಮಸಣ

ಸೇರುತ್ತಾನೆ. ಅವನನ್ನು ಉಳಿಸಲು ವೈದ್ಯರು ಸಕಲ ಪ್ರಯತ್ನವನ್ನು ಖಂಡಿತ ಮಾಡುತ್ತಾರೆ. ಅಪೋಲೊ ಅಂಥ ಆಸ್ಪತ್ರೆಯಲ್ಲಿ ಜೀವ ಉಳಿಸುವ ಸಕಲೆಂಟು ಸೌಲಭ್ಯಗಳು ಇವೆ. ಈ ಸೌಲಭ್ಯ ಸಹಿತ ಚಿಕಿತ್ಸೆಯಿಂದ ಬಹುಮಂದಿ ಬದುಕುತ್ತಾರೆ. ಆದರೆ ಕೆಲವರು ಚಿಕಿತ್ಸೆ ಫಲಕಾರಿಯಾಗದೆ ಇಲ್ಲೇ ಅಸುನೀಗುತ್ತಾರೆ.

ನಾನಿದ್ದ ಅವಧಿಯಲ್ಲಿ ದಾಖಲಾದ ರೋಗಿಗಳಲ್ಲಿ ಕೆಲವರು ಶೀಘ್ರ ಗುಣಮುಖರಾಗಿ ಎಂಐಸಿಯುನಿಂದ ಹೊರಹೋಗುತ್ತಿದ್ದರು. ಮತ್ತೆ ಕೆಲವರು ಬಂದ ಒಂದೆರಡು ದಿನಗಳಲ್ಲಿಯೇ ಚಿಕಿತ್ಸೆಗೆ ಸ್ಪಂದಿಸದೆ ಉಸಿರು ಬಿಡುತ್ತಿದ್ದರು. ನಾನು ಹಲವಾರು ರೋಗಿಗಳಿಗೆ ನಾನಿದ್ದ ಅವಧಿಯ ದೀರ್ಘತೆಯ ಕಾರಣದಿಂದ ಅಣ್ಣನಾಗಿದ್ದೆ. ನನ್ನ ಎಂಐಸಿಯು ವಾಸದ ಅವಧಿಯಲ್ಲಿ ನನ್ನ ಎಡ ಬಲಗಳಲ್ಲಿ ಅನೇಕ ಸಾವುಗಳನ್ನು ಕಂಡೆ.

ಎಂಐಸಿಯುನಲ್ಲಿ ರೋಗಿ ಸಾವಿನ ಅಂಚಿಗೆ ಬಂದಾಗ ನರ್ಸುಗಳು ಮತ್ತು ಡ್ಯೂಟಿ ಡಾಕ್ಟರ್‌ಗಳು ತೀವ್ರ ಚುರುಕಾಗಿ ಪ್ರತಿಕ್ರಿಯಿಸುತ್ತಾರೆ. ರೋಗಿಯ ಪ್ರಾಣ ಉಳಿಸಲು ನೀಡಬೇಕಾದ ಜರೂರು ಔಷಧಿಗಳನ್ನು, ರೋಗಿಯನ್ನು ಬೆಚ್ಚಗಿಡಲು ಮಾಡಬೇಕಾದ ದೈಹಿಕ ಮಸಾಜುಗಳನ್ನು ಚುರುಕಾಗಿ ಮಾಡುತ್ತಾರೆ. ಇಂಥ ತೀವ್ರ ಸ್ವರೂಪದ ಹಂತದಲ್ಲಿ ಉಳಿದುಕೊಳ್ಳುವವರು ಕೆಲವೇ ಕೆಲವರು ಮಾತ್ರ. ಬಹುಪಾಲು ಮಂದಿ ಇಂಥ ಸ್ಥಿತಿಯಲ್ಲಿ ಸಾಯುತ್ತಾರೆ. ರೋಗಿ ಸತ್ತ ನಂತರ ತುಸು ಹೊತ್ತು ನೀರವತೆ ಮೂಡುತ್ತದೆ. ಅವನ ಸಾವಿಗಾಗಿ ಅಳುವವರು ಅಲ್ಲಿ ಯಾರೂ ಇರುವುದಿಲ್ಲ. ರೋಗಿಯ ಸುತ್ತ ಮೌನ ಆಕ್ರಮಿಸುತ್ತದೆ. ದಿನನಿತ್ಯ ಸಾವು ನೋವುಗಳನ್ನು ಕಾಣುತ್ತಿರುವ ಡಾಕ್ಟರ್‌ಗಳು, ನರ್ಸುಗಳು ಕೆಲವೇ ಕೆಲವು ನಿಮಿಷಗಳಲ್ಲಿ ತಮ್ಮ ಮಾಮೂಲಿನ ಚಟುವಟಿಕೆಗಳಲ್ಲಿ ನಿರತರಾಗುತ್ತಾರೆ.

ಎಂಐಸಿಯುವಿನಲ್ಲಿರುವ ಬಹುಪಾಲು ರೋಗಿಗಳಿಗೆ ತಮ್ಮ ಅಕ್ಕಪಕ್ಕದ ಕ್ಯಾಬಿನ್‌ಗಳಲ್ಲಿ ಸಂಭವಿಸುವ ಸಾವುಗಳು ಗೊತ್ತಾಗುವುದೇ ಇಲ್ಲ. ಕಾರಣ - ಕೆಲವರು ಕೋಮಾದಲ್ಲಿರುತ್ತಾರೆ. ಮತ್ತೆ ಕೆಲವರು ನಿದ್ರಾ ಔಷಧಿಯ ಮೋಡಿಯಲ್ಲಿ ಮಲಗಿ ನಿದ್ರಾ ಪರವಶರಾಗಿರುತ್ತಾರೆ. ನಾನು ಎಂಐಸಿಯುಗೆ ದಾಖಲಾದ ದಿನದಿಂದ ನಾನು ಜಾಗೃತನಾಗೇ ಇದ್ದೆ. ನನ್ನ ಸುತ್ತ ನಡೆಯುತ್ತಿರುವ ಚಟುವಟಿಕೆಗಳು ನನ್ನ ಗಮನಕ್ಕೆ ಬರುತ್ತಿದ್ದವು. ಅದರಂತೆ ನನ್ನ ಸುತ್ತಲ ಕ್ಯಾಬಿನ್‌ಗಳಲ್ಲಿ ಸಂಭವಿಸುತ್ತಿದ್ದ ಸಾವುಗಳು ನನ್ನನ್ನು ಕಾಡುತ್ತಿದ್ದವು. ಸಾವನ್ನೂ ಅಲ್ಲಿನ ಡಾಕ್ಟರ್‌ಗಳು, ನರ್ಸುಗಳು ತೆಗೆದುಕೊಳ್ಳುವಷ್ಟು ಹಗುರವಾಗಿ ನಾನು ತೆಗೆದುಕೊಳ್ಳಲು ಸಾಧ್ಯವಿರಲಿಲ್ಲ. ಅವರಿಗೆ ಸಾವು ದಿನನಿತ್ಯೆಯ ಘಟನೆ; ಅದು ಸಹಜವೆನ್ನಿಸುವಷ್ಟು ವಾಸ್ತವ. ಆದರೆ ನಾನು

ಹೊರಗಿನ ಲೋಕದಿಂದ ಬಂದವನು. ಸಾವು ನೋವುಗಳು ನನ್ನ ಸೂಕ್ಷ್ಮಮತಿಯನ್ನು ಆಲೋಚನೆ ಮಾಡಲು ಹೆಚ್ಚುತ್ತಿದ್ದವು.

ನಾನೆಂದೂ ಸಾವಿಗೆ ಹೆದರಿದವನಲ್ಲ. ಕಳೆದ ಹತ್ತು ವರ್ಷಗಳ ಹಿಂದೆ ನನಗೆ ಕ್ಯಾನ್ಸರ್ ಆಗಿದೆಯೆಂದು ಚಿಕಿತ್ಸೆ ಪಡೆಯುತ್ತಿದ್ದಾಗಲೇ ನನ್ನ ಪ್ರಾಣದ ಬಗ್ಗೆ ನಾನು ವ್ಯಾಮೋಹವನ್ನು ಕಳೆದುಕೊಂಡಿದ್ದೆ. ಸಾವು ಸಹಜ ನಡಿಗೆಯಲ್ಲಿ ಎಂದು ಬಂದರೂ ಅದನ್ನು ಸ್ವೀಕರಿಸಲು ಸಿದ್ಧನಿದ್ದೆ. ಆದರೆ ನಾನು ಇಚ್ಛಾ ಮರಣಿಯಲ್ಲ!

ನಾನು ಎಂಐಸಿಯುನಲ್ಲಿದ್ದ ಪ್ರಾರಂಭದ ದಿನಗಳಲ್ಲಿ ಚಿಕಿತ್ಸೆಗೆ ಸ್ಪಂದಿಸದ ನನ್ನ ದೇಹ, ಸಂಪೂರ್ಣವಾಗಿ ಕೃತಕ ಉಸಿರಿಗೆ ಅವಲಂಬಿತವಾಗಿದ್ದ ಸಮಯದಲ್ಲಿ ನಾನು ಸಾವಿನ ಬಗ್ಗೆ ಸಾಕಷ್ಟು ಚಿಂತಿಸಿದ್ದೆ. ತತ್ವಶಾಸ್ತ್ರ ಮತ್ತು ಸಾಹಿತ್ಯದ ವಿದ್ಯಾರ್ಥಿಯಾದ ನನಗೆ ಸಾವು ಸಹಜ ಅನಿವಾರ್ಯ ಕ್ರಿಯೆಯೆಂದು ತಿಳಿದಿತ್ತು. ನನ್ನ ಜೀವನದ ಬಗೆಗಾಗಲೀ ನನ್ನ ದೇಹದ ಬಗೆಗಾಗಲೀ ನನಗೆ ಅಂಥ ವ್ಯಾಮೋಹವಿರಲಿಲ್ಲ. ನನಗೆ ಜೋಡಿಸಿದ್ದ ವೆಂಟಿಲೇಟರ್ ಅನ್ನು ಸ್ತಬ್ಧಗೊಳಿಸಿದರೆ ನಾನು ಸಾಯುತ್ತೇನೆಂದು ನನಗೆ ತಿಳಿದಿತ್ತು. ಚಿಕಿತ್ಸೆಗೆ ನನ್ನ ದೇಹ ಸ್ಪಂದಿಸದಿದ್ದಲ್ಲಿ ಎಷ್ಟು ದಿನ ಅಂತ ತಾನೆ ನಾನು ಕೃತಕ ಉಸಿರಲ್ಲಿರುವುದು ಸಾಧ್ಯ? ಅಪೊಲೊ ಆಸ್ಪತ್ರೆಯಂಥ ದುಬಾರಿ ಆಸ್ಪತ್ರೆಯಲ್ಲಿ ತಿಂಗಳಗಟ್ಟಲೆ ಇರುವಂಥ ಆರ್ಥಿಕ ಚೈತನ್ಯ ನನಗಿರಲಿಲ್ಲ. ಆದ್ದರಿಂದ ನಾನು ಇಲ್ಲೇ ಈ ಎಂಐಸಿಯು ನಲ್ಲಿ ಸಾಯಲು ತಯಾರಿದ್ದೆ.

'ನಾನು ಸಾಯಬಹುದು' ಎಂದುಕೊಂಡಾಗ ನನಗೆ ಹೆದರಿಕೆಯಾಗಲಿಲ್ಲ. ನನಗೆ ನನ್ನ ಹೆಂಡತಿ ಮಕ್ಕಳ ಬಗ್ಗೆ ಚಿಂತೆ ಇರಲಿಲ್ಲ. ನಾನು ನನ್ನ ಮಕ್ಕಳಿಗೆ ಒಳ್ಳೆಯ ವಿದ್ಯೆಯನ್ನು ನೀಡಿದ್ದೆ. ಅವರು ಅವರ ಕಾಲ ಮೇಲೆ ನಿಂತು ಜೀವನ ಕಟ್ಟಿಕೊಳ್ಳಬಲ್ಲರೆಂಬ ಭರವಸೆ ನನಗಿತ್ತು. ನಾನು ಸತ್ತರೆ ನನ್ನ ಹೆಂಡತಿಗೆ ಪಿಂಚಣಿ ಬರುತ್ತಿತ್ತು. ಜೊತೆಗೆ ಪ್ರೀತಿಸುವ ಮಕ್ಕಳ ಆಸರೆ ಖಂಡಿತ ಇರುತ್ತಿತ್ತು. ಹೀಗಾಗಿ ನಾನು ಸಾವನ್ನು ಸ್ವೀಕರಿಸಲು ಮಾನಸಿಕವಾಗಿ ಸಿದ್ಧನಾಗತೊಡಗಿದೆ.

ನಾನು ನಿವೃತ್ತನಾದ ಮೇಲೆ ಬರವಣಿಗೆಯ ಕೆಲಸ ಮಾಡಬೇಕೆಂದುಕೊಂಡಿದ್ದೆ. ಒಂದೆರಡು ವೈಚಾರಿಕ ಕೃತಿಗಳನ್ನು ನಾಲ್ಕೈದು ಕಾದಂಬರಿಗಳನ್ನು ಬರೆಯಬೇಕೆಂದುಕೊಂಡಿದ್ದೆ. ಅವುಗಳ ಪ್ಲಾಟ್ ನನ್ನ ಮನೋಮಂದಿರದಲ್ಲಿ ಸಿದ್ಧವಾಗಿತ್ತು. ಆದರೆ ನಾನು ನಿವೃತ್ತನಾದ ಕೇವಲ ನಾಲ್ಕು ತಿಂಗಳಲ್ಲೇ ಆರೋಗ್ಯ ಕೆಟ್ಟು ಎಂಐಸಿಯನಲ್ಲಿರುತ್ತೇನೆಂದುಕೊಂಡಿರಲಿಲ್ಲ. ನಾನು ಬರಹಗಾರ ನಿಜ. ಆದರೆ ಕನ್ನಡ ಸಾರಸ್ವತ ಲೋಕದ ಶ್ರೇಷ್ಠ ಲೇಖಕನಲ್ಲವೆಂಬ ತಿಳಿವಳಿಕೆಯಿತ್ತು. ನಾನು ಬದುಕಿ ಬರೆದಿದ್ದರೆ ಬರೆದ ತೃಪ್ತಿ ನನಗಾಗುತ್ತಿತ್ತು. ಅವುಗಳಿಂದ ನಮ್ಮ ಸಾರಸ್ವತಲೋಕ ಶ್ರೀಮತವಾಗುತ್ತಿತ್ತೆಂಬ

ಭ್ರಮೆ ನನಗಿರಲಿಲ್ಲ. ಆದ್ದರಿಂದ 'ಸಾವು ಬರುವುದಾದರೆ ಬರಲಿ, ಅದನ್ನು ಪ್ರೀತಿಯಿಂದ ಅಪ್ಪಿಕೊಳ್ಳುತ್ತೇನೆ' ಎಂಬ ಮಾನಸಿಕ ಸ್ಥಿತಿಗೆ ನನ್ನನ್ನು ಹದಮಾಡಿಕೊಂಡೆ.

ನಾನು ಯಾರಿಗಾದರೂ ಏನಾದರು ಕೊಡಬೇಕಿತ್ತೆ? ಇಲ್ಲ. ನಾನು ಯಾರ ಬಳಿಯೂ ಸಾಲಮಾಡಿರಲಿಲ್ಲ. ನಾನು ಮೊದಲಿಂದಲೂ 'ಸಾಲ ಮಾಡಿ ತುಪ್ಪ ತಿನ್ನುವ' ವರ್ಗಕ್ಕೆ ಸೇರಿದವನಲ್ಲ. ಹಾಸಿಗೆಯಿದ್ದಷ್ಟು ಕಾಲು ಚಾಚಿದವನು, ಜೀವನವನ್ನು ಬರುವ ವೇತನಕ್ಕನುಗುಣವಾಗಿ ಯೋಜನೆ ರೂಪಿಸಿಕೊಂಡು ಅದರಂತೆ ಬದುಕಿದವನು. ಹೀಗಾಗಿ ನಾನು ಸತ್ತರೆ ಸಾಲದ ಋಣ ಇರುವುದಿಲ್ಲ ಅಥವಾ ಸಾಲವನ್ನು ತೀರಿಸುವ ಜವಾಬ್ದಾರಿ ನನ್ನ ಮಕ್ಕಳಿಗಿರುವುದಿಲ್ಲ.

ತಕ್ಷಣ ನನಗೆ ನೆನಪಿಗೆ ಬಂತು. ನಾನು ನನ್ನ ಕ್ಷೌರಿಕನಿಗೆ ಐದು ರೂಪಾಯಿ ನೀಡಬೇಕು! ಹೌದು, ಕಳೆದ ಸಾರಿ ನಾನು ಕ್ಷೌರಕ್ಕೆ ಹೋದಾಗ ನನ್ನ ಬಳಿ ಐದು ರೂಪಾಯಿ ಕಡಿಮೆ ಇದ್ದಿತು. ನಾನು ಪ್ರತಿ ಸಾರಿ ತೆಗೆದುಕೊಂಡು ಹೋಗುವಂತೆ ಸೂಕ್ತ ಹಣ ತೆಗೆದುಕೊಂಡೇ ಹೋಗಿದ್ದೆ. ಆದರೆ ಕ್ಷೌರಿಕ ತಲೆಕ್ಷೌರಕ್ಕೆ ಬೆಲೆ ಏರಿಸಿದ್ದ! ಬೆಲೆ ಏರಿಕೆಯ ಆ ಹಣ ನನ್ನಲ್ಲಿ ಇಲ್ಲದಿರುವುದನ್ನು ಕಂಡು ಆತ "ಪರವಾಗಿಲ್ಲ ಬಿಡಿ ಸಾರ್, ಮುಂದಿನ ಸಾರಿ ಬಂದಾಗ ಕೊಡುವಿರಂತೆ" ಎಂದು ಹೇಳಿದ್ದ.

ಈ ಎಂಐಸಿಯನಲ್ಲಿ ಒಂದು ವೇಳೆ ಸತ್ತರೆ, ಅವನ ಐದು ರೂಪಾಯಿಗಳ ಸಾಲ ತೀರದೆ ಹಾಗೆಯೇ ಉಳಿದು ಬಿಡುತ್ತದೆ. ನನಗೆ ಚಿಂತೆಯಾಯಿತು. ಮಲಗಿದ್ದಲ್ಲಿಯೇ ಮಿಸುಕಾಡಿದೆ. ಅಂದು ಸಂಜೆ ನನ್ನನ್ನು ನೋಡಲು ನನ್ನ ಮಗ ಬಂದಾಗ, ನಾನು ಕ್ಷೌರಿಕನಿಗೆ ಐದು ರೂಪಾಯಿ ನೀಡಬೇಕಾಗಿದೆಯೆಂದೂ ಅದನ್ನು ಅವನಿಗೆ ಮರೆಯದೆ ನೀಡಬೇಕೆಂದೂ ಬರೆದು ತಿಳಿಸಿದೆ. ಅವನು "ಆಗಲಿ ನೀವು ನೆಮ್ಮದಿಯಾಗಿರಿ ಅಪ್ಪ. ಅದನ್ನು ನಾನು ಅವನಿಗೆ ನೀಡುತ್ತೇನೆ" ಎಂದು ನನ್ನ ಕೈಮುಟ್ಟಿ ನುಡಿದ. ನನಗೆ ನೆಮ್ಮದಿಯಾಯಿತು.

ಅಂದು ರಾತ್ರಿ ನನಗೆ ಬಹಳ ಹೊತ್ತು ನಿದ್ರೆ ಬರಲಿಲ್ಲ. ಒಂದು ಗಾಢವಾದ ತಾತ್ವಿಕ ಚಿಂತನೆಯೊಂದು ನನ್ನನ್ನು ಕಾಡಲಾರಂಭಿಸಿತು. ಅದು-ನಾನು ಸತ್ತ ನಂತರದ ನನ್ನ ಅಂತ್ಯಕ್ರಿಯೆಯದು. ಸುತ್ತಲ ಸಂಪ್ರದಾಯಬದ್ಧ ಸಮಾಜದ ನಡೆಗಳು ನನಗೆ ವಾಸ್ತವ ಅನುಭವವನ್ನು ತಂದು ಕೊಟ್ಟಿದ್ದವು. ವ್ಯಕ್ತಿ ಬದುಕಿದ್ದಾಗ ಅವನ ನಂಬಿಕೆ, ಅವನ ಸೈದ್ಧಾಂತಿಕ ಬದ್ಧತೆಗಳನ್ನು ಅವನ ಸತ್ತನಂತರ ಅವನ ಸಂಬಂಧಿಕರು ಇತರೆ ಸಾಮಾಜಿಕರು ಗಾಳಿಗೆ ತೂರುತ್ತಿದ್ದರು. ಆಗ ಅವರಿಗೆ ಸತ್ತವನ ಸೈದ್ಧಾಂತಿಕ ಬದ್ಧತೆಗಿಂತ ಸಮಾಜದ ರೂಢಿಗತ ಆಚಾರ ವಿಚಾರಗಳೇ ಮುಖ್ಯವಾಗಿ ತೋರುತ್ತಿದ್ದವು. ವ್ಯಕ್ತಿ ಸತ್ತು ಹೋಗಿರುತ್ತಾನೆ. ಅವನಿಗೆ ಯಾವ ಬಗೆಯಲ್ಲಿ ಅಂತ್ಯ ಸಂಸ್ಕಾರ ಮಾಡಿದರೂ

ಅವನಿಗೆ ತಿಳಿಯುವುದಿಲ್ಲ, ನಿಜ. ಆದರೆ ಅವನ ಇಷ್ಟಕ್ಕೆ ವಿರುದ್ಧವಾಗಿ ನಡೆದುಕೊಳ್ಳುವುದು ಮಾತ್ರ ಅವನ ವ್ಯಕ್ತಿತ್ವಕ್ಕೆ ಮಾಡುವ ಅವಮಾನವೆಂದು ಬಗೆಯಬೇಕಾಗುತ್ತದೆ.

ಸಂಬಂಧಿಕರು ಇಂಥ ವಿಷಯಗಳಲ್ಲಿ ಎಷ್ಟು ಕಠೋರವಾಗಿರುತ್ತಾರೆಂದರೆ ಸತ್ತವನ ಹೆಂಡತಿ ಮಕ್ಕಳ ಅಭಿಪ್ರಾಯವನ್ನು ಅನೇಕ ಸಂದರ್ಭದಲ್ಲಿ ಮಾನ್ಯ ಮಾಡುವುದಿಲ್ಲ. ಇದನ್ನು ಸಮರ್ಥಿಸುವಂತೆ ನನ್ನ ಪಕ್ಕದ ಕ್ಯಾಬಿನ್‌ನಲ್ಲಿದ್ದ ರೋಗಿಯೊಬ್ಬರು ತೀರಿಕೊಂಡಾಗ ನಡೆದ ಘಟನೆ ತಿಳಿಸುತ್ತದೆ. ಆ ರೋಗಿ ಬ್ರಾಹ್ಮಣ ಸಮುದಾಯಕ್ಕೆ ಸೇರಿದವರು. ಅವರ ಹೆಂಡತಿ ಮಕ್ಕಳು ಎಂಐಸಿಯುವಿನ ವಿಸಿಟರ್ ರೂಮಿನಲ್ಲಿ ಕಾತರದಿಂದ ಕೂತಿರುತ್ತಿದ್ದರು. ನನ್ನ ಮಕ್ಕಳು ಕೂಡ ಅವರ ಹಾಗೆಯೇ ತಾನೆ? ಅವರು ಕೂಡ ಅವರ ಎದುರುಬದರೋ ಅಕ್ಕಪಕ್ಕವೋ ಕೂತಿರುತ್ತಿದ್ದರು. ಹೀಗಾಗಿ ಅವರ ಮಾತು ಕತೆಗಳು ನನ್ನ ಮಕ್ಕಳ ಕಿವಿಗೆ ಬೀಳುತ್ತಿದ್ದವು. ನನ್ನ ಮಕ್ಕಳು ಕೂಡ ಬರೆಹಗಾರರಾದುದರಿಂದ ತಮ್ಮ ಸುತ್ತಲ ಬದುಕನ್ನು ಅವಲೋಕಿಸಿ ಗ್ರಹಿಸುವ ದೃಷ್ಟಿಯನ್ನು ರೂಢಿಸಿಕೊಂಡಿದ್ದರು. ನನ್ನ ಪಕ್ಕದ ಕ್ಯಾಬಿನ್‌ನ ರೋಗಿ ತೀರಿಕೊಂಡ ಸುದ್ದಿ ಆ ರೋಗಿಯ ಮಕ್ಕಳಿಗೆ ತಿಳಿದಾಗ, ಅವರು ಅವರಪ್ಪನ ಇಚ್ಛೆಯಂತೆ ದೇಹದ ಅಂತ್ಯಕ್ರಿಯೆ ಮಾಡಲು ಸಿದ್ಧರಾದರು. ಆಗ ಅದೆಲ್ಲಿದ್ದರೋ ಅವರ ರಕ್ತ ಸಂಬಂಧಿಕರು ಇದ್ದಕ್ಕಿದ್ದಂತೆ ಪ್ರತ್ಯಕ್ಷರಾದರು. ಆ ರೋಗಿ ತಾನು ಸತ್ತನಂತರ ತನ್ನ ಕಣ್ಣುಗಳನ್ನು 'ನೇತ್ರ ನಿಧಿ' ಬ್ಯಾಂಕಿಗೆ ನೀಡುವಂತೆ ಬರೆದಿದ್ದರಂತೆ. ಅಷ್ಟೇ ಅಲ್ಲ, ಆ ವಿಷಯವನ್ನು ಮಕ್ಕಳಿಗೂ ತಿಳಿಸಿದ್ದರಂತೆ. ಆದರೆ ಈ ತೀರ್ಮಾನಕ್ಕೆ ಕಡು ವಿರೋಧವನ್ನು ವ್ಯಕ್ತಪಡಿಸಿದ ಅವರ ಸಂಬಂಧಿಕರು "ಸತ್ತ ದೇಹವನ್ನು ಊನ ಮಾಡಿದರೆ ಆತ್ಮಕ್ಕೆ ಸ್ವರ್ಗ ಪ್ರಾಪ್ತವಾಗುವುದಿಲ್ಲ. ಸತ್ತವರು ನೇತ್ರದಾನ ಮಾಡಿ ಅಂತ ಬರೆದಿಟ್ಟರೆ ಆಗಿ ಹೋಯ್ತೆ? ಅದು ಅಜ್ಞಾನದ ಬರೆಹ. ಅದನ್ನು ನಾವು ಪಾಲಿಸಬೇಕಿಲ್ಲ. ಹಾಗೆ ಮಾಡಿದರೆ ಬದುಕಿರುವ ನಮಗೆ ಒಳ್ಳೆಯದಾಗುವುದಿಲ್ಲ, ನೇತ್ರದಾನ ಮಾಡಬೇಡಿ" ಎಂದು ಮಕ್ಕಳ ಮೇಲೆ ಕೂಗಾಡಿ ಒತ್ತಡ ತಂದರಂತೆ. ಆದರೆ ಸತ್ತ ವ್ಯಕ್ತಿಯ ಹಿರಿಯ ಮಗಳು ತಂದೆಯ ಇಚ್ಛೆಯನ್ನು ಪಾಲಿಸಲು ಬದ್ಧವಾಗಿ ನಿಂತಳಂತೆ. ಆಗ ಕೆಲ ಸಂಬಂಧಿಕರು ಕೂಗಾಡಿ ಹೊರ ಹೋದರೆ, ಮತ್ತೆ ಕೆಲವರು ಅಸಮಾಧಾನದಿಂದ "ನಿಮ್ಮ ಇಚ್ಛೆ" ಎಂದು ಗೊಣಗಿ ಸುಮ್ಮನಾದರಂತೆ.

ಈ ಎಲ್ಲಾ ವಿಚಾರಗಳನ್ನು ನನ್ನ ಮಗಳು ಅನಂತರ ನನಗೆ ನಿಧಾನವಾಗಿ ವಾರ್ಡಿನಲ್ಲಿ ಹೇಳಿದ್ದಳು.

ನಾನು ಬದುಕಿನುದ್ದಕ್ಕೂ ವೈಜ್ಞಾನಿಕ ದೃಷ್ಟಿ ಮತ್ತು ವೈಚಾರಿಕ

ಮನೋಧರ್ಮವನ್ನು ಬೆಳೆಸಿಕೊಂಡು ಬಂದವನು. ಅದಕ್ಕೆ ಬದ್ಧನಾಗೇ ಬದುಕಿದವನು. ನನಗೆ ವೈಯಕ್ತಿಕವಾಗಿ ಯಾವುದೇ ಧರ್ಮದ ಆಚಾರ ವಿಚಾರ ಸಂಪ್ರದಾಯಗಳಲ್ಲಿ ಕಿಂಚಿತ್ತೂ ನಂಬಿಕೆಯಿರಲಿಲ್ಲ. ಮಾನವಪರವಾದ ಜೀವಪರವಾದ ನಡೆಯೇ ನಿಜವಾದ ಬದುಕಿನ ಸತ್ತ್ವವೆಂದು ಬಗೆದವನು. ನನಗೆ ದೇವರು ದೆವ್ವಗಳಲ್ಲಿ ಸ್ವರ್ಗನರಕಗಳಲ್ಲಿ ನಂಬಿಕೆಯಿರಲಿಲ್ಲ. ಇದರಿಂದಾಗಿ ರೂಢಿಗತ ವ್ಯವಸ್ಥೆಯ ಮೌಢ್ಯದ ಹಿಡಿತದಿಂದ ನಾನು ಪಾರಾಗಿದ್ದೆ. ರೂಢಿಗತ ವ್ಯವಸ್ಥೆಯ ದಾಸ್ಯದಲ್ಲಿ ಅದು ಹೇಳಿದಂತೆ ಬದುಕು ಮಾಡಿದ ಗುಲಾಮ ನಾನಾಗಿರಲಿಲ್ಲ. ನನ್ನ ರೀತಿಯಲ್ಲೇ ಚಿಂತನೆ ಮಾಡುವ ಅನುರೂಪ ಪತ್ನಿ ನನಗೆ ದೊರೆತಿದ್ದಳು. ನಾವು ಮಕ್ಕಳನ್ನು ಇದೇ ಬಗೆಯ ಬೌದ್ಧಿಕ ಸ್ತರದಲ್ಲೇ ಬೆಳೆಸಿದ್ದೆವು.

ಆದರೆ ನನ್ನ ಸುತ್ತಲ ಸಮಾಜ ಆಗಿಲ್ಲವಲ್ಲ! ಧುತ್ತನೆ ಮೂಡಿಬಿಡುವ ಸಂಬಂಧಿಕರು ಇಂಥ ಸಂದರ್ಭದಲ್ಲಿ ರೂಢಿಗತ ಸಂಪ್ರದಾಯ ಸಮಾಜದ ಯಜಮಾನಿಕೆಯನ್ನು ವಹಿಸಿಕೊಂಡಂತೆ ಸಂನಿವೇಶವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳುತ್ತಾರೆ.

ನಾನು ಸತ್ತು ಹೋದರೆ ನನ್ನ ಹೆಂಡತಿ ಮಕ್ಕಳು ಮನೆಯ ಮೂಲೆಯಲ್ಲಿ ದುಃಖಿತರಾಗಿ ಕುಳಿತು ಮೌನದಿಂದ ರೋದಿಸುತ್ತಿರುತ್ತಾರೆ. ನನ್ನ ಸಾವಿನ ಸುದ್ದಿ ತಿಳಿದ ನನ್ನ ರಕ್ತಸಂಬಂಧಿಕರು ಒಬ್ಬಬ್ಬೊರಾಗಿ ಪ್ರತ್ಯಕ್ಷರಾಗಿ ಎಲ್ಲ ಬಗೆಯ ಅಂತ್ಯಕ್ರಿಯೆಗೆ ಸಂಬಂಧಿಸಿದ ಸಾಂಪ್ರದಾಯಿಕ ಕ್ರಿಯೆಗಳನ್ನು ವಿಧಿವತ್ತಾಗಿ ಆಚರಣೆಗೆ ತರಲು ಪ್ರಾರಂಭಿಸುತ್ತಾರೆ. ಆ ಸಂದರ್ಭದಲ್ಲಿ ಎಚ್ಚೆತ್ತುಕೊಂಡ ನನ್ನ ಹೆಂಡತಿ ಮಕ್ಕಳು "ಅದು ಅವರಿಗೆ ಇಷ್ಟವಿರಲಿಲ್ಲ" ಎಂದು ಹೇಳ ಹೊರಟಾಗ ಸಂಬಂಧಿಕರು ದಬಾಯಿಸಿ ಕೂರಿಸುವ ಕೆಲಸದಲ್ಲಿ ತೊಡಗುತ್ತಾರೆ.

ಇಂಥ ವಿಚಾರಗಳೆಲ್ಲವೂ ನನ್ನ ಜೀವಿತ ಬದುಕು ಹೇಳಿಕೊಟ್ಟ ಪಾಠಗಳಾಗಿದ್ದವು. "ನಾನು ಸತ್ತರೆ ಇಂಥ ರೂಢಿಗತ ಆಚರಣೆಗಳು ಕಾರ್ಯರೂಪಕ್ಕೆ ಬರದಂತೆ ನೋಡಿಕೊಳ್ಳಿ. ಯಾವ ಸಾಂಪ್ರದಾಯಿಕ ಕ್ರಿಯೆಯನ್ನೂ ಮಾಡದೆ ಶವ ಸಾಗಿಸುವ ವಾಹನದಲ್ಲಿ ನನ್ನ ದೇಹವನ್ನು ವಿದ್ಯುತ್ ಚಿತಾಗಾರಕ್ಕೆ ಸಾಗಿಸಿರಿ. ಅಲ್ಲಿ ನನ್ನ ದೇಹವನ್ನು ವಿದ್ಯುತ್ ನಿಂದಲೋ ಅನಿಲದಿಂದಲೊ ದಹಿಸಿ ಬೂದಿ ಮಾಡಿರಿ. ಆ ಬೂದಿಯನ್ನು ಯಾವುದೇ ಕಾರಣಕ್ಕೂ ಮನೆಗೆ ತರಬೇಡಿ. ಅದು ಅದರ ಪಾಡಿಗೆ ಅಲ್ಲೇ ಮಣ್ಣಲ್ಲಿ ಮಣ್ಣಾಗುತ್ತದೆ ಅನಂತರ ತಿಥಿಪತಿ ಅಂತ ಏನೂ ಮಾಡಬಾರದು. ನಿಮ್ಮ ಪಾಡಿಗೆ ನೀವು ಬದುಕಿನ ವಾಹಿನಿಯಲ್ಲಿ ಸಹಜವೆಂಬಂತೆ ಬದುಕು ಮಾಡಿರಿ"- ಅಂತ ನನ್ನ ಮಕ್ಕಳಿಗೆ ಬರೆದು ತಿಳಿಸುವ ಪ್ರಯತ್ನ ಮಾಡಿದೆ. ಆದರೆ ಅವರು ನನ್ನ ಸಾವನ್ನು ಹೊಡೆದೋಡಿಸುವ

ಯುದ್ಧದಲ್ಲಿ ನಿರತರಾಗಿದ್ದರು. ಅದರಲ್ಲಿ ಅವರು ಜಯಶಾಲಿಗಳೂ ಆದದ್ದು ನನಗೆ ಈಗಲೂ ಬೆರಗು ಹುಟ್ಟಿಸುತ್ತದೆ.

ಸಾವು ಅತ್ಯಂತ ಸಹಜ ಕ್ರಿಯೆ. ಅದು ಯಾವ ವಯಸ್ಸಿನಲ್ಲಿ ಬೇಕಾದರೂ ಸಂಭವಿಸಬಹುದು. ಅದನ್ನು ನಮ್ಮ ಸಮಾಜ "ವಿಧಿ ಬರೆಹ"ವೆಂದು ಕರೆದು ತೃಪ್ತಿ ಪಟ್ಟುಕೊಂಡಿದೆ. ಈ ತೃಪ್ತಿಯಲ್ಲಿ ತಿಳಿವಳಿಕೆಯ ಕೊರತೆಯಿದೆ. ಶೋಧ ಮೂಲದಿಂದ ಪಲಾಯನ ಮಾಡುವ ಪ್ರವೃತ್ತಿ ಇದೆ. ಈ 'ಹಣೆ ಬರೆಹ' ಅಥವಾ 'ವಿಧಿ ಬರೆಹ'-ಈ ದೇಶದಲ್ಲಿ ಹೋರಾಡುವ ಕಿಚ್ಚನ್ನೇ ನಂದಿಸಿದೆ ಎಂದರೆ ತಪ್ಪಲ್ಲ.

ಸಾವು ವಿಭಕ್ತ ಕುಟುಂಬದ ವ್ಯವಸ್ಥೆಯನ್ನು ಅಲ್ಲಾಡಿಸುತ್ತದೆ. ಕೂಡು ಕುಟುಂಬದಲ್ಲಿ ಮನೆಯ ಸದಸ್ಯನೊಬ್ಬ ಆಕಸ್ಮಿಕವಾಗಿ ತೀರಿಕೊಂಡಾಗ, ಅವನ ಹೆಂಡತಿ ಮಕ್ಕಳ ಜವಾಬ್ದಾರಿಯನ್ನು ತೆಗೆದುಕೊಂಡು ಪಾಲಿಸುತ್ತದೆ. ಆದರೆ ವಿಭಕ್ತ ಕುಟುಂಬದ ದುಡಿಯುವ ವ್ಯಕ್ತಿ ತೀರಿಕೊಂಡಾಗ ಅವನ ಅವಲಂಬಿತರು ದಿಕ್ಕು ತೋಚದೆ ಕಂಗಾಲಾಗುತ್ತಾರೆ. ಅವಲಂಬಿತರಲ್ಲಿ ಯಾರಾದರೊಬ್ಬರು ದುಡಿಯುತ್ತಿದ್ದರೆ ಪರವಾಗಿಲ್ಲ. ಇಲ್ಲದಿದ್ದರೆ ಅವಲಂಬಿತರಿಗೆ ಅನಾಥ ಪ್ರಜ್ಞೆ ಕಾಡಿ, ಅಸಹಾಯಕರಾಗುತ್ತಾರೆ. ಅದರಲ್ಲೂ ನಲವತ್ತರ ಆಜುಬಾಜುವಿನಲ್ಲಿರುವ ಮಕ್ಕಳ ತಾಯಿಯ ಮಾನಸಿಕ ಸ್ಥಿತಿಯನ್ನು, ಸಂಕಟವನ್ನು ಅಳೆಯಲಾಗದು. ನಾನು ಎಂಐಸಿಯುನಲ್ಲಿದ್ದಾಗ ಒಂದು ರಾತ್ರಿ ಎಂಟು ಗಂಟೆಯ ಹೊತ್ತಿಗೆ ಗಂಭೀರ ಸ್ಥಿತಿಯಲ್ಲಿರುವ ರೋಗಿಯೊಬ್ಬರು ದಾಖಲಾದರು. ಅವರ ಜೊತೆಯಲ್ಲಿಯೇ ಅವರ ಹೆಂಡತಿ ಸಹ ಅಲ್ಲಿಗೆ ಬಂದು ಗಂಡನಿಗೇನಾಗುತ್ತದೋ ಎಂಬ ಭಯದಿಂದ ಅವರು ದುಃಖಿಸುತ್ತಿದ್ದರು. ರೋಗಿಯನ್ನು ಪರೀಕ್ಷೆ ಮಾಡಲು ಬರುವ ತಜ್ಞ ವೈದ್ಯರನ್ನು ತಾನು ಮಕ್ಕಳೊಂದಗಿತ್ತಿ, ನನ್ನ ಗಂಡನನ್ನು ಬದುಕಿಸಿಕೊಡಿ ಎಂದು ಅಳುತ್ತಾ ಬೇಡಿಕೊಳ್ಳುತ್ತಿದ್ದರು. ಮಾಮೂಲಿಯಾಗಿ ವೈದ್ಯರು "ನಮ್ಮ ಪ್ರಯತ್ನ ನಾವು ಖಂಡಿತ ಮಾಡುತ್ತೇವೆ. ನೀವು ಧೈರ್ಯವಾಗಿರಿ ಭಗವಂತನ ಮೇಲೆ ನಂಬಿಕೆ ಇಡಿ" ಎಂದು ಹೇಳುತ್ತಿದ್ದರು. ಆಕೆಯನ್ನು "ನಿಮ್ಮಿಂದ ವೈದ್ಯರ ಪರೀಕ್ಷೆಗೆ ತೊಂದರೆಯಾಗುತ್ತಿದೆ, ನೀವು ಹೊರಗಿರಿ. ಬೇಕಾದರೆ ಕರೆಸಿಕೊಳ್ಳುತ್ತೇವೆ" ಎಂದು ನರ್ಸುಗಳು ಆಕೆಯನ್ನು ಬಲವಂತದಿಂದ ಹೊರಗೆ ಕಳಿಸಬೇಕಾಯಿತು. ಆಕೆಯ ವರ್ತನೆಯಿಂದ ಮತ್ತು ವೈದ್ಯರ ಮಾತುಗಳಿಂದ ಆ ರೋಗಿ ಬದುಕುಳಿಯುವುದು ಕಷ್ಟವೆಂದು ತೋರಿತು. ಆ ರೋಗಿಗೆ ತುರ್ತು ಚಿಕಿತ್ಸೆಯ ಎಲ್ಲಾ ಕ್ರಮಗಳನ್ನು ವೈದ್ಯರು ಮುತುವರ್ಜಿಯಿಂದ ಮಾಡುತ್ತಿರುವುದು ನನ್ನ ಗಮನಕ್ಕೆ ಬರುತ್ತಿತ್ತು. ಇಲ್ಲಿಗೆ ಬರುವ ಮುನ್ನವೇ ಸ್ಕ್ಯಾನ್ ಮಾಡಿಸಿಯೇ ಕರೆತಂದಿದ್ದರು. ಆ ರೋಗಿಯ ಕಿಡ್ನಿಗಳು ಹಾಳಾಗಿದ್ದವು ಮಾತ್ರವಲ್ಲ, ಲಿವರ್, ಮೂತ್ರಕೋಶಗಳು ಕೂಡ

ಕೆಲಸ ಮಾಡುವುದನ್ನು ನಿಲ್ಲಿಸಿದ್ದವು. ರೋಗಿಯನ್ನು ತುಂಬ ತಡವಾಗಿ ಆಸ್ಪತ್ರೆಗೆ ಕರೆತಂದಿದ್ದರು. ಹೀಗಾಗಿ ಆತ ಬದುಕುವುದು ದುಸ್ತರವೆಂದು ವೈದ್ಯರು ರೋಗಿಯ ಮನೆಯವರಿಗೆ ತಿಳಿಸಿದರೆಂದು ಕಾಣುತ್ತದೆ.

ಮಧ್ಯರಾತ್ರಿ ಮೂರುಗಂಟೆಯ ಹೊತ್ತಿಗೆ ಆತನ ಪತ್ನಿ ಮತ್ತೆ ಎಂಐಸಿಯುಗೆ ಬಂದಳು. ಅವಳ ಜೊತೆಯಲ್ಲಿ ಅವಳ ಎರಡು ಮಕ್ಕಳಿದ್ದವು. ನಾನು ಆಗ ಸರಿಯಾಗಿ ನೋಡಿದೆ. ಮೂವತ್ತೈದು ನಲವತ್ತರ ನಡುವಿನ ವಯಸ್ಸು. ಕಟ್ಟುಮಸ್ತಾದ ದೇಹ. ಅವಳ ಮಕ್ಕಳಲ್ಲಿ ಹುಡುಗಿ ದೊಡ್ಡವಳು. ಹತ್ತು ವರ್ಷವಿರಬಹುದು. ಇನ್ನೊಬ್ಬ ಮಗ. ಅವನ ವಯಸ್ಸು ಅವರ ಅಕ್ಕನಿಗಿಂತ ಎರಡು ವರ್ಷ ಕಡಿಮೆಯಿರಬಹುದು. ಆ ಹೆಂಗಸು ತನ್ನ ಮಕ್ಕಳಿಬ್ಬರನ್ನು ಭುಜದ ಮೇಲೆ ಕೈಯಿಟ್ಟು ತನ್ನ ಗಂಡ ಮಲಗಿದ್ದ ಕ್ಯಾಬಿನ್‌ಗೆ ಕರೆತಂದಳು. ಮಕ್ಕಳ ಜೊತೆ ಅವಳು ಒಳ ಹೋದಳು.

ಅವರು ಮೂವರು ಹೊರಬಂದಾಗ ಆಕೆಯ ಕಣ್ಣುಗಳು ಒದ್ದೆಯಾಗಿದ್ದವು. ಆದರೆ ಸರಿರಾತ್ರಿಯ ಆ ಸಮಯದಲ್ಲಿ ಆ ಮಕ್ಕಳ ಮುಖದಲ್ಲಿ ದುಃಖವಿತ್ತು. ಕಣ್ಣುಗಳಲ್ಲಿ ನೀರಿತ್ತು ಎಂದು ನಾನು ಹೇಳಲು ಅಸಮರ್ಥನಾಗಿದ್ದೇನೆ. ಬಹುಶಃ ಅವರು ಏನನ್ನೂ ವಿವೇಚನೆ ಮಾಡಲಾಗದ ಒಪ್ಪಿಕೊಳ್ಳಲಾಗದ ಸಂದಿಗ್ಧ ಸ್ಥಿತಿಯಲ್ಲಿದ್ದ ಮುಗ್ಧರೆಂದು ನಾನು ತಿಳಿಯುತ್ತೇನೆ.

ಆ ರೋಗಿ ಮಾರನೆಯ ದಿನ ಎಂಐಸಿಯುನಲ್ಲಿರಲಿಲ್ಲ.

ಎಂಐಸಿಯುಗೆ ಸಾವು ಬದುಕಿನ ನಡುವೆ ಹೋರಾಡುತ್ತಾ ಬರುವ ರೋಗಿಗಳಲ್ಲಿ ಕೇವಲ ವಯಸ್ಸಾದವರು ಮಾತ್ರ ಇರುವುದಿಲ್ಲ. ಹಾಗೆ ನೋಡಿದರೆ ಒಟ್ಟು ಸಂಖ್ಯೆಯಲ್ಲಿ ವಯಸ್ಸಾದವರು ಕಡಿಮೆ ಎಂದರೂ ಅಚ್ಚರಿ ಪಡಬೇಕಿಲ್ಲ. ವಯೋಮಾನದ ಕಾರಣದಿಂದ ದೇಹದ ಅಂಗಾಂಶಗಳು ಶಿಥಿಲಗೊಂಡು ಸಾವಿಗೆ ಹತ್ತಿರವಿರುವ ವೃದ್ಧರು ಸಾವಿನೊಡನೆ ಹೆಣಗಲು ಬರುವುದು ಅಸಹಜವಲ್ಲ. ಆದರೆ ನನ್ನ ದೀರ್ಘಾವಧಿಯ ಎಂಐಸಿಯುಗೆ ವಾಸ್ತವ್ಯ ವೃದ್ಧರಿಗಿಂತ ತರುಣರೂ ಪ್ರೌಢರೂ ಹೆಚ್ಚು ಮಂದಿ ಇಲ್ಲಿ ಸಾವಿನೊಡನೆ ಸೆಣಸಲು ಬಂದು ದಾಖಲಾಗುತ್ತಿರುವುದು ಅನುಭವಕ್ಕೆ ಬಂತು. ಏಕೆ ಹೀಗೆ? ಅವರಿನ್ನೂ ಬಾಳಿ ಬದುಕು ಮಾಡಬೇಕಿತ್ತು. ಏಕಿಷ್ಟು ಅವಸರ?

ನನ್ನ ಮನಸ್ಸು ವಿವೇಚನೆಯಲ್ಲಿ ತೊಡಗಿತು. ಜೀವಿತದಲ್ಲಿ ಸಾವು ಸಹಜ ಕ್ರಿಯೆ. ಇಲ್ಲಿ ಯಾರೂ ಚಿರಂಜೀವಿಗಳಲ್ಲ. ಹಾಗೆಂದುಕೊಂಡು ಮೆರೆದವರು ಮಣ್ಣಲ್ಲಿ ಮಣ್ಣಾಗಿ ಹೋಗಿದ್ದಾರೆ. ಆದರೆ ಮನುಷ್ಯ ತನಗೆ ತಾನು ಸಾವನ್ನು ತನ್ನ ಹತ್ತಿರಕ್ಕೆ ಸ್ವಾಗತಿಸುವ ಸಂದರ್ಭಗಳು ಹೆಚ್ಚು. ತರುಣರು ಅಥವಾ ಪ್ರೌಢರು ಇಲ್ಲಿ ಬದುಕಲು ದಾಖಲಾದ ಪ್ರಸಂಗಗಳನ್ನು ಅವಲೋಕಿಸಿದಾಗ, ಸಾವು ಹತ್ತಿರಕ್ಕೆ ಬಂದು ಸುಳಿದಾಡಲು

ಕಾರಣವಾಗಿದ್ದು ಅವರ ಹವ್ಯಾಸಗಳು ಮತ್ತು ಬದುಕಿನ ವಿಧಾನಗಳಿಂದಲೇ ಎಂಬದು ತಿಳಿದು ಬರುತ್ತದೆ. ಮಾದಕ ದ್ರವ್ಯ ವ್ಯಸನ, ಮೈಮೇಲೆ ಪ್ರಜ್ಞೆ ಇಲ್ಲದಂತೆ ಗಾಡಿಗಳನ್ನು ಓಡಿಸುವುದು, ಸದಾ ಕುಡಿತದ ದಾಸನಾಗಿರುವುದು - ಇವುಗಳು ಇವರ ಸಾವಿನಂಚಿನ ಕಾರಣಗಳಾಗಿರುತ್ತವೆ. ಯೌವ್ವನದ ಕೆಚ್ಚು, ಇಂಥ ವಿಷಯಗಳಲ್ಲಿ ಹಿರಿಯರು, ವೈದ್ಯರು, ಅನುಭವಿಗಳು ತಿಳಿಹೇಳಿದ ಮಾತುಗಳು ಇವರ ಕಿವಿಗೆ ತಟ್ಟುವುದಿಲ್ಲ. ಅಂದ ಮೇಲೆ ಹೃದಯಕ್ಕೆ ಇಳಿದು ಅರಿವಾಗುವುದು ಅಸಾಧ್ಯದ ಮಾತು. ಇಂಥವರ ಸಾವು ಅಸಹಜವಾದುದು, ಅಕಾಲಿಕವಾದುದು. ಅದು ಅವರೇ ತಂದುಕೊಂಡ ವಿಪತ್ತು. "ಅಯ್ಯೋ ಅವನ ಆಯಸ್ಸೂ ಅಷ್ಟೇ ಇತ್ತು. ಭಗವಂತ ಅಷ್ಟೇ ಅಂತ ಬರೆದಿರುತ್ತಾನೆ. ಇಂಥವರಿಂದಲೇ ಸಾಯಬೇಕೆಂದು ಮೊದಲೇ ನಿರ್ಧರಿಸುತ್ತಾನೆ"- ಎಂದೆಲ್ಲಾ ಇಂಥವರು ಸತ್ತಾಗ ಹೇಳುವ ಮಾತುಗಳು ಬದುಕಿನ ಕಟುವಾಸ್ತವವನ್ನು ಎದುರಿಸಲಾಗದ ಮನಸ್ಥಿತಿಯಿಂದ ಹುಟ್ಟಿದವು. ಬದುಕು ಎದುರಿಸಬೇಕಾದ ಸವಾಲುಗಳನ್ನು ನಿಭಾಯಿಸಲಾಗದಿದ್ದಾಗ, ಇಂಥ ಪಲಾಯನದ ಮಾತುಗಳು ಸೃಷ್ಟಿಗೊಳ್ಳುತ್ತವೆ. ಭಾರತೀಯ ಕರ್ಮಸಿದ್ಧಾಂತ ಈ ತಿಳಿವಳಿಕೆಯ ಹಿನ್ನೆಲೆಯಲ್ಲಿ ಕೆಲಸ ಮಾಡಿದೆ.

ಯೌವ್ವನ ಅಥವಾ ಪ್ರೌಢಾವಸ್ಥೆಯಲ್ಲಿ ತಾವೇ ತಂದುಕೊಳ್ಳುವ ಅಸಹಜ ಸಾವುಗಳ ಜೊತೆಯಲ್ಲಿ ಮತ್ತೊಂದು ಬಗೆಯ ಅಸಹಜ ಸಾವನ್ನು ನಾನು ಗುರುತಿಸಲು ಇಚ್ಛಿಸುತ್ತೇನೆ. ಅದು ಅಪಘಾತಗಳಿಂದ ಸಂಭವಿಸುವ ಸಾವು. ರೈಲು, ಬಸ್ಸು, ವಿಮಾನ ಇವುಗಳಲ್ಲಿ ಸಂಭವಿಸುವ ಸಾವುಗಳು; ಸ್ವಾಭಾವಿಕ ಪ್ರಕೃತಿ ವಿಕೋಪಗಳಾದ ಭೂಕಂಪನ, ಜ್ವಾಲಾಮುಖಿ, ನೆರೆಹಾವಳಿ, ಸುನಾಮಿ - ಮುಂತಾದವುಗಳಿಂದ ಉಂಟಾಗುವ ಸಾವುಗಳು. ಇಂಥವು ವ್ಯಕ್ತಿಯ ಕೈನಲ್ಲಿರುವುದಿಲ್ಲ. ಪ್ರಕೃತಿಯ ಕೋಪತಾಪಗಳಿಂದ, ಯಂತ್ರಗಳು ಸರಿಯಾಗಿ ಕಾರ್ಯನಿರ್ವಹಿಸದೆ ಕೈಕೊಡುವುದರಿಂದ ಇಲ್ಲಿ ಸಾವಿನ ದುರಂತಗಳು ಅಪಾರಮಟ್ಟದಲ್ಲಿ ಆಗುತ್ತವೆ. ಇಂಥ ಘಟನೆಗಳಲ್ಲಿ ಸಾವನ್ನಪ್ಪುವವರು ಆ ಸಾವಿನ ಅರಿವಿಲ್ಲದೆಯೇ ಅದರ ತೆಕ್ಕೆಯಲ್ಲಿ ಲೀನವಾಗುತ್ತಾರೆ. ಇಂಥ ಸಾವು ತತ್‌ಕ್ಷಣದಿಂದ ಕೆಲವು ಗಂಟೆಗಳವರೆಗೆ ಕಾಡಬಹುದು. ಅದು ಹಾವಳಿಯ ತೀವ್ರತೆಯನ್ನು ಅವಲಂಬಿಸಿರುತ್ತದೆ. ಇಂಥ ಹಾವಳಿಯಲ್ಲಿ ಸಾಯುವವರು ಬಹುಪಾಲು ಅಸಹಾಯಕರಾಗಿರುತ್ತಾರೆ.

ಜೀವನವನ್ನು ಅನುಭವಿಸಿ, ಅದರ ಸಾರವನ್ನು ಗುರುತಿಸಿ, ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸಿ ವಯೋಮಾನದ ಕಾರಣದಿಂದ ಸಂಭವಿಸುವ ಸಾವು ಸಹಜ ಸಾವು. ಈ ಸಾವನ್ನು ವೃದ್ಧರು ನಿರೀಕ್ಷೆ ಮಾಡಿರುತ್ತಾರೆ. ಮಾನಸಿಕವಾಗಿ ಪ್ರಾಣತ್ಯಾಗ ಮಾಡಲು ಸಿದ್ಧರಾಗುತ್ತಿರುತ್ತಾರೆ. ಸಂಸಾರದ ರಾಗಗಳಿಂದ ವಿಮುಕ್ತರಾಗಲು, ತಾವು ನಿರ್ವಹಿಸಿದ

ಜವಾಬ್ದಾರಿಗಳನ್ನು ತಮ್ಮ ಮುಂದಿನ ಪೀಳಿಗೆಗೆ ವಹಿಸಲು ಸಿದ್ಧರಿರುತ್ತಾರೆ. ಇಂಥವರು ಸತ್ತಾಗ ದುಃಖಿಸಬೇಕಾದ ಅವಶ್ಯಕತೆಯಿಲ್ಲ ಅವರು ಸತ್ತರೂ ಅವರು ನಿರ್ವಹಿಸಿರುವ ಬದುಕಿನ ಸಾಧನೆಗಳು ಅವರ ಮನೆಯವರ ಕಣ್ಮುಂದೆ ಇರುತ್ತವೆ. ಇಂಥ ಸಾವುಗಳು ಪ್ರಕೃತಿಯ ನಿಯತಿಯ ಮುಖ್ಯ ಭಾಗ. ಚಿಗುರೆಲೆಗೆ ಅವಕಾಶ ನೀಡಿ ಉದುರುವ ಹಣ್ಣೆಲೆಯ ನೆಲೆ ಇದು. ಈ ನೆಲೆಯಲ್ಲಿ ವಿವೇಕಿಯೂ ವಿಚಾರವಂತನೂ ಆದ ವ್ಯಕ್ತಿ ತನ್ನ ಸಾವಿನಲ್ಲಿ ಬೆಳಕನ್ನು ಕಾಣುತ್ತಾನೆ. ತನ್ನ ದೇಹದ ಎಲ್ಲಾ ನೋವುಗಳಿಂದ ಬಿಡುಗಡೆಯಾಗಬೇಕಾದರೆ ಸಾವೇ ಸರಿಯಾದ ಸಾಧನವೆಂದು ಆತ ಅರ್ಥಮಾಡಿ ಕೊಂಡಿರುತ್ತಾನೆ.

ಈ ನೆಲೆಗೆ ನನ್ನನ್ನು ನಾನು ಹದ ಮಾಡಿಕೊಂಡಿದ್ದೆ. ನಾನು ಸಾವನ್ನು ಸ್ವೀಕರಿಸಲು ಮುಕ್ತ ಮನಸ್ಸಿನಿಂದ ಸಿದ್ಧನಾಗಿದ್ದೆ. ಏಕೆಂದರೆ ನನಗೆ ನನ್ನ ದೇಹ ನೀಡುತ್ತಿರುವ ನೋವುಗಳಿಂದ ಮುಕ್ತಿ ಬೇಕಾಗಿತ್ತು. ನಾನು ನಿವೃತ್ತನಾಗುವುದಕ್ಕೆ ಮುಂಚೆ ನಾನು ಒಂದು ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡುತ್ತಾ "ನನಗೆ ಶತ್ರುಗಳಿಲ್ಲ. ನನ್ನನ್ನು ದ್ವೇಷಮಾಡುವವರನ್ನೂ ನಾನು ಪ್ರೀತಿಸುತ್ತೇನೆ. ಅಂಥವರಿಂದ ನಮ್ಮ ನೈತಿಕ ಪ್ರಜ್ಞೆ ಸದಾ ಜಾಗೃತವಾಗಿರುತ್ತದೆ. ಪುರಂದರದಾಸ ಹೇಳುವಂತೆ ನೆರೆಯೊಳಗೆ ನಿಂದಕರರಿರಬೇಕು. ಅದರಿಂದ ನಮ್ಮ ಆರೋಗ್ಯ ಚೆನ್ನಾಗಿರುತ್ತದೆ. ಆದರೆ ನನ್ನ ದೊಡ್ಡ ಶತ್ರು ನನ್ನ ದೇಹವೇ ಆಗಿದೆ. ಅದು ಕಳೆದ ಹತ್ತು ವರ್ಷದಿಂದ ನನಗೆ ನೀಡಿರುವ ನೋವು ಅಂಥಾದು. ಇತ್ತೀಚಿನ ದಿನಗಳಲ್ಲಿ ನನ್ನ ದೇಹದ ನೋವುಗಳನ್ನು ಕೂಡ ಒಪ್ಪಿಕೊಂಡು ಪ್ರೀತಿಸತೊಡಗಿದ್ದೇನೆ" ಎಂದು ಹೇಳಿದ್ದೆ. ನನಗೆ ಬಹಳ ಹಿಂದೆಯೇ ತಿಳಿದುಬಿಟ್ಟಿತ್ತು. ನನ್ನ ಸಾವಿನೊಡನೆಯೇ ನನ್ನ ನೋವುಗಳು ಮಾಯವಾಗುತ್ತವೆ, ಎಂದು.

ರನ್ನ ಕವಿ ತನ್ನ 'ಅಜಿತನಾಥ ಚರಿತ'ದಲ್ಲಿ ಸಗರ ಚಕ್ರವರ್ತಿಯ ಕಥೆಯನ್ನು ಬರೆಯುತ್ತಾನೆ. ಸಗರನಿಗೆ ನೂರು ಮಕ್ಕಳು, ಅವರು ವಯಸ್ಸಿಗೆ ಬಂದರೂ ಸಗರನಿಗೆ ವೈರಾಗ್ಯ ಪ್ರಾಪ್ತವಾಗುವುದಿಲ್ಲ. ಅವನ ಮಕ್ಕಳು ಅವನ ಬಳಿ ಬಂದು ತಮಗೆ ಮಾಡಲು ಏನಾದರು ಕೆಲಸ ನೀಡು ಎಂದು ಕೇಳುತ್ತಾರೆ. ಅವನು ಹಿಮಾಲಯದಲ್ಲಿ ಹಿಮದ ಕಾರಣದಿಂದ ಮುಚ್ಚಿಹೋಗಿರುವ ಜಿನ ದೇವಾಲಯಗಳನ್ನು ಹೊರ ಜಗತ್ತಿಗೆ ಕಾಣುವಂತೆ ಹಿಮ ತೆಗೆಯುವ ಕೆಲಸವನ್ನು ವಹಿಸುತ್ತಾನೆ. ಅನಂತರ ತನ್ನ ಪಾಡಿಗೆ ತಾನು ವೈಭೋಗದಲ್ಲಿ ಮುಳುಗುತ್ತಾನೆ. ಅವನಿಗೆ ವೈರಾಗ್ಯ ಪ್ರಾಪ್ತವಾಗುವಂತೆ ಮಾಡಲು ಇಂದ್ರನು ಸಗರನ ಕೊನೆಯ ಮಗನಾದ ಭಗೀರಥನನ್ನು ಹೊರತುಪಡಿಸಿ, ಉಳಿದವರನ್ನು ಕಾಳೋಗರ ವಿಷಾನಿಲದಿಂದ ಸಾಯುವಂತೆ ಮಾಡುತ್ತಾನೆ. ಕಿರಿಯ

ಮಗ ಭಗೀರಥನು ತಂದೆಗೆ ಈ ವಿಷಯ ತಿಳಿಸಲು ಸಗರನ ಬಳಿ ಬಂದಾಗ ಆತ ಓಲಗದಲ್ಲಿ ನಿರತನಾಗಿರುತ್ತಾನೆ. ಭಗೀರಥನು ತನ್ನ ತೊಂಬತ್ತೊಂಬತ್ತು ಜನ ಅಣ್ಣಂದಿರು ವಿಷಾನಿಲದಿಂದ ಸತ್ತ ಸುದ್ದಿಯನ್ನು ಅವನಿಗೆ ತಿಳಿಸುತ್ತಾನೆ. ಆ ಸುದ್ದಿಯನ್ನು ಕೇಳಿದ ಸಗರನು ವಿಚಲಿತನಾಗುವುದಿಲ್ಲ; ದುಃಖಿತನಾಗುವುದಿಲ್ಲ. ಅದರ ಬದಲು "ಮಾನವ ಜಂತುಗಳ್ ಎಂದು ಪುಟ್ಟಿದರೋ ಅಂದೇ ಸತ್ತರ್" ಎಂದು ನುಡಿದು ಎಂದಿನಂತೆ ತನ್ನ ಓಲಗದ ಕಲಾಪದಲ್ಲಿ ಮಗ್ನನಾಗುತ್ತಾನೆ.

ರನ್ನ ಇಲ್ಲಿ ಒಂದು ಶಾಶ್ವತ ಸತ್ಯವನ್ನು ಹೇಳುತ್ತಾನೆ. ಅದೆಂದರೆ ಜನಿಸಿದವರು ಸಾಯಲೇಬೇಕೆಂಬ ಸತ್ಯ, ಸೃಷ್ಟಿಯಾದುದು ನಾಶವಾಗಲೇಬೇಕು, ಮತ್ತೊಂದು ಜೀವಿತಕ್ಕೆ ಅವಕಾಶ ಕಲ್ಪಿಸಬೇಕು. ಮನುಷ್ಯರು ಜನಿಸಿದ ಕೂಡಲೇ ಸಾಯುತ್ತಾರೆ - ಎಂಬ ರನ್ನನ ಮಾತಿನಲ್ಲಿ ಸಾವು ವ್ಯಕ್ತಿಗೆ ಯಾವಾಗ ಬೇಕಾದರೂ ಬರಬಹುದು ಅದೊಂದು ಸಹಜ ಕ್ರಿಯೆ ಎಂಬ ನಿಜದ ಅನಾವರಣವಿದೆ. ಆದರೆ ವ್ಯಕ್ತಿಯ ಅಹಂಕಾರ ಮಾತ್ರ "ನಾನು ಸಾಯುವುದೇ ಇಲ್ಲ. ಇಲ್ಲೇ ಶಾಶ್ವತವಾಗಿ ಗೂಟ ಹೊಡೆದುಕೊಂಡು ಇರುತ್ತೇನೆ" ಎಂದು ಅವನನ್ನು ಆಡಿಸುತ್ತಿರುತ್ತದೆ. ಇಲ್ಲಿ ಮತ್ತೂ ಒಂದು ಸತ್ಯ ಜೀವಿಸಿರುತ್ತದೆ: ಆಬಾಲ ವೃದ್ಧರವರೆಗೆ ಎಲ್ಲರಿಗೂ ತಾನು ಸಾಯುತ್ತೇನೆ, ಸಾವು ಯಾವಾಗ ಬೇಕಾದರೂ ಬರಬಹುದು ಎಂಬ ಸತ್ಯ ತಿಳಿದಿರುತ್ತದೆ. ಆದರೆ ಅದನ್ನು ತಿಳಿದೂ ತಾನು ಬದುಕೇ ಇರುತ್ತೇನೆ ಎಂಬ ಛಲದಲ್ಲಿ ವ್ಯಕ್ತಿ ಇರುತ್ತಾನೆ. ಬಹುಶಃ ಈ ಬದುಕಿನ ಛಲದಲ್ಲಿ ಅವನ ಕ್ರಿಯಾಶೀಲತೆ ಮತ್ತು ಸೃಜನಶೀಲತೆಗಳು ಚುರುಕಾಗಿ ನಿರ್ವಹಣೆಗೊಂಡು ಅವನನ್ನು ಗಟ್ಟಿಗೊಳಿಸುತ್ತವೆಯೆಂದು ತೋರುತ್ತದೆ. ಸಾವನ್ನು ಬೆನ್ನಲ್ಲೇ ಕಟ್ಟಿಕೊಂಡು ಬದುಕು ಮಾಡುವ ಜೀವಿಯ ಹೋರಾಟದ ಕ್ರಮವಿದು. ಹೀಗೆ ಹೋರಾಡುತ್ತಲೇ ನಾಗರೀಕತೆ - ಸಂಸ್ಕೃತಿಗಳನ್ನು ನಿರ್ಮಾಣ ಮಾಡುವ ಛಲ ಅಸಾಧಾರಣವಾದುದು.

ನಾನು ಆಸ್ಪತ್ರೆಗೆ ಸೇರುವ ಕೆಲವು ದಿನಗಳ ಹಿಂದೆ ನ್ಯಾಷನಲ್ ಜಿಯಾಗ್ರಫಿ ವಾಹಿನಿಯಲ್ಲಿ ಒಂದು ಹುಲಿಗೆ ಸಂಬಂಧಿಸಿದ ಸಾಕ್ಷ್ಯಚಿತ್ರವನ್ನು ನೋಡಿದ್ದೆ. ಆ ಸಾಕ್ಷ್ಯ ಚಿತ್ರ ಹುಲಿಯ ಜನನದಿಂದ ಅಂತ್ಯದವರೆಗೆ ಬಹು ಸೊಗಸಾದ ಜೀವನ ಗಾಥೆಯನ್ನು ಕಟ್ಟಿಕೊಡುತ್ತದೆ. ಅದು ಶೈಶವಾಸ್ಥೆಯಲ್ಲಿ ಬಲಿತ ಹುಲಿಗಳ ಬಾಯಿಂದ ಬಚಾವಾಗಬೇಕಾಗುತ್ತದೆ. ಯೌವ್ವನದಲ್ಲಿ ನಾಯಕತ್ವಕ್ಕಾಗಿ ಇತರ ಗಂಡು ಹುಲಿಗಳ ಜೊತೆ ಕಾದಾಡಿ ಗೆಲ್ಲಬೇಕಾಗುತ್ತದೆ. ಗುಂಪಿನ ನಾಯಕನಾಗಿ ತನ್ನ ಗುಂಪನ್ನು ಇತರ ಗುಂಪುಗಳಿಂದ ಸಂರಕ್ಷಿಸಬೇಕಾಗುತ್ತದೆ. ತನ್ನ ಸಂಕುಲವನ್ನು ಮುಂದುವರಿಸುವ ದೃಷ್ಟಿಯಿಂದ ಸೃಷ್ಟಿ ಕ್ರಿಯೆಯಲ್ಲಿ ತೊಡಗಬೇಕಾಗುತ್ತದೆ. ತನಗೆ ವಯಸ್ಸಾಗುತ್ತಾ

ದುರ್ಬಲನಾಗುತ್ತಾ ಬಂದ ಹಾಗೆ ತನ್ನ ಸೃಷ್ಟಿ ಸಂತತಿಯಿಂದಲೇ ತನ್ನ ನಾಯಕತ್ವವನ್ನು ಕಳದುಕೊಳ್ಳಬೇಕಾಗುತ್ತದೆ. ಗುಂಪಿನ ಇತರೆ ಪ್ರಾಣಿಗಳು ಬೇಟೆಯನ್ನು ಹಂಚಿ ಕೊಳ್ಳಲು ನಿರಾಕರಿಸಿದಾಗ ಹಸಿವಿನಿಂದ ಪರದಾಡುವಂತಾಗುತ್ತದೆ. ತಾನೇ ಬೇಟೆಯಾಡಲು ಅಸಮರ್ಪಕವಾದಾಗ ಹಸಿವು ತೀರಿಸಿಕೊಳ್ಳಲು ಕೇವಲ ನೀರು ಕುಡಿಯಬೇಕಾಗುತ್ತದೆ. ಕೊನೆಗೆ ನಿತ್ರಾಣಗೊಂಡು ಅದು ತನ್ನ ಪ್ರಾಣವನ್ನು ಬಿಡುತ್ತದೆ.

ಅದು ಹಸಿವಿನಿಂದ ನರಳಿ ಉಸಿರುಬಿಡುವಾಗ ಅದರ ಗುಂಪಿನ ಯಾವ ಸದಸ್ಯ ಪ್ರಾಣಿಯೂ ಅದರ ಬಳಿ ಬರುವುದಿಲ್ಲ. ಅದರ ಸಂಕಟಕ್ಕೆ ಕಣ್ಣೀರು ಸುರಿಸುವುದಿಲ್ಲ. ಅವು ಇದನ್ನು ಇತರೆ ಪ್ರಕೃತಿ ವಿಶೇಷದಂತೆ ಸಾಮಾನ್ಯ ಘಟನೆಯೆಂದು ಭಾವಿಸಿ ನಡೆದುಕೊಳ್ಳುತ್ತವೆ. ಅವು ಪ್ರವೃತ್ತಿಯ ನೆಲೆಯಲ್ಲಿ ಹಿರಿಯ ಹುಲಿಯ ನಿತ್ರಾಣ ಮತ್ತು ಸಾವು ಸಹಜವೆಂದು ಸುಮ್ಮನಾಗುತ್ತವೆ. ಆದರವು ತಮ್ಮ ಬದುಕಿನ ಸಹಜಕ್ರಿಯೆಯಲ್ಲಿ ನಿರ್ಲಿಪ್ತವಾಗಿ ತೊಡಗಿರುತ್ತವೆ.

ಮನುಷ್ಯ ಈ ಪ್ರಾಣಿ ಬದುಕನ್ನು 'ಅರಣ್ಯ ನ್ಯಾಯ'ವೆಂದು ಕರೆಯಬಹುದು; ಕ್ರೂರವೆಂದು ಕರೆಯಬಹುದು. ಆದರೆ ಜೀವ ಜಗತ್ತು ಹಳೆಯದನ್ನು ನಿರಾಕರಿಸಿ, ಹೊಸದನ್ನು ಸಾಕಿ ಬದುಕನ್ನು ಮುಂದುವರಿಸುವ ಪರಿಕ್ರಮವಿದು. ಆದರೆ ಮನುಷ್ಯ ತಾನು ಭಾವಜೀವಿಯೆಂದೂ ಸಂಬಂಧಗಳನ್ನು ಗೌರವಿಸುವವನೆಂದೂ ಸಂಸ್ಕಾರವಂತ ನೆಂದೂ ತಿಳಿದುಕೊಂಡು ಮುಪ್ಪಿನ ಬಂಧುಗಳನ್ನು ನೋಡಿಕೊಳ್ಳುತ್ತಾನೆ. ಅನ್ನ ಆಹಾರ ನೀಡಿ ಸಾಕುತ್ತಾನೆ; ಕಾಯಿಲೆ ಬಿದ್ದಾಗ ಗುಣಪಡಿಸಲು ಹೆಣಗುತ್ತಾನೆ. ಆದರೆ ಸಾವು ಬಂದು ಅಪ್ಪಳಿಸಿದಾಗ ಹಿರಿಯರನ್ನು ಕಳೆದುಕೊಂಡು ದುಃಖಿಸುತ್ತಾನೆ. ಆದರೂ ಅವನು ಕೂಡ ವಾರ ಒಪ್ಪೊತ್ತಿನೊಳಗೆ ಆ ದುಃಖವನ್ನು ಮರೆತು ಬದುಕಿನ ಸಹಜಗತಿಯಲ್ಲಿ ನಿರತನಾಗುತ್ತಾನೆ.

ಪ್ರಾಣಿ ಪ್ರಪಂಚಕ್ಕೆ ಬಹಳ ಸರಳವಾಗಿ ಅರ್ಥವಾಗುವ ಜೀವನ ಸತ್ಯ ಮನುಷ್ಯನಿಗೆ ಅರ್ಥವಾದರೂ ಅರ್ಥವಾಗದವರಂತೆ ವರ್ತಿಸುತ್ತಾನೆ. ಇದಕ್ಕೆ ಅವನು ಕಟ್ಟಿಕೊಂಡಿರುವ ಸಂಬಂಧಗಳ ನಡುವಿನ ಭಾವ ಪ್ರಪಂಚವೇ ಕಾರಣವಿರಬಹುದು.

೧೫. ಬ್ರದರ್‌ಗಳು, ಸಿಸ್ಟರ್‌ಗಳು

ಎಂಐಸಿಯುವಿನ ಬಹುಮುಖ್ಯ ಶಕ್ತಿ ಎಂದರೆ ಇಲ್ಲಿನ ನರ್ಸುಗಳ ಸೇವಾ ಮನೋಧರ್ಮ; ಕ್ರಿಯಾಶೀಲತೆ ಮತ್ತು ವೃತ್ತಿಯ ಬಗೆಗಿನ ಬದ್ಧತೆ. ನಾನು ಅಪೊಲೊ ಆಸ್ಪತ್ರೆಯ ಇತರ ವಿಭಾಗಗಳ ನರ್ಸುಗಳನ್ನು ಅವಲೋಕಿಸಿದ್ದೇನೆ. ಅವರಲ್ಲಿ ಇವರಲ್ಲಿರುವ ಬದ್ಧತೆಯ ಕೊರತೆಯಿದೆ ಎಂದು ನಾನು ಗ್ರಹಿಸಿದ್ದೇನೆ. ನಾನು ವಾರ್ಡ್‌ನಲ್ಲಿದ್ದಾಗ, ಎಮರ್ಜೆನ್ಸಿ ವಿಭಾಗದಲ್ಲಿ ಚಿಕಿತ್ಸೆ ಪಡೆಯುವಾಗ ಇತರೆ ವಿಭಾಗಗಳಲ್ಲಿರುವ ನರ್ಸುಗಳಲ್ಲಿ ಒಂದು ಬಗೆಯ ಆರಾಮತ್ವ, ವೃತ್ತಿಯ ಬಗೆಗಿನ ಅನಾದರತ್ವಗಳನ್ನು ಗುರುತಿಸಿದ್ದೇನೆ. ಬಹುಶಃ ವೃತ್ತಿಯಲ್ಲಿ ನಿರಂತರ ಸೇವೆ ಮಾಡುತ್ತಾ ಮಾಡುತ್ತಾ ಮೂಡುವ ಏಕತಾನತೆ ತಂದುಕೊಡುವ ಗುಣ ಇದಕ್ಕೆ ಕಾರಣವಿರಬಹುದು.

ಆದರೆ ಎಂಐಸಿಯುವಿನಲ್ಲಿ ರೋಗಿ ಗಳ ಸ್ಥಿತಿ ತೀವ್ರ ಗಂಭೀರ ವಾಗಿರುವುದರಿಂದ ಪ್ರತಿ ಕ್ಷಣವೂ ಒಂದು ಜೀವದ ಬದುಕಿನ ಪ್ರಶ್ನೆಯಾಗಿರುತ್ತದೆ. ಒಂದು ಕ್ಷಣ ಮೈಮರೆತರೆ ದೊಡ್ಡ ಅನಾಹುತವೇ ಸಂಭವಿಸಬಹುದು. ಆದುದರಿಂದಲೇ ಇರಬೇಕು; ಎಂಐಸಿಯುವಿಗೆ ಸೇವೆ ಸಲ್ಲಿಸಲು ಆಸ್ಪತ್ರೆಯು ನರ್ಸುಗಳನ್ನು ತೀಕ್ಷ್ಣ ಪರೀಕ್ಷೆಯ ಮೂಲಕ ಆಯ್ಕೆ ಮಾಡುತ್ತದೆ. ಇಲ್ಲಿ ಕೆಲಸ ಮಾಡುವ ನರ್ಸುಗಳಿಗೆ ಕೆಲಸದ ಸೂಕ್ಷ್ಮವೂ ಆಳ ಅಗಲ ಗಂಭೀರತೆಯೂ ತಿಳಿದಿರಬೇಕು. ಜೊತೆಗೆ ಇಲ್ಲಿನ ಚಿಕಿತ್ಸೆಗನುಗುಣವಾದ ಕ್ರಿಯೆಗಳ ಕೌಶಲ್ಯವನ್ನು ರೂಢಿಸಿಕೊಂಡಿರಬೇಕು. ತಜ್ಞ ವೈದ್ಯರು ನೀಡುವ ಸೂಚನೆಗಳನ್ನು ತಕ್ಷಣ ಗ್ರಹಿಸಿ, ಅದರಂತೆ

ರೋಗಿಗೆ ಚಿಕಿತ್ಸೆ ನೀಡುವ ತತ್ಪರತೆ ಇರಬೇಕು ಇಲ್ಲಿನ ನರ್ಸುಗಳು ಸೋಮಾರಿಗಳಾಗಿಸಲು ಸಾಧ್ಯವೇ ಇಲ್ಲ. ಸೂಕ್ಷ್ಮ ಗ್ರಹಿಕೆ, ಶೀಘ್ರ ಕಾರ್ಯಾನುಷ್ಠಾನ, ಸಮಯ ಪ್ರಜ್ಞೆ ಇಲ್ಲಿ ಬಹು ಮುಖ್ಯ. ಜೊತೆಗೆ ಅಪಾರವಾದ ಕಾರುಣ್ಯವನ್ನು ಎದೆಯಲ್ಲಿ ತುಂಬಿಕೊಂಡಿರಬೇಕು. ರೋಗಿಯನ್ನು ಔಷಧೋಪಚಾರದ ಮೂಲಕ ಚಿಕಿತ್ಸೆ ನೀಡುವುದರ ಜೊತೆಗೆ, ಅವನ ದೈಹಿಕ ಸ್ವಚ್ಛತೆಯ ಬಗೆಗೂ ನಿಗಾ ವಹಿಸಬೇಕು. ರೋಗಿಗೆ ನೀಡುವ ಚಿಕಿತ್ಸೆ ಫಲಕಾರಿಯಾಗಬೇಕಾದರೆ ಅವರ ದೇಹದ ಸ್ವಚ್ಛತೆಯೂ ಮುಖ್ಯ. ಇಲ್ಲಿನ ನರ್ಸುಗಳು ರೋಗಿಯ ಮಲಮೂತ್ರಗಳನ್ನು ಯಾವ ಮುಜಗರ - ಅಸಹ್ಯವೂ ಇಲ್ಲದೆ ತೆಗೆದು ಸ್ವಚ್ಛಗೊಳಿಸುವುದನ್ನು ಸ್ವತಃ ಅನುಭವದಿಂದ ಕಂಡಿದ್ದೇನೆ. ಸಾಮಾನ್ಯವಾಗಿ ಮಲಮೂತ್ರಗಳನ್ನು ಸ್ವಚ್ಛಗೊಳಿಸಲು ನಾಲ್ಕನೆ ದರ್ಜೆಯ ನೌಕರರಾದ 'ಅಣ್ಣ' ಅಥವಾ 'ಅಕ್ಕ' ಇರುತ್ತಾರೆ. ಒಮ್ಮೊಮ್ಮೆ ಅವರು ಸ್ಥಳದಲ್ಲಿ ಇಲ್ಲದಾಗ ಅಥವಾ ಅವರು ಇತರೆ ರೋಗಿಗಳ ಸ್ವಚ್ಛತಾ ಕಾರ್ಯದಲ್ಲಿ ನಿರತರಾಗಿದ್ದಾಗ ನರ್ಸುಗಳೆ ಮಲಮೂತ್ರ ಗಳನ್ನು ತೆಗೆದು, ಡೈಪರ್ ಚಡ್ಡಿಗಳನ್ನು ಬದಲಿಸಿ ಸ್ವಚ್ಛಗೊಳಿಸುತ್ತಾರೆ. ಸಾಮಾನ್ಯವಾಗಿ ಇಲ್ಲಿನ ರೋಗಿಗಳಲ್ಲಿ ಅತಿ ಕಫ ಇರುತ್ತದೆ. ಅದು ಸದಾ ಬಾಯಿಯಿಂದ ಹೊರ ಸೂಸುತ್ತಿರುತ್ತದೆ; ಜೊಲ್ಲಿನ ರೂಪದಲ್ಲಿ ಹರಿಯುತ್ತಿರುತ್ತದೆ. ಶ್ವಾಸನಾಳ ಮತ್ತು ಶ್ವಾಸಕೋಶಗಳಲ್ಲಿ ಕಫ ಕಟ್ಟಿಕೊಂಡು ಉಸಿರಾಡಲು ತ್ರಾಸವಾಗುತ್ತಿರುತ್ತದೆ. ಆಗ ನರ್ಸುಗಳು ರೋಗಿಯನ್ನು ಸದಾ ಗಮನಿಸುತ್ತಾ, ಅವನ ಕಫವನ್ನು ಸೂಕ್ತ ಯಂತ್ರದ ಸಹಾಯದಿಂದ ತೆಗೆಯಬೇಕಾಗುತ್ತದೆ. ಈ ಕಫ ತೆಗೆಯುವ ಕ್ರಿಯೆ ನರ್ಸುಗಳಲ್ಲಿ ಸೂಕ್ಷ್ಮ ಕುಶಲತೆಯನ್ನು ಬಯಸುತ್ತದೆ. ಇಲ್ಲದಿದ್ದಲ್ಲಿ ಕಫ ತೆಗೆಯುವಾಗ ರೋಗಿಗೆ ನೋವಾಗುತ್ತದೆ. ಶ್ವಾಸನಾಳದಂಥ ಸೂಕ್ಷ್ಮ ಅಂಗಕ್ಕೆ ಗಾಯಗಳಾಗುವ ಅಪಾಯವೂ ಉಂಟು. ಕಫ ತೆಗೆಯುವ ಕೆಲಸದಲ್ಲಿ ತುಸು ಮೈಮರೆತರೂ ರೋಗಿಯ ಸ್ಥಿತಿ ಮತ್ತಷ್ಟು ಗಂಭೀರ ನೆಲೆಗೆ ಮುಟ್ಟಬಹುದು. ನನ್ನ ವಾಸ್ತವ್ಯದ ಅವಧಿಯಲ್ಲಿ ಬಹುಪಾಲು ನರ್ಸುಗಳಲ್ಲಿ ಕುಶಲತೆ ಇರುವುದನ್ನು ಗಮನಿಸಿದ್ದೇನೆ. ಎಲ್ಲೋ ಕೆಲವರು ಮಾತ್ರ ಅಡ್ಡಕಸುಬಿಗಳಿರುತ್ತಾರೆ.

ಇಲ್ಲಿನ ನರ್ಸುಗಳು ರಾತ್ರಿ ಪಾಳಿಯಲ್ಲಿ ಒಂದು ತಾಸು ಅದರಲ್ಲೂ ಸರದಿಯ ಮೇಲೆ ವಿಶ್ರಾಂತಿ ಪಡೆಯುತ್ತಾರೆ. ಆದರದು ನಿದ್ರಾಸಮಯವಲ್ಲ. ಅವರು ಮೈಯೆಲ್ಲಾ ಕಣ್ಣಾಗಿ ರೋಗಿಯನ್ನು, ಅವನ ಆರೋಗ್ಯದ ಏರು ಪೇರುಗಳನ್ನು ಗಮನಿಸುತ್ತಿರಬೇಕು. ರೋಗಿಗೆ ಹೊತ್ತು ಹೊತ್ತಿಗೆ ಔಷಧ ಆಹಾರ ನೀಡಬೇಕು. ಔಷಧ ನೀಡುವಲ್ಲಿ ಏರುಪೇರಾದರೆ ರೋಗಿಯ ಸ್ಥಿತಿ ಸುಧಾರಣೆಯಾಗುವುದು ತಡವಾಗುತ್ತದೆ ಅಥವಾ ಉಲ್ಬಣವಾಗುತ್ತದೆ. ಆಗ ಆಸ್ಪತ್ರೆ ಅಲ್ಲಿ ಸೇವಾನಿರತ ನರ್ಸುಗಳ ಮೇಲೆ ಕ್ರಮ

ಜರುಗಿಸುವ ಸಾಧ್ಯತೆಯಿರುತ್ತದೆ. ಪ್ರತಿಯೊಬ್ಬ ನರ್ಸು ತನ್ನ ಉಸ್ತುವಾರಿಯಲ್ಲಿರುವ ರೋಗಿಯ ದೈಹಿಕ ಚಲನಶೀಲತೆಯನ್ನು ಕಾಯ್ದುಕೊಂಡಿರಬೇಕು. ರೋಗಿ ಮಲಗುವ ಮುನ್ನ ಅವನ ಬೆನ್ನು, ಕುಂಡಿ ಮತ್ತಿತರ ಭಾಗಗಳಿಗೆ ಟಾಲ್ಕಾಂ ಪೌಡರ್ ಹಾಕಿ ಮೃದುವಾಗಿ ತಾಡನ ಮಾಡಬೇಕಾಗುತ್ತದೆ. ಬೆಳಿಗ್ಗೆ ಅವನ ಮಲ ಮೂತ್ರಾದಿಗಳನ್ನು ಸ್ವಚ್ಛಗೊಳಿಸಿ "ಈಸಿಬಾತ್" ನೀಡಬೇಕಾಗುತ್ತದೆ.

ನಾನು ಎಂಐಸಿಯುವಿನ ಹೆಚ್‌ಡಿಯುವಿನಲ್ಲಿದ್ದಾಗ 'ಕೆ' ಎಂಬ ಬ್ರದರ್ ನನ್ನನ್ನು ನೋಡಿಕೊಳ್ಳಲು ನಿಯುಕ್ತನಾಗಿದ್ದ. ನಾನು ಕಂಡ ಚಾಣಾಕ್ಷ ನರ್ಸು ಆತ. ಆತನಿಗೆ ಕನ್ನಡ, ತಮಿಳು, ಮಲೆಯಾಳಿ, ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳು ಸುಲಲಿತವಾಗಿ ಬರುತ್ತಿದ್ದವು. ಆತ ಯಾವಾಗಲೂ ಸಿಸ್ಟರ್‌ಗಳ ಜೊತೆ ಅವರವರ ಮಾತೃಭಾಷೆಯಲ್ಲಿ ಮಾತನಾಡಿಕೊಂಡು ಕಾಲಕಳೆಯುತ್ತಿದ್ದ. ನಾನು ಹೆಚ್‌ಡಿಯುಗೆ ಬಂದು ಸೇರುವ ಹೊತ್ತಿಗೆ ತುಸು ಸುಧಾರಣೆಗೊಂಡಿದ್ದೆ. ಆದರೂ ಹೊತ್ತು ಹೊತ್ತಿಗೆ ಔಷಧ ನೀಡುವ, ಸಕ್ಕರೆ ಮತ್ತು ರಕ್ತದೊತ್ತಡಗಳನ್ನು ಪರೀಕ್ಷಿಸಿ ಕೇಸ್‌ಶೀಟಿನಲ್ಲಿ ದಾಖಲಿಸುವ ಕೆಲಸ ಮಾಡಬೇಕಿತ್ತು. ಆದರೆ 'ಕೆ' ಯಾವುದನ್ನೂ ಸರಿಯಾಗಿ ಮಾಡುತ್ತಿರಲಿಲ್ಲ. ನನಗೆ ಸರಿ ರಾತ್ರಿ ಎರಡು ಗಂಟೆಗೆ ಮಾತ್ರೆ ನೀಡಬೇಕಿತ್ತು, ಆದರೆ ಅವನು ಆ ಮಾತ್ರೆಯನ್ನೇ ನೀಡುತ್ತಿರಲಿಲ್ಲ. ಆದರೆ ನೀಡಲಾಗಿದೆಯೆಂದು ಬೆಳಿಗ್ಗೆ ಕೇಸ್‌ಶೀಟಲ್ಲಿ ದಾಖಲು ಮಾಡಿರುತ್ತಿದ್ದ.

ಇಂಥ ಒಂದಿಬ್ಬರು ನರ್ಸುಗಳು ಇದ್ದರು. ಕೃತಿಗಿಂತ ಮಾತು ಅಧಿಕ ಎನ್ನುವಂತೆ ತಮ್ಮ ಮಾತಿನ ಮೋಡಿಯ ಮೂಲಕವೇ ಇತರ ನರ್ಸುಗಳನ್ನು ಓಲೈಸಿಕೊಂಡು ಅವರಿಂದ ಕೆಲಸ ಮಾಡಿಸಿಕೊಳ್ಳುತ್ತಿದ್ದವರಿಗೇನು ಕಡಿಮೆಯಿರಲಿಲ್ಲ. ಇಂಥ ಮೈಗಳ್ಳ, ಸೇವಾವಿಮುಖಿ ನರ್ಸುಗಳ ಬಗ್ಗೆ ದೂರು ನೀಡಲು ರೋಗಿಗಳು ದಿಗಿಲು ಬೀಳುತ್ತಿದ್ದರು. ಕಾರಣ - ಎಲ್ಲಿ ನರ್ಸುಗಳು ನೀಡಬಾರದ ಔಷಧ ನೀಡಿ, ರೋಗ ಎಲ್ಲಿ ಉಲ್ಬಣವಾಗುತ್ತದೊ ಎಂಬ ಭಯ!

ಇಲ್ಲಿ ನರ್ಸುಗಳು ಅತ್ಯಂತ ಒಗ್ಗಟ್ಟಿನಿಂದ ಕೆಲಸ ಮಾಡುವುದನ್ನು ಗಮನಿಸಿದ್ದೇನೆ. ತುರ್ತು ಬಿದ್ದಲ್ಲಿ ಒಬ್ಬರ ಸಹಾಯಕ್ಕೆ ಮತ್ತೊಬ್ಬರು ಧಾವಿಸುತ್ತಿದ್ದರು. ಅವರು ಮನುಷ್ಯರಾದ್ದರಿಂದ ಅವರಲ್ಲೂ ಭಿನ್ನಭಿಪ್ರಾಯ - ವೈಮನಸ್ಯ ಬರಬಹುದು. ಆದರೆ ಅವರು ಅದನ್ನು ವೃತ್ತಿಯ ಜೊತೆ ತಳಕು ಹಾಕುತ್ತಿರಲಿಲ್ಲ. ಅವರು ಕೆಲಸ ಮಾಡುವಾಗ ಪರಸ್ಪರ ಛೇಡಿಸಿಕೊಂಡು ತಮಾಷೆ ಮಾಡಿಕೊಳ್ಳುತ್ತಿದ್ದರು. ಅವರು ತಮಾಷೆ - ಮಾತುಕತೆಗಳೆಲ್ಲವೂ ಸಮಾನ ಗೌರವದ ಎಲ್ಲೆಯನ್ನು ಮೀರಿ ಹೋಗುತ್ತಿರಲಿಲ್ಲ. ತಾವು ನೋಡಿದ ಸಿನೆಮಾ, ಭೇಟಿಯಾದ ಸ್ನೇಹಿತರ ಬಗ್ಗೆ ಮಾತುಗಳಿರುತ್ತಿದ್ದವು.

ಅವರೆಲ್ಲರೂ ಸುಶಿಕ್ಷಿತರು - ಲೋಕ ವ್ಯವಹಾರವನ್ನು ಬಲ್ಲವರು. ಹೊರಗಿನ ಪ್ರಪಂಚದ ಆಗು ಹೋಗುಗಳ ಅನಿವಾರ್ಯ ಭಾಗಗಳಿಂದ ಬಂದವರೇ ಆಗಿದ್ದರು. ಆದರೆ ಅವರು ರಾಜಕೀಯ ವ್ಯವಸ್ಥೆಯ ಬಗ್ಗೆಯಾಗಲೀ ಸಾಮಾಜಿಕ ಅಸಮಾನತೆಯ ಬಗ್ಗೆಯಾಗಲಿ ಮಾತನಾಡುವುದನ್ನು ನಾನು ಕೇಳಿಸಿಕೊಂಡಿಲ್ಲ.

ಎಂಐಸಿಯುನಲ್ಲಿದ್ದ ನರ್ಸುಗಳೆಲ್ಲರೂ ನರ್ಸಿಂಗ್ ಡಿಗ್ರಿಯನ್ನು ಮಾಡಿದವರಾಗಿದ್ದರು. ಬಿ.ಎಸ್‌ಸಿ ನರ್ಸಿಂಗ್ ಡಿಗ್ರಿ ಮುಗಿಸಲು ಅವರಿಗೆ ಕನಿಷ್ಠ ನಾಲ್ಕೈದು ಲಕ್ಷ ರೂಪಾಯಿಗಳು ಬೇಕಾಗುತ್ತಿತ್ತು. ಅವರ ಪೋಷಕರು ಸಾಲ ಸೋಲ ಮಾಡಿ ಓದಿಸಿದ್ದರು. ಒಬ್ಬ ಬ್ರದರ್ ನನಗೆ ಹೇಳಿದ: "ಇದು ತುಂಬಾ ಟಫ್ ಕೋರ್ಸು ಸಾರ್. ಔಷಧಗಳ ಬಗ್ಗೆ, ಇನ್ನಿತರ ಪ್ರೊಸೀಜರ್‌ಗಳ ಬಗ್ಗೆ ಎಂಬಿಬಿಎಸ್ ಮಾಡಿದವರಷ್ಟೇ ನಾವು ಕಲಿತಿರುತ್ತೇವೆ. ಆದರೆ ಓದು ಮುಗಿಸಿದ ಮೇಲೆ, ಕೆಲಸಕ್ಕೆ ಸೇರಿದ ಮೇಲೆ ಭ್ರಮೆ ನಿರಶನವಾಗುತ್ತದೆ. ಈ ಕೆಲಸ ಮಾಡಲು ನಾವು ಇಷ್ಟು ಕಷ್ಟ ಪಡಬೇಕಾಗಿತ್ತೆ? ಆಸ್ಪತ್ರೆಗಳು ಅತ್ಯಂತ ಕಡಿಮೆ ಸಂಬಳ ನೀಡುತ್ತವೆ. ಎಂಟು ಗಂಟೆಗೂ ಮೀರಿ ದುಡಿಸಿಕೊಳ್ಳುತ್ತವೆ. ಆದರೆ ಇತರೆ ಸೌಲಭ್ಯಗಳು ಅಷ್ಟಕಷ್ಟೆ. ಮಾಮೂಲಿ ಡಿಗ್ರಿ ಮಾಡಿದವರು ನಮಗಿಂತ ಕಡಿಮೆ ಖರ್ಚುಮಾಡಿ ಓದಿರುತ್ತಾರೆ. ಅವರಿಗೂ ಆರೇಳು ಸಾವಿರ ರೂಪಾಯಿಗಳ ಕೆಲಸ ಸಿಗುತ್ತದೆ. ನಮ್ಮಷ್ಟು ಕೆಲಸವಿರುವುದಿಲ್ಲ. ಇಲ್ಲಿ ಕೆಲಸದ ಜೊತೆಗೆ ರಿಸ್ಕ್ ಹೆಚ್ಚಿರುತ್ತದೆ. ನಾವು ಸಾವು ಬದುಕಿನ ನಡುವೆ ಹೋರಾಡುತ್ತಿರುವ ರೋಗಿಯ ಜೊತೆ ವ್ಯವಹರಿಸುತ್ತಿರುತ್ತೇವೆ. ಹೆಚ್ಚು ಕಡಿಮೆಯಾದರೆ ತಲೆಗೆ ಬರುತ್ತದೆ."

ಅವನು ತಡೆ ತಡೆದು ಮತ್ತೆ ಹೇಳಿದ: "ಕೆಲಸ ಎಷ್ಟು ರಿಸ್ಕ್ ಎನ್ನುವುದರ ಬಗ್ಗೆ ಹೇಳುತ್ತೇನೆ ಸಾರ್. ಡಾಕ್ಟರ್‌ಗಳು 'ಇಂಥ ಔಷಧ ನೀಡಿ' ಎಂದು ಕೇಸ್‌ಶೀಟಲ್ಲಿ ಬರೆದು ಹೋಗಿ ಬಿಡುತ್ತಾರೆ. ಅಷ್ಟೇ ಅವರ ಕೆಲಸ. ನಾವು ಔಷಧಕ್ಕೆ ಕೂಡಲೇ ಇಂಡೆಂಟ್ ಮಾಡುತ್ತೇವೆ. ಆದರೆ ಫಾರ್ಮಸಿಯಲ್ಲಿ ಆ ಔಷಧ ಇರುವುದಿಲ್ಲ. ಅವನು ಸರಬರಾಜು ಮಾಡಲು ನಿಧಾನವಾಗುತ್ತದೆ. ಆಗ ರೋಗಿಗೆ ಸಮಯಕ್ಕೆ ಸರಿಯಾಗಿ ಔಷಧ ನೀಡಲಾಗುವುದಿಲ್ಲ. ಮತ್ತೆ ಕೆಲವು ಸಂದರ್ಭದಲ್ಲಿ ನಾವು ಇಂಡೆಂಟ್ ಮಾಡಿದ ಔಷಧಿಯನ್ನೇ ಬೇರೆ ಬ್ರಾಂಡ್ ನೇಮ್‌ನಲ್ಲಿರುವುದನ್ನು ನೀಡುತ್ತಾರೆ. ಅದನ್ನು ನಾವು ರೋಗಿಗಳಿಗೆ ನೀಡುತ್ತೇವೆ. ಆದರೆ ಆ ವಿಷಯ ಡಾಕ್ಟರ್‌ಗಳಿಗೆ ಗೊತ್ತಾದಾಗ, ಅವರು ನಮ್ಮನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ"

ಅವನ ಮಾತಿನಲ್ಲಿ ಸತ್ಯವಿತ್ತು. ಎಷ್ಟೋ ಸಾರಿ ನನಗೆ ಸಮಯಕ್ಕೆ ಸರಿಯಾಗಿ ಮಾತ್ರೆ ನೀಡದಿದ್ದಾಗ ನರ್ಸುಗಳು ಹೇಳುತ್ತಿದ್ದರು: "ಇಂಡೆಂಟ್ ಮಾಡಿದ್ದೇವೆ. ಔಷಧ

ಇನ್ನೂ ಬಂದಿಲ್ಲ". ಈ ವಿಷಯವನ್ನು ಆಡಳಿತ ವ್ಯವಸ್ಥೆ ಸರಿಪಡಿಸಬೇಕಾಗಿತ್ತು. ಅದು 'ತುಸು ಅಡ್ಜೆಸ್ಟ್ ಮಾಡಿಕೊಂಡು ಹೋಗಿ' ಎಂದು ಬುದ್ಧಿವಾದ ಹೇಳುತ್ತಿತ್ತಂತೆ. ಈ ಸಮಸ್ಯೆಯ ಸತ್ಯವನ್ನರಿತ ಕೆಲವು ಡಾಕ್ಟರ್‌ಗಳು ಸದರಿ ಔಷಧದ ಬೇರೆ ಬ್ರಾಂಡ್ ಉತ್ಪಾದಿಸುವ ಔಷಧಗಳನ್ನು ಬರೆದುಕೊಡುತ್ತಿದ್ದರು. ಆದರೆ ಕೆಲವರು ತಾವು ಬರದುಕೊಟ್ಟದ್ದೇ ಆಗಬೇಕೆಂದು ತಿಳಿಸುತ್ತಿದ್ದರು. ಕಾಯಿಲೆ ಗುಣವಾಗಲು ತಡವಾಗುವುದಕ್ಕೆ ಕಳಪೆ ಬ್ರಾಂಡ್‌ಗಳೂ ಕಾರಣವೆಂದು ಸಕಾರಣವಾಗಿ ವಿವರಿಸುತ್ತಿದ್ದರು.

ನನಗೆ ಆಶ್ಚರ್ಯ ತಂದ ಸಂಗತಿ ಎಂದರೆ- ಈ ನರ್ಸುಗಳೆಲ್ಲರೂ ಸಮಾಜದ ದುಡಿಯುವ ವರ್ಗದಿಂದ ಬಂದವರಾಗಿದ್ದರು. ಸಮಾಜದ ಮೇಲು ಜಾತಿಗಳಿಂದ ಬಂದವರು ಅಪರೂಪ. ಅಲ್ಲೊಬ್ಬ ಇಲ್ಲೊಬ್ಬ ಒಕ್ಕಲಿಗ, ಲಿಂಗಾಯಿತ ಜಾತಿಯವರನ್ನು ಬಿಟ್ಟರೆ ಮಿಕ್ಕವರೆಲ್ಲರೂ ಶ್ರಮಿಕ ಸಮುದಾಯಗಳಿಂದ ಬಂದವರೇ ಆಗಿದ್ದರು. ಬ್ರಾಹ್ಮಣರಂತೂ ಇಲ್ಲವೇ ಇಲ್ಲ. ಒಂದಿಬ್ಬರು ಮುಸಲ್ಮಾನ್ ನರ್ಸುಗಳು ನನ್ನ ಅನುಭವಕ್ಕೆ ಬಂದರು. ಅವರಲ್ಲೊಬ್ಬ ಪಾಳಿಯ ಗುಂಪಿನ ನಾಯಕನೂ ಆಗಿದ್ದ. ಆತ ತುಸು ಒರಟ. ನನ್ನ ದೇಹದಿಂದ ಪರೀಕ್ಷೆಗೆಂದು ರಕ್ತ ತೆಗೆಯುವ ಸಂದರ್ಭದಲ್ಲಿ ನಯವಾಗಿ ಕೆಲಸ ಮಾಡದೆ ನನಗೆ ವಿಪರೀತ ನೋವುಂಟು ಮಾಡುತ್ತಿದ್ದ. ಆತ ಕೊನೆ ಕೊನೆಗೆ ನನಗೆ ತೀರಾ ಆತ್ಮೀಯನೂ ಆದ.

ಕ್ರಿಶ್ಚಿಯನ್ ಸಿಸ್ಟರ್‌ಗಳು ಇದ್ದರು. ಅವರಲ್ಲೊಬ್ಬರು ಗುಂಪಿನ ನಾಯಕರೂ ಆಗಿದ್ದರು. ಆಕೆಯ ಗಂಭೀರವಾದ ವ್ಯಕ್ತಿತ್ವ ನನಗೆ ಈಗಲೂ ನೆನಪಿಗೆ ಬರುತ್ತಿದೆ. ನನ್ನನ್ನು ನೋಡಿ ಕಿರುನಗೆಯನ್ನು ಸೂಸಿ ಮಾತನಾಡಿಸುತ್ತಿದ್ದ ರೀತಿ ಆಹ್ಲಾದಕರವಾಗಿತ್ತು. ಈ ಸಿಸ್ಟರ್‌ಗಳಲ್ಲಿ ಒಬ್ಬಾಕೆ ನನಗೆ ತುಂಬಾ ಹಚ್ಚಿಕೊಂಡಿದ್ದಳು. ಅವಳ ಹೆಸರು ಪ್ರಿಯಾಂಕ ಥಾಮಸ್ ಎಂದು ಇರಬೇಕು. ಅವಳು ಮಲೆಯಾಳಿ. ಒಮ್ಮೆ ನಾನು ಎರಡಕ್ಕೆ ಹೋಗುವಂತಾಗುತ್ತಿದೆ ಎಂದು ಹೇಳಿದೆ. ಅದಕ್ಕವಳು "ಡೈಫರ್‌ನಲ್ಲೇ ಮಾಡಿ ಸಾರ್, ನಾನು ಕ್ಲೀನ್ ಮಾಡುತ್ತೇನೆ" ಎಂದಳು. ಅವಳು ಅತ್ಯಂತ ತೆಳುವಾಗಿದ್ದಳು. ಒಳ್ಳೆಯ ಬಣ್ಣ. ಒಮ್ಮೆ ಅವಳು ಅಳುತ್ತಾ ನನ್ನ ಬಳಿ ಬಂದು "ನನ್ನ ತಾತ ತೀರಿ ಹೋಗಿದ್ದಾರೆ. ನಾನು ಈಗಲೇ ಊರಿಗೆ ಹೋಗುತ್ತೇನೆ" ಎಂದಳು. ನಾನು ನನ್ನ ಕೈಸನ್ನೆಗಳ ಮೂಲಕ ಸನ್ನೆ ಮಾಡಿ ಸಮಾಧಾನ ಮಾಡಿದೆ. ಅವಳು ಕೇರಳಕ್ಕೆ ಹೋದವಳು ಒಂದು ವಾರದ ನಂತರ ಹಿಂತಿರುಗಿ ಕೆಲಸಕ್ಕೆ ಬಂದಳು. ಆಗ ಅವಳ ನಗು ಅವಳ ಮುಖದ ಮೇಲೆ ನಲಿಯುತ್ತಿರುವುದನ್ನು ಕಂಡು ನನಗೆ ಸಮಾಧಾನ ವಾಯಿತು.

ಅವಳು ಎಂಐಸಿಯುವಿನಲ್ಲಿ ಸದಾ ಸಾವನ್ನು ನೋಡಿದ್ದವಳು. ಆದರೆ ದೂರದ ಊರಲ್ಲಿ ತನ್ನ ತಾತ ಸತ್ತು ಹೋಗಿದ್ದಾನೆಂದು ಸುದ್ದಿ ಬಂದಾಗ ದುಃಖ ಅವಳನ್ನು

ಆವರಿಸಿಕೊಂಡಿತ್ತು. ಇದನ್ನೇ ರಕ್ತಸಂಬಂಧ ಎಂದು ಕರೆಯುವುದು. ಕಂಡವರ ಸಾವಲ್ಲಿ ನಾವು ಸಾಧಿಸಬಹುದಾದ ನಿರ್ಲಿಪ್ತತೆಯನ್ನು ನಮ್ಮವರ ಸಾವಿನಲ್ಲಿ ಸಾಧಿಸಲು ಸಾಧ್ಯವಾಗದಿರಲು ಇದೇ ಕಾರಣವೆಂದು ನಾನು ತಿಳಿಯುತ್ತೇನೆ.

ಇಲ್ಲಿ ಕಾರ್ಯನಿರ್ವಹಿಸುವ ಬಹುಪಾಲು ಸಿಸ್ಟರ್‌ಗಳು ಮಲೆಯಾಳಿಗಳು. ಬಹಳ ಜನ ಇಲ್ಲೇ ನರ್ಸಿಂಗ್ ಡಿಗ್ರಿ ಪಡೆದು ಇಲ್ಲೇ ಕೆಲಸಕ್ಕೆ ಸೇರಿರುತ್ತಾರೆ. ಇಲ್ಲಿ ಒಂದೆರಡು ವರ್ಷ ಕೆಲಸ ಮಾಡಿ, ಅನುಭವ ಸಂಪಾದನೆ ಮಾಡಿ ಕೇರಳಕ್ಕೆ ವಾಪಸಾಗುತ್ತಾರೆ. ಬಹುಪಾಲು ಕೇರಳಿಗರು ವಿದೇಶಗಳಿಗೆ ಹಾರುತ್ತಾರೆ. ಇಲ್ಲಿ ಜೀವಮಾನವೆಲ್ಲಾ ಸಂಪಾದನೆ ಮಾಡುವ ಹಣವನ್ನು ಒಂದೆರಡು ವರ್ಷಗಳಲ್ಲಿ ಮಾಡುತ್ತಾರೆ. ಮುಸ್ಲಿಂ ದೇಶದಲ್ಲಿ, ಯೂರೋಪಿನಲ್ಲಿ ಭಾರತದ ನರ್ಸುಗಳಿಗೆ ಒಳ್ಳೆಯ ಬೇಡಿಕೆ ಇದೆಯಂತೆ. ಆದರೆ ಯೂರೋಪಿನಲ್ಲಿ ಒಂದು ಪ್ರವೇಶ ಪರೀಕ್ಷೆ ಮಾಡುತ್ತಾರೆ. ಅದನ್ನು ಇವರು ಮಾಡಬೇಕು ಅಷ್ಟೆ. ಮಲೆಯಾಳಿಗಳು ಕಷ್ಟಪಟ್ಟು ಓದಿ ಆ ಪರೀಕ್ಷೆಯನ್ನು ಪಾಸೂ ಮಾಡುತ್ತಾರಂತೆ, "ಆದರೆ ನಮ್ಮವರು ಕರ್ನಾಟಕ ಬಿಟ್ಟು ಹೊರಹೋಗಲು ಇಷ್ಟಪಡುವುದಿಲ್ಲ. ಕಡಿಮೆ ವೇತನ ಬಂದರೂ ಸರಿಯೆ. ಇಲ್ಲೇ ಇರಲು ಇಷ್ಟಪಡುತ್ತಾರೆ" ಎಂದು ಹಿರಿಯ ಬ್ರದರ್ ಒಬ್ಬರು ಹೇಳಿದರು.

ಎಂಐಸಿಯುವಿನಲ್ಲಿ ಮೂರು ಪಾಳಿಗಳಲ್ಲಿ ನರ್ಸುಗಳು ಕೆಲಸ ಮಾಡಬೇಕಾಗುತ್ತದೆ. ಹಗಲಿನ ಎರಡು ಪಾಳಿಗಳು ಕಡಿಮೆ ಅವಧಿಯವು. ಆರರಿಂದ ಏಳು ಗಂಟೆಯೊಳಗೆ ಕೆಲಸ ಮುಗಿದು ಹೋಗುತ್ತದೆ. ಆದರೆ ರಾತ್ರಿ ಪಾಳಿಯ ಅವಧಿಯು ಹೆಚ್ಚು. ಸುಮಾರು ಹನ್ನೊಂದರಿಂದ ಹನ್ನೆರಡು ಗಂಟೆ ಬರುತ್ತದೆ. ರಾತ್ರಿ ಪಾಳಿಯಲ್ಲಿ ಕೆಲಸವೂ ಹೆಚ್ಚು. ರಾತ್ರಿಯೆಲ್ಲಾ ಎಚ್ಚರದಿಂದಿರಬೇಕು. ರೋಗಿಗೆ ಮಲಗುವ ಮುನ್ನ ಪೌಡರ್ ಹಾಕಿ ತಾಡನಮಾಡಬೇಕು. ಬೆಳಗಿನ ಜಾವದಲ್ಲಿ ರೋಗಿಗೆ 'ಬಾತ್' ಕೊಡಬೇಕು.

ಎಲ್ಲ ನರ್ಸುಗಳಿಗೂ ಸರದಿಯ ಮೇಲೆ ಪಾಳಿಗಳು ಬರುತ್ತವೆ. ಹೀಗಾಗಿ ಕೆಲಸ ಹೆಚ್ಚು ಕಡಿಮೆ ಎಂದು ಗೊಣಗುವಂತಿರಲಿಲ್ಲ. ನರ್ಸುಗಳು ಪಾಳಿಗೆ ಬಂದಾಗ ಲಘು-ಊಟ ತರುತ್ತಾರೆ. ರಾತ್ರಿ ಹನ್ನೊಂದು - ಹನ್ನೆರಡರ ವೇಳೆಯಲ್ಲಿ ಬಹುಪಾಲು ಮಂದಿ ತಾವು ತಂದಿರುವ ಆಹಾರವನ್ನು ಹಂಚಿಕೊಂಡು ತಿನ್ನುತ್ತಾರೆ.

ನಾನು ಎಂಐಸಿಯುವಿನಲ್ಲಿದ್ದ ಅವಧಿಯಲ್ಲಿ ಕ್ರಿಸ್‌ಮಸ್ ಮತ್ತು ಹೊಸ ವರ್ಷದ ಮೊದಲ ದಿನಗಳು ಬಂದವು. ರಾತ್ರಿ ಪಾಳಿಯ ನರ್ಸುಗಳು ಕ್ರಿಸ್‌ಮಸ್ ದಿನದಂದು ನಡುರಾತ್ರಿ ಕೇಕ್ ಕತ್ತರಿಸಿ ಹಬ್ಬ ಆಚರಿಸಿದರು. ಕೇಕ್ ತಿಂದು ಸಂತಸಪಟ್ಟರು. ಅದೇ ರೀತಿ ಹೊಸ ವರ್ಷ ದಿನಾಚರಣೆಯನ್ನು ಬಹು ಸಡಗರದಿಂದ

ಆಚರಿಸಿದರು. ಆ ದಿನ ಕೇಕ್‌ನ ಜೊತೆಯಲ್ಲಿ ಬಿರಿಯಾನಿಯೂ ಇತ್ತು. ರಾತ್ರಿ ಪಾಳಿ ಮಾಡುವ ಗುಂಪಿನ ನಾಯಕನ ಮುಂದಾಳತ್ವದಲ್ಲಿ ಕೇಕ್ ಮತ್ತು ಬಿರಿಯಾನಿಗಳು ಅಣಿಗೊಂಡಿದ್ದವು. ಬ್ರದರ್ ಸಿಸ್ಟರ್‌ಗಳು ನಡುರಾತ್ರಿ ವೇಳೆಯಲ್ಲಿ ತಮ್ಮ ಸುತ್ತ ಇರುವ ಗಂಭೀರ ಸ್ವರೂಪದ ಸ್ಥಿತಿಯಲ್ಲಿರುವ ರೋಗಿಗಳ ಮೇಲೆ ಯಾವ ದುಷ್ಪರಿಣಾಮವೂ ಉಂಟಾಗದ ಹಾಗೆ, ನಗುವಿನ ವಾತಾವರಣವನ್ನು ಪಸರಿಸಿ ಅವರು ಸಂಭ್ರಮಿಸಿದರು. ಅವರ ಈ ಸಂಭ್ರಮದಲ್ಲಿ ಡ್ಯೂಟಿ ಡಾಕ್ಟರ್‌ಗಳು ಕೂಡ ಭಾಗ ವಹಿಸುತ್ತಿದ್ದರು. ನಾನು ಅವಲೋಕಿಸಿದ ಪ್ರಕಾರ - ಈ ಸಂಭ್ರಮಾಚರಣೆಯ ಸಂದರ್ಭದಲ್ಲಿ ರೋಗಿಗಳನ್ನು ಸ್ವಲ್ಪವೂ ಅವಗಣನೆ ಮಾಡದೆ, ಸಮಯಕ್ಕೆ ಸರಿಯಾಗಿ ನೀಡಬೇಕಾದ ಔಷಧೋಪಚಾರಗಳನ್ನು ನೀಡುತ್ತಿದ್ದರು.

ನರ್ಸಿಂಗ್ ಸೇವೆಯಲ್ಲಿ ಗಂಡಸರಿಗಿಂತ ಹೆಂಗಸರು ಉತ್ತಮ; ಹೆಂಗಸರಲ್ಲಿ ಕರುಣಾಮಯಿಯಾದ ಹೃದಯವಿರುತ್ತದೆ; ತಾಯ್ತನವಿರುತ್ತದೆ. ಆದ್ದರಿಂದ ಈ ಸೇವೆಗೆ ಹೆಂಗಸರೇ ಸರಿ ಎಂಬ ತಿಳಿವಳಿಕೆಯಿದೆ. ಆದರೆ ನಾನು ಇಲ್ಲಿ ಬಂದು ಚಿಕಿತ್ಸೆ ಪಡೆದ ಮೇಲೆ ನನ್ನ ತಿಳಿವಳಿಕೆಯನ್ನು ಬದಲಾಯಿಸಿಕೊಳ್ಳಬೇಕಾಯಿತು. ನಾನು ಐಸಿಯು ಮತ್ತು ವಾರ್ಡ್‌ನಲ್ಲಿದ್ದಾಗ ಬ್ರದರ್ ಸಿಸ್ಟರ್‌ಗಳಿಬ್ಬರೂ ಸೇವೆ ಮಾಡಿದ್ದಾರೆ. ಹೆಂಗಸರು ಸೇವಾ ಮನೋಧರ್ಮದವರು. ಈ ಬಗ್ಗೆ ಅನುಮಾನವಿಲ್ಲ. ಆದರೆ ರೋಗಿಯ ಸ್ಥಿತಿ ಗಂಭೀರವಾದಾಗ, ತತ್‌ಕ್ಷಣ ನೀಡಬೇಕಾದ ತುರ್ತು ಚಿಕಿತ್ಸೆಯ ಸಂದರ್ಭದಲ್ಲಿ ಸಿಸ್ಟರ್‌ಗಳು ಅಧೀರರಾಗುತ್ತಿದ್ದರು. ಇಂಗ್ಲಿಷ್ ಭಾಷೆಯಲ್ಲಿ 'ಕ್ರೈಸಿಸ್ ಮ್ಯಾನೇಜ್ ಮೆಂಟ್' ಅನ್ನುತ್ತಾರಲ್ಲ, ಅದರಲ್ಲಿ ಅವರು ಗೊಂದಲಕ್ಕೀಡಾಗುತ್ತಿದ್ದರು. ತುರ್ತು ತೀರ್ಮಾನ ಮತ್ತು ತುರ್ತು ಚಿಕಿತ್ಸೆಯ ಸಂದರ್ಭದಲ್ಲಿ ಅವರು ಬ್ರದರ್‌ಗಳ ನೆರವನ್ನು ಪಡೆಯುತ್ತಿದ್ದರು. ಇಂಥ ಗಂಭೀರ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ಬ್ರದರ್‌ಗಳು ತಜ್ಞತೆಯನ್ನು ಹೊಂದಿದ್ದರು. ಪರಿಸ್ಥಿತಿ ಬಿಗಡಾಯಿಸಿದಾಗ ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳುತ್ತಿದ್ದರು. ಇವರೆಲ್ಲರ ಮಾರ್ಗದರ್ಶನಕ್ಕೆ ಡ್ಯೂಟಿ ಡಾಕ್ಟರ್‌ಗಳು ಇದ್ದೇ ಇರುತ್ತಿದ್ದರು. ಆದರೆ ಅನೇಕ ಡ್ಯೂಟಿ ಡಾಕ್ಟರ್‌ಗಳಿಗಿಂತ ಕೆಲವು ಹಿರಿಯ ನರ್ಸುಗಳು ಹೆಚ್ಚು ತಿಳಿವಳಿಕೆಯಿಂದ ಕೂಡಿದ್ದರು ಎಂದು ಹೇಳಿದರೆ ತಪ್ಪಾಗಲಾರದು.

ಇಂದು ಆಸ್ಪತ್ರೆಗಳಲ್ಲಿ - ಮುಖ್ಯವಾಗಿ ಹೈಟೆಕ್ ಹೊಂದಿರುವ ದೊಡ್ಡ ಆಸ್ಪತ್ರೆಗಳಲ್ಲಿ ಬ್ರದರ್ - ಸಿಸ್ಟರ್‌ಗಳು ಸಮಸಂಖ್ಯೆಯಲ್ಲಿದ್ದಾರೆ. ಈ ಹಿಂದೆ ಬರೀ ಹೆಂಗಸರು ಮಾತ್ರ ಈ ಸೇವೆಗೆ ಬರುತ್ತಿದ್ದರು. ಈಗ ಕಾಲ ಬದಲಾಗಿದೆ. ಗಂಡಸರು ಹೆಂಗಸರ ಸಮನಾಗಿ ಈ ಸೇವೆಗೆ ಬರುತ್ತಿದ್ದಾರೆ. ಅದಕ್ಕೆ ಕಾರಣ: ನಮ್ಮ ಸಮಾಜದಲ್ಲಿ ವಿಪುಲವಾಗಿ ಪ್ರಾರಂಭಗೊಳ್ಳುತ್ತಿರುವ ಖಾಸಗಿ ಆಸ್ಪತ್ರೆಗಳು. ಇದರಿಂದಾಗಿ ಈ

ಕ್ಷೇತ್ರದಲ್ಲಿ ವಿಪುಲವಾಗಿ ಉದ್ಯೋಗ ಸೃಷ್ಟಿಯಾಗುತ್ತಿವೆ. ಸಾಂಪ್ರದಾಯಿಕ ಪದವಿಗಳು - ವೃತ್ತಿಪರ ಕೋರ್ಸುಗಳಿಗೆ ದಾಖಲಾಗುತ್ತಿದ್ದ ಗಂಡಸರು ಈಗ ನರ್ಸಿಂಗ್ ಡಿಗ್ರಿ ಪಡೆಯಲು ಹೆಚ್ಚು ಆಸಕ್ತಿವಹಿಸುತ್ತಿದ್ದಾರೆ. ವೇತನ ತುಸು ಹೆಚ್ಚು ಕಡಿಮೆಯಾದರೂ ನರ್ಸಿಂಗ್ ಪದವಿ ಪಡೆದ ಮೇಲೆ ಕೆಲಸ ಗ್ಯಾರಂಟಿಯಾಗಿ ಸಿಕ್ಕೇ ಸಿಗುತ್ತದೆ.

ನರ್ಸಿಂಗ್ ಡಿಗ್ರಿ ಪಡೆದ ಮೇಲೆ ಕೆಲಸವಂತು ಸಿಗುತ್ತದೆ, ನಿಜ. ಆದರೆ ಆಸ್ಪತ್ರೆಯ ಆಡಳಿತ ವರ್ಗ ನರ್ಸುಗಳನ್ನು ಗೌರವಯುತವಾಗಿ ನಡೆಸಿಕೊಳ್ಳುತ್ತಿವೆ ಎಂಬುದು ಮಾತ್ರ ಭ್ರಮೆಯ ಮಾತು. ನರ್ಸುಗಳಿಂದ ಗರಿಷ್ಠ ಸೇವೆಯನ್ನು ಪಡೆಯುತ್ತವೆ. ನಿಯಮಾನುಸಾರ ನೀಡಬೇಕಾದ ರಜೆ ಸೌಲಭ್ಯವನ್ನು ಕೆಲಸದ ಒತ್ತಡದ ನೆಪ ಹೇಳಿ ನಿರಾಕರಿಸುತ್ತವೆ. 'ರೋಗಿಗಳ ಸೇವೆಯೇ ಭಗವಂತನ ಸೇವೆ' ಎಂಬ ಸಾಂಪ್ರದಾಯಿಕ ಮಾತುಗಳನ್ನು ವೈಭವೀಕರಿಸಿ ದುಡಿಸಿಕೊಳ್ಳಲು ನೋಡುತ್ತವೆ. ಕಾನೂನು ಬಿಗಿಯಾಗಿರುವುದರಿಂದ ಪಿಎಫ್ ಸೌಲಭ್ಯ ನೀಡುತ್ತವೆ. ನರ್ಸುಗಳಿಗೆ ಕೆಲಸದ ಅಭದ್ರತೆ ಯಾವಾಗಲೂ ಕಾಡುತ್ತಿರುತ್ತದೆ. ತಮ್ಮ ಯಾವುದಾದರೂ ಒಂದು ತಪ್ಪು ತಮ್ಮನ್ನು ಕೆಲಸದಿಂದ ತೆಗೆಯಬಹುದು ಎಂಬ ಪ್ರಜ್ಞೆ ಯಾವಾಗಲೂ ಜಾಗೃತವಾಗಿರುವಂತೆ ಆಡಳಿತ ವರ್ಗಗಳು ನೋಡಿಕೊಳ್ಳುತ್ತವೆ.

ನಾನಿದ್ದ ಅವಧಿಯಲ್ಲಿ ಅಪೊಲೋ ಆಸ್ಪತ್ರೆ ಆಡಳಿತ ವರ್ಗವು ತನ್ನ ನೌಕರರಿಗೆ ಚಾಮುಂಡಿಬೆಟ್ಟದ ತಪ್ಪಲಲ್ಲಿರುವ ರೆಸಾರ್ಟ್ ಒಂದರಲ್ಲಿ ಪಾರ್ಟಿಯನ್ನು ಆಯೋಜಿಸಿತ್ತು. ರಾತ್ರಿ ಏಳರ ನಂತರ ಪ್ರಾರಂಭವಾದ ಈ ಪಾರ್ಟಿ ನಡುರಾತ್ರಿಯವರೆಗೆ ನಡೆಯಿತಂತೆ. ಆದರೆ ರಾತ್ರಿ ಪಾಳಿ ಇದ್ದ ನರ್ಸುಗಳು ಬೇಗ ಹೋಗಿ, ಬೇಗ ಊಟ ಮಾಡಿ ಬರಬೇಕಿತ್ತು. ಅದೇ ರೀತಿ ಬಂದರೂ ಕೂಡ. ಏಕೆಂದರೆ - ತೀವ್ರ ನಿಗಾ ಘಟಕದ ಕರ್ತವ್ಯವೇ ಅಂಥದು. ಕೆಲಸದ ಬಗ್ಗೆ ಉಡಾಫೆ ಮಾಡುವಂತಿಲ್ಲ. ಆ ಪಾರ್ಟಿಯ ಮಾರನೆಯ ದಿನ ಹಿರಿಯ ಬ್ರದರ್ ಒಬ್ಬ ಡ್ಯೂಟಿ ಡಾಕ್ಟರ್ ಬಳಿ ಹೇಳುತ್ತಿದ್ದ ಈ ಮಾತುಗಳು ನನ್ನ ಕಿವಿಗೆ ಬಿದ್ದವು: "ಪಾರ್ಟಿ ನೀಡಿದ್ದೇನೋ ಸರಿ. ನೌಕರರಲ್ಲಿ ಕೆಲಸದ ಬಗ್ಗೆ ಉತ್ಸಾಹ ಮೂಡಿಸುವ ಪ್ರಯತ್ನವಿದು. ನೌಕರರಿಗೆ ಸಂತೋಷವುಂಟಾದರೆ ಅವರು ನಿಷ್ಠೆಯಿಂದ ದುಡಿಯುತ್ತಾರೆ. ಹೆಚ್ಚು ದುಡಿದರೆ ಆಸ್ಪತ್ರೆಗೆ ಹೆಚ್ಚು ಲಾಭ. ಆದರೆ ಆಸ್ಪತ್ರೆ ಪಾರ್ಟಿಯನ್ನು ಅರೇಂಜ್ ಮಾಡಿದ ರೀತಿ ಸರಿಯಲ್ಲ. ಅದು ಕೆಳಗಿನ ನೌಕರರಿಗೆ ಅವಮಾನಮಾಡುವಂತಿತ್ತು. ನಾಲ್ಕನೇ ದರ್ಜೆ ನೌಕರರು, ನರ್ಸುಗಳು, ಇತರೆ ಗುಮಾಸ್ತ ವರ್ಗಕ್ಕೆ ಒಂದು ಊಟದ ವ್ಯವಸ್ಥೆ; ಆಸ್ಪತ್ರೆಯ ಅಧಿಕಾರವರ್ಗ, ಡಾಕ್ಟರ್‌ಗಳಿಗೆ ಮತ್ತೊಂದು ಕಡೆ ಊಟದ ವ್ಯವಸ್ಥೆ! ಈ ತಾರತಮ್ಯ ಯಾಕೆ ಬೇಕಿತ್ತು? ನಾವು ನಿಮಗಿಂತ ಕಡಿಮೆ ದರ್ಜೆಯವರು ಎಂದು

ಬೇರೆ ಮಾಡಿದಂತಾಗಲಿಲ್ಲವೆ? ಅದರಿಂದ ನಮ್ಮಂಥವರಿಗೆ ನೋವಾಗುವುದಿಲ್ಲವೆ?" ಬ್ರದರ್ ಮಾತುಗಳಲ್ಲಿ ನಮ್ಮ ವ್ಯವಸ್ಥೆಯಲ್ಲಿ ಜೀವಂತವಾಗಿರುವ ವರ್ಗ ತಾರತಮ್ಯ ಧೋರಣೆಯನ್ನು ಗುರುತಿಸಲಾಗಿತ್ತು. ಈ ಮಾತುಗಳನ್ನು ಕೇಳಿದ ಡ್ಯೂಟಿ ಡಾಕ್ಟರ್ ಯಾವ ಪ್ರತಿಕ್ರಿಯೆಯನ್ನೂ ನೀಡಲಿಲ್ಲ!

ಈ ಎಲ್ಲಾ ಅಂಶಗಳಿಂದಲೇ ಇರಬೇಕು. ನರ್ಸ್‌ಗಳು ಒಂದು ಆಸ್ಪತ್ರೆಯಲ್ಲೇ ಬಹಳ ದಿನಗಳನ್ನು ಕಳೆಯುವುದಿಲ್ಲ. ತಾವು ಪ್ರಸ್ತುತ ಕೆಲಸ ಮಾಡುತ್ತಿರುವ ಆಸ್ಪತ್ರೆಗಿಂತ ಬೇರೆ ಆಸ್ಪತ್ರೆ ನಾಲ್ಕೈದು ಸಾವಿರ ರೂಪಾಯಿ ವೇತನ ಹೆಚ್ಚು ನೀಡಿದರೆ, ಅಲ್ಲಿಗೆ ಹೋಗಿ ಸೇವೆಗೆ ಸೇರುತ್ತಾರೆ. ಇವರು ಯಾವುದೇ ಆಸ್ಪತ್ರೆಗೆ ಕೆಲಸಕ್ಕೆ ಸೇರಿದರೂ ಕಡ್ಡಾಯವಾಗಿ ಒಂದು ವರ್ಷ ಸೇವೆ ಸಲ್ಲಿಸಬೇಕೆಂಬ ಒಪ್ಪಂದವಾಗಿರುತ್ತದೆ. ಈ ಒಪ್ಪಂದದ ಹಿನ್ನೆಲೆಯಲ್ಲಿ, ನರ್ಸ್‌ಗಳು ನಡುವೆ ಕೆಲಸ ಬಿಟ್ಟುಹೋಗಬಹುದೆಂದು ಅವರ ಅಂಕಪಟ್ಟಿ ಮತ್ತಿತರ ಸರ್ಟಿಫಿಕೆಟ್‌ಗಳನ್ನು ತಮ್ಮ ಬಳಿ ಇಟ್ಟುಕೊಂಡಿರುತ್ತಾರೆ. ನರ್ಸ್‌ಗಳು ಒಂದು ವರ್ಷ ಕೆಲಸ ಮಾಡಿ, ಸರಿ ಇದ್ದರೆ ಅಲ್ಲೇ ಮುಂದುವರಿಯುತ್ತಾರೆ. ಇಲ್ಲದಿದ್ದಲ್ಲಿ ಒಂದು ತಿಂಗಳು ಮುಂಚಿತವಾಗಿ ಪತ್ರ ನೀಡಿ, ತಮ್ಮ ಸರ್ಟಿಫಿಕೆಟ್‌ಗಳನ್ನು ಮರಳಿ ಪಡೆದು ಬೇರೆಡೆ ಹಾರುತ್ತಾರೆ. ಇದು ವರ್ತಮಾನದ ಐಟಿಬಿಟಿ ಉದ್ಯೋಗಗಳು ಸೃಷ್ಟಿ ಮಾಡುವ ರೋಗ. ಆಡಳಿತ ವರ್ಗಕ್ಕೂ ನೌಕರ ಹೋದರೆ ಇನ್ನೊಬ್ಬ ಬರುತ್ತಾನೆ ಎಂಬ ಅಸಡ್ಡೆಯ ಧೋರಣೆ. ನೌಕರರಿಗೂ ತುಸು ಹೆಚ್ಚು ವೇತನ ದೊರೆತರೆ, 'ಕೆಲಸ ಮಾಡಲು ಎಲ್ಲಾದರೆ ಏನು?' ಎಂಬ ಧೋರಣೆ ಮೂಡಿದೆ. ಇದರಿಂದ ಆಡಳಿತ ವರ್ಗದ ಕಲ್ಯಾಣ ಬಹಳ ದಿನ ಇರುವುದಿಲ್ಲ ಮತ್ತು ನೌಕರರಿಗೆ ಹಣ ಮುಖ್ಯವಾಗಿ ಸೇವಾನಿಷ್ಠೆ ಕಡಿಮೆಯಾಗುತ್ತದೆ ಎಂಬ ಅರಿವು ಯಾರಲ್ಲೂ ಇದ್ದಂತೆ ತೋರುವುದಿಲ್ಲ. ಇಲ್ಲಿ ಒಂದು ರೀತಿಯ ನಾಯಿಕೊಡೆ ಸಂಸ್ಕೃತಿ ಉದ್ಭವವಾಗುತ್ತಿದೆ ಎನ್ನಿಸುತ್ತದೆ. ಅಪೊಲೋ ಆಸ್ಪತ್ರೆಯಲ್ಲಿದ್ದ ಬಹುಪಾಲು ನರ್ಸ್‌ಗಳು ಆಗಲೇ ಮೈಸೂರಿನ ಎಲ್ಲ ಆಸ್ಪತ್ರೆಗಳ ಅನುಭವ ಪಡೆದು ಬಂದಿದ್ದರು!

ಆದರೂ ಈ ನರ್ಸ್‌ಗಳ ಸೇವಾ ಮನೋಧರ್ಮ, ಪ್ರೀತಿ, ಕರುಣೆ; ರೋಗಿ ಗುಣವಾದಾಗ ಅವರ ಕಣ್ಣುಗಳಲ್ಲಿ ಕಾಣುತ್ತಿದ್ದ ತೃಪ್ತಿಯ ನಗು ಇವುಗಳನ್ನು ನಾನು ಮರೆಯಲಾರೆ. ಈ ಮಾತುಗಳನ್ನು ಬರೆಯುವ ಈ ನಡುರಾತ್ರಿಯ ಸಂದರ್ಭದಲ್ಲಿ ನನ್ನ ಮನದ ಮುಂದೆ ಸೇವಾ ಮೂರ್ತಿಗಳಾದ ಶಿವು, ಮಹೇಶ್, ಕುಮಾರ, ಚಂದ್ರು, ಮಂಜುನಾಥ, ದಿಲೀಪ, ಪ್ರಿಯಾಂಕ, ಹೇಮಾ ಲಿಂಗರಾಜ ಮತ್ತು ಜಾಸ್ಮಿನ್‌ರ ನಗುಮುಖಗಳು ಮೂಡುತ್ತವೆ. ಅವರ ನಿಷ್ಕಳಂಕ ಸೇವೆಯ ಕಾರಣದಿಂದಾಗಿಯೇ ನಾನಿಂದು ನನ್ನ ಮನೆಯಲ್ಲಿ ಕುಳಿತು ಬರೆಯುವಂತಾಗಿದೆ.

೧೬. ಸ್ನೇಹಿತರು, ಹಿತೈಷಿಗಳು ಮತ್ತು ಬಂಧುಗಳು

ಮನುಷ್ಯ ಸಂಬಂಧದ ಬೆಸುಗೆಗೆ ರಕ್ತಸಂಬಂಧವೇ ಕಾರಣವಾಗಿರಬೇಕೆಂಬುದು ನನ್ನ ಅನುಭವದಲ್ಲಿ ಸುಳ್ಳೆಂದು ಸಾಬೀತಾಗಿದೆ. ನಾವು ಮದುವೆಯಾಗುವ ಪತೀಪತ್ನಿ ನಮ್ಮ ರಕ್ತ ಸಂಬಂಧಿಯಾಗಿ ರುವುದಿಲ್ಲ. (ಈ ಮಾತಿಗೆ ಅಪವಾದಗಳು ಉಂಟೆಂದು ನನಗೆ ಗೊತ್ತು. ಆದರೆ ಈ ಬಗೆಯ ಸಂಬಂಧದ ಬೆಸುಗೆಗಳು ಕಾಲಕ್ರಮೇಣ ಕಡಿಮೆಯಾಗುತ್ತಿವೆ). ಆದರೆ ಆತ ಆಕೆ ಅತ್ಯಂತ ಮಧುರವಾದ ಭಾವಗಳ ಸೃಜನೆಯಲ್ಲಿ ದೀರ್ಘಕಾಲೀನ ಬದುಕು ಮಾಡುತ್ತಾರೆ. ಆದರೆ ರಕ್ತ ಸಂಬಂಧಿಗಳ ಬಗ್ಗೆ ಈ ಮಾತು ಹೇಳಲಾಗುವುದಿಲ್ಲ. ಸಾವು, ಮದುವೆ ಮುಂಜಿಗಳಲ್ಲಿ ಜೊತೆಯಾಗುವ ಇವರು ವ್ಯಕ್ತಿಯ ಜೀವನದ ಗಂಭೀರ ಸ್ವರೂಪದ ನೋವಿನ ಸಂದರ್ಭಗಳಲ್ಲಿ ಭುಜಕೊಟ್ಟು ಆತುಕೊಳ್ಳುವುದು ಅಪರೂಪ.

ಆದರೆ ಸ್ನೇಹಿತರು - ಹಿತೈಷಿಗಳು ಹಾಗಲ್ಲ. ಅವರು ಸುಖ ಸಂತೋಷಗಳೆರಡರಲ್ಲೂ ಜೊತೆಗಿರುತ್ತಾರೆ. ಅದರಲ್ಲೂ ನನ್ನ ನೋವಿನ ಸಂದರ್ಭಗಳಲ್ಲಿ ನನ್ನ ಜೊತೆಗಿದ್ದು ಧೈರ್ಯ - ಶಕ್ತಿ ತುಂಬಿದವರು ನನ್ನ ಸ್ನೇಹಿತರು. ಅವರ ನೆರವಿನಲ್ಲಿ ನಾನು ಯಾವ ಸ್ವಾರ್ಥವನ್ನೂ ಕಂಡಿಲ್ಲ. ಅಲ್ಲಿ ನಿರ್ಮಲವಾದ ಸ್ನೇಹ ಒಂದೇ ಸಂಬಂಧವನ್ನು ನಿರ್ವಹಣೆ ಮಾಡಿದೆ.

ಹತ್ತು ವರ್ಷಗಳ ಹಿಂದೆ ನನಗೆ ಥೈಮೋಮಾ ಕ್ಯಾನ್ಸರ್ ಇದೆಯೆಂದು ಗೊತ್ತಾಗಿ, ಅದಕ್ಕೆ ನಾನು ಕಿಮೋಥೆರಪಿಯ ಚಿಕಿತ್ಸೆಯನ್ನು ಪಡೆಯುತ್ತಿದ್ದಾಗ ನನ್ನ ನೆಂಟರಿಷ್ಟರನ್ನು

ಕಂಡಿದ್ದೆ. ಹೆಚ್ಚು ಕಡಿಮೆ ನನ್ನ ಬುದ್ಧಿ ಬಂದಾಗಿನಿಂದಲೂ ದೇವರು ದಿಂಡರು, ಹಬ್ಬ ಹರಿದಿನ, ಮದುವೆ ತಿಥಿಗಳಿಗೆ ನಾನು ಹೋಗುತ್ತಿರಲಿಲ್ಲ. ನನಗೆ ಅವುಗಳ ಶಾಸ್ತ್ರ ವಿಧಿವಿಧಾನಗಳಲ್ಲಿ ನಂಬಿಕೆಯಿರಲಿಲ್ಲ, ಅಲ್ಲಿರುವ ಮೌಢ್ಯ ಮತ್ತು ಬೌದ್ಧಿಕ ಗುಲಾಮಗಿರಿಯು ನನಗೆ ಅಸಹ್ಯತರುತ್ತಿತ್ತು. ಕಟ್ಟಾ ನಾಸ್ತಿಕನಾಗಿ ಪರಿವರ್ತಿತನಾಗಿದ್ದ ನನ್ನನ್ನು ಅವರ್‍ಯಾರೂ ಇಷ್ಟಪಡುತ್ತಿರಲಿಲ್ಲವೆಂದು ನನಗೆ ಗೊತ್ತಿತ್ತು. ಅವರ ಕಂದಾಚಾರಗಳನ್ನು ವಿರೋಧಿಸುವ ನನ್ನನ್ನು ಕಲಿತ ದುರಹಂಕಾರಿ ಎಂದು ಕರೆಯುತ್ತಿದ್ದರು. ಇಂಥ ನನ್ನ ರಕ್ತ ಸಂಬಂಧಿಗಳು ನನಗೆ ಕ್ಯಾನ್ಸರ್ ರೋಗ ಬಂದಾಗ ನನ್ನನ್ನು ನೋಡಲು ಪದೇ ಪದೇ ಹಿಂಡುಹಿಂಡಾಗಿ ಬಂದರು. ನನಗೆ ಆಶ್ಚರ್ಯವಾಗುತ್ತಿತ್ತು: 'ಎಂದೂ ನೋಡದ, ಮಾತನಾಡಿಸಿದ ಈ ಜನ ನನ್ನನ್ನು ನೋಡಲು ಈಗ ಏಕೆ ಬರುತ್ತಿದ್ದಾರೆ? ಇವರಿಗೆ ಇದ್ದಕ್ಕಿದ್ದಹಾಗೆ ನನ್ನ ಮೇಲೆ ಪ್ರೀತಿ ಅಂಕುರವಾಯಿತೆ?" ಎಂದು. ಆದರೆ ಅವರ ವರ್ತನೆ ನನಗೆ ಧೈರ್ಯ ಸ್ಥೈರ್ಯ ನೀಡುವ ಬದಲು ಮತ್ತಷ್ಟು ಅಧೀರನನ್ನಾಗಿ ಮಾಡುವಂತಿದ್ದವು. ನನಗೆ ಕ್ಯಾನ್ಸರ್ ಬಂದಿದೆಯೆಂದೂ ಇನ್ನು ಬಹಳ ದಿನ ಬದುಕುವುದಿಲ್ಲವೆಂದೂ ಕೊನೆಯ ಬಾರಿ ಮುಖ ನೋಡಿಕೊಂಡು ಹೋಗಲು ಬಂದಿರುವುದಾಗಿ ಅನೇಕರು ನನ್ನ ಕಿವಿಗೆ ಬೀಳುವ ಹಾಗೆ ಮಾತನಾಡಿಕೊಂಡದ್ದನ್ನು ಕೇಳಿದ್ದೇನೆ. ಇನ್ನು ಕೆಲವರು "ನೀನು ದೇವರು ಧರ್ಮ ಜಾತಿ ರೀತಿ ರಿವಾಜುಗಳನ್ನು ಧಿಕ್ಕರಿಸಿರುವುದರಿಂದ ಹೀಗಾಗಿದೆ. ಅದರ ಪಾಪದ ಫಲ ಇದು. ಇನ್ನಾದರೂ ಅದನ್ನೆಲ್ಲಾ ಬಿಟ್ಟು ಎಲ್ಲರಂತೆ ಬದುಕು, ಭಗವಂತನ ಸಾನ್ನಿಧ್ಯವಾದರೂ ದೊರೆಯುತ್ತದೆ" ಎಂದು ನೇರವಾಗಿ ನನಗೆ ಹೇಳಿದ್ದುಂಟು. ಅದಕ್ಕಿಂತ ಮುಖ್ಯವಾಗಿ ಅವರಿಗೆ ಸಾವು ಬದುಕಿನ ನಡುವೆ ಹೋರಾಡುತ್ತಿರುವ ರೋಗಿಯೊಬ್ಬನ ಜೊತೆ ಹೇಗೆ ನಡೆದುಕೊಳ್ಳಬೇಕೆಂಬುದೇ ಗೊತ್ತಾಗುತ್ತಿರಲಿಲ್ಲ. ನನ್ನ ಎದುರಿಗೇ ಕ್ಯಾನ್ಸರ್ ಬಂದ ಅವರ ಪರಿಚಿತರು - ನೆಂಟರು ಹೇಗೆ ಸತ್ತರು ಎಷ್ಟು ದಿನಕ್ಕೆ ಸತ್ತರು ಎಂಬುದರ ಬಗ್ಗೆ ಕತೆ ಹೇಳುತ್ತಿದ್ದರು. "ಅಮ್ಮಮ್ಮಾ ಅಂದರೆ, ಇನ್ನೊಂದ್ಯೆದಾರು ತಿಂಗಳು" ಎಂದು ಭಾಷ್ಯ ನುಡಿಯುತ್ತಿದ್ದರು. ಇಂಥ ಮಾತುಗಳಿಂದ ನನಗಿರಲಿ, ನನ್ನ ಹೆಂಡತಿ ಮಕ್ಕಳ ಮನಸ್ಸಿನ ಮೇಲೆ ಎಂಥ ಪರಿಣಾಮ ಉಂಟುಮಾಡಬಹುದು ಎಂಬುದರ ಬಗ್ಗೆ ಅವರು ಚಿಂತಿಸುತ್ತಿರಲಿಲ್ಲ.

ಜೊತೆಗೆ, ದೂರದ ಊರುಗಳಿಂದ ಬಂದಿದ್ದಾರೆಂದು ಅವರ ಊಟ ತಿಂಡಿಗಳ ವ್ಯವಸ್ಥೆಯನ್ನು ನನ್ನ ಹೆಂಡತಿ ಮಾಡಬೇಕಿತ್ತು. ಮೊದಲೇ ನನ್ನ ಆರೈಕೆಯಲ್ಲಿ ಸುಸ್ತಾಗುತ್ತಿದ್ದ ಅವಳು ಮತ್ತಷ್ಟು ಆಯಾಸದಿಂದ ಕುಸಿಯುತ್ತಿದ್ದಳು.

ಇಂಥ ಯಾವುದೇ ಮಾನಸಿಕ ತೊಂದರೆಗಳು ಸ್ನೇಹಿತರಿಂದ ನನಗೆ

ಉಂಟಾಗಲಿಲ್ಲ. ನಾನು ಕರೆದಾಗಲೆಲ್ಲಾ ನನ್ನ ಜೊತೆಯಲ್ಲಿದ್ದು ನಿಸ್ವಾರ್ಥವಾಗಿ ನನ್ನ ಒಳಿತಿಗಾಗಿ ಶ್ರಮಿಸಿದರು. ನನ್ನ ಒಬ್ಬಂಟಿತನವನ್ನು ನೀಗಿದ್ದು ಮಾತ್ರವಲ್ಲದೆ, ನನ್ನ ಆರ್ಥಿಕ ಸ್ಥಿತಿಗತಿಗಳನ್ನು ವಿಚಾರಿಸಿ ಸಕಾಲದಲ್ಲಿ ನೆರವಿಗೆ ಬರುತ್ತಿದ್ದರು.

ನಾನು ಅಪೊಲೊ ಆಸ್ಪತ್ರೆಗೆ ಸೇರಿದಾಗಿನಿಂದ ಬಿಡುಗಡೆಗೊಂಡು ಬರುವವರೆಗೆ ನನ್ನ ಕುಟುಂಬದ ಹೆಗಲೆಣೆಯಾಗಿ ನಿಂತು, ಅವರಲ್ಲಿ ಮಾನಸಿಕ ಸ್ಥೈರ್ಯ ತುಂಬಿ ಭರವಸೆ ಮೂಡಿಸಿದರು. ನನ್ನ ಕುಟುಂಬದ ಸಂಕಷ್ಟಗಳನ್ನು ಅರ್ಥಮಾಡಿಕೊಂಡು ಅವುಗಳಿಗೆ ಸ್ಪಂದಿಸಿದರು. ಅವರ ನಡೆಯಲ್ಲಿ ಪ್ರೀತಿ ಮಾತ್ರ ಇತ್ತು. ಆ ಪ್ರೀತಿಯಲ್ಲಿ ನಾನು ಗುಣಮುಖನಾಗಿ ಹೊರಬರಲೆಂಬ ಅಂತರಂಗದ ಕಳಕಳಿಯಿತ್ತು. ಅವರಿಗೆ ನಾನು ಆಸ್ತಿಕನೋ ನಾಸ್ತಿಕನೋ ಎಂಬುದು ನಗಣ್ಯವಾಗಿತ್ತು. ನನ್ನ ಎರಡು ತಿಂಗಳ ಅವಧಿಯ ವಾಸ್ತವ್ಯದ ಅವಧಿಯಲ್ಲಿ ನೂರಾರು ಮಂದಿ ನನ್ನ ಸ್ನೇಹಿತರು ಮತ್ತು ಹಿತೈಷಿಗಳು ದಿನನಿತ್ಯ ಆಸ್ಪತ್ರೆಗೆ ಬಂದು ನನ್ನ ಮಕ್ಕಳ ಜೊತೆ ನಿಂತಿದ್ದಾರೆ. ಮೊನ್ನೆ ಮೊನ್ನೆ ನನ್ನ ಪ್ರಗತಿಪರ ಮಿತ್ರರೊಬ್ಬರು ತೀರಿಕೊಂಡರು. ಆ ಸಂದರ್ಭದಲ್ಲಿ ಗೆಳೆಯನೊಬ್ಬ ಹೇಳಿದ ಮಾತು ನನಗೆ "ಹೌದಲ್ಲವೆ?" ಎಂಬ ಅನುಭವವನ್ನು ತಂದುಕೊಟ್ಟಿತು. "ಶಿವರಾಮ್, ಅವರ ಸಾವಿಗೆ ಬಂದಿದ್ದವರೆಲ್ಲರೂ ಅವರ ಸ್ನೇಹಿತರು. ರಕ್ತಸಂಬಂಧಿಗಳು ಒಂದಿಬ್ಬರು ಮಾತ್ರ ಇದ್ದರು. ನೋಡು, ಸಾಮಾನ್ಯವಾಗಿ ನಮ್ಮ ಸಮಾಜದಲ್ಲಿ ಯಾರಾದರೂ ಸತ್ತರೆ, ತೊಂಬತ್ತು ಭಾಗ ನೆಂಟರು - ರಕ್ತ ಸಂಬಂಧಿಕರು ಇರುತ್ತಾರೆ. ಹತ್ತು ಭಾಗ ಸ್ನೇಹಿತರು ಇರುತ್ತಾರೆ. ಆದರೆ ಇವರ ಸಾವಿನಲ್ಲಿ ಸ್ನೇಹಿತರೇ ಎಲ್ಲಾ ಕಾರ್ಯ ಮಾಡಿ ಮುಗಿಸಿದರು." ಸ್ನೇಹಿತರು ಸ್ನೇಹ ತತ್ವದ ಆಧಾರದ ಮೇಲೆ ವರ್ತಿಸುತ್ತಾರೆ. ಅಲ್ಲಿ ಲಾಭ ನಷ್ಟ, ಮುಲಾಜಿನ ಪ್ರಶ್ನೆ ಬರುವುದಿಲ್ಲ. ಆದರೆ ನೆಂಟರು ಮದುವೆ ಮುಂಜಿ ಸಾವುಗಳಿಗೆ ಮುಲಾಜಿನ ಮೇಲೆ ಬರುತ್ತಾರೆ. "ಹೋಗದಿದ್ದರೆ ತಪ್ಪು ತಿಳಿತಾರಲ್ಲ" ಎಂಬ ಕಾರಣಕ್ಕಾಗಿ ಬಂದು ಮಾತನಾಡಿಸಿಕೊಂಡು ಹೋಗುವವರೇ ಹೆಚ್ಚು. ಈ ಸಾರಿ ನಾನೇ ಅದಕ್ಕೆ ಒಂದು ನಿರ್ಬಂಧ ವಿಧಿಸಿದೆ. ನೆಂಟರಿಷ್ಟರು ಬರುವುದರಿಂದ ನನ್ನ ಹೆಂಡತಿಗೆ ಮನೆಯಲ್ಲಿ ಹೆಚ್ಚು ಕೆಲಸ; ಮಕ್ಕಳಿಗೆ ಅವರನ್ನು ನೋಡಿಕೊಂಡು ಕಳಿಸಬೇಕದ ಹೆಚ್ಚುವರಿ ಜವಾಬ್ದಾರಿ! ಅದಕ್ಕೆ ನಾನು ನನ್ನ ಮಕ್ಕಳಿಗೆ ಬರೆದು ತಿಳಿಸಿದೆ: "ಊರಿಗೆ ತಿಳಿಸಲು ಹೋಗಬೇಡಿ, ಒಂದು ವೇಳೆ ಬೇರೆ ಮೂಲಗಳಿಂದ ತಿಳಿದು ಬಂದು, 'ನಾವು ಬಂದು ನೋಡುತ್ತೇವೆ' ಎಂದು ಅವರು ಕೇಳಿದರೆ, "ಈಗ ಬೇಡ. ಯಾರನ್ನೂ ಒಳಗೆ ಬಿಡುವುದಿಲ್ಲ. ವಾರ್ಡ್‌ಗೆ ಶಿಫ್ಟ್ ಮಾಡಿದಾಗ ಹೇಳುತ್ತೇವೆ ಆಗ ಬನ್ನಿ" ಎಂದು ತಿಳಿಸಿರಿ ಎಂದು.

ಆದರೂ ಹೇಗೋ ವಿಷಯ ತಿಳಿದು ಹಲವು ಜನ ನನ್ನ ಬಂಧುಗಳು ಬಂದರು.

"ದೂರದ ಊರಿಂದ ಅವರು ಬಂದಿರುತ್ತಾರೆ. ಅವರಿಗೆ ಆಸ್ಪತ್ರೆಯ ಕ್ಯಾಂಟಿನ್‌ನಲ್ಲಿ ಊಟ ತಿಂಡಿ ಕೊಡಿಸಿ ಕಳಿಸು" ಎಂದು ನನ್ನ ಮಗನಿಗೆ ಬರೆದು ತಿಳಿಸಿದೆ. ಆದರೆ ನನ್ನ ತಂದೆ ತಾಯಿ ಬಂದು ನನ್ನನ್ನು ಈ ಸ್ಥಿತಿಯಲ್ಲಿ ನೋಡುವುದು ನನಗೆ ಸುತಾರಾಂ ಇಷ್ಟವಿರಲಿಲ್ಲ. ಅವರು ಬರುವುದರಿಂದ ನನ್ನ ಮನಸ್ಸಿನ ಮೇಲೆ ಗಾಢ ಭಾರದ ಪರಿಣಾಮವುಂಟಾಗುತ್ತಿತ್ತು. ನನ್ನ ಅವ್ವ ನನ್ನನ್ನು ನೋಡಿ ಅಳುವುದು ಕರೆಯುವುದು ನನ್ನಿಂದ ನೋಡಲು ಸಾಧ್ಯವಿರಲಿಲ್ಲ. ಗ್ರಾಮ ಸಂಸ್ಕೃತಿಯ ದುಃಖ ಅಳುವಿಕೆಗಳು ರೋಗಿಯನ್ನು ಯಾವ ಸ್ಥಿತಿಗೆ ತಲುಪಿಸುತ್ತವೆ ಎಂಬುದು ಅವಳಿಗೆ ಅರ್ಥವಾಗು ತ್ತಿರಲಿಲ್ಲ. ಅದಕ್ಕಾಗಿ ಊರಿಂದ ಬಂದವರ ಬಳಿ ಕಾಗದದಲ್ಲಿ ಹೀಗೆ ಬರೆದೆ: "ನೀವು ಈಗ ಬರುವುದು, ನನ್ನನ್ನು ಈ ಸ್ಥಿತಿಯಲ್ಲಿ ನೋಡುವುದು ನನಗೆ ಇಷ್ಟವಿಲ್ಲ. ಈ ವಯಸ್ಸಿನಲ್ಲಿ ಮಕ್ಕಳ ಸ್ಥಿತಿ ನೋಡಿ ದುಃಖಿಸುವುದು ಬೇಡ. ನನಗೆ ಖಂಡಿತ ಗುಣವಾಗುತ್ತೆ. ಆಗ ಬನ್ನಿ. ನನಗೆ ನಿಮಗೆ ಇಬ್ಬರಿಗೂ ಆಗ ಸಂತೋಷವಾಗುತ್ತದೆ"

ಆ ರೀತಿ ಬರೆದು ಅವರು ಬರದ ಹಾಗೆ ನಿರ್ಬಂಧಿಸಿದ್ದು ಒಳ್ಳೆಯದೇ ಆಯಿತು. ಅವರಿಗೆ ನನ್ನ ಸ್ಥಿತಿಯ ತೀವ್ರ ಗಂಭೀರತೆ ಗೊತ್ತಾಗಲೇ ಇಲ್ಲ. 'ಕಾಯಿಲೆ ಬಿದ್ದವ ಈಗ ಹುಷಾರಾಗುತ್ತಿದ್ದಾನೆ' ಎಂದು ಅವರು ತಿಳಿದು ಸಮಾಧಾನ ಪಟ್ಟುಕೊಂಡರು.

ಆದರೆ ಸ್ನೇಹಿತರ ಸಂಬಂಧ ಆಗಲ್ಲ. ಅಲ್ಲಿ ಲೆಕ್ಕಾಚಾರದ - ಮುಲಾಜಿನ ಪ್ರಶ್ನೆಯೇ ಬರುವುದಿಲ್ಲ. ಎರಡು ತಿಂಗಳ ನನ್ನ ಆಸ್ಪತ್ರೆಯ ವಾಸ್ತವ್ಯದ ಅವಧಿಯಲ್ಲಿ ಅವರು ನಾನಾ ಬಗೆಯಲ್ಲಿ ನನಗೆ ನೆರವಾದ ರೀತಿ ಅನನ್ಯ. ಕೆಲವರು ನನ್ನ ಮಕ್ಕಳ ಜೊತೆ ಹಗಲು ಇರಳೆನ್ನದೆ ನನ್ನ ಆರೋಗ್ಯದ ಬಗ್ಗೆ ಗಮನ ಹರಿಸಿದರು. ಮತ್ತೆ ಕೆಲವರು ನನ್ನ ಚಿಕಿತ್ಸೆಯ ವೆಚ್ಚ ಅಗಾಧ ಪ್ರಮಾಣದಲ್ಲಿ ಏರುತ್ತಿರುವುದರ ಬಗ್ಗೆ ಚಿಂತಿಸಿ ಸಂಪನ್ಮೂಲ ಕ್ರೋಢೀಕರಣದ ಬಗ್ಗೆ ತೊಡಗಿದರು. ಈ ಹಣ ಸಾವಿರದ ಲೆಕ್ಕದಲ್ಲ; ಲಕ್ಷಗಳ ಲೆಕ್ಕದ್ದು. ನನಗೆ ಆಶ್ಚರ್ಯವಾಗುವ ರೀತಿಯಲ್ಲಿ ಹಲವಾರು ಮಂದಿ ನನ್ನ ಮಕ್ಕಳಿಗೆ ಹಣದ ನೆರವು ನೀಡಲು ಮುಂದೆ ಬಂದರು. ಅವರಿಗೆಲ್ಲಾ ನಾನು ನನ್ನ ಜೀವಿತಾವಧಿಯಲ್ಲಿ ಏನು ನೀಡಿದ್ದೆ? ಕೇವಲ ನಿಷ್ಕಲ್ಮಶ ಸ್ನೇಹ ಮಾತ್ರ! ನುಡಿದಂತೆ ನಡೆಯಲು ನಡೆಸಿದ ಪ್ರಾಮಾಣಿಕ ಪ್ರಯತ್ನ; ಸಾಮಾಜಿಕ ಸಮಾನತೆಗಾಗಿ ಸದಾ ನನ್ನ ಕ್ರಿಯಾಶೀಲ ನಡೆ; ಬದ್ಧತೆಯಿಂದ ಅರಿವಿನ ವಿಕಾಸದ ಗುರಿಯನ್ನಿಟ್ಟುಕೊಂಡು ಮಾಡಿದ ಪಾಠ ಪ್ರವಚನ; ವಹಿಸಿದ ಕೆಲಸವನ್ನು ನಿಷ್ಠೆಯಿಂದ ಮಾಡಿದ ಕಾಯಕನಿಷ್ಠೆ - ಇವು ನನಗೆ ನೂರಾರು ಹಿರಿ ಕಿರಿಯ ಸ್ನೇಹಿತರನ್ನು ಸಂಪಾದಿಸಿಕೊಟ್ಟಿದ್ದವು. ಪ್ರಾಮಾಣಿಕ - ಮನುಷ್ಯ ಪರವಾದ ಬದುಕು ಎಲ್ಲ ಜಾತಿ ಮತಧರ್ಮಗಳ ಕಪ್ಪಗಳನ್ನು ಒಡೆದು ಪ್ರೀತಿಯಾಗಿ ಅರಳಬಲ್ಲುದು ಎಂಬುದನ್ನು ನಾನು ಸ್ವತಃ ಅನುಭವಿಸುವಂತಾಯಿತು.

ಅಪೊಲೊ ಆಸ್ಪತ್ರೆಯ ರಕ್ಷಣಾ ಸಿಬ್ಬಂದಿ ಎಂಐಸಿಯುನಲ್ಲಿರುವ ರೋಗಿಗಳನ್ನು ನೋಡಲು ಯಾರನ್ನೂ ಅಷ್ಟು ಸುಲಭವಾಗಿ ಬಿಡುತ್ತಿರಲಿಲ್ಲ. ಬೆಳಿಗ್ಗೆ ಮತ್ತು ಸಂಜೆ ನಿಗದಿತ ವೇಳೆಯಲ್ಲಿ ಒಂದಿಬ್ಬರನ್ನು ಬಿಡುತ್ತಿದ್ದರು. ನನ್ನ ಮಕ್ಕಳು ಕೂಡ ಸರದಿಯ ಪ್ರಕಾರ ಬರಬೇಕಾಗಿತ್ತು. ನನ್ನ ಹೆಂಡತಿ ಮಕ್ಕಳು ಜೊತೆಯಾಗಿ ನನ್ನನ್ನು ನೋಡಲು ಬರಲು ಸಾಧ್ಯವೇ ಆಗಲಿಲ್ಲ. ಹೀಗಾಗಿ ನನ್ನ ಮೇಲಿನ ಪ್ರೀತಿ ಮತ್ತು ಕಳಕಳಿಯಿಂದಾಗಿ ನನ್ನನ್ನು ನೋಡಲು ದಿನವೂ ಬರುತ್ತಿದ್ದ ಹತ್ತಾರು ಮಂದಿಗೆ ನನ್ನನ್ನು ಕಾಣಲು ಸಾಧ್ಯವೇ ಆಗಲಿಲ್ಲ. ಆದರೆ ಅವರು ಆಸ್ಪತ್ರೆಗೆ ಬರುವುದನ್ನು ನಿಲ್ಲಿಸಲಿಲ್ಲ. ದಿನವೂ ಆಸ್ಪತ್ರೆಗೆ ಬಂದು, ನನ್ನ ಆರೋಗ್ಯದ ಬಗ್ಗೆ ವಿಚಾರಿಸಿ, ನನ್ನ ಮಕ್ಕಳಿಗೆ ಸ್ಥೈರ್ಯ ತುಂಬಿ ಹೋಗುತ್ತಿದ್ದರು. ಕೆಲವರಿಗಂತು ನನ್ನ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಬಗೆಗಿನ ಚಿಂತೆ! ಅವರಿಗೆ ಚೆನ್ನಾಗಿ ಗೊತ್ತಿತ್ತು. ಪ್ರೀತಿ ಸ್ನೇಹದಷ್ಟೆ ಮಹತ್ವವಾದದ್ದು ರೋಗಿಯ ಮನೆಯವರ ಹಣಕಾಸಿನ ಸ್ಥಿತಿ. ಅಪೊಲೊ ಆಸ್ಪತ್ರೆಯಂತಹ ಆಸ್ಪತ್ರೆಯಲ್ಲಿ ಹಣ ಯಥೇಚ್ಛವಾಗಿ ಖರ್ಚಾಗುತ್ತಿತ್ತು ಎಂಬ ಸತ್ಯ! ಅದಕ್ಕಾಗಿ ಅವರು ಇತರೆ ಮೂಲಗಳಿಂದ ನನ್ನ ಚಿಕಿತ್ಸೆಯ ಖರ್ಚಿಗೆ ಹಣವನ್ನು ಕ್ರೋಢೀಕರಿಸುವ ಕೆಲಸ ಮಾಡಿದರು.

ಆಸ್ಪತ್ರೆಗೆ ಹೋದರೆ ರೋಗಿಗೆ ತೊಂದರೆಯಾಗುತ್ತದೆ ಎಂದು ಅರ್ಥಮಾಡಿಕೊಂಡು, ನಾನು ಆಸ್ಪತ್ರೆಯಿಂದ ಬಿಡುಗಡೆಯಾದನಂತರ ಮನೆಗೆ ಬಂದು ಪ್ರೀತಿ ತೋರಿದವರ ಸಂಖ್ಯೆ ಅಪಾರ. ಇದನ್ನು ಬರೆಯುವ ಸಂದರ್ಭದಲ್ಲಿ ಸ್ವಲ್ಪ ಕಣ್ಮುಚ್ಚಿ ನೆನೆದರೆ ನನ್ನ ಬಗ್ಗೆ ಪ್ರೀತಿ ತೋರಿದ ಹಿರಿ ಕಿರಿಯ ಸ್ನೇಹಿಪರ ಮುಖಗಳು ನೂರಾರು ಮೂಡುತ್ತವೆ. ಅವರಿಗೆ ಅವರ ಪ್ರೀತಿಯ ಪ್ರತಿಯಾಗಿ ನಾನೇನು ನೀಡಬಲ್ಲೆ? ಪ್ರತಿ ಪ್ರೀತಿ ತಾನೆ?

೧೭. ಇದು ಧರ್ಮಾಸ್ಪತ್ರೆಯಲ್ಲ; ಕಾರ್ಪೊರೇಟ್ ಕಂಪನಿ!

ಒಂದು ಕಲ್ಯಾಣ ರಾಜ್ಯದಲ್ಲಿ ಆರೋಗ್ಯ, ಶಿಕ್ಷಣ, ಸುರಕ್ಷಿತ ಹಾಗೂ ಸುಸಜ್ಜಿತವಾದ ರಸ್ತೆ - ಇವುಗಳನ್ನು ನೀಡುವ ಜವಾಬ್ದಾರಿ ಪ್ರಭುತ್ವದ್ದಾಗಿರುತ್ತದೆ. ಈ ನಿಟ್ಟಿನಲ್ಲಿ ಕೆಲಸ ಮಾಡಿರುವ ಪ್ರಭುತ್ವಗಳ ಉದಾಹರಣೆ ನಮ್ಮಲ್ಲಿವೆ. ಮೈಸೂರಿನ ಅರಸರಂಥ ಜನಪರ ಆಡಳಿತಗಾರರು ಇಂಥ ಕೆಲಸವನ್ನು ಜನಸೇವೆಯೆಂದು ಬಗೆದಿದ್ದರು. ಆದರೆ ಸ್ವಾತಂತ್ರ್ಯ ಬಂದ ನಂತರ ಬಂದ ಪ್ರಜಾಪ್ರಭುತ್ವ ಆಡಳಿತದ ನಿಜವಾದ ಆಶಯ ಕಲ್ಯಾಣರಾಜ್ಯವನ್ನು ಕಟ್ಟುವುದೇ ಆಗಿತ್ತು. ಬಂಡವಾಳಶಾಹಿ ವ್ಯವಸ್ಥೆಯನ್ನು ಮತ್ತು ರಾಜಶಾಹಿಯನ್ನು ನಿರಾಕರಿಸಿ ಜನರ ಕಲ್ಯಾಣಕ್ಕಾಗಿ ದುಡಿಯುವ ಸಂಕಲ್ಪ ಆರಂಭದಲ್ಲಿ ಇದ್ದಂತೆ ತೋರುತ್ತದೆ. ಆದರ್ಶ ಆಲೋಚನೆಗಳ ಮೂಲಕ ಬಡವ ಬಲ್ಲಿದರೆಂಬ ಭಾವನೆಯನ್ನು ತೊಡೆದು ಹಾಕಿ, ಸಮಾನತೆಯ ಆಧಾರದ ಮೇಲೆ ಎಲ್ಲರಿಗೂ ಎಲ್ಲಾ ಬಗೆಯ ಅನುಕೂಲಗಳು ದೊರೆಯುವಂತಾಗಬೇಕೆಂಬುದು ನಮ್ಮ ಸ್ವಾತಂತ್ರ್ಯ ಗಳಿಕೆಯ ಕನಸಾಗಿತ್ತು.

ಆದರೆ ಸ್ವಾತಂತ್ರ್ಯ ಬಂದ ನಂತರದ ದಿನಗಳಲ್ಲಿ ಕಲ್ಯಾಣ ರಾಜ್ಯದ ಮುಖ್ಯ ಕೆಲಸಗಳಾದ ಶಿಕ್ಷಣ ಮತ್ತು ಆರೋಗ್ಯ ನೀಡುವಿಕೆಯು ನಿಧಾನವಾಗಿ ಸರ್ಕಾರದ ಹಿಡಿತದಿಂದ ಖಾಸಗಿಯವರ ಹಿಡಿತಕ್ಕೆ ಸೇರಲಾರಂಭಿಸಿದವು. ಮೊದಮೊದಲು ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳು ಸೇವಾಕ್ಷೇತ್ರಗಳೆಂದು ಕರೆಸಿಕೊಂಡು, ನಂತರ ಬಂಡವಾಳಗಳಿಕೆಯ ಮುಖ್ಯ ಸಾಧನಗಳಾಗಿ ರೂಪಾಂತರಗೊಂಡವು. ಸರ್ಕಾರದ ಧರ್ಮಾಸ್ಪತ್ರೆಗಳು

ನಿರ್ಲಕ್ಷ್ಯಗೊಳಗಾಗಿ ಜನಸಾಮಾನ್ಯರಿಗೆ ಅಗತ್ಯ ಸೇವೆಯನ್ನು ಮಾಡುವಲ್ಲಿ ವಿಫಲವಾಗ ತೊಡಗಿದವು. ಇದರಲ್ಲಿ ಅಲ್ಲಿ ಕೆಲಸ ಮಾಡುವ ವೈದ್ಯರ ಭ್ರಷ್ಟತೆಯ ಪಾಲು ಕೂಡ ಅಪಾರವಾಗಿತ್ತು. ಇಂಥ ಪರಿಸ್ಥಿತಿಯ ಉದ್ಭವದಿಂದ ಖಾಸಗಿಯವರು ತೆರೆದ, ಆಧುನಿಕ ಸೌಲಭ್ಯಗಳನ್ನೊಳಗೊಂಡ ಆಸ್ಪತ್ರೆಗಳು ಸೇವೆಗೆ ತಕ್ಕ ಹಣ ಪಡೆದು ಉತ್ತಮ ಚಿಕಿತ್ಸೆ ನೀಡಿ ಜನರ ಮೆಚ್ಚುಗೆ ಗಳಿಸಿದವು. 'ಇಲ್ಲಿ ಸೇವೆಗೆ ತಕ್ಕ ಹಣ ನೀಡಿದರೆ ಉತ್ತಮ ಚಿಕಿತ್ಸೆ ಸಿಗುತ್ತದೆ' ಎಂಬ ನಂಬಿಕೆ ಪ್ರಚಾರಗೊಂಡು ಖಾಸಗಿಯವರು ಆರೋಗ್ಯಸೇವೆಯೆಂಬ ಕಲ್ಯಾಣ ಕೆಲಸವನ್ನು ಉದ್ಯಮವನ್ನಾಗಿ ಮಾಡಿಕೊಂಡರು. ಸೇವೆಯ ಹೆಸರಿನಲ್ಲಿ ವಿಪುಲವಾದ ಹಣ ಮಾಡುವ ಉದ್ಯಮ ಸೃಷ್ಟಿಗೊಂಡಿತು. ಇದರಿಂದ ದೇಶದಲ್ಲಿ ಆರೋಗ್ಯ ಕೆಟ್ಟಾಗ ಉಳ್ಳವರಿಗೊಂದು ಬಗೆಯ ಚಿಕಿತ್ಸೆ, ಇಲ್ಲದವರಿಗೊಂದು ಬಗೆಯ ಚಿಕಿತ್ಸೆ ಎನ್ನುವ ಸ್ಥಿತಿ ನಿರ್ಮಾಣವಾಯಿತು. ದೇಶದಲ್ಲಿ ನಿಧಾನವಾಗಿ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಂಡ ಜಾಗತಿಕ ಬಂಡವಾಳ ಶಾಹಿಗಳು ನಿರ್ಮಾಣ ಮಾಡಿದ ಆರ್ಥಿಕ ಏರುಪೇರಿನಿಂದ ಆರ್ಥಿಕ ಅಸಮಾನತೆ ಅತಿಯಾಗಿ ಜನ ಜನರ ಬದುಕುವ ಸ್ಥಿತಿಯಲ್ಲಿ ಕಂದರವುಂಟಾಯಿತು.

ಇಂಥ ಸಾಮಾಜಿಕ - ಆರ್ಥಿಕ ಸ್ಥಿತಿಯು ಜೀವಂತವಿರುವ ಸ್ಥಿತಿಯಲ್ಲಿ ನಾನು ಅಪೊಲೋ ಆಸ್ಪತ್ರೆ ಸೇರಿದ್ದೆ. ಸಾಮಾನ್ಯ ಮಧ್ಯಮ ವರ್ಗದ ಕುಟುಂಬದಿಂದ ಬಂದ ನಾನು ನನ್ನ ಉದ್ಯೋಗ ತಂದು ಕೊಟ್ಟಿದ್ದ ವೇತನದ ಕಾರಣದಿಂದಾಗಿ ತುಸು ಅನುಕೂಲಕರ ಸ್ಥಿತಿಯಲ್ಲಿದ್ದೆ. ಆದರೆ ಅಪೊಲೋ ಆಸ್ಪತ್ರೆಯ ದುಭಾರಿ ಸೇವಾ ಶುಲ್ಕಗಳು ನನ್ನ ಅನೇಕ ವರ್ಷಗಳ ಉಳಿತಾಯವನ್ನು ಆಪೋಶನ ಮಾಡಿ ನನ್ನನ್ನು ಬರಿಗೈ ಮಾಡಿದವು. ನಾನು ಆಸ್ಪತ್ರೆಯಲ್ಲಿ ಐವತ್ತಾಲ್ಕು ದಿನ ಇದ್ದೆ. ಅದರಲ್ಲಿ ಎಂಐಸಿಯುನಲ್ಲಿಯೇ ಸುಮಾರು ನಲವತ್ತು ದಿನಗಳು ಇರುವಂತಾಯಿತು. ಆಸ್ಪತ್ರೆಗಳಲ್ಲಿ ತೀವ್ರ ನಿಗಾ ಘಟಕದ ಶುಲ್ಕಗಳು ಅಧಿಕವಾಗಿರುತ್ತವೆ. ಅನಂತರ ದಿನಗಳನ್ನು ಸ್ಪೆಶಲ್ ವಾರ್ಡ್‌ನಲ್ಲಿ ಕಳೆದಿದ್ದೆ.

ಭಾರತದಲ್ಲಿ ಶ್ರೀಮಂತ ಬಂಡವಾಳಶಾಹಿಗಳು ತೆರಿದಿದ್ದ ಆಸ್ಪತ್ರೆಗಳಿಗಿಂತ ಅಪೊಲೊ ಭಿನ್ನ ಸ್ವರೂಪದ ಆಸ್ಪತ್ರೆಯಾಗಿತ್ತು. ಇದು ಕೇವಲ ಖಾಸಗಿ ಆಸ್ಪತ್ರೆಯಲ್ಲ; ಇದೊಂದು ಕಾರ್ಪೊರೇಟ್ ಕಂಪನಿಯು ನಡೆಸುತ್ತಿದ್ದ ಆಸ್ಪತ್ರೆಯಾಗಿತ್ತು. ಚೆನ್ನೈನಲ್ಲಿ ಇದರ ಆಡಳಿತ ಕಛೇರಿ ಇದ್ದು, ಇದರ ಅನೇಕ ಶಾಖೆಗಳು ದೇಶದ ಹಲವು ನಗರಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದವು. ಆಡಳಿತಾಂಗದ ನೌಕರರು ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗಾವಣೆಗೊಳ್ಳುತ್ತಿದ್ದರು. ಎಲ್ಲ ರೋಗಗಳಿಗೆ ಸಂಬಂಧಿಸಿದಂತೆ ಚಿಕಿತ್ಸೆಗೆ ಬೇಕಾದ ಅತ್ಯಾಧುನಿಕ ಸೌಲಭ್ಯಗಳು; ಪ್ರತಿರೋಗವನ್ನು ಪರೀಕ್ಷಿಸಿ ಚಿಕಿತ್ಸೆ ನೀಡುವ ತಜ್ಞತೆಯನ್ನು ಹೊಂದಿರುವ ವೈದ್ಯರು ಇಲ್ಲಿದ್ದರು. ಭಾರತದ ಇತರೇ ಕಾರ್ಪೊರೇಟ

ಕಂಪನಿಗಳು ನೀಡುತ್ತಿದ್ದಂತೆಯೇ ಇಲ್ಲಿಯೂ ತನ್ನ ನೌಕರರಿಗೆ, ವೈದ್ಯರಿಗೆ ಸಾಕಷ್ಟು ಉತ್ತಮ ಸಂಬಳ ನೀಡುತ್ತಿತ್ತು. ಪ್ರತಿ ಅಂತಸ್ತಿಗೂ ಸಂಪರ್ಕ ಕಲ್ಪಿಸುವ ಲಿಫ್ಟ್‌ಗಳು; ಸುಂದರವಾದ ಸ್ವಚ್ಛತೆಯಿಂದ ಕೂಡಿದ ಅಮೃತಶಿಲೆಯಿಂದ ಮಾಡಿದ ಕಾರಿಡಾರ್‌ಗಳು; ಅತ್ಯುತ್ತಮ ನರ್ಸಿಂಗ್ ಸೇವೆ; ಔಷಧೀಯ ಸೇವೆ; ರೋಗಿಗಳಿಗೆ ಉತ್ತಮ ವಾತಾವರಣ ಮೂಡಿಸುವಂಥ ಸಕಲ ವ್ಯವಸ್ಥೆ ಇಲ್ಲಿತ್ತು. ಇಲ್ಲಿಗೆ ಗಂಭೀರ ಸ್ವರೂಪದ ರೋಗಿಯನ್ನು ಸೇರಿಸದರೆ, ಅವನ ಸಂಪೂರ್ಣ ನಿಗಾ ವಹಿಸಿ ಗುಣಪಡಿಸುವ ಜವಾಬ್ದಾರಿಯನ್ನು ಆಸ್ಪತ್ರೆಯೇ ನಿಭಾಯಿಸುತ್ತಿತ್ತು. ಸದಾ ರೋಗಿಯ ಕಡೆಯವರೊಡನೆ ಸಂಪರ್ಕದಲ್ಲಿದ್ದು, ಸಮಯ ಸಂದರ್ಭ ಬಂದಾಗಲೆಲ್ಲಾ ಅವರೊಡನೆ ಸಮಾಲೋಚನೆ ನಡೆಸುವ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿತ್ತು. ಹಣವೊಂದಿದ್ದಲ್ಲಿ ರೋಗಿಯ ಕಡೆಯವರು ಯಾವುದರ ಬಗ್ಗೆಯೂ ಚಿಂತಿಸಬೇಕಾದ ಅವಶ್ಯಕತೆಯಿರುತ್ತಿರಲಿಲ್ಲ.

'ಸೇವೆಗೆ ತಕ್ಕ ಹಣ' - ಇಲ್ಲಿಯ ಮೂಲಮಂತ್ರ. ಆಸ್ಪತ್ರೆ ನೀಡುವ ಕಿಂಚಿತ್ ಸೇವೆಯಿಂದ ಹಿಡಿದು ಶಸ್ತ್ರ ಚಿಕಿತ್ಸೆಯಂಥ ಗಂಭೀರ ಸ್ವರೂಪದ ಸೇವೆಯವರೆಗೂ - ಅದರ ತೀವ್ರತೆಯ ಸ್ವರೂಪದ ಆಧಾರದ ಮೇಲೆ ಹಣ ಪಡೆಯಲಾಗುತ್ತಿತ್ತು. ಇಲ್ಲಿ ಯಾವುದೇ ವಸ್ತು, ಸೇವೆ ಉಚಿತವಾಗಿ ದೊರೆಯುತ್ತಿರಲಿಲ್ಲ. ರೋಗಿಗೆ ತೊಡಿಸುವ ಬಟ್ಟೆ, ಚಡ್ಡಿ, ಹಾಸಿಗೆ, ಅದರ ಹೊದಿಕೆ; ರೋಗಿಗೆ ನೀಡುವ ಔಷಧ ಮಾತ್ರವಲ್ಲ, ಅದನ್ನು ನೀಡಲು ಬಳಸುವ ಸಾಧನಗಳು; ರಕ್ತ ಪರೀಕ್ಷೆ ಮತ್ತು ರಕ್ತ ಪಡೆಯಲು ಬಳಸುವ ಸೂಜಿಗಳು, ನಳಿಕೆಗಳು; ಬಗೆ ಬಗೆಯ ಸೇವಾ ಟ್ಯೂಬುಗಳು - ಹೀಗೆ ಒಂದಲ್ಲ ಎರಡಲ್ಲ ಪ್ರತಿಯೊಂದಕ್ಕೂ ಹಣ ಪಡೆಯಲಾಗುತ್ತಿತ್ತು. ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿ ವೆಂಟಿಲೇಟರ್‌ನಿಂದ ಪಡೆಯುವ ಗಾಳಿ, ವೆಂಟಿಲೇಟರ್‌ನ ಶುಲ್ಕ, ಆತ ಪಡೆಯುವ ಆಮ್ಲಜನಕ - ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಮುಖ್ಯ ತಜ್ಞ ವೈದ್ಯರು ರೋಗಿಗೆ ಇರಬಹುದಾದ ಇತರೆ ರೋಗಗಳನ್ನು ಪರೀಕ್ಷಿಸಲು ಆ ರೋಗಕ್ಕೆ ಸಂಬಂಧಪಟ್ಟ ಇತರೆ ತಜ್ಞ ವೈದ್ಯರ ಸಲಹೆ ಕೇಳಿದರೆ, ಆ ವೈದ್ಯರ ಸೇವಾ ಶುಲ್ಕಾ - ಹೀಗೆ ರೋಗಿಯ ಲೆಕ್ಕದಲ್ಲಿ ಪ್ರತಿ ಕ್ಷಣದಲ್ಲಿ ಪ್ರತಿಯೊಂದು ಪೈಸೆಯೂ ಜಮಾ ಆಗುತ್ತಾ ಖರ್ಚು ಬೆಳೆಯುತ್ತಾ ಸಾಗುತ್ತದೆ.

ಐಟಿಬಿಟಿಯಂಥ ಕಾರ್ಪೊರೇಟ್ ಕಂಪನಿಗಳ ಎಲ್ಲಾ ಗುಣಲಕ್ಷಣಗಳು ಕಂಪನಿಯ ಕಾರ್ಯವಿಧಾನ ಮತ್ತು ಉದ್ಯಮಶೀಲತೆಯಲ್ಲಿ ಮಾತ್ರವಲ್ಲ ಇಲ್ಲಿ ಕೆಲಸ ಮಾಡುವ ನಾಲ್ಕನೆಯ ದರ್ಜೆಯ ನೌಕರರನ್ನು ಹೊರತುಪಡಿಸಿ ಎಲ್ಲರಲ್ಲೂ ಕಾಣಬಹುದು. ಇಲ್ಲಿ ನೌಕರರು ಕೆಲಸಕ್ಕೆ ಸೇರುವ ಮುನ್ನ ಇಂತಿಷ್ಟು ದಿನ ಕೆಲಸ ಮಾಡುತ್ತೇವೆಂದು ಕಂಪನಿಗೆ ಮುಚ್ಚಳಿಕೆ ಬರೆದುಕೊಟ್ಟಿರುತ್ತಾರೆ. ಆ ಒಪ್ಪಂದದ ಪ್ರಕಾರ

ಅವರು ಕೆಲಸಮಾಡುತ್ತಾರೆ. ಅವರ ಒಪ್ಪಂದದ ಅವಧಿ ಮುಗಿಯುವ ಸಂದರ್ಭ ಬಂದಾಗ ಕಂಪನಿ ನೀಡುವ ವೇತನ ಮತ್ತು ಕೆಲಸ ಅವರಿಗೆ ತೃಪ್ತಿ ನೀಡಿದರೆ ಅಲ್ಲಿಯೇ ಮುಂದುವರಿಯುತ್ತಾರೆ. ಆದರೆ ಕಂಪನಿಯ ಕೆಲಸದ ಒತ್ತಡ ಜಾಸ್ತಿಯಾಗಿ, ಬರುತ್ತಿರುವ ಸಂಬಳ ತೃಪ್ತಿಕರವಾಗಿಲ್ಲದಿದ್ದಲ್ಲಿ ರಾಜಿನಾಮೆ ನೀಡಿ ಬೇರೆ ಕಂಪನಿಯಲ್ಲಿ ಕೆಲಸ ಸಂಪಾದಿಸಿ ಹೊರಡುತ್ತಾರೆ.

ನಾನು ಅಪೊಲೊ ಆಸ್ಪತ್ರೆಗೆ ಸೇರಿದ್ದು ಡಿಸೆಂಬರ್ ತಿಂಗಳಲ್ಲಿ. ನಾನು ಆ ತಿಂಗಳ ಕೊನೆಯಲ್ಲಿ ಅನೇಕ ಜನ ನರ್ಸುಗಳು ಕೆಲಸಬಿಟ್ಟು ಹೋದುದನ್ನು ಗಮನಿಸಿದೆ. ನರ್ಸುಗಳ ನಡುವೆ ಮೈಸೂರು ನಗರದ ವಿವಿಧ ಆಸ್ಪತ್ರೆಗಳಲ್ಲಿ ನೀಡುವ ಸಂಬಳ ಮತ್ತು ಇತರೆ ಸೌಲಭ್ಯಗಳ ನಡುವೆ ಚರ್ಚೆ ನಡೆಯುತ್ತಿತ್ತು. ಅವರಲ್ಲಿ ಬಹಳ ಜನರು ಈಗಾಗಲೇ ಮೈಸೂರಿನ ಹಲವು ಆಸ್ಪತ್ರೆಗಳಲ್ಲಿ ಕೆಲಸ ಮಾಡಿದ ಅನುಭವ ಪಡೆದಿದ್ದರು. ಒಂದು ಆಸ್ಪತ್ರೆಗಿಂತ ಮತ್ತೊಂದು ಆಸ್ಪತ್ರೆಯಲ್ಲಿ ನರ್ಸುಗಳ ಸೇವಾನುಭವ ಮತ್ತು ಕುಶಲತೆಯ ಆಧಾರದ ಮೇಲೆ ನಾಲ್ಕೈದು ಸಾವಿರ ಅಧಿಕ ಸಂಬಳ ದೊರೆಯುತ್ತದೆಯೆಂಬ ಸುಳಿವು ದೊರೆತ ಕೂಡಲೆ, ಒಂದು ತಿಂಗಳು ಮುಂಚಿತವಾಗಿ ಕಂಪನಿಗೆ ರಾಜಿನಾಮೆ ಪತ್ರ ನೀಡಿ, ಜಾಗ ಖಾಲಿ ಮಾಡುತ್ತಿದ್ದರು.

ಒಂದು ದಿನ ರಾತ್ರಿ ಹನ್ನೊಂದು ಗಂಟೆಯ ಸಮಯದಲ್ಲಿ ನನ್ನ ಸ್ವಚ್ಛತೆಯ ಕಾರ್ಯದಲ್ಲಿ ತೊಡಗಿದ್ದ ಇಬ್ಬರು ನರ್ಸುಗಳ ಸಂಭಾಷಣೆ ನನಗೆ ಕುತೂಹಲ ಮೂಡಿಸಿತು. ಅವರಲ್ಲಿ ಒಬ್ಬ ಲಿಂಗಾಯಿತ ಕೋಮಿಗೆ ಸೇರಿದವನು. ಅವನು ಹೇಳುತ್ತಿದ್ದ: "ಜೆ.ಎಸ್.ಎಸ್.ನವರು ಪ್ರಾರಂಭ ಮಾಡಿರುವ ಹೊಸ ಆಸ್ಪತ್ರೆಯಲ್ಲಿ ಇರುವ ಕೆಲಸದ ಬಗ್ಗೆ ಮಾತನಾಡಿಕೊಂಡು ಬಂದೆ. ಅಲ್ಲಿಯ ಪ್ಲೇಸ್‌ಮೆಂಟ್ ಆಫೀಸರ್ ನನಗೆ ಭರವಸೆ ನೀಡಿದ್ದಾನೆ. ಇಲ್ಲಿಗಿಂತ ಐದು ಸಾವಿರ ಅಧಿಕ ಸಂಬಳ ಬರುತ್ತದೆ. ಜೊತೆಗೆ ನಮ್ಮ ಸಂಸ್ಥೆ ಬೇರೆ! ನಮಗೆ ಒಂದು ಬಗೆಯ ಭಾವನಾತ್ಮಕ ಸಂಬಂಧ ಇರುತ್ತದೆ." ಆತನ ಜೊತೆಯಲ್ಲಿದ್ದ ಮತ್ತೊಬ್ಬ ನರ್ಸು ಕೊಲಂಬಿಯಾ ಆಸ್ಪತ್ರೆಯಿಂದ ಒಂದು ವರ್ಷದ ಹಿಂದೆ ಬಂದಿದ್ದ, ಆತ "ಇಲ್ಲ, ನಾನು ಇಲ್ಲೇ ಇರುತ್ತೇನೆ, ಸದ್ಯಕ್ಕೆ ಬೇರೆ ಕಡೆ ಹೋಗಲ್ಲ. ಇಲ್ಲಿ ಕೆಲಸ ಚೆನ್ನಾಗಿ ಕಲಿಯಲು ಅವಕಾಶವಿದೆ. ಮುಂದೆ ಅದರಿಂದ ಪ್ರಯೋಜನಕ್ಕೆ ಬರುತ್ತದೆ" ಎಂದ.

ಡ್ಯೂಟಿ ಡಾಕ್ಟರ್‌ಗಳೂ ಅಷ್ಟೆ. ಐಸಿಯುಗಳಲ್ಲಿ ಪಾಳಿಯ ಮೇಲೆ ಕೆಲಸ ಮಾಡುತ್ತಿದ್ದರು. ಅವರು ಕೂಡ ಬೇರೆಡೆ ಕೆಲಸಕ್ಕೆ ಹೋದ ಸಂಗತಿ ನನಗೆ ತಿಳಿಯುತ್ತಿತ್ತು. ಏಕೆಂದರೆ ಅವರ ಬದಲು ಹೊಸ ಡಾಕ್ಟರ್‌ಗಳು ಕಂಪನಿಯಿಂದ ನೇಮಕಗೊಂಡು ಕೆಲಸಕ್ಕೆ ಹಾಜರಾಗುತ್ತಿದ್ದರು.

ಕಾರ್ಪೊರೇಟ್ ಕಂಪನಿಗಳಿಗೆ ಸೇವೆಗೆ ತಕ್ಕ ಹಣ ಪಡೆಯುವ ಗುಣ ಲಕ್ಷಣವಿದ್ದರೆ, ಅಲ್ಲಿ ಕೆಲಸ ಮಾಡುವ ನೌಕರರಿಗೆ ತಮ್ಮ ದುಡಿಮೆ ಮತ್ತು ಅರ್ಹತೆಗೆ ತಕ್ಕ ವೇತನ ಪಡೆಯುವ ನಿರೀಕ್ಷೆಯಲ್ಲಿರುತ್ತಾರೆ. ಇಲ್ಲಿ ಕೆಲಸ ಮಾಡುವ ನೌಕರನಿಗೆ ಕಂಪನಿಯ ಮಾಲೀಕನ ಅಥವಾ ಆಡಳಿತ ಮಂಡಳಿಯ ನೇರ ಸಂಪರ್ಕ ಇರುವುದಿಲ್ಲ. ಹೀಗಾಗಿ ಮಾಲೀಕತ್ವ ಮತ್ತು ನೌಕರರ ನಡುವೆ ಇರಬೇಕಾದ ಭಾವನಾತ್ಮಕ ಬೆಸುಗೆಯಾಗಲೀ ಮಾನವೀಯ ಸಂಬಂಧವಾಗಲಿ ಮೂಡಿರುವುದಿಲ್ಲ.

ಇಲ್ಲಿ 'ಕಲ್ಯಾಣ' ಅಥವಾ 'ಸೇವೆ' ಎಂಬುದು ಹಣದಿಂದ ನಿರ್ಧಾರವಾಗುವ ಮೌಲ್ಯವಾಗಿರುತ್ತದೆ. ಕಂಪನಿಗೂ ಹಣ ಸಂಪಾದನೆ ಮುಖ್ಯಗುರಿ. ಅಲ್ಲಿ ಕೆಲಸ ಮಾಡುವ ನೌಕರರಿಗೂ ಹಣವೇ ಮುಖ್ಯ. ಸಾಮಾಜಿಕ ಸೇವಾ ಮನೋಧರ್ಮ ಮತ್ತು ಸಂಸ್ಥೆಯ ಬಗೆಗಿನ ಬದ್ಧತೆ ಯಾರಿಗೂ ಇರುವುದಿಲ್ಲ. ಇಲ್ಲಿ ಹಣಗಳಿಕೆ ಮುಖ್ಯ ಬದ್ಧತೆಯ ಸಂಗಾತಿಯಾಗಿ ವಿಜೃಂಭಿಸುತ್ತದೆ.

ಸರ್ಕಾರದ ಕೈಯಿಂದ ಖಾಸಗಿಯವರಿಗೆ, ಅನಂತರ ಕಾರ್ಪೊರೇಟ್ ಕಂಪನಿಗಳ ಕೈವಶವಾದ ಭಾರತೀಯ ಉದ್ಯಮ ಸಮಾಜದ ಸಮಗ್ರ ಅಭಿವೃದ್ಧಿಯ ದೃಷ್ಟಿಕೋನವನ್ನು ಹೊಂದಿವೆ ಎಂದು ಹೇಳುವುದು ಕಷ್ಟವಾಗುತ್ತದೆ. ಇಲ್ಲಿ ಸಮಾಜದ ಅಭಿವೃದ್ಧಿಗೆ ಪೂರಕವಾಗಿ ತಮ್ಮ ಅಭಿವೃದ್ಧಿಯ ನಡೆ ಇರಬೇಕೆಂಬ ಆಶಯವಾಗಲೀ ಆದರ್ಶವಾಗಲೀ ಇದ್ದಂತೆ ತೋರುವುದಿಲ್ಲ, ಒಟ್ಟಿನಲ್ಲಿ ಬಂಡವಾಳ ಕ್ರೋಢೀಕರಣ ಮಾಡಿಕೊಳ್ಳುತ್ತಾ ತಮಗೆ ತಾವೇ ತೆಂಗಿನಮರದಂತೆ ಎತ್ತರಕ್ಕೆ ಬೆಳೆಯುವ ಲೋಭವಿರುತ್ತದೆ.

ಹೀಗಾಗಿ ಸಂಸ್ಥೆಗಳಲ್ಲಿ ಕೆಲಸ ಮಾಡುವ ನೌಕರರಿಗೆ ಒಂದು ಸಂಸ್ಥೆಯನ್ನು ಕಟ್ಟಿ ಬೆಳೆಸಿ ಅದನ್ನು ಸಮಾಜ ಮುಖಿಯನ್ನಾಗಿಸುವ ದೃಷ್ಟಿ ಮೂಡುವುದು ತೀರಾ ಅಪರೂಪ. ಸಂಸ್ಥೆಯಂತೆಯೇ ನೌಕರನು ಸಹ ಅರ್ಥ ಸಂಸ್ಕೃತಿಯ ಬೆನ್ನು ಹತ್ತಿ ಸಮಾಜ ವಿಮುಖಿನಾಗುತ್ತಾನೆ. ಇದರಿಂದ ಕಂಪನಿ ಮತ್ತು ನೌಕರರಿಬ್ಬರಿಂದಲೂ ಒಂದು ಆರೋಗ್ಯವಂಥ ಸುಸಂಸ್ಕೃತ ಸಮಾಜ ನಿರ್ಮಾಣ ಮಾಡುವ ಮನಸ್ಸು ಮೂಡುವುದು ಕಷ್ಟವಾಗುತ್ತದೆ.

ನಾನು ಆಸ್ಪತ್ರೆಯಿಂದ ಬಿಡುಗಡೆಯಾಗುವ ಮುನ್ನ, ಆಸ್ಪತ್ರೆಯವರು ನನ್ನ ಅನಿಸಿಕೆಯನ್ನು ಕೇಳಿದರು. ನಾನು ಬರೆದೆ: "ನಿಮ್ಮಲ್ಲಿ ಬಡವರು, ಮಧ್ಯಮವರ್ಗದವರು ಚಿಕಿತ್ಸೆ ಪಡೆಯಲು ಸಾಧ್ಯವೇ ಇಲ್ಲ. ನಿಮ್ಮ ಸಂಪಾದನೆಯಲ್ಲಿ ಶೇಕಡ ಐದರಷ್ಟು ಹಣವನ್ನಾದರೂ ದೀನ ದಲಿತರ - ಬಡಬಗ್ಗರ ಚಿಕಿತ್ಸೆಗೆ ಉಪಯೋಗಿಸುವುದಾದರೆ ಅದು ಅತ್ಯಂತ ದೊಡ್ಡ ಮಾನವ ಸೇವೆಯಾಗುತ್ತದೆ".

೧೮. ಇದು ಗ್ರಾಮಸಂಸ್ಕೃತಿಯ ಆಧುನಿಕ ರೂಪ

ಅಪೊಲೊ ಆಸ್ಪತ್ರೆ ಆಧುನಿಕ ವೈದ್ಯಕೀಯ ಸೌಲಭ್ಯಗಳನ್ನೆಲ್ಲವನ್ನೂ ಒಳಗೊಂಡ ಆಸ್ಪತ್ರೆ. ಇಲ್ಲಿ ಎಸ್‌ಐಸಿಯು[೨೨] ಮತ್ತು ಎಂಐಸಿಯು ಘಟಕಗಳು ತೀವ್ರತರವಾದ ರೋಗಿಗಳ ಒತ್ತಡದಲ್ಲಿ ನಡೆಯುತ್ತವೆ. ತೀರಾ ತುರ್ತು ಸಮಯದಲ್ಲಿ ಅನೇಕ ವೇಳೆ ಜಾಗ ದೊರೆಯುವುದು ಅಸಂಭವವಾಗುತ್ತದೆ ಎಂದು ಹೇಳುತ್ತಾರೆ. ಈ ಆಸ್ಪತ್ರೆಯ ಗುಣಮಟ್ಟದ ನೆಲೆಯಲ್ಲಿಯೇ ಕಾರ್ಯನಿರ್ವಹಿಸುವ ಇತರೆ ನಾಲ್ಕಾರು ಆಸ್ಪತ್ರೆಗಳು ಮೈಸೂರು ನಗರದಲ್ಲಿವೆ. ಆದರೂ ಇಲ್ಲಿಗೆ ದಾಖಲಾಗಲು ಬರುವ ರೋಗಿಗಳ ಒತ್ತಡ ಅಧಿಕ. ಅದಕ್ಕೆ ಬಹು ಮುಖ್ಯಕಾರಣ - ಆಸ್ಪತ್ರೆಯಲ್ಲಿರುವ ತಜ್ಞ ವೈದ್ಯರು, ಅತ್ಯುತ್ತಮ ನರ್ಸಿಂಗ್ ಸೇವೆ, ನೈರ್ಮಲ್ಯ ಕಾಪಾಡಿಕೊಂಡಿರುವಿಕೆ, ಆಸ್ಪತ್ರೆಯೇ ನೇರವಾಗಿ ಅಗತ್ಯ ಔಷಧಿಗಳನ್ನು ಪೂರೈಸಲು ಮಾಡಿಕೊಂಡಿರುವ ವ್ಯವಸ್ಥೆ; ಅತ್ಯಾಧುನಿಕ ಪರೀಕ್ಷಾ ಸಾಧನಗಳು, ಉತ್ತಮ ಸಮಾಲೋಚಕರು, ರೋಗಿಗಳಿಗೆ ತಾವೇ ಅವರಿಗೆ ಬೇಕಾದ ಪಥ್ಯದ ಆಹಾರ ಸರಬರಾಜು ಮಾಡುವ ವ್ಯವಸ್ಥೆಗಳು. ಬೆಲೆ ಹೆಚ್ಚಾದರೂ ಉತ್ತಮ ಹಿತಕರ ಅನುಭವವನ್ನು ತರುವ ವಾರ್ಡುಗಳು ಇಲ್ಲಿವೆ. ಶಸ್ತ್ರಕ್ರಿಯಾ ಕೊಠಡಿಗಳಂತು ತುರ್ತು ಸಮಯಕ್ಕೆ ಅಗತ್ಯವಾದ ಸೌಲಭ್ಯಗಳನ್ನು ಸುಸಜ್ಜಿತ ವಾಗಿಟ್ಟುಕೊಂಡಿವೆ.

ಇದರ ಜೊತೆಗೆ ಇಲ್ಲಿನ ಹೊರರೋಗಿಗಳ ವಿಭಾಗಗಳು ಯಾವಾಗಲೂ ರೋಗಿಗಳಿಂದ ತುಂಬಿರುತ್ತವೆ. ಸಾಮಾನ್ಯರಿಗೆ ತುಸು ದುಬಾರಿ ಎನಿಸುವ ಧರಗಳಿದ್ದರೂ ಇಲ್ಲಿ

ತಪಾಸಣೆಗೆಂದು ಬರುವವರ ಸಂಖ್ಯೆ ಕಡಿಮೆಯಲ್ಲ. ಇಲ್ಲಿ ದಿನವೊಂದಕ್ಕೆ ಮುನ್ನೂರರಿಂದ ನಾನೂರು ಮಂದಿ ಹೊರರೋಗಿಗಳಾಗಿ ಬಂದು ವೈದ್ಯರ ಸಲಹೆ ಪಡೆಯುತ್ತಾರೆ. ಅವರಿಗೆ ಗಂಭೀರವಾದ ಕಾಯಿಲೆಯ ಮುನ್ಸೂಚನೆ ಇದ್ದರೆ ತಕ್ಷಣದ ಪರೀಕ್ಷೆ ಮತ್ತು ಚಿಕಿತ್ಸೆ ಲಭ್ಯವಾಗುತ್ತದೆ. ಇದರಿಂದಾಗಿ ಒಂದೇ ಸೂರಿನಡಿ ಸರ್ವ ಸೌಲಭ್ಯವೂ ಇರುವುದರಿಂದ ರೋಗಿಗಳು ಈ ಆಸ್ಪತ್ರೆಯನ್ನು ಇಷ್ಟ ಪಡುತ್ತಾರೆ.

ಇಷ್ಟು ದೊಡ್ಡ ಸ್ವರೂಪವನ್ನು ಹೊಂದಿರುವ ಆಸ್ಪತ್ರೆಯು ತಜ್ಞ ವೈದ್ಯರು, ಡ್ಯೂಟಿ ಡಾಕ್ಟರ್‌ಗಳು, ವಿವಿಧ ಲ್ಯಾಬ್ ತಂತ್ರಜ್ಞರು, ನೂರಾರು ಜನ ನರ್ಸ್‌ಗಳು, ರೋಗಿಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಚಲನಾಕಾಟ್ ಮತ್ತು ವೀಲ್‌ಛೇರ್‌ಗಳಲ್ಲಿ ಸಾಗಿಸುವ ಸಾಗಾಣಿಕೆದಾರರು (Transfortars), ಇವರೆಲ್ಲರಿಗೂ ಸಹಾಯಕರಾಗಿ ಕೆಲಸ ಮಾಡುತ್ತಿರುವ ನಾಲ್ಕನೆಯ ದರ್ಜೆ ನೌಕರರು, ಆಸ್ಪತ್ರೆಯ ಹಣಕಾಸು ವಿಭಾಗದಲ್ಲಿ ಕೆಲಸ ಮಾಡುವ ಗುಮಾಸ್ತರು, ಇವರ ಜೊತೆಗೆ ಆಸ್ಪತ್ರೆಯ ಸಕಲ ಕೆಲಸ ಕಾರ್ಯಗಳು ಸಮತೋಲನವಾಗಿ ತಡೆರಹಿತವಾಗಿ ನಡೆಯುವಂತೆ ನಿರ್ವಹಣೆ ಮಾಡುವ ಆಡಳಿತಗಾರರು - ಇವರೆಲ್ಲರಿಂದ ಆಸ್ಪತ್ರೆ ತುಂಬಿ ತುಳುಕುತ್ತದೆ.

ಇವರಿಗೆಲ್ಲರಿಗೂ ಸಮಯಕ್ಕೆ ತಕ್ಕಂತೆ ಕಾಫಿ, ಟೀ, ತಿಂಡಿ ವ್ಯವಸ್ಥೆಯನ್ನು ಮಾಡಲು ಆಸ್ಪತ್ರೆಯ ನೆಲ ಅಂತಸ್ತಿನಿಂದ ಹಿಡಿದು ಮೂರನೆಯ ಅಂತಸ್ತಿನವರೆಗೆ ಆಹಾರ ಮನೆಗಳಿವೆ (Food Court). ನೆಲ ಅಂತಸ್ತಿನ ಆಹಾರ ಮನೆಯು ಹೊರ ರೋಗಿಗಳ ಮತ್ತು ಒಳ ರೋಗಿಗಳ ಮನೆಯವರು ಅಥವಾ ಇತರೆಯವರಿಗೆ ಆಹಾರವನ್ನು ಪೂರೈಸುತ್ತದೆ. ಅಲ್ಲದೆ ಐಸಿಯುಗಳನ್ನು ಹೊರತುಪಡಿಸಿ ಉಳಿದ ವಾರ್ಡುಗಳಲ್ಲಿರುವ ರೋಗಿಗಳ ಕಡೆಯವರಿಗೆ ವಾರ್ಡುಗಳಿಗೇ ಆಹಾರ ಸರಬರಾಜು ಮಾಡುವ ವ್ಯವಸ್ಥೆ ಇದೆ.

ಆಸ್ಪತ್ರೆಯು ತನ್ನ ನೌಕರರಿಗೆಂದೇ ಬೇರೆಯದೆ ಆದ ಆಹಾರ ಮನೆಯನ್ನು ನಡೆಸುತ್ತದೆ. ಅಲ್ಲಿ ತನ್ನ ನೌಕರರಿಗೆ ಸಬ್ಸಿಡಿ ದರದಲ್ಲಿ ಆಹಾರ ನೀಡುವ ವ್ಯವಸ್ಥೆ ಮಾಡಿದೆ. ಇದರಿಂದ ನೌಕರರಿಗೆ ಕಡಿಮೆ ವೆಚ್ಚದಲ್ಲಿ ಆಹಾರ ಸಿಗುವುದರಿಂದ ಒಂದು ಬಗೆಯ ತೃಪ್ತಿ ದೊರೆತು, ಅವರು ಬದ್ಧತೆಯಿಂದ ಕೆಲಸ ಮಾಡಲು ಪ್ರೇರೇಪಣೆ ಸಿಗುತ್ತದೆ.

ಆಸ್ಪತ್ರೆಯ ಎಲ್ಲಾ ಲ್ಯಾಬ್‌ಗಳ, ಶಸ್ತ್ರಕ್ರಿಯಾ ಕೊಠಡಿಗಳ, ಐಸಿಯು ಮತ್ತು ವಾರ್ಡುಗಳ ಹಾಸುಹೊದಿಕೆಗಳು ಪ್ರತಿ ನಿತ್ಯ ಬೆಳಿಗ್ಗೆ ಬದಲಾಗುತ್ತವೆ. ಬಟ್ಟೆಗಳನ್ನು ಸ್ವಚ್ಛಗೊಳಿಸಿ ತಂದು ವ್ಯವಸ್ಥೆ ಮಾಡುವ ಲ್ಯಾಂಡ್ರಿಯವರು ಇದ್ದಾರೆ. ಇವರನ್ನು ಅಗಸರೆಂದು ನಮ್ಮ ರೂಢಿ ಭಾಷೆಯಲ್ಲಿ ಕರೆದರೆ ತಪ್ಪಾಗಲಾರದು. ಹಾಗೆಯೇ

ಶಸ್ತ್ರಕ್ರಿಯೆಗೆ ಒಳಗಾಗುವ ರೋಗಿಯ ಅಂಗಾಂಗಳ ರೋಮವನ್ನು ಬೋಳಿಸುವ ಮತ್ತು ಬಹುಕಾಲ ಆಸ್ಪತ್ರೆಯಲ್ಲಿರುವ ಗಂಡುರೋಗಿಗಳ ಮುಖ ಕ್ಷೌರ ಮಾಡುವ ಕ್ಷೌರಿಕರಿದ್ದಾರೆ.

ಇಷ್ಟು ದೊಡ್ಡ ಆಸ್ಪತ್ರೆಯಲ್ಲಿ ಎಲ್ಲವೂ ವಿದ್ಯುತ್ ಸಹಾಯದಿಂದಲೇ ನಡೆಯುತ್ತವೆ. ದಿನದ ಇಪ್ಪತ್ನಾಲ್ಕು ಗಂಟೆ ಹೆಚ್ಚು, ಕಡಿಮೆ ಆಸ್ಪತ್ರೆಯ ಸರ್ವಾಂಗವೂ ವಿದ್ಯುತ್ ಬೆಳಕಿನಲ್ಲಿರುತ್ತದೆ. ಅಂತಸ್ತಿನಿಂದ ಅಂತಸ್ತಿಗೆ ಮೇಲೆ - ಕೆಳಗೆ ಚಲಿಸುವ ಲಿಫ್ಟ್‌ಗಳು, ಐಸಿಯುಗಳು, ಲ್ಯಾಬ್‌ಗಳು ಮತ್ತು ಶಸ್ತ್ರ ಕ್ರಿಯಾ ಕೊಠಡಿಗಳಲ್ಲಿ ವಿದ್ಯುತ್ ಇಲ್ಲದೆ ಕೆಲಸ ಮಾಡಲಾಗುವುದೇ ಇಲ್ಲ. ನಮ್ಮಲ್ಲಿ ಯಾವಾಗ ಬೇಕಾದರೂ ವಿದ್ಯುತ್ ಕೈ ಕೊಡಬಹುದು. ತತ್‌ಕ್ಷಣದಲ್ಲಿಯೇ ಬದಲೀ ವಿದ್ಯುತ್ ಉತ್ಪಾದಿಸಿ ಸರಬರಾಜು ಮಾಡುವ ಬೃಹತ್ ಜನರೇಟರ್‌ಗಳು ಇಲ್ಲಿ ಕೆಲಸ ಮಾಡುತ್ತವೆ. ಹೆಚ್ಚು ಕಡಿಮೆ ಇಡೀ ಆಸ್ಪತ್ರೆ ಹವಾನಿಯಂತ್ರಣ ವ್ಯವಸ್ಥೆಯನ್ನೊಳಗೊಂಡಿದೆ. ಅದಕ್ಕೆ ತಡೆರಹಿತ ವಿದ್ಯುತ್ ಬೇಕೇ ಬೇಕು. ಈ ಎಲ್ಲಾ ವ್ಯವಸ್ಥೆಯನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿಕೊಳ್ಳುವ ಎಲೆಕ್ಟ್ರಿಷಿಯನ್‌ಗಳು ವ್ಯವಸ್ಥಿತವಾಗಿ ಪಾಳಿಯ ಮೇಲೆ ಕೆಲಸ ಮಾಡುತ್ತಾರೆ. ಇದರ ಜೊತೆಗೆ - ಸಕಲ ಆಧುನಿಕ ಸೌಲಭ್ಯಗಳು ವಿದ್ಯುತ್ ಸಂಪರ್ಕಕ್ಕೆ ಸೂಕ್ಷ್ಮ ವೈರುಗಳ, ಸರ್‌ಕ್ಯೂಟ್‌ಗಳ ಮೂಲಕ ಪಡೆದಿರುತ್ತವೆ. ಬಳಕೆಯ ಸಮಯದಲ್ಲಿ ಅವು ಕೆಡುವ ಸಂದರ್ಭಗಳುಂಟಾಗುತ್ತವೆ. ಆ ಕೂಡಲೆ ದೋಷವನ್ನು ಪತ್ತೆ ಹಚ್ಚಿ, ತಡರಹಿತ ವಿದ್ಯುತ್ ಹರಿಯುವಂತೆ ಮಾಡುವ ಕೆಲಸವನ್ನು ಇವರು ಎಚ್ಚರದಿಂದ ನಿರ್ವಹಿಸುತ್ತಾರೆ. ಆಸ್ಪತ್ರೆಯ ಎಲ್ಲಾ ಭಾಗಗಳಲ್ಲೂ ಪ್ರಕಾಶಿಸುವ ದೀಪಗಳು, ರೋಗಿಗಳ ದೇಹಸ್ಥಿತಿಯನ್ನು ಡಿಜಿಟಲ್ ರೂಪದಲ್ಲಿ ಸದಾ ಬಿತ್ತರಿಸುವ ಮಾನಿಟರ್‌ಗಳು, ತೀವ್ರ ಗಂಭೀರ ಸ್ವರೂಪದ ರೋಗಿಯನ್ನು ಜೀವಂತವಾಗಿಡುವ ಆಮ್ಲಜನಕ ಟ್ಯೂಬ್‌ಗಳು, ವೆಂಟಿಲೇಟರ್‌ಗಳು - ಇವುಗಳಿಗೆ ವಿದ್ಯುತ್ ಸಂಪರ್ಕ ವಿಲ್ಲದಿದ್ದಲ್ಲಿ ಕ್ಷಣಮಾತ್ರದಲ್ಲಿ ಆಗುವ ಅನಾಹುತವನ್ನು ಕಲ್ಪಿಸಿಕೊಳ್ಳಲಾಗುವುದಿಲ್ಲ. ಆದುದರಿಂದ ಜನರೇಟರ್‌ಗಳನ್ನು ಸುಸಜ್ಜಿತವಾಗಿಟ್ಟುಕೊಂಡು ನಿರಂತರ ವಿದ್ಯುತ್ ಹರಿಯುವಂತೆ ನೋಡಿಕೊಳ್ಳುವ ಎಲೆಕ್ಟ್ರಿಷಿಯನ್ ಪಾತ್ರ ತುಂಬಾ ಹಿರಿದಾಗಿದೆ.

ಇಲ್ಲಿ ಬಡಗಿಗಳೂ ಇದ್ದಾರೆ. ಅವರು ಮಾಡುವ ಕೆಲಸದ ಹತಾರಗಳ ಸ್ವರೂಪ ಬದಲಾಗಿದೆ; ಆಧುನಿಕಗೊಂಡಿದೆ. ಆದರೆ ಕೊರೆಯುವ, ಕೆತ್ತುವ, ಸೇರಿಸಿ ಬಿಗಿಮಾಡುವ, ವಿವಿಧ ಬಗೆಯ ಆಕಾರಗಳನ್ನು ಸೃಜಿಸುವ ಅವರ ಕೆಲಸ ಇಲ್ಲಿ ಅತ್ಯವಶ್ಯಕ. ಮೊದಲು ಬಳಸುತ್ತಿದ್ದ ಉಳಿ, ಸುತ್ತಿಗೆ, ಬೈರಿಗೆ ಮೊದಲಾದ ಸಾಧನಗಳು ಈಗಲೂ ಇವೆ. ಆದರೆ ಈ ಸಾಧನಗಳಲ್ಲಿ ಬಹುಪಾಲು ವಿದ್ಯುತ್ ಸಹಾಯದಿಂದ

ಕೆಲಸಮಾಡುತ್ತವೆ. ಇದರಿಂದ ಬಡಗಿಯ ದೈಹಿಕ ಶ್ರಮ ಕಡಿಮೆಯಾಗಿದೆ. ಅಲ್ಲದೆ, ಈ ಆಧುನಿಕ ವಿದ್ಯುತ್ ಚಾಲಿತ ಸಾಧನಗಳು ತ್ವರಿತವಾಗಿ ಕಾರ್ಯನಿರ್ವಹಣೆ ಯಾಗುವಂತೆ ಮಾಡುವುದರಿಂದ ಶ್ರಮದ ಜೊತೆಗೆ ಕೆಲಸವೂ ಬೇಗ ಆಗುತ್ತದೆ. ಆಸ್ಪತ್ರೆಯಲ್ಲಿರುವ ಬಹುಪಾಲು ಕೊಠಡಿಗಳನ್ನು ಅಲ್ಯುಮಿನಿಯಂ ವಿಭಜಕಗಳಿಂದ ನಿರ್ಮಿಸಲಾಗಿದೆ. ಕೌಂಟರ್‌ಗಳು, ನರ್ಸ್ ಸ್ಟೇಷನ್‌ಗಳು - ಹೀಗೆ ಒಂದಲ್ಲ, ಅನೇಕ ಬಗೆಯ ನಿರ್ಮಿತಿಗಳು ಬಡಗಿಗಳಿಂದ ನಿರ್ಮಾಣಗೊಂಡಿವೆ. ಈ ನಿರ್ಮಿತಿಗಳು ತಮ್ಮ ಉಪಯೋಗದ ಒತ್ತಡ ಮತ್ತು ಸವೆತದಿಂದಾಗಿ ಸಡಿಲಗೊಳ್ಳುತ್ತವೆ, ಮುರಿದು ಹೋಗುತ್ತವೆ. ಆಗ ಅವುಗಳನ್ನು ತಕ್ಷಣ ರಿಪೇರಿ ಮಾಡಿ ಸರಿಪಡಿಸಬೇಕಾಗುತ್ತದೆ.

ಹಳೆಯ ಕಾಲದ ಬಡಗಿ (ಆಚಾರಿ)ಯ ಹೊರ ರೂಪ ಬದಲಾಗಿದೆ, ಅಷ್ಟೆ. ಆಗ ಅವನ ಬಳಿ ಹತಾರಗಳನ್ನೊಳಗೊಂಡ ಕೈಚೀಲವಿರುತ್ತಿತ್ತು. ಈಗಿನ ಬಡಗಿಯ ಬಳಿಯೂ ಒಂದು ಕೈಚೀಲವಿರುತ್ತದೆ. ಅದರಲ್ಲಿಯೂ ಹತಾರಗಳಿರುತ್ತವೆ. ಆದರೆ ಈಗಿನ ಕಾಲದ ಹತಾರಗಳು ತಮ್ಮ ಬುಡಕ್ಕೆ ವಿದ್ಯುತ್ ವೈರ್ ಮತ್ತು ಪ್ಲಗ್‌ಗಳನ್ನು ಅಂಟಿಸಿಕೊಂಡಿರುತ್ತವೆ!

ಪ್ರತಿದಿನ ಹಾಸಿಗೆಯ ಮೇಲೆ ಮಲಗಿ ನಾನು ಈ ಎಲ್ಲಾ ಕುಶಲಕರ್ಮಿಗಳ ಕೆಲಸವನ್ನು ಗಮನಿಸುತ್ತಿದ್ದೆ. ಸಾಮಾನ್ಯವಾಗಿ ಬಡಗಿಗಳು ರಾತ್ರಿವೇಳೆ ಹೆಚ್ಚು ಕಾರ್ಯ ನಿರ್ವಹಿಸುತ್ತಿದ್ದರು. ಮೊದ ಮೊದಲು ನನಗೆ ಅವರು ಮಾಡುತ್ತಿದ್ದ ಸದ್ದಿನ ಮೂಲ ತಿಳಿಯಲಿಲ್ಲ. ಆದರೆ ಒಂದುವಾರದ ಅವಧಿಯಲ್ಲೇ ಅವರ ಕೆತ್ತುವ, ಕೊರೆಯುವ, ಕೊಯ್ಯುವ ಮತ್ತು ಕುಟ್ಟುವ ಕೆಲಸದ ಸ್ವರೂಪವೇನೆಂದು ನನಗೆ ಅರ್ಥವಾಯಿತು. ಹಗಲಿನಲ್ಲಿಯೂ ಆಸ್ಪತ್ರೆಯು ನಿಶ್ಶಬ್ದತೆಯನ್ನು ಕಾಯ್ದುಕೊಳ್ಳುತ್ತಿರುತ್ತದೆ. ಅಂದ ಮೇಲೆ ರಾತ್ರಿವೇಳೆ ಹೇಳಬೇಕಿಲ್ಲ. ನಿಶ್ಶಬ್ದದ ಸಾಮ್ರಾಜ್ಯ ಎಲ್ಲೆಡೆ ಆವರಿಸುತ್ತದೆ. ಅಪರೂಪಕ್ಕೆ ಕೇಳಿ ಬರುವ ರೋಗಿಗಳ ನರಳಾಟ, ಮಕ್ಕಳ ಆಕ್ರಂದನ ಹೊರತು ಪಡಿಸಿದರೆ ಮೌನವೇ ಇಲ್ಲಿ ಮನೆ ಮಾಡಿಕೊಂಡಿರುತ್ತದೆ. ಇಂಥ ವಾತಾವರಣದಲ್ಲಿ ಈ ಬಡಗಿಗಳು ತಮ್ಮ ಕ್ರಿಯೆಯಲ್ಲಿ ಉಂಟುಮಾಡುವ ಸದ್ದು ಪ್ರಧಾನವಾಗಿ ಎದ್ದು ಕಾಣುತ್ತದೆ.

ನಾಲ್ಕನೆಯ ದರ್ಜೆಯ ನೌಕರರು, ಅಗಸರು, ಕ್ಷೌರಿಕರು, ವಿದ್ಯುತ್ ಕೆಲಸಗಾರರು, ಅಡಿಗೆ ಕೆಲಸ ನಿರ್ವಹಿಸುವವರು, ಕಾರ್ಪೆಂಟರ್‌ಗಳು - ಮೊದಲಾದ ಜನಗಳ ಕೆಲಸವನ್ನು ಗಮನಿಸಿದಾಗ ಇದ್ದಕ್ಕಿದ್ದಂತೆ ನನಗೆ ನನ್ನ ಗ್ರಾಮ ಸಂಸ್ಕೃತಿಯ ನೆನಪಾಯಿತು. ಒಂದು ಗ್ರಾಮ ಎಲ್ಲ ವಿಷಯಗಳಲ್ಲಿ ತನಗೆ ತಾನು ಸ್ವಾವಲಂಬಿ ಯಾಗಿರುತ್ತದೆ. ಅಲ್ಲಿ ಊರ ಯಜಮಾನರುಗಳಿರುತ್ತಾರೆ; ಸದಾ ಬೇಸಾಯದಲ್ಲಿ

ನಿರತರಾಗಿರುವ ರೈತಾಪಿ ಜನರಿರುತ್ತಾರೆ; ಪೂಜೆ ಪೌರೋಹಿತ್ಯ ಮಾಡಿಕೊಂಡು ಬದುಕುವ ಬ್ರಾಹ್ಮಣರಿರುತ್ತಾರೆ; ರೈತಾಪಿ ವರ್ಗಕ್ಕೆ ಮತ್ತು ಅವರ ಬೇಸಾಯಕ್ಕೆ ಪೂರಕವಾಗಿ ನೆರವಾಗುವ ಬಡಗಿ ಇರುತ್ತಾನೆ; ಹಳ್ಳಿಯ ಮೈಲಿಗೆ ಬಟ್ಟೆಗಳನ್ನು ಶುಚಿ ಮಾಡಿ ನೀಡುವ ಅಗಸನಿರುತ್ತಾನೆ; ಗ್ರಾಮಸ್ಥರ ಬೆಳೆದ ತಲೆಕೂದಲು ಗಡ್ಡಗಳನ್ನು ಕತ್ತರಿಸಿ ಸುಂದರವಾಗಿರುವಂತೆ ಮಾಡುವ ಕ್ಷೌರಿಕನಿರುತ್ತಾನೆ; ಕಾಯಿಲೆ ಕಸಾಲೆಗಳಿಗೆ ಔಷಧ ನೀಡಿ ಗುಣಪಡಿಸುವ ನಾಟಿ ವೈದ್ಯನೂ ಇರುತ್ತಾನೆ. ಅಂದರೆ ಒಂದು ಗ್ರಾಮ ತನ್ನ ಬೇಕು ಬೇಡಗಳಿಗೆ ತನ್ನ ಹಳ್ಳಿಯಿಂದ ದೂರ ಹೋಗಿ ನೆರವು ಪಡೆಯಬೇಕಾದ ಸಂದರ್ಭಗಳು ಉಂಟಾಗುವುದು ಅಪರೂಪ.

ಮುಖ್ಯ ಬೇಸಾಯ ಕಸುಬುದಾರರಿಗೆ ಮೇಲಿನ ಕುಶಲ ಕರ್ಮಿಗಳು ತಮ್ಮ ಶಕ್ತ್ಯಾನುಸಾರ ಸಹಾಯಮಾಡಿದರೆ, ರೈತರು ಅವರಿಗೆ ಸುಗ್ಗಿಯಲ್ಲಿ ಅವರ ಕುಟುಂಬಕ್ಕಾಗುವಷ್ಟು ಆಹಾರಧಾನ್ಯಗಳನ್ನು ನೀಡುತ್ತಾನೆ. ಹೀಗೆ ಹಳ್ಳಿಯ ಬದುಕು ಪರಸ್ಪರ ಸಹಾಯ ಮಾಡುತ್ತಾ ಸ್ವಾವಲಂಬಿಯಾಗಿ ಬದುಕು ಮಾಡುತ್ತದೆ.

ಇದೇ ಬಗೆಯ ಸ್ವರೂಪವನ್ನು ನಾನು ಈ ಕಾರ್ಪೋರೇಟ್ ಕಂಪನಿ ಆಸ್ಪತ್ರೆಯಲ್ಲಿ ಗುರುತಿಸಿದೆ. ಇಲ್ಲಿ ಕುಶಲಕರ್ಮಿಗಳು ತಮ್ಮ ತಮ್ಮ ಕೆಲಸಗಳನ್ನು ನಿರ್ವಹಿಸುತ್ತಾರೆ. ಆ ದುಡಿಮೆಗೆ ತಕ್ಕ ಸಂಬಳವನ್ನು ಕಂಪನಿ ನೀಡುತ್ತದೆ. ಆಸ್ಪತ್ರೆ ತನ್ನಲ್ಲಿ ಅಗತ್ಯವಾಗಿ ಆಗಬೇಕಾದ ಕೆಲಸಗಳಿಗೆ - ಅದರಲ್ಲೂ ಮುಖ್ಯವಾಗಿ ವೈದ್ಯಕೀಯ ಚಿಕಿತ್ಸೆಯು ಸುಗಮವಾಗಿ, ಶುಚಿಯಾಗಿ ನಡೆದುಹೋಗಲು ಬೇಕಾದ ಪೂರಕ ಕೆಲಸಗಳಿಗೆ - ಹೊರಗಡೆಯಿಂದ ನೆರವು ಪಡೆಯಿದೆ ಆಸ್ಪತ್ರೆಯಲ್ಲಿಯೇ ಅವುಗಳನ್ನು ಸಂರಚಿಸುವ ಮೂಲಕ ಸ್ವಾವಲಂಬಿಯಾಗಿದೆ. ಇದರಿಂದ ಆಸ್ಪತ್ರೆ ತನ್ನ ಕೆಲಸದ ಗುಣಮಟ್ಟವನ್ನು ಕಾಯ್ದುಕೊಳ್ಳಲು ಸಾಧ್ಯವಾಗಿದೆ. ಇದರಿಂದಾಗಿ ಆಸ್ಪತ್ರೆಯ ಕಾರ್ಯವಿಧಾನ ಮತ್ತು ಅಂಗ ರಚನೆಯಲ್ಲಿ ಗ್ರಾಮ ಸಂಸ್ಕೃತಿಯ ಆಧುನಿಕ ರೂಪ ಮೂರ್ತಗೊಂಡಿದೆ.

ಭಾರತೀಯ ಗ್ರಾಮ ಸಂಸ್ಕೃತಿಗೂ ಈ ಆಸ್ಪತ್ರೆಯ ಆಧುನಿಕ ಗ್ರಾಮಸಂಸ್ಕೃತಿ ರೂಪಕ್ಕೂ ಹೋಲಿಕೆ ಇದೆ, ನಿಜ. ಆದರೆ ಗ್ರಾಮ ಸಂಸ್ಕೃತಿಯಲ್ಲಿ ಕಸುಬುಗಳು ಕೇವಲ ವೃತ್ತಿಯಾಗಿರದೆ ಜಾತಿಗಳಾಗಿ ರೂಪುಗೊಂಡಿರುವುದನ್ನು ಕಾಣಬಹುದು. ಅಗಸ, ಆಚಾರಿ(ಬಡಗಿ), ಶುಚಿಗಾರ, ಆಹಾರ ತಯಾರಿಸಿ ಕೊಡುವವರು ಅಲ್ಲಿ ತಮ್ಮ ವೃತ್ತಿಯಿಂದಲೇ ತಮ್ಮ ಜಾತಿಯನ್ನು ಗುರುತಿಸಿಕೊಂಡಿರುವ ದುರಂತ ಸಂಭವಿಸಿದೆ. ಆ ವೃತ್ತಿಯವರು ಆಯಾಯ ಕಸುಬುಗಳನ್ನೇ ಮಾಡಬೇಕೆಂಬ ಅಲಿಖಿತ ನಿಯಮ ಜಾರಿಗೊಂಡು, ಕಾಲಾನಂತರ ಅದೇ ಸ್ಥಾಯಿಯಾದ ರೂಪು ತಾಳಿದೆ. ಕಸುಬುದಾರರು ತಮ್ಮ ವೃತ್ತಿಯನ್ನು ಬದಲಿಸುವಂತಿಲ್ಲ. ಬದಲಿಸುವಿಕೆಯನ್ನು ಸಂಪ್ರದಾಯ ಸಮಾಜ

ಒಪ್ಪಿಕೊಳ್ಳುವುದಿಲ್ಲ. ಸಮಾಜದ ಎಲ್ಲಾ ವರ್ಗದವರು ಮೈಲಿಗೆಯೆನ್ನದೆ ಊಟ ಮಾಡಬೇಕಾದರೆ, ಆ ಅಡುಗೆಯನ್ನು ಮೇಲ್ಜಾತಿಯವರಾದ ಬ್ರಾಹ್ಮಣರೇ ಮಾಡಬೇಕು; ಮರಗೆಲಸವನ್ನು ಬಡಗಿಯೇ ಮೂಡಬೇಕು; ಕ್ಷೌರವನ್ನು ಕ್ಷೌರಿಕನೇ ಮಾಡಬೇಕು; ಮಲಿನಗೊಂಡ ಬಟ್ಟೆಯನ್ನು ಅಗಸನೇ ಒಗೆದು ಮಡಿಮಾಡಬೇಕು; ಕಕ್ಕಸ್ಸು, ಮೋರಿ ಮೊದಲಾದವುಗಳನ್ನು ಜಲಗಾರನೇ ಶುಚಿಗೊಳಿಸಬೇಕು - ಎಂಬ ರೂಢಿಗತ ಕಟ್ಟುನಿಟ್ಟಿನ ನಿಯಮಗಳು ಇಂದಿಗೂ ಚಾಲ್ತಿಯಲ್ಲಿರುವುದನ್ನು ಗಮನಿಸಬಹುದು.

ಆದರೆ ಆಪೊಲೊ ಆಸ್ಪತ್ರೆ ನಿರ್ಮಿಸಿಕೊಂಡಿರುವ ಸ್ವಾವಲಂಬಿ ವ್ಯವಸ್ಥೆಯಲ್ಲಿ ಗ್ರಾಮ ಸಂಸ್ಕೃತಿಯ ಜಾತಿ ವ್ಯವಸ್ಥೆ ಪಲ್ಲಟಗೊಂಡಿರುವುದನ್ನು ಕಾಣಬಹುದು. ಆಸ್ಪತ್ರೆಯ ಮಲಿನಗೊಂಡ ಬಟ್ಟೆಗಳನ್ನು ಶುಚಿಗೊಳಿಸುವ 'ಲ್ಯಾಂಡ್ರಿ'ಯವರಲ್ಲಿ ಒಂದೇ ಜಾತಿಯ ಜನರಿಲ್ಲ. ಬಟ್ಟೆ ಶುಚಿಗೊಳಿಸುವ ಕೆಲಸದಲ್ಲಿ ನಿಪುಣತೆ ಸಾಧಿಸಿರುವ ಸಮಾಜದ ಎಲ್ಲಾ ವರ್ಗದಿಂದ ಬಂದ ಕೆಲಸಗಾರರನ್ನು ನಾನು ಕಂಡೆ. ಕೆಲಸ ಮಾಡುವ ವಿಧಾನವೂ ಇಂದು ಬದಲಾಗಿದೆ. ಹಿಂದಿನ ಕಾಲದ ಹಾಗೆ ಕೆರೆ ಕಟ್ಟೆಗಳಿಗೆ ಹೋಗಿ ಬಟ್ಟೆ ಒಗೆದು ತರುವ ತಾಪತ್ರಯ ಇಂದಿಲ್ಲ. ಆಧುನಿಕ ತಂತ್ರಜ್ಞಾನ ರೂಪಿಸಿರುವ ಯಂತ್ರಗಳ ಮೂಲಕ ಶುಚಿಗೊಳಿಸುವ ಕೆಲಸವನ್ನು ಹಿಂದಿಗಿಂತ ಅಚ್ಚುಕಟ್ಟಾಗಿ ಮಾಡಬಹುದು. ಯಂತ್ರಗಳು ಒಗೆದು ಮಡಿ ಮಾಡಿದ ಬಟ್ಟೆಗಳನ್ನು ಇಸ್ತ್ರಿ ಮಾಡಿ ಎಲ್ಲ ಬಗೆಯ, ಎಲ್ಲ ಜಾತಿಯ ರೋಗಿಗಳಿಗೆ ಪ್ರತಿದಿನ ಬೆಳಿಗ್ಗೆ ಸರಬರಾಜು ಮಾಡುವ ಕೆಲಸವನ್ನು ಈ ವ್ಯವಸ್ಥೆ ಮಾಡುತ್ತದೆ. ಈ ಕೆಲಸವನ್ನು ಅಗಸನೇ ಮಾಡಬೇಕೆನ್ನುವ ರೂಢಿಗತ ಕಟ್ಟು ಇಲ್ಲಿ ಬಿಚ್ಚಿಹೋಗಿದೆ.

ನಾನು ಗಮನಿಸಿದ ಹಾಗೆ ಇಲ್ಲಿನ ಕ್ಷೌರಿಕರಲ್ಲಿ ಆ ಜಾತಿಗೆ ಸೇರಿದವರು ತುಸು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆದರೆ ಈ ವೃತ್ತಿಗೆ ಸಮಾಜ ಇತರೆ ಜಾತಿಗಳಿಂದ ಬಂದವರು ಪ್ರವೇಶಗೊಂಡಿರುವುದು ಮುಖ್ಯವಾಗಿ ಗಮನಿಸಬೇಕಾದ ಅಂಶವೆನ್ನಿಸುತ್ತದೆ. ಅನ್ಯಜಾತಿಗಳಿಂದ ಬಂದು ಈ ವೃತ್ತಿಯನ್ನು ಕೈಗೊಂಡಿರುವ ಅನೇಕರು ಈ ವೃತ್ತಿಯಲ್ಲಿ ನೈಪುಣ್ಯತೆಯನ್ನು ಪಡೆದಿದ್ದಾರೆ.

ಅಡಿಗೆ ಕೆಲಸ ನಿರ್ವಹಿಸುತ್ತಿರುವ ಬಹುಪಾಲು ಮಂದಿ ಇಲ್ಲಿ ಮೇಲ್ಜಾತಿಯವರಲ್ಲ; ಮುಖ್ಯವಾಗಿ ಬ್ರಾಹ್ಮಣರಲ್ಲ. ಎಲ್ಲ ಜಾತಿಯ ಆಸಕ್ತ ಅಡಿಗೆ ಕೆಲಸಗಾರರೂ ದಿನದ ಇಪ್ಪತ್ತು ಗಂಟೆಗೂ ಮಿಕ್ಕ ಅವಧಿಯಲ್ಲಿ ಆಸ್ಪತ್ರೆಯ ನೌಕರರಿಗೂ ರೋಗಿಗಳಿಗೂ ರೋಗಿಗಳ ಕಡೆಯವರಿಗೂ ಆಹಾರ ತಯಾರಿಸಿ ನೀಡುತ್ತಿದ್ದಾರೆ. ಇವರು ತಯಾರು ಮಾಡಿ ನೀಡಿದ ಆಹಾರವನ್ನು ಆಸ್ಪತ್ರೆಗೆ ಬರುವ ಸಕಲೆಂಟು ಜಾತಿಗೆ ಸೇರಿದವರೆಲ್ಲರೂ ತಿನ್ನುತ್ತಾರೆ. ಅದೇ ರೀತಿ ಮುಟ್ಟಿಸಲಾಗದ ಜಾತಿಯವರಾದ

ಶುಚಿಗಾರರು ಈಗ ಆಸ್ಪತ್ರೆಗಳಲ್ಲಿ ಎಲ್ಲರನ್ನೂ ಮುಟ್ಟುತ್ತಾರೆ. ಎಲ್ಲ ಜಾತಿಯ ರೋಗಿಗಳನ್ನು ಶುಚಿಗೊಳಿಸುವ ಕೆಲಸದಿಂದ ಹಿಡಿದು ಅಂಡುಗಳನ್ನು ಶುದ್ಧಗೊಳಿಸುವ ಕೆಲಸವನ್ನು ಇವರು ಶ್ರದ್ಧೆಯಿಂದ ಮಾಡುತ್ತಾರೆ. ಆದರೆ ಇವರಲ್ಲಿ ಈಗ ಇತರೆ ಸ್ಪೃಶ್ಯ ಜಾತಿಯುವರು ಕೂಡ ಕೆಲಸ ನಿರ್ವಹಿಸುತ್ತಿದ್ದರು. ಹೇಲು ಉಚ್ಚೆಗಳನ್ನು ಬಳಿಯುವ ಮತ್ತು ಸ್ವಚ್ಚಗೊಳಿಸುವ ಕೆಲಸ ಜಲಗಾರರದೆಂದು ಮೂಗು ಮುರಿಯುತ್ತಿದ್ದ ಈ ಸ್ಪೃಶ್ಯ ಜಾತಿಯವರು ಆಸ್ಪತ್ರೆಯಲ್ಲಿ ದೊರೆಯುವ ವೇತನ ಮತ್ತು ಅವಮಾನ ರಹಿತ ಕೆಲಸದ ಮಹತ್ವವನ್ನು ಅರ್ಥ ಮಾಡಿಕೊಂಡು ಈ ಕೆಲಸವನ್ನು ಒಪ್ಪಿಕೊಳ್ಳುತ್ತಿದ್ದಾರೆ. ಆಸ್ಪತ್ರೆಗಳಲ್ಲಿ ಈ ಮೊದಲು ಆಯಾಗಳಾಗಿ ಕೆಲಸ ಮಾಡುತ್ತಿದ್ದ ಮೇಲ್ಜಾತಿಯ ಹೆಂಗಸರು ಅಧಿಕ ಸಂಖ್ಯೆಯಲ್ಲಿ ಈ ಆಸ್ಪತ್ರೆಯಲ್ಲಿ ನಾಲ್ಕನೆಯ ದರ್ಜೆ ನೌಕರರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅಹಿಂದ ಎಂದು ಇಂದು ಕರೆಸಿಕೊಳ್ಳುತ್ತಿರುವ ಜಾತಿಗಳಿಂದ ಬಂದ ಪುರುಷ ಸ್ತ್ರೀ ಕೆಲಸಗಾರರು ಅಧಿಕ ಸಂಖ್ಯೆಯಲ್ಲಿದ್ದಾರೆ. ಆದರೆ ಭಾರತೀಯ ಜಾತಿ ವ್ಯವಸ್ಥೆಯ ಶ್ರೇಣಿಯಲ್ಲಿ ಮೇಲಿನ ಮೆಟ್ಟಿಲಲ್ಲಿರುವ ಬ್ರಾಹ್ಮಣರು ಇನ್ನೂ ಈ ವೃತ್ತಿಗೆ ಸೇರಿಲ್ಲವೆಂಬುದು ಗಮನಾರ್ಹ ಸಂಗತಿ. ಅಪರೂಪಕ್ಕೆಂಬಂತೆ ಲಿಂಗಾಯಿತ, ಒಕ್ಕಲಿಗ ಜಾತಿಯುವರು ನಾಲ್ಕನೆಯ ದರ್ಜೆ ನೌಕರರಾಗಿ ಕೆಲವರು ಕಾರ್ಯನಿರ್ವಹಿಸುತ್ತಿದ್ದಾರೆ.

ಇಂಥ ಆಧುನಿಕ ವ್ಯವಸ್ಥೆಗಳು ನಗರ - ಕೇಂದ್ರಿತವಾದವು. ಆಧುನಿಕ ಯುಗದ ಯಂತ್ರ ನಾಗರೀಕತೆ, ಶಿಕ್ಷಣ, ನಿರುದ್ಯೋಗ ಸಮಸ್ಯೆಗಳು ಉಂಟುಮಾಡಿರುವ ಸಾಮಾಜಿಕ ಪರಿವರ್ತನೆಗಳು ಇವು. ಅನಿವಾರ್ಯತೆಯೂ ಕೂಡ ರೂಢಿಗತ ವ್ಯವಸ್ಥೆಯನ್ನು ಅಲುಗಾಡಿಸಬಲ್ಲುದೆಂಬುದಕ್ಕೆ ನಾನು ಆಸ್ಪತ್ರೆಯಲ್ಲಿ ಕಂಡ ಗ್ರಾಮ ಸುಂಸ್ಕೃತಿಯ ಆಧುನಿಕ ರೂಪವೇ ಸಾಕ್ಷಿ ನುಡಿಯುತ್ತದೆ.

ನಾನು ಆಸ್ಪತ್ರೆಯ ಹಾಸಿಗೆಯಲ್ಲಿ ರಾತ್ರಿ ಮಲಗಿರುವಾಗ ನಿಶ್ಯಬ್ದವನ್ನು ಸೀಳಿಕೊಂಡು ಬರುತ್ತಿದ್ದ ಕಾರ್ಪೆಂಟರ್‌ಗಳು ಮಾಡುವ ಕೆಲಸದ ಸದ್ದು, ಪ್ರತಿ ರಾತ್ರಿ ಆಸ್ಪತ್ರೆಯ ಆಮ್ಲಜನಕದ ಪ್ಲಾಂಟ್‌ಗೆ ಆಮ್ಲಜನಕವನ್ನು ತುಂಬುವ ಸದ್ದು - ಈಗಲೂ ನನಗೆ ಕೇಳುತ್ತಿರುವಂತೆ ಭಾಸವಾಗುತ್ತದೆ.

೧೯. ಆಸ್ಪತ್ರೆಯಿಂದ ಬಿಡುಗಡೆಗೊಂಡ ನಂತರ

೦೮ ಫೆಬ್ರುವರಿ ೨೦೧೪, ಶನಿವಾರ

ನಾನು ಆಸ್ಪತ್ರೆಯಿಂದ ಬಿಡುಗಡೆ ಗೊಂಡ ದಿನ. ನಾನು ಆಸ್ಪತ್ರೆಯಿಂದ ಬಿಡುಗಡೆಗೊಳ್ಳುವ ಆ ಸಂದರ್ಭದಲ್ಲಿ ನಾನು ನೂರಕ್ಕೆ ನೂರರಷ್ಟು ಸುಧಾರಣೆ ಗೊಂಡಿರಲಿಲ್ಲ. ನನ್ನ ರಕ್ತದಲ್ಲಿ ಆಮ್ಲಜನಕ ಪ್ರಮಾಣ ಸರಿಯಾದ ಲೆಕ್ಕದಲ್ಲಿತ್ತು. ಆದರೆ ನನ್ನ ಶ್ವಾಸಕೋಶಗಳು ಪೂರ್ಣಪ್ರಮಾಣ ದಲ್ಲಿ ಗಾಳಿಯನ್ನು ತೆಗೆದು ಬಿಡಲು ಆಗುತ್ತಿರಲಿಲ್ಲ. ಶ್ವಾಸಕೋಶಗಳ ಉಚ್ವಾಸ ನಿಚ್ವಾಸಗಳಿಗೆ ಪೂರಕವಾಗಿ ಕೆಲಸ ಮಾಡ ಬೇಕಾದ ಆ ಭಾಗದ ಮಾಂಸ ಖಂಡಗಳು ಇನ್ನೂ ಬಲಾಢ್ಯಗೊಂಡಿರಲಿಲ್ಲ. ಹೀಗಾಗಿ ಕೃತಕ ಉಸಿರನ್ನು ನೀಡುವ ಬೈಪ್ಯಾಪ್ ಯಂತ್ರ ಇನ್ನೂ ಕೆಲಸ ಮಾಡುತ್ತಿತ್ತು. ಹಗಲಿನಲ್ಲಿ ಗಂಟೆಗೊಮ್ಮೆ ಬೈಪ್ಯಾಪ್ ಯಂತ್ರದ ಮೂಲಕ ಗಾಳಿ ತೆಗೆದುಕೊಳ್ಳ ಬೇಕಾಗಿತ್ತು. ರಾತ್ರಿ ವೇಳೆ ಪೂರ್ತ ಬೈಪ್ಯಾಪ್ ಯಂತ್ರದ ಸಹಾಯದಿಂದಲೇ ಉಸಿರಾಡ ಬೇಕಿತ್ತು. ನನ್ನ ಕುತ್ತಿಗೆಯಲ್ಲಿ ಈ ಕಾರಣ ದಿಂದಲೇ ಟ್ರೇಕಿಯಾಸ್ಟಮಿ ನಳಿಗೆಗಳು ಇದ್ದವು. ನನ್ನ ಮೂಗಿನಲ್ಲಿ ರೈಲ್‌ಟ್ಯೂಬ್ ಆಹಾರ ಸೇವನೆಗಾಗಿ ಇರಲೇಬೇಕಾಗಿತ್ತು. ಅದರಿಂದ ಅದು ನನ್ನ ಮೂಗಿನಿಂದ ಹೊರಕ್ಕೆ ನೇತಾಡುತ್ತಿತ್ತು.

ನಾನು ಈ ಸ್ಥಿತಿಯಲ್ಲಿ ಮನೆಗೆ ಬರಬೇಕಾಗಿತ್ತು. ಸುಮಾರು ಎರಡು ತಿಂಗಳು ರೋಗಿಯಾಗಿ ನನ್ನ ಆಸ್ಪತ್ರೆಯ ವಾಸ್ತವ್ಯ ನನಗೆ ಉಸಿರುಕಟ್ಟಿದ ಅನುಭವವನ್ನು ತಂದುಕೊಟ್ಟಿತ್ತು. ಇಲ್ಲಿಂದ ಬಿಡುಗಡೆಗೊಂಡು ಹೋದರೆ ಸಾಕೆಂದು ಚಡಪಡಿಸಿದೆ. ನನ್ನ ವೈದ್ಯರ ಮೇಲೆ ಮೃದುವಾಗಿ

ಒತ್ತಡ ಹೇರಲಾರಂಭಿಸಿದೆ. ಅವರು ನನ್ನ ಬಿಡುಗಡೆಗೆ ಒಪ್ಪಿದರು. ಆದರೆ ಅದಕ್ಕೆ ಮುನ್ನ ನನ್ನ ಈ ಸ್ಥಿತಿಯ ನಿರ್ವಹಣೆ ಮತ್ತು ವಾಸ್ತವ್ಯಕ್ಕೆ ಸೂಕ್ತ ವ್ಯವಸ್ಥೆಯನ್ನು ಮನೆಯಲ್ಲಿ ಮಾಡಬೇಕಾಗಿತ್ತು. ಅದಕ್ಕಾಗಿ ಒಂದುವಾರ ಮುಂಚಿತವಾಗಿ ನನ್ನ ಮಗ ಸಿದ್ಧತೆ ನಡೆಸಿದ. ನನ್ನ ಮಲಗುವ ಕೊಠಡಿಯ ಧೂಳು ತೆಗೆದ. ಅಲ್ಲಿದ್ದ ಪುಸ್ತಕದ ರಾಶಿಯನ್ನು ಗ್ಯಾರೇಜಿಗೆ ಸಾಗಿಸಿದ. ನನಗೆ ಬೈಪ್ಯಾಪ್ ಯಂತ್ರದ ಮೂಲಕ ಗಾಳಿ ನೀಡಬೇಕಾಗಿದ್ದುದರಿಂದ ನಿರಂತರ ವಿದ್ಯುತ್ ಅವಶ್ಯಕತೆಯಿತ್ತು. ಆದರೆ ವಿದ್ಯುತ್ ಯಾವ ಸಂದರ್ಭದಲ್ಲಿ ಬೇಕಾದರೂ ಕೈಕೊಡಬಹುದಿತ್ತು. ಅದಕ್ಕಾಗಿ ಯುಪಿಎಸ್ ವ್ಯವಸ್ಥೆ ಮಾಡಿದ.

ನನ್ನ ಶ್ವಾಸನಾಳದಲ್ಲಿ ಕಫ ಕಟ್ಟುವಿಕೆ ಕಡಿಮೆಯಾಗಿರಲಿಲ್ಲ. ದಿನಕ್ಕೆ ನಾಲ್ಕಾರು ಬಾರಿಯಾದರೂ ಯಂತ್ರದ ಸಹಾಯದಿಂದ ಕಫ ತೆಗೆದು ಉಸಿರಾಡಲು ಅನುವು ಮಾಡಿಕೊಡಬೇಕಾಗಿತ್ತು. ಅದಕ್ಕಾಗಿ ಕಾಲಿನ ಒತ್ತುವಿಕೆಯಿಂದ ಕೆಲಸ ಮಾಡುವ ಸಕ್ಷನಿಂಗ್ ಯಂತ್ರವನ್ನು ತಂದು ಜೋಡಿಸಿದ. ನನಗೆ ಆಮ್ಲಜನಕದ ಕೊರತೆಯಾಗದಂತೆ ಪೂರೈಕೆ ಮಾಡಲು ಆಮ್ಲಜನಕದ ಸಿಲಿಂಡರ್ ಅನ್ನು ವ್ಯವಸ್ಥೆಗೊಳಿಸಿದ.

ಇಷ್ಟೆಲ್ಲಾ ಮೂಲಭೂತ ಅವಶ್ಯಕತೆಗಳ ವ್ಯವಸ್ಥೆ ಮಾಡಿದ ಮೇಲೆ, ಅವನ್ನೆಲ್ಲಾ ಆಪರೇಟ್‌ಮಾಡಿ ನನ್ನನ್ನು ನೋಡಿಕೊಳ್ಳುವವರು ಬೇಕಾಗಿತ್ತು. ನನ್ನ ಮಗನ ರಜೆಯೆಲ್ಲಾ ಮುಗಿದುಹೋಗಿದ್ದವು. ಅವನು ಕೆಲಸಕ್ಕೆ ಮಂಗಳೂರಿಗೆ ಹೋಗಲೇ ಬೇಕಾಗಿತ್ತು. ನನ್ನ ಮಗಳ ರಜೆ ಮುಗಿದು ಆಗಲೇ ಅವಳು ಕೆಲಸಕ್ಕೆ ಹಾಜರಾಗಿದ್ದಳು. ಇನ್ನು ನನ್ನ ಹೆಂಡತಿ ಒಬ್ಬಳಿಂದ ನನ್ನ ಆರೈಕೆಯ ನಿರ್ವಹಣೆ ಕಷ್ಟವಾಗುತ್ತಿತ್ತು. ಜೊತೆಗೆ, ನನ್ನ ಆರೋಗ್ಯ ವಿಚಾರಿಸಿ ಶುಭ ಹಾರೈಸಲು ಬರುವ ಆಪ್ತರನ್ನೂ ಬವಣಿಸುವ ಜವಾಬ್ದಾರಿಯನ್ನು ಕೂಡ ನಿರ್ವಹಿಸಬೇಕಾಗಿತ್ತು.

ನನಗೆ ಪ್ರತಿ ಎರಡು ಗಂಟೆಗೊಮ್ಮೆ ದ್ರವರೂಪದ ಆಹಾರ ನೀಡುವುದು, ಪ್ರತಿ ನಾಲ್ಕು ಗಂಟೆಗೊಮ್ಮೆ ತಪ್ಪದೆ ಮಾತ್ರೆ ನೀಡುವುದು, ಅವಶ್ಯ ಬಿದ್ದಾಗಲೆಲ್ಲಾ ನನ್ನಲ್ಲಿ ಕಟ್ಟಿಕೊಂಡ ಕಫವನ್ನು ಸಕ್ಷನಿಂಗ್ ಮಾಡುವುದು, ಬೈಪ್ಯಾಪ್ ಮೂಲಕ ಕೃತಕ ಗಾಳಿ ನೀಡುವ ಮತ್ತು ಆಮ್ಲಜನಕ ನೀಡುವ ಕೆಲಸ ಮಾಡಬೇಕಾಗಿತ್ತು. ಇವುಗಳಲ್ಲಿ ಏರುಪೇರಾದರೆ ಮತ್ತೆ ನನ್ನ ಆರೋಗ್ಯ ಹದಗೆಡುವ ಸಾಧ್ಯತೆ ಹೆಚ್ಚಾಗಿತ್ತು. ಆದ್ದರಿಂದ ಈ ಕೆಲಸ ಗೊತ್ತಿರುವ ತರಬೇತಿ ಪಡೆದ ಹೋಮ್ ನರ್ಸ್‌ಗಳನ್ನು ನೇಮಕ ಮಾಡಿಕೊಳ್ಳಲೇಬೇಕೆಂದು ಡಾ. ಹರೀಶ್ ನಾಯಕ್ ಹೇಳಿದರು. ಅಷ್ಟೇ ಅಲ್ಲದೆ ಅವರೆ ತಮ್ಮ ಸಹಾಯಕ ಬ್ರದರ್‌ಗಳ ಮೂಲಕ ಹೋಮ್ ನರ್ಸಿಂಗ್ ಕೇರ್ ಕೆಲಸ

ನಿರ್ವಹಿಸುತ್ತಿದ್ದ ಏಜನ್ಸಿಯ ಮೂಲಕ ಇಬ್ಬರು ನರ್ಸುಗಳನ್ನು ಗೊತ್ತುಪಡಿಸಿದರು. ನಾನು ಆಸ್ಪತ್ರೆಯಿಂದ ಬಿಡುಗಡೆಯಾಗುವ ಮೂರ್‍ನಾಲ್ಕು ದಿನ ಮುಂಚಿತವಾಗಿ ಅವರು ಆಸ್ಪತ್ರೆಗೆ ಬಂದು ನನ್ನೊಡನೆ ಇದ್ದು ನನ್ನ ಅಗತ್ಯತೆಗಳನ್ನು ಅರ್ಥಮಾಡಿಕೊಳ್ಳ ಬೇಕಾಗಿತ್ತು. ಆಸ್ಪತ್ರೆಯ ನರ್ಸುಗಳು ನನಗೆ ಚಿಕಿತ್ಸೆ ನೀಡುವ ವಿಧಾನವನ್ನು ನೋಡಿ, ಗ್ರಹಿಸಿ ಅದರಂತೆ ಅವರು ಮನೆಯಲ್ಲಿ ಕಾರ್ಯನಿರ್ವಹಿಸಬೇಕಾಗಿತ್ತು.

ಅಂತೆಯೇ ಅವರು ನಾಲ್ಕು ದಿನ ಮುಂಚಿತವಾಗಿ ಆಸ್ಪತ್ರೆಗೆ ಬಂದರು. ಇನ್ನೂ ಇಪ್ಪತ್ತು ವಯಸ್ಸಿನ ಆಜುಬಾಜಿನಲ್ಲಿದ್ದ ಅವರು ಪಾಳಿಯ ಮೇಲೆ ನನ್ನೊಡನೆ ಇರಬೇಕಾಗಿತ್ತು. ಆದರೆ ಅವರಿಗೆ ಸೂಕ್ತ ತರಬೇತಿ ನೀಡಿದಂತೆ ನನಗೆ ತೋರಲಿಲ್ಲ. ಅವರಿಗೆ ನರ್ಸಿಂಗ್‌ನ ಯಾವ ಕೆಲಸವೂ ಬರುತ್ತಿರಲಿಲ್ಲ. ಕಲಿಯುವ ಆಸಕ್ತಿಯೂ ಅಷ್ಟಾಗಿ ಅವರಲ್ಲಿ ಇದ್ದಂತೆ ತೋರಲಿಲ್ಲ. ಆಸ್ಪತ್ರೆಯ ನರ್ಸುಗಳು ಮಾಡುವ ಕೆಲಸವನ್ನು ಆಸಕ್ತಿಯಿಂದ ನೋಡಿ ಗ್ರಹಿಸುವ ಕುತೂಹಲವೂ ಇರಲಿಲ್ಲ. ಇದರಿಂದಾಗಿ ನಾವು ಮನೆಗೆ ಬಂದ ಮೇಲೆ ಸುಮಾರು ಒಂದು ವಾರದ ಕಾಲದಷ್ಟು ದಿನ ನನ್ನ ಮಗನಿಗೆ ಅವರಿಗೆ ಕೆಲಸ ಹೇಳಿಕೊಡುವುದೇ ಆಯಿತು.

ಡಾ. ಆಮೀರ್ ಮೊಹಿನ್ ಮತ್ತು ಡಾ. ಹರೀಶ್‌ನಾಯಕ್ ಅವರು ನಾನು ಬಿಡುಗಡೆಯಾಗುವ ಮುನ್ನ "ಪ್ರತಿ ಹತ್ತು ದಿನಕ್ಕೊಮ್ಮೆ ಬಂದು ಚೆಕ್ ಅಪ್ ಮಾಡಿಸಿಕೊಳ್ಳಬೇಕು. ಮನೆಯಲ್ಲಿ ಸೆಕೆಂಡರಿ ಇನ್‌ಫೆಕ್ಷನ್ ಆಗದಂತೆ ಜಾಗರೂಕ ರಾಗಿರಬೇಕು" ಎಂದು ನನಗೆ ಮತ್ತು ನನ್ನ ಮನೆಯವರಿಗೆ ತಿಳಿಸಿದರು. "ಮನೆಗೆ ಬರುವ ಸ್ನೇಹಿತರು ಮತ್ತು ಬಂಧುಗಳಿಗೆ ಏನಾದರೂ ಸೋಂಕಿದ್ದರೆ, ಅದು ನಿಮಗೆ ಬಹು ಬೇಗ ಬರುವ ಸಾಧ್ಯತೆ ಇರುತ್ತದೆ. ಆದಷ್ಟು ದೂರದಿಂದ ಮಾತನಾಡಿ, ಕೈ ಕುಲುಕುವ ಮತ್ತಿತರ ದೇಹ ಸಂಪರ್ಕದಿಂದ ದೂರವಿರಿ" ಎಂದು ಎಚ್ಚರಿಸಿದರು.

ಆ ಶನಿವಾರ ಮಧ್ಯಾಹ್ನ ಎರಡು ಗಂಟೆಯ ಹೊತ್ತಿಗೆ ಮನೆಗೆ ಬಂದೆ. ಮನೆಗೆ ಬರುವ ದಾರಿಯ ಇಕ್ಕೆಲಗಳಲ್ಲಿದ್ದ ಹೊಂಗೆಮರಗಳು ಆಗಲೇ ಚಿಗುರಿದ್ದವು. ಅವುಗಳ ಕೋಮಲ ಎಳೆಯ ಚಿಗುರೆಲೆಗಳು ನನಗೆ ಮಿಗಿಲಾದ ಆನಂದವನ್ನುಂಟು ಮಾಡಿದವು. ನನ್ನ ಮನೆಯ ಮುಂದಿನ ಆಕಾಶ ಮಲ್ಲಿಗೆ ಮರ, ಹೊಂಗೆಮರ, ಮನೆಯೊಳಗಿನ ನನ್ನ ಕೈತೋಟದ ಆಲಂಕಾರಿಕ ಗಿಡಗಳು, ಎತ್ತರಕ್ಕೆ ಬೆಳೆದು ಕಾಯಿಗಳ ಭಾರಕ್ಕೆ ತೊನೆದಾಡುತ್ತಿದ್ದ ತೆಂಗಿನಮರಗಳು ನನ್ನನ್ನು ನಗುಮುಖದಿಂದ ಸ್ವಾಗತಿಸಿದವು. ಅವುಗಳ ಹಿತಕರವಾದ ಗಾಳಿ ನನ್ನಲ್ಲಿ ಮತ್ತೆ ಬದುಕಿನ ಉತ್ಸಾಹವನ್ನು ತುಂಬಲು ಪ್ರಯತ್ನಿಸಿತು.

ನಾನು ಆಸ್ಪತ್ರೆಯಿಂದ ಬಿಡುಗಡೆಯಾದ ವಿಷಯ ತಿಳಿದು ನನ್ನ ಅನೇಕ

ಹಿತೈಷಿಗಳು, ಸ್ನೇಹಿತರು ದಿನನಿತ್ಯ ಬರತೊಡಗಿದರು. ನನ್ನ ಆರೋಗ್ಯದ ಶೀಘ್ರ ಚೇತರಿಕೆಯನ್ನು ಆಶಿಸಿದರು. ಊರಿಂದ ನನ್ನ ತಂದೆ ತಾಯಿ ಹಲವಾರು ಬಂಧುಗಳೊಡನೆ ಬಂದು ನನ್ನ ಆರೋಗ್ಯ ವಿಚಾರಿಸಿದರು. ನನ್ನ ಹೆಂಡತಿಗೆ ಇವರೆಲ್ಲರ ಬವಣಿಕೆಯಲ್ಲಿ ಸಮಯ ಕಳೆಯುತ್ತಿತ್ತು.

ನನ್ನನ್ನು ಪ್ರತಿ ಹತ್ತು ದಿನಗಳಿಗೊಮ್ಮೆ ನನ್ನ ಮಕ್ಕಳಲ್ಲಿ ಯಾರಾದರೊಬ್ಬರು ಬಂದು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದರು. ಇದೇ ಸಂದರ್ಭದಲ್ಲಿ ನನ್ನ ಮೂಗಿನಲ್ಲಿ ನೇತಾಡುತ್ತಿದ್ದ ರೈಲ್ಸ್ ಟ್ಯೂಬನ್ನು ತೆಗೆದು ಪೆಗ್‌ಟ್ಯೂಬನ್ನು ನೇರವಾಗಿ ನನ್ನ ಹೊಟ್ಟೆಗೆ ಅಳವಡಿಸಲಾಯಿತು. ಆ ಸಂದರ್ಭದಲ್ಲಿ ಆದ ರಂಪವನ್ನು ಈಗಾಗಲೇ ವರ್ಣಿಸಿದ್ದೇನೆ. ಇದೇ ರೀತಿ ಒಮ್ಮೆ ಚೆಕ್‌ಅಪ್‌ಗೆ ಹೋದಾಗ ವೈದ್ಯರು ನನಗೆ ಮತ್ತೊಂದು ಸುತ್ತಿನ IVIG ಔಷಧವನ್ನು ನೀಡಬೇಕೆಂದು ನಿರ್ಧರಿಸಿದರು. ಮಾರ್ಚ್ ಮೊದಲವಾರದಲ್ಲಿ ಒಂದು ದಿನ ಬೆಳಿಗ್ಗೆಯಿಂದ ರಾತ್ರಿ ಒಂಬತ್ತು ಗಂಟೆಯವರೆಗೆ ನನ್ನ ರಕ್ತನಾಳಗಳಿಗೆ IVIG ಮದ್ದು ಹರಿಯಿತು.

ನನ್ನ ಆರೋಗ್ಯದಲ್ಲಿ ನಿಧಾನವಾಗಿ ಚೇತರಿಕೆ ಕಂಡು ಬರತೊಡಗಿತು. ಇದಕ್ಕೆ ಮನೆಯ ವಾತಾವರಣ ಪೂರಕವಾಗಿ ಕೆಲಸ ಮಾಡುತ್ತಿತ್ತು. ಆಸ್ಪತ್ರೆಯ ಬಂಧನ ವಾತಾವರಣಕ್ಕಿಂತ ಸಹಜ ಗಾಳಿ ಬೆಳಕಿನ ವಾತಾವರಣ ಹಿತಕರವಾಗಿತ್ತು. ಜೊತೆಗೆ ಆಗಾಗ ಭೇಟಿ ನೀಡುವ ಸ್ನೇಹಿತರು ಮತ್ತು ಪ್ರೀತಿಯ ಚೈತನ್ಯ ತುಂಬುತ್ತಿದ್ದ ನನ್ನ ಪತ್ನಿ ನನ್ನ ಚೇತರಿಕೆಗೆ ಔಷಧದಷ್ಟೇ ಮುಖ್ಯ ಕಾರಣರಾಗಿದ್ದರು. ಮಾರ್ಚ್ ತಿಂಗಳ ಅಂತ್ಯದ ವೇಳೆಗೆ ಬೈಪ್ಯಾಪ್ ಯಂತ್ರದ ಬಳಕೆ ಹೆಚ್ಚು ಕಡಿಮೆ ನಿಂತಿತು. ಆಮ್ಲಜನಕದ ಅವಶ್ಯಕತೆ ಕೂಡ ಅಷ್ಟಾಗಿ ಬೇಕಿರಲಿಲ್ಲ. ಶ್ವಾಸನಾಳದಲ್ಲಿ ಶೇಖರವಾಗುತ್ತಿದ್ದ ಕಫ ಏಪ್ರಿಲ್ ಎರಡನೆಯ ವಾರದಲ್ಲಿ ಕಾಣೆಯಾಯಿತು. ಇದರಿಂದಾಗಿ ಏಪ್ರಿಲ್ ಕೊನೆಯವಾರದಲ್ಲಿ ನನ್ನ ಕುತ್ತಿಗೆಯಲ್ಲಿ ತೂತು ಕೊರೆದು ಅಳವಡಿಸಿದ್ದ ಟ್ರೇಕಿಯಾಸ್ಟಮಿ ಸಾಧನವನ್ನು ತೆಗೆಯಲಾಯಿತು. ಈ ಸಾಧನ ನನ್ನ ಕುತ್ತಿಗೆಯಲ್ಲಿ ಸುಮಾರು ನಾಲ್ಕು ತಿಂಗಳ ಕಾಲವಿತ್ತು. ಇದರಿಂದ ನನ್ನ ಕತ್ತಿನ ತಳಭಾಗದಲ್ಲಿ ಚಿಕ್ಕ (ನಾಲ್ಕಾಣೆಯಷ್ಟು) ರಂಧ್ರ ನಿರ್ಮಾಣವಾಗಿತ್ತು. ಇದನ್ನು ಮೈಕ್ರೋಪಾರ್ ಪೇಪರ್ ಮತ್ತು ಶುಚಿಗೊಂಡ ಹತ್ತಿಯಿಂದ ಎಷ್ಟು ಭದ್ರವಾಗಿ ಪ್ಯಾಕ್ ಮಾಡಿದರೂ ಗಾಳಿ ಕುತ್ತಿಗೆಯ ಮೂಲಕ ಹೊರಬರುತ್ತಿತ್ತು. ಇದರಿಂದ ನನ್ನ ಧ್ವನಿಯಲ್ಲಿ ಸ್ಪಷ್ಟತೆ ಬರುತ್ತಿರಲಿಲ್ಲ. ಧ್ವನಿ ಕ್ಷೀಣವಾಗಿ ನನ್ನ ಕಿವಿಗೆ ತಟ್ಟಿ ನನಗೇ ಒಂದು ಬಗೆಯ ಇರಿಸು ಮುರಿಸಾಗುತ್ತಿತ್ತು. ಇನ್ನೇನು ರಂಧ್ರದ ತೂತು ಮುಚ್ಚಿಕೊಂಡಿತು ಎಂದು ಅನ್ನಿಸಿದರೂ ಸೀನು ಬಂದಾಗ ಅಥವಾ ಸ್ವಲ್ಪ ಜೋರಾಗಿ ಧ್ವನಿ ಹೊರಡಿಸಿ ಮಾತನಾಡಿದಾಗ ಅಥವಾ ಮಲ

ವಿಸರ್ಜಿಸುವಾಗ ಉಸಿರು ಬಿಗಿ ಹಿಡಿಯಲು ಯತ್ನಿಸಿದಾಗ - ಕುತ್ತಿಗೆಯ ರಂಧ್ರದ ತೂತು ಮತ್ತೆ ತೆರೆದುಕೊಂಡು ತೊಂದರೆ ಕೊಡುತ್ತಿತ್ತು. ಇದೇ ಸಮಯದಲ್ಲಿ ಒಮ್ಮೆ ಸೋಂಕು ತಗುಲಿ ಕೆಮ್ಮು ಬಂತು. ಆಗಂತು ನನ್ನ ಕುತ್ತಿಗೆಯ ರಂಧ್ರ ಕೆಮ್ಮಿದಾಗಲೆಲ್ಲ ಪುಸ್‌ಪುಸ್ಸೆಂದು ಸದ್ದು ಮಾಡತೊಡಗಿತು. ಕುತ್ತಿಗೆಯ ರಂಧ್ರದ ಒಳಗೋಡೆಯ ಗಾಯವೆಲ್ಲಾ ಸಂಪೂರ್ಣವಾಗಿ ವಾಸಿಯಾಗಿ; ಆ ರಂಧ್ರ ಆಭರಣ ಧರಿಸುವ ಹೆಂಗಸರ ಕಿವಿಯ ರಂಧ್ರದಂತೆ ಕಾಣುತ್ತಿತ್ತು. ನನಗಂತು ಆ ರಂಧ್ರ ತನಗೆ ತಾನೇ ಕೂಡಿಕೊಳ್ಳುವು ದರ ಬಗ್ಗೆ ಅನುಮಾನ ಬಂತು. ಜೂನ್ ತಿಂಗಳಲ್ಲಿ ಮಾಮೂಲಿಯಾಗಿ ಡಾ. ಆಮೀರ್ ಮೊಹಿನ್ ರವರ ಬಳಿ ಹೋದಾಗ ಅವರು ರಂಧ್ರವನ್ನು ಪರೀಕ್ಷಿಸಿ ಪ್ಲಾಸ್ಟಿಕ್ ಸರ್ಜನ್ ನಾರಾಯಣ ಹೆಗ್ಗಡೆಯವರಿಗೆ ಫೋನ್ ಮಾಡಿ ಅದಕ್ಕೆ ಹೊಲಿಗೆಹಾಕುವಂತೆ ತಿಳಿಸಿದರು. ಆ ವಿಷಯವನ್ನು ಡಾ. ಹರೀಶ್ ನಾಯಕ್ ಅವರ ಗಮನಕ್ಕೂ ತಂದರು. ಆಸ್ಪತ್ರೆಯ ಎಮರ್ಜೆನ್ಸಿಯ ಸೂಕ್ತ ವ್ಯವಸ್ಥೆ ಇದ್ದ ಕೊಠಡಿಯಲ್ಲಿ ಡಾ. ನಾರಾಯಣ ಹೆಗ್ಗಡೆ ಅವರು ಕುತ್ತಿಗೆಯ ರಂಧ್ರಕ್ಕೆ ಒಳ-ನಡುವಿನ- ಹೊರ ಭಾಗದಲ್ಲಿ ಹೊಲಿಗೆಯನ್ನು ಹಾಕಿದರು. ಕೇವಲ ಹೊರ ಭಾಗದ ಚರ್ಮವನ್ನು ಹೊಲಿದರೆ, ಗಾಳಿಯು ಕುತ್ತಿಗೆಯ ಮಧ್ಯದ ಪದರಕ್ಕೆ ನುಗ್ಗಿ ಮಾತನಾಡುವಾಗ ಚರ್ಮ ಉಬ್ಬಿಕೊಳ್ಳುತ್ತದೆಯೆಂದೂ ನೋಡುವವರಿಗೆ ಹಿತವಾಗಿ ಕಾಣುವುದಿಲ್ಲವೆಂದೂ, ಆದುದರಿಂದ ಮೂರು ಹಂತದ ಹೊಲಿಗೆ ಹಾಕುತ್ತಿರುವುದಾಗಿ ಅವರು ನನಗೆ ಹೊಲಿಗೆ ಹಾಕುವಾಗ ಹೇಳಿದರು. ಈಗ ನನ್ನ ಕುತ್ತಿಗೆಯ ರಂಧ್ರ ಪೂರ್ಣ ಮುಚ್ಚಿದೆ. ನಾನು ಮಾತನಾಡುವಾಗ ಧ್ವನಿ ಸ್ಪಷ್ಟವಾಗಿ ಹೊರಡುತ್ತದೆ.

ಈ ನಡುವೆ ದೇಶದಲ್ಲಿ ಲೋಕಸಭಾ ಚುನಾವಣೆ ಘೋಷಣೆಯಾಯಿತು. ಏಪ್ರಿಲ್ ತಿಂಗಳಿಂದ ಮೇ ತಿಂಗಳ ಮಧ್ಯದವರೆಗೂ ದೀರ್ಘ ಕಾಲ ಚುನಾವಣೆಗಳು ನಡೆದು ದಾಖಲೆ ನಿರ್ಮಾಣವಾಯಿತು. ನನ್ನ ಮಗನಿಗೆ ಮಂಗಳೂರಿನಿಂದ ಮೈಸೂರಿನ ಕಛೇರಿಗೆ ವರ್ಗವಾಯಿತು. ಅವನು ಜೂನ್ ತಿಂಗಳ ಒಂದನೆಯ ತಾರೀಖು ಮೈಸೂರಿಗೆ ಬಂದು ಕೆಲಸಕ್ಕೆ ಹಾಜರಾದ. ಇದರಿಂದ ನಮ್ಮ ಬದುಕು ಹಗುರಾಯಿತು. ಮೂರು ವರ್ಷಗಳಲ್ಲಿ ಮೂರು ಕಡೆ ವಾಸಮಾಡಿ ನನ್ನ ಮನೆಯವರು ಹೈರಾಣಾಗಿದ್ದರು. ಮನೆಯ ಹೊರಗಿನ ಕೆಲಸ ಮತ್ತು ನನ್ನ ಆರೋಗ್ಯಕ್ಕೆ ಸಂಬಂಧಿಸಿದ ಕೆಲಸಗಳನ್ನು ಅವನು ನಿರ್ವಹಿಸತೊಡಗಿದ. ಗಂಡ ಹೆಂಡತಿ ಇಬ್ಬರೇ ಇದ್ದ ನಮಗೆ ಆನಂದ ವಾಯಿತು. ಬೆಂಗಳೂರಿನಲ್ಲಿರುವ ಮಗಳು ವಾರಕ್ಕೊಮ್ಮೆ ಬಂದು ಹೋಗುವ ತನ್ನ ಕ್ರಿಯೆಯನ್ನು ಮುಂದುವರಿಸಿದ್ದಾಳೆ.

ನನ್ನ ಮಗ ಮೈಸೂರಿಗೆ ಬಂದುದರಿಂದ ಮತ್ತು ನನ್ನ ಆರೋಗ್ಯದಲ್ಲಿ ಚೇತರಿಕೆ

ಕಂಡು ಬಂದುದರಿಂದ ನಮ್ಮ ಮನೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಹೋಮ್ ನರ್ಸ್‌ಗಳ ಅವಶ್ಯಕತೆಯು ಕಡಿಮೆಯಾಯಿತು. ನನ್ನ ಬಹುಪಾಲು ಕೆಲಸಗಳನ್ನು ನಾನೇ ಮಾಡಿಕೊಳ್ಳುತ್ತಿದ್ದೆ. ನಾನು ಸೇವೆಯಿಂದ ನಿವೃತ್ತನಾಗಿದ್ದುದರಿಂದ ಅವರ ದುಬಾರಿ ವೇತನವನ್ನು ನೀಡುವುದು ನಮಗೆ ಹೊರೆಯಾಗುತ್ತಿತ್ತು. ಆದುದರಿಂದ ಜೂನ್ ತಿಂಗಳ ಒಂದನೆಯ ತಾರೀಖಿನಿಂದ ಅವರು ಬರುವುದು ಬೇಡವೆಂದು ಸದರಿ ಏಜೆನ್ಸಿಗೆ ತಿಳಿಸಲಾಯಿತು.

ನನ್ನ ಒಣ ಕಣ್ಣುಗಳು (Dry Eyes) ಬಗ್ಗೆ ನಿಮಗಾಗಲೇ ತಿಳಿಸಿದ್ದೇನೆ. ನನ್ನ ಕಣ್ಣುಗಳ ಒಣಗುವಿಕೆಯ ಜೊತೆಗೆ ನನಗೆ ಹೊಸ ಸಮಸ್ಯೆಯೊಂದು ನಿಧಾನವಾಗಿ ಉದ್ಭವವಾಗತೊಡಗಿತು. ಏಪ್ರಿಲ್ ತಿಂಗಳಲ್ಲಿರಬಹುದು. ನನಗೆ ಓದಲು ತೊಂದರೆಯಾಗತೊಡಗಿತು. ದೃಷ್ಟಿ ಕರಗಿದಂತೆ ಭಾಸವಾಯಿತು. ಬಹುಶಃ ನನ್ನ ಕನ್ನಡಕದ ಗಾಜನ್ನು ಬದಲಾಯಿಸಬೇಕಾಗಬಹುದೇನೋ ಎಂದುಕೊಂಡೆ. ಒಂದು ವಾರದ ಅವಧಿಯಲ್ಲಿಯೇ ನನಗೆ ಟಿವಿಯು ಸ್ಪಷ್ಟವಾಗಿ ಕಾಣುತ್ತಿಲ್ಲವೆನ್ನಿಸಿತು. ಟಿವಿಯಲ್ಲಿ ಮೂಡುವ ದೃಶ್ಯದ ಮೇಲೆ ತೆಳುವಾದ ಬಿಳಿ ಪೊರೆ ಆವರಿಸಿಕೊಳ್ಳುತ್ತಿತ್ತು. ಆಗ ನನಗೆ ನನ್ನ ಕಣ್ಣಿಗೇನೋ ದೋಷವಾಗಿದೆಯೆಂದು ತಿಳಿದೆ. ಒಂದು ದಿನ ಸಂಜೆ ಡಾ. ಪ್ರಕಾಶ್ ಅವರನ್ನು ಭೇಟಿಯಾದೆವು. ಈ ಮೊದಲಿನಿಂದಲೂ ನನ್ನ ಕಣ್ಣುಗಳನ್ನು ನೋಡುತ್ತಿದ್ದ ಡಾ. ಪ್ರಕಾಶ್ ಅವರು ನನ್ನ ಕಣ್ಣುಗಳನ್ನು ಸಾವಧಾನವಾಗಿ ಪರೀಕ್ಷಿಸಿ ನನ್ನ ಬಲಗಣ್ಣಿಗೆ ಕ್ಯಾಟರಾಕ್ಟ್ ಆಗಿದೆಯೆಂದು ದೃಢಪಡಿಸಿದರು. ನನ್ನ ಎಡಗಣ್ಣು ಬಾಲ್ಯದಿಂದಲೇ ದೃಷ್ಟಿಹೀನವಾಗಿದ್ದುದರಿಂದ ಬಲಗಣ್ಣನ್ನು ನಾನು ಹುಷಾರಾಗಿ ಕಾಪಾಡಿಕೊಳ್ಳಬೇಕಾಗಿತ್ತು. ಕಳೆದ ಒಂದೂವರೆ ವರ್ಷದಿಂದ ನಾನು ಒಣ ಕಣ್ಣುಗಳ ಬಾಧೆಯಿಂದ ನರಳುತ್ತಿದ್ದೆ. ಈಗ ಕ್ಯಾಟರಾಕ್ಟ್ ಆಗಿದೆ. ಕ್ಷಣಕಾಲ ಅಧೀರನಾದೆ. ಬದುಕಿನಲ್ಲಿ ಬಹಳಷ್ಟು ದೈಹಿಕ ನೋವುಂಡಿದ ನನಗೆ ಇದು ಅಂಥ ಆಘಾತವನ್ನೇನು ನೀಡಲಿಲ್ಲ. ನನ್ನ ಎಂದಿನ ವೈಚಾರಿಕ ನೆಲೆಯ ಅರಿವಿನ ಮೂಲಕ ಎಚ್ಚರಗೊಂಡೆ. ನನಗೆ ಸಕ್ಕರೆ ಕಾಯಿಲೆ ಇದ್ದುದರಿಂದ ಇಂದಲ್ಲ ನಾಳೆ ಕ್ಯಾಟರಾಕ್ಟ್ ಬಂದೇ ಬರುತ್ತಿತ್ತು. ಅಲ್ಲದೆ ವಯಸ್ಸಾದ ಮೇಲೆ ಸಾಮಾನ್ಯವಾಗಿ ಎಲ್ಲರಿಗೂ ಬರುತ್ತಿದ್ದ ಸಾಮಾನ್ಯ ಕಾಯಿಲೆ. ಇದಕ್ಕೆ ಹೆದರುವ ಅವಶ್ಯಕತೆಯಿಲ್ಲವೆಂದುಕೊಂಡೆ. ವೈದ್ಯಕೀಯ ವಿಜ್ಞಾನ ಅಗಾಧವಾಗಿ ಬೆಳೆದಿರುವ ಈ ದಿನಗಳಲ್ಲಿ ಕ್ಯಾಟರಾಕ್ಟ್ ದೊಡ್ಡ ಸಮಸ್ಯೆ ಅಲ್ಲವೆಂದುಕೊಂಡೆ.

ಡಾ. ಪ್ರಕಾಶ್ ಚಿಂತಿತರಾದಂತೆ ನನಗೆ ತೋರಿತು. ಅವರು "ಕ್ಯಾಟರಾಕ್ಟ್ ಸಾಮಾನ್ಯ ದೃಷ್ಟಿದೋಷ. ಸಕ್ಕರೆ ಕಾಯಿಲೆಯಿರುವವರಿಗೆ ಬಲುಬೇಗ ಬರುತ್ತದೆ.

ಬೇರೆಯವರಿಗೆ ಬರಬಾರದೆಂದೇನೂ ಇಲ್ಲ. ನಿಮಗೆ ಸಕ್ಕರೆ ನಿಯಂತ್ರಣದಲ್ಲಿದೆ. ಈಗ ನಿಮಗೆ ಕ್ಯಾಟರಾಕ್ಟ್ ಬಹುಶಃ ಅದರಿಂದ ಬಂದಿರಲಿಕ್ಕಿಲ್ಲ, ನೀವು ಮಯೇಸ್ತೇನಿಯಾ ಗ್ರೇವಿಸ್ ಕಾಯಿಲೆಗೆ ತೆಗೆದುಕೊಳ್ಳುತ್ತಿರುವ ಸ್ಟಿರಾಯ್ಡ್‌ನಿಂದ ಕ್ಯಾಟರಾಕ್ಟ್ ಬಂದಿದೆ. ಇದು ಸ್ಟಿರಾಯ್ಡ್ ಇಂಡ್ಯೂಸಡ್ ಕ್ಯಾಟರಾಕ್ಟ್. ಇದಕ್ಕೆ ಸರ್ಜರಿ ಮೂಲಕ ಚಿಕಿತ್ಸೆ ನೀಡಬಹುದು. ನಿಮ್ಮ ದೃಷ್ಟಿಗೇನೂ ತೊಂದರೆಯಾಗದು. ಆದರೆ ನನಗೊಂದು ಚಿಂತೆ ಕಾಡುತ್ತಿದೆ" ಎಂದು ಹೇಳಿ ಕ್ಷಣಕಾಲ ನನ್ನ ಮುಖನೋಡಿದರು. ಅನಂತರ ಅವರು ಮಾತು ಮುಂದುವರಿಸಿ "ಡಾ. ಮಹೇಶ್ ಕುಮಾರ್ ಅವರಿಗೊಮ್ಮೆ ತೋರಿಸಿರಿ. ಸರ್ಜರಿ ಅವರ ಆಸ್ಪತ್ರೆಯಲ್ಲಿಯೇ ಮಾಡಬೇಕಾಗುತ್ತದೆ. ನಿಮಗೆ ಡ್ರೈ ಐಯ್ ಇರುವುದರಿಂದ ಸರ್ಜರಿ ಆದನಂತರ ಕಾರ್ನಿಯವನ್ನು ಕಾಪಾಡುವುದು ಸ್ವಲ್ಪ ಕಷ್ಟವಾಗುತ್ತದೆ. ಅದಕ್ಕಾಗಿ ತುಂಬಾ ಎಚ್ಚರಿಕೆ ವಹಿಸಬೇಕಾಗುತ್ತದೆ. ನಾನು ಡಾ. ಮಹೇಶ್ ಕುಮಾರ್ ಅವರಿಗೆ ಫೋನ್ ಮಾಡಿ ಮಾತನಾಡಿರುತ್ತೇನೆ. ನೀವು ನಾಳೆ ಸಂಜೆ ಅವರನ್ನು ಭೇಟಿಮಾಡಿರಿ" ಎಂದರು.

ಡಾ. ಪ್ರಕಾಶ್ ನನ್ನ ಹಿತೈಷಿಗಳು. ನನ್ನನ್ನು ಕಂಡರೆ ಅವರಿಗೆ ವಿಶೇಷ ಪ್ರೀತಿ. ನಾನು ಲೇಖಕನೆಂದು ಹೆಚ್ಚು ಕಾಳಜಿ ವಹಿಸುತ್ತಿದ್ದರು. ಅವರು ತಿಳಿಸಿದಂತೆ ಮಾರನೆಯ ದಿನ ಡಾ. ಮಹೇಶ್‌ಕುಮಾರ್ ರವರ ಆಸ್ಪತ್ರೆಗೆ ನನ್ನ ಪತ್ನಿ ಮತ್ತು ಮಗನ ಜೊತೆ ಹೋದೆ. ಅಲ್ಲಿ ನನ್ನ ಕಣ್ಣುಗಳನ್ನು ಮತ್ತೊಮ್ಮೆ ವಿಧವಿಧವಾಗಿ ಪರೀಕ್ಷಿಸಲಾಯಿತು. ಡಾ. ಮಹೇಶ್‌ಕುಮಾರ್ ನನ್ನ ಕಣ್ಣುಗಳನ್ನು ಪರೀಕ್ಷಿಸಿ "ನಿಮಗೆ ಡ್ರೈ ಐಯ್ ಇರುವುದರಿಂದ ತಕ್ಷಣ ಸರ್ಜರಿ ಮಾಡುವುದು ಬೇಡ. ನಿಮಗೆ ಇನ್ನೂ ಎರಡು ಮೂರು ತಿಂಗಳು ದೈನಂದಿನ ಚಟುವಟಿಕೆಗಳಿಗೆ ಏನೂ ತೊಂದರೆಯಾಗದು. ನಿಮಗೆ ಏನೂ ಮಾಡಲಾಗುವುದಿಲ್ಲವೆಂದಾದಾಗ ಅಂತಿಮವಾಗಿ ಸರ್ಜರಿ ಮಾಡೋಣ. ಸರ್ಜರಿಯ ನಂತರ ನಿಮ್ಮ ಕಣ್ಣು ಗುಣವಾಗುವಿಕೆ ನಿಮ್ಮ ಅದೃಷ್ಟದ ಮೇಲೆ ನಿಂತಿದೆ. ನೋಡೋಣ, ದೇವರಿದ್ದಾನೆ. ಈಗ ತಕ್ಷಣಕ್ಕೆ ಏನೂ ಔಷಧವಿಲ್ಲ. ರಿಫ್ರೆಷ್ ಟಿಯರ್ಸ್ ಡ್ರಾಪ್ಸ್ ಹಾಕುತ್ತಿರಿ" ಎಂದರು.

ಅವರು ಸರ್ಜರಿಯ ನಂತರದ ನನ್ನ ಕಣ್ಣುಗಳ ಗುಣವಾಗುವಿಕೆಯ ಬಗ್ಗೆ ಭರವಸೆಯನ್ನೇನೂ ನೀಡಲಿಲ್ಲ. ಅವರ ಮಾತಿನಲ್ಲಿ ಇದು ಇಷ್ಟೆ, ಇದರಾಚೆ ಏನೂ ಮಾಡಲಾಗದು ಎಂಬ ಧ್ವನಿ ವ್ಯಕ್ತವಾಯಿತು. ಅದರ ಮಾರನೆಯ ದಿನ ನಾವು ಮತ್ತೆ ಡಾ. ಪ್ರಕಾಶ್ ಅವರನ್ನು ಭೇಟಿ ಮಾಡಿದೆವು. ಡಾ. ಮಹೇಶ್‌ಕುಮಾರ್‌ರವರು ಡಾ. ಪ್ರಕಾಶ್ ಅವರ ಜೊತೆ ನನ್ನ ಕೇಸಿನ ಬಗ್ಗೆ ಮಾತನಾಡಿದ್ದರು. ಡಾ. ಪ್ರಕಾಶ್ ನಿರಾಶರಾಗಲು ಸಿದ್ಧರಿರಲಿಲ್ಲ. ಅವರು ನಮ್ಮನ್ನು ಕುರಿತು "ನೀವು ಬೆಂಗಳೂರಿನ

ನಾರಾಯಣ ನೇತ್ರಾಲಯಕ್ಕೆ ಹೋಗಿರಿ. ಅಲ್ಲಿ ಖಂಡಿತ ಡ್ರೈ ಐಯ್ ಕ್ಯಾಟರಾಕ್ಟ್ ಸರ್ಜರಿಯನ್ನು ಸಮರ್ಪಕವಾಗಿ ಮಾಡುತ್ತಾರೆ. ಸರ್ಜರಿಯಾದ ಮೇಲೆ ಒಂದು ತಿಂಗಳಷ್ಟು ಕಾಲ ಬೆಂಗಳೂರಿನಲ್ಲಿರಬೇಕಾಗಿದೆ. ಪೋಸ್ಟ್ ಸರ್ಜರಿ ಟ್ರೀಟ್‌ಮೆಂಟ್ ಬಹಳ ಮುಖ್ಯ. ನಾರಾಯಣ ನೇತ್ರಾಲಯದ ಗುಣಮಟ್ಟ ಅಂತರರಾಷ್ಟ್ರೀಯ ಮಟ್ಟದ್ದು. ಅಲ್ಲಿ ನನ್ನ ಪರಿಚಿತ ವೈದ್ಯರೊಬ್ಬರಿದ್ದಾರೆ. ನೀವು ಹೋಗುವ ಮುನ್ನ ಹೇಳಿ. ನಾನು ಅವರಿಗೆ ಫೋನ್ ಮಾಡುತ್ತೇನೆ" ಎಂದರು.

ಹಾಗೇ ಆಗಲೆಂದು ತಿಳಿಸಿದೆ. ಬೆಂಗಳೂರಿನಲ್ಲಿ ನನ್ನ ಕಣ್ಣಿನ ಗುಣಕ್ಕಾಗಿ ಒಂದು ತಿಂಗಳು ಇರಲು ಸಿದ್ಧನಿದ್ದೆ. ಅಲ್ಲಿ ನನ್ನ ಮಗಳಿದ್ದಳು. ಯಾವುದಕ್ಕೂ ಏನೂ ತೊಂದರೆಯಿರಲಿಲ್ಲ. "ನಾವು ಒಂದು ತಿಂಗಳ ಒಳಗೆ ನಾರಾಯಣ ನೇತ್ರಾಲಯಕ್ಕೆ ಹೋಗುತ್ತೇವೆ. ಹೋಗುವ ಮುನ್ನ ನಿಮ್ಮನ್ನು ಬಂದು ಕಾಣುತ್ತೇವೆ!" ಎಂದು ಡಾ. ಪ್ರಕಾಶ್ ಅವರಿಗೆ ತಿಳಿಸಿ ಹೊರಟೆವು. ನನ್ನ ಬಗ್ಗೆ ಡಾ. ಪ್ರಕಾಶ್ ಅವರಿಗಿರುವ ಪ್ರೀತಿ ಮತ್ತು ಕಾಳಜಿ ಬಗ್ಗೆ ಕೃತಜ್ಞತೆಯನ್ನು ನನ್ನ ಮನಸ್ಸು ಬಗೆಯಿತು. ನನ್ನ ಮಗ ಮಂಗಳೂರಿನಿಂದ ಮೈಸೂರಿಗೆ ವರ್ಗಗೊಂಡು ಜೂನ್ ತಿಂಗಳಿಂದ ಮೈಸೂರಿನಲ್ಲಿ ಕೆಲಸ ಆರಂಭಿಸಿದ. ನನ್ನ ಮಿತ್ರರಾದ ಶ್ರೀಧರ್‌ರವರು ಮತ್ತು ಡಾ. ಹನುಮಂತಪ್ಪ ನವರು 'ನಿಮ್ಮ ತಂದೆಯವರನ್ನು ಬೆಂಗಳೂರಿಗೆ ಕರೆದುಕೊಂಡು ಹೋಗುವುದಕ್ಕೆ ಮುನ್ನ ಪ್ರಗತಿ ವಿಷನ್ಸ್‌ನ ಡಾ. ಸಂಜೀವ ಕಣತ್ತೂರ್ ರವರನ್ನು ಭೇಟಿ ಮಾಡಲು' ಸೂಚಿಸಿದರು. ನನ್ನ ಮಗ ಅವರನ್ನು ಭೇಟಿ ಮಾಡಲು ಅವರು ಸರ್ಜರಿಯಲ್ಲಿದ್ದರಂತೆ. ಅವರ ಮಗನನ್ನು ಭೇಟಿ ಮಾಡಿ ಬಂದ. ಅವರು ಡ್ರೈ ಐಯ್ ಕ್ಯಾಟರಾಕ್ಟ್ ಸರ್ಜರಿ ಮಾಡುವುದಾಗಿ ತಿಳಿಸಿದನಂತೆ. ಮತ್ತೆ ಮಿತ್ರರಾದ ಶ್ರೀಧರ್‌ರವರು ಪ್ರಗತಿ ವಿಷನ್ಸ್‌ನಲ್ಲೇ ಇರುವ ನೇತ್ರತಜ್ಞೆ ಡಾ. ವೀಣಾ ಅವರನ್ನು ಸಂಪರ್ಕಿಸಲು ನನ್ನ ಮಗನಿಗೆ ತಿಳಿಸಿ, ಅವರ ಫೋನ್ ನಂಬರ್ ನೀಡಿದರು. ನನ್ನ ಮಗ ಅವರನ್ನು ಫೋನ್ ಮೂಲಕ ಸಂಪರ್ಕಿಸಿದಾಗ, ಅವರು ಮೈಸೂರಿನಲ್ಲಿ ಹೊಸದಾಗಿ ಆರಂಭಗೊಂಡಿರುವ ನೇತ್ರಧಾಮ ಕಣ್ಣಾಸ್ಪತ್ರೆಗೆ ಹೋಗುವಂತೆಯೂ, ಅಲ್ಲಿ ಡಾ. ಚೇತನ್ ಎಂಬ ನೇತ್ರತಜ್ಞರನ್ನು ಕಾಣಬೇಕೆಂತಲೂ ತಾವು ಅವರಿಗೆ ಫೋನ್ ಮೂಲಕ ಮಾತನಾಡಿ ನಿಮ್ಮ ಬಗ್ಗೆ ತಿಳಿಸಿರುವುದಾಗಿಯೂ ತಿಳಿಸಿದರು.

ನಾವು ಜೂನ್ ೧೧ರಂದು ಬೆಳಿಗ್ಗೆ ಹತ್ತು ಗಂಟೆಯ ಹೊತ್ತಿಗೆ ನೇತ್ರಧಾಮಕ್ಕೆ ಹೋದೆವು. ಮೊದಲು ತಂತ್ರಜ್ಞರೊಬ್ಬರು ನನ್ನ ಕಣ್ಣಿನ ದೃಷ್ಟಿಯನ್ನು ಪರಿಶೀಲಿಸಿ ವರದಿ ಸಿದ್ಧಪಡಿಸಿದರು. ನಾವು ಡಾ. ಚೇತನ್ ಅವರನ್ನು ಭೇಟಿ ಮಾಡುವ ಹೊತ್ತಿಗೆ ಆ ವರದಿ ಅವರ ಬಳಿ ಇತ್ತು. ಡಾ. ಚೇತನ್ ಮತ್ತೆ ಕೂಲಂಕಷವಾಗಿ ನನ್ನ

ಕಣ್ಣುಗಳನ್ನು ಪರೀಕ್ಷಿಸಿದರು. "ನಿಮಗಿರುವ ಡ್ರೈ ಐಯ್ ಹೊರತಾಗಿ ನಿಮ್ಮ ಕಣ್ಣು ಚೆನ್ನಾಗಿದೆ. ಕಾರ್ನಿಯಾಗೇನು ತೊಂದರೆಯಾಗಿಲ್ಲ. ನಿಮ್ಮ ಕ್ಯಾಟರಾಕ್ಟ್ ಸರ್ಜರಿ ಒಂದೆರಡು ನಿಮಿಷದಲ್ಲಿ ಮುಗಿದು ಹೋಗುತ್ತದೆ. ಹೇಗೋ ಈಗ ನೀವು ಸ್ಟಿರಾಯ್ಡ್ ತೆಗೆದುಕೊಳ್ಳುತ್ತಿದ್ದೀರಿ. ಅದರ ರಕ್ಷಣೆಯಲ್ಲಿಯೇ ಸರ್ಜರಿ ಮಾಡಬಹುದು. ಪೋಸ್ಟ್ ಸರ್ಜರಿ ಹದಿನೈದು ದಿನ ಹುಷಾರಾಗಿರಬೇಕು. ವಾರಕ್ಕೊಂದು ದಿನ ಬಂದು ತೋರಿಸಿಕೊಂಡು ಹೋಗಬೇಕು. ಹದಿನೈದು ದಿನದಲ್ಲಿ ನಿಮಗೇನೂ ತೊಂದರೆ ಕಾಣಿಸದಿದ್ದರೆ ಆಮೇಲೆ ಏನೂ ಆಗುವುದಿಲ್ಲ. ನಾನು ನಿಮ್ಮ ಕಣ್ಣು ಮತ್ತು ದೃಷ್ಟಿ ಬಗ್ಗೆ ಪ್ರತಿಶತ ತೊಂಬತ್ತೈದರಷ್ಟು ಭರವಸೆ ನೀಡುತ್ತೇನೆ. ಸರ್ಜರಿಗೆ ಮುನ್ನ ಒಂದು ತಿಂಗಳು ಕಳೆಯಲಿ. ನಿಮ್ಮ ಕಣ್ಣಲ್ಲಿ ಮತ್ತೆ ನೀರು ಉತ್ಪನ್ನವಾಗುವಂತೆ ಕೆಲವು ಔಷಧ ಬರೆದುಕೊಡುತ್ತೇನೆ. ಅವನ್ನು ಬಳಸಿರಿ. ನಿಮಗೇನೂ ತೊಂದರೆಯಾಗದು" ಎಂದರು. ಅನಂತರ ತುಸು ತಡೆದು "ನೀವು ಒಮ್ಮೆ ಡಾ. ವೀಣಾ ಅವರನ್ನು ಭೇಟಿ ಮಾಡಿ ನಿಮ್ಮ ಕಣ್ಣುಗಳನ್ನು ತೋರಿಸಿರಿ. ಅವರು ರೆಟಿನಾ ತಜ್ಞೆ. ಅವರೊಮ್ಮೆ ನಿಮ್ಮ ರೆಟಿನಾ ಪರೀಕ್ಷೆ ಮಾಡಲಿ. ನೀವು ಈಗಲೇ ಹೋಗಿರಿ. ನಾನು ನೀವು ಬರುವ ವಿಷಯವನ್ನು ಅವರಿಗೆ ತಿಳಿಸುತ್ತೇನೆ" ಎಂದರು.

ನಾವು ಡಾ. ವೀಣಾ ಅವರನ್ನು ಕಾಣಲು ವಿಜಯನಗರದಲ್ಲಿರುವ ಪ್ರಗತಿ ವಿಷನ್‌ಗೆ ಬಂದೆವು. ಡಾ. ವೀಣಾ ನನ್ನ ಕಣ್ಣುಗಳನ್ನು ಪರೀಕ್ಷಿಸಿ "ಇನ್ನೆರಡು ತಿಂಗಳು ಬಿಟ್ಟು ಸರ್ಜರಿ ಮಾಡಿಸಿರಿ. ನಿಮ್ಮ ರೆಟಿನಾ ಚೆನ್ನಾಗಿದೆ. ದಿನಾ ಬೆಳಿಗ್ಗೆ ಸಂಜೆ ಹತ್ತು ನಿಮಿಷ ಬಿಸಿ ನೀರಿನ ಶಾಖ ನೀಡಿ. ಮೃದುವಾಗಿ ಕಣ್ಣುಗಳ ಮೇಲೆ ಮಸಾಜ್ ಮಾಡಿರಿ. ಅನಂತರ ಶಾಂಪು ಇಂದ ತೊಳೆದು ಶುದ್ಧಗೊಳಿಸಿ" ಎಂದರು.

ಅಂದು ನಾವು ಮನೆಗೆ ಬಂದಾಗ ಮಧ್ಯಾಹ್ನ ಮೂರು ಗಂಟೆಯಾಗಿತ್ತು. ಪದೆ ಪದೇ ಕಣ್ಣುಗಳ ಪರೀಕ್ಷೆಗೆಂದು ತೀಕ್ಷ್ಣ ಬೆಳಕು ಬಿಟ್ಟಿದ್ದರಿಂದ, ಕಣ್ಣು ಪರೀಕ್ಷೆಗೆ ಸಾಧನಗಳನ್ನು ಬಳಸಿದ್ದರಿಂದ ನನಗೆ ತೀವ್ರತರವಾದ ಆಯಾಸವಾಗಿತ್ತು. ನನಗೆ ಕ್ಯಾಟರಾಕ್ಟ್ ಕಾಣಿಸಿಕೊಂಡು ಆಗಲೇ ಮೂರು ತಿಂಗಳ ಮೇಲಾಗಿದೆ. ಈಗಂತೂ ಈ ಕಥನವನ್ನು ಬರೆಯುವ ಸಂದರ್ಭದ ಹೊತ್ತಿನಲ್ಲಿ ನನಗೆ ಪತ್ರಿಕೆ, ಪುಸ್ತಕಗಳನ್ನು ಓದಲು ಸಾಧ್ಯವಾಗುತ್ತಿಲ್ಲ. ಅಕ್ಷರಗಳು ಕಾಣಿಸುವುದೇ ಇಲ್ಲ. ಟಿವಿಯಂತು ಮಂಜು ಮುಸುಕಿದಂತೆ ಕಾಣುತ್ತದೆ. ನನ್ನ ಬರವಣಿಗೆ ಒಂದು ಅಂದಾಜಿನ ಮೇಲೆ ಹಾಳೆಯ ಮೇಲೆ ಮೂಡುತ್ತಿದೆ. ಇದಂತೂ ನನಗೆ ಆಶ್ಚರ್ಯ ತರುತ್ತಿದೆ! ಸುಮಾರು ನಲವತ್ತು ವರ್ಷಗಳಿಂದ ನಿರಂತರವಾಗಿ ಬರವಣಿಗೆಯ ಬಂಧುರದಲ್ಲಿರುವುದರಿಂದ ಇದು ಸಾಧ್ಯವಾಗುತ್ತಿದೆ ಎಂದು ನಾನು ಭಾವಿಸಿದ್ದೇನೆ. ನನಗೆ ನಾನು ಬರೆದದ್ದು ಕಾಣಿಸುತ್ತಿಲ್ಲ.

ನನ್ನ ಪತ್ನಿ ಅನಂತರ ಅದನ್ನು ಸಲೀಸಾಗಿ ಓದುತ್ತಿರುವುದರಿಂದ ದೋಷಗಳು ಉಂಟಾಗುತ್ತಿಲ್ಲವೆಂದುಕೊಂಡಿದ್ದೇನೆ.

ನನಗೆ ಈ ಒಣಕಣ್ಣು ಮತ್ತು ಕ್ಯಾಟರಾಕ್ಟ್‌ನಿಂದಾಗಿ ನಿಜಕ್ಕೂ ತೊಂದರೆಯಾಗುತ್ತಿದೆ. ದಿನನಿತ್ಯದ ಸುದ್ದಿ ಸಮಾಚಾರಗಳನ್ನು ನಾನು ಓದಲಾಗುತ್ತಿಲ್ಲ. ಟಿವಿಯಲ್ಲಿ ಬರುವ ಚರ್ಚೆಗಳನ್ನು ನೋಡಲಾಗುತ್ತಿಲ್ಲ. ನನ್ನ ಪ್ರೀತಿಯ ಪುಸ್ತಕಗಳನ್ನು ಓದಲಾಗುತ್ತಿಲ್ಲ. ಇವುಗಳನ್ನೆಲ್ಲ ಬಿಟ್ಟು ನಾನು ಹೇಗೆ ಇರಬಲ್ಲೆ ಎಂದು ಕ್ಷಣ ಕಾಲ ನನ್ನೊಳಗೆ ನಡುಗಿದಂತಾಗುತ್ತದೆ. ಆದರೆ ಆಧುನಿಕ ವೈದ್ಯಕೀಯ ವಿಜ್ಞಾನದ ಮೇಲೆ ನನಗೆ ಭರವಸೆಯಿದೆ.

ನಾನು ಎಂಐಸಿಯುನಲ್ಲಿದ್ದಷ್ಟು ದಿನ ಹೊರ ಜಗತ್ತಿನಲ್ಲಿ ಏನಾಗುತ್ತಿದೆಯೆಂದು ತಿಳಿಯುತ್ತಿರಲಿಲ್ಲ. ನನ್ನನ್ನು ನೋಡಲು ಬರುವವರಾಗಲೀ ನನ್ನ ಮನೆಯವರಾಗಲೀ ನನಗೇನನ್ನೂ ಹೇಳುತ್ತಿರಲಿಲ್ಲ. ಹವಾನಿಯಂತ್ರಿತ ಪ್ರಜ್ವಲಿಸುವ ಬೆಳಕಿನ ಆ ಎಂಐಸಿಯು ನಿಜಕ್ಕೂ ಹೊರಜಗತ್ತಿಗೆ ಸಂಬಂಧವಿಲ್ಲದ ರೀತಿಯಲ್ಲಿತ್ತು. ನಾನು ಎಂಐಸಿಯುನಿಂದ ಸ್ಪೆಶಲ್ ವಾರ್ಡ್‌ಗೆ ಶಿಫ್ಟ್ ಆದ ಮೇಲೆ ಕೆಲವು ವಿಚಾರಗಳು ತಿಳಿದುಬಂದವು. ಈ ವಿಚಾರಗಳು ನನಗೆ ಬಂದವರಿಂದ ತಿಳಿದುಬಂದವಲ್ಲ. ನನ್ನ ವಾರ್ಡ್‌ನಲ್ಲಿ ಒಂದು ಟಿವಿ ಇತ್ತು. ಅದರಲ್ಲಿ ಎಲ್ಲಾ ಚಾನಲ್‌ಗಳೂ ಬರುತ್ತಿದ್ದವು. ಮುಖ್ಯವಾಗಿ ನಾನು ವಾರ್ತೆಗಳನ್ನು ಕೇಳಬೇಕಾಗಿತ್ತು. ರಾಜಕಾರಣದಲ್ಲಿ ಕೆಲವು ಸಣ್ಣಪುಟ್ಟ ಬದಲಾವಣೆಗಳಾಗಿದ್ದವು. ಕರ್ನಾಟಕದ ಮಾಜಿ ಮುಖ್ಯಮಂತ್ರಿಯೊಬ್ಬರು ತಾವು ಬೆಳೆದು ಬಂದ ಪಕ್ಷವನ್ನು ತೊರೆದು ತಾವೇ ಹೊಸದೊಂದು ಪಕ್ಷಕಟ್ಟಿಕೊಂಡಿಕೊಂಡು ಸ್ವಲ್ಪ ಕಾಲ ಹಾರಾಡಿ, ಈಗ ಮರಳಿ ಮಾತೃಪಕ್ಷಕ್ಕೆ ಮರಳಿದ್ದರು. ಕರ್ನಾಟಕದ ಕಾಂಗ್ರೆಸ್ ಸರಕಾರದ ಮಂತ್ರಿ ಮಂಡಲದಲ್ಲಿ ಭ್ರಷ್ಟರೆಂಬ ಕಾರಣಕ್ಕೆ ಸೇರ್ಪಡೆಯಾಗದೆ ಹೊರಗುಳಿದಿದ್ದ ಇಬ್ಬರು ರಾಜಕಾರಣಿಗಳು ಮಂತ್ರಿ ಮಂಡಲಕ್ಕೆ ಸೇರ್ಪಡೆಯಾಗಿದ್ದರೂ, ವಸತಿ ಸಚಿವ, ನಟ ಅಂಬರೀಶ್ ಅನಾರೋಗ್ಯ ಪೀಡಿತರಾಗಿ ಚಿಕಿತ್ಸೆಗೆಂದು ಸಿಂಗಾಪುರದ ಆಸ್ಪತ್ರೆ ಸೇರಿದ್ದರು. ಲೋಕಸಭೆಗೆ ಏಪ್ರಿಲ್ ಮೇ ತಿಂಗಳಲ್ಲಿ ಚುನಾವಣೆಗಳು ನಡೆಯುಬಹುದೆಂಬ ಸೂಚನೆಗಳು ಬಿತ್ತರಗೊಳ್ಳುತ್ತಿದ್ದವು. ಈ ಅಂಶಗಳನ್ನು ಹೊರತುಪಡಿಸಿದರೆ ಕಳೆದೆರಡು ತಿಂಗಳಲ್ಲಿ ಯಾವುದೇ ಮಹತ್ತ್ವಪೂರ್ಣವಾದ ಬದಲಾವಣೆಗಳಾಗಲೀ ಘಟನೆಗಳಾಗಲೀ ನಡೆದಿರಲಿಲ್ಲ.

ನಾನು ಮನೆಗೆ ಬಂದ ಮಾರನೆಯ ದಿನ 'ಹೊಸತು' ಪತ್ರಿಕೆಯನ್ನು ನೋಡಿದೆ. ಅದರಲ್ಲಿ ಜಿ.ಎಸ್. ಶಿವರುದ್ರಪ್ಪ ಅವರ ನಿಧನದ ಪ್ರಯುಕ್ತ ಶ್ರದ್ಧಾಂಜಲಿ ರೂಪದ

ಲೇಖನವಿತ್ತು. ಇದು ನನಗೆ ನೋವಿನ ಸುದ್ದಿಯಾಗಿತ್ತು. ನಾನು 'ಜಿಎಸ್‌ಎಸ್ ನಿಧನರಾದ ಸುದ್ದಿಯನ್ನು ನನಗೇಕೆ ಹೇಳಲಿಲ್ಲ' ಎಂದು ಸುವರ್ಣಳನ್ನು ಕೇಳಿದೆ. 'ಐಸಿಯುನಲ್ಲಿದ್ದ ನಿಮಗೇಕೆ ಆ ಸುದ್ದಿ' ಎಂದು ತಿಳಿಸಲಿಲ್ಲ ಎಂದಳು. ಜಿಎಸ್‌ಎಸ್ ೨೩ ಡಿಸೆಂಬರ್ ೨೦೧೩ ರಂದು ನಿಧನಗೊಂಡಿದ್ದರು. ಅವರ ಬಗ್ಗೆ ನನ್ನೊಳಗೆ ವಿಶೇಷ ಆತ್ಮೀಯ ಭಾವವಿತ್ತು. ಅವರು ಉತ್ತಮ ಕವಿ ವಿಮರ್ಶಕರಾಗಿದ್ದರು. ನನ್ನ ಮದುವೆಗೆ (೨೫ ನವೆಂಬರ್ ೧೯೭೯) ಮುಖ್ಯ ಅತಿಥಿಯಾಗಿ ಬಂದಿದ್ದರು.

ನಾನು ಆಸ್ಪತ್ರೆಯಿಂದ ಬಂದು ಹೆಚ್ಚು ಕಡಿಮೆ ಐದು ತಿಂಗಳಾಗಿವೆ. ನನ್ನ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆಯಾಗಿದೆ. ಇನ್ನೂ ಸಾರ್ವಜನಿಕ ಸಭೆ ಸಮಾರಂಭಗಳಿಗೆ ಹೋಗಲಾಗುತ್ತಿಲ್ಲ. ಮನೆಯ ಸುತ್ತ ನಡೆದಾಡುತ್ತೇನೆ. ನನ್ನ ಕಣ್ಣಿನ ಚಿಕಿತ್ಸೆಯ ನಿರೀಕ್ಷೆಯಲ್ಲಿದ್ದೇನೆ.

ಆಗಾಗ ನನ್ನ ಎದೆಗೂಡಿನಲ್ಲಿ ಭದ್ರವಾಗಿ ಕುಳಿತಿರುವ ಥೈಮೋಮಾ ಗೆಡ್ಡೆ ನನ್ನನ್ನು ಕೆಣಕುತ್ತದೆ!

೨೦.೦೭.೨೦೧೪

ಟಿಪ್ಪಣಿಗಳು

೧. ಲೈಕನ್ ಪ್ಲೇನಸ್ (Lichen Planus)

ಲೈಕನ್ ಪ್ಲೇನಸ್ ಎಂಬುದು ಚರ್ಮಕ್ಕೆ ಸಂಬಂಧಿಸಿದ ಕಾಯಿಲೆಯಾಗಿದ್ದು ಇದರ ಮೂಲ ಕಾರಣ ಇಲ್ಲಿಯವರೆಗೂ ತಿಳಿಯದ್ದಾಗಿದೆ. ಆದರೆ ಇದು ಸಾಮಾನ್ಯವಾಗಿ ಯಾರಲ್ಲಿ ರೋಗನಿರೋಧಕ ಶಕ್ತಿ ಕುಂಠಿತವಾಗಿರುತ್ತದೋ ಅವರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ.

೨. ಮ್ಯೂಕೋಸ (Mucosa)

ಬಾಯಿಯ ಮತ್ತು ಜೀರ್ಣಾಂಗ ವ್ಯವಸ್ಥೆಯ ಒಳಭಾಗದ ಹೊದಿಕೆಯನ್ನು ಮ್ಯೂಕೋಸ ಎಂದು ಕರೆಯಲಾಗುತ್ತದೆ. ಈ ಹೊದಿಕೆ ಅತ್ಯಂತ ಮೃದುವಾಗಿದ್ದರೂ ಇದು ನಾವು ಸೇವಿಸುವ ಆಹಾರದಲ್ಲಿರುವ ಪೋಷಕಾಂಶಗಳನ್ನು ಹೀರಲು ಮತ್ತು ಕೆಲವು ರಕ್ಷಣೆಗೆ ಬೇಕಾಗುವ ರಸಗಳನ್ನು ಸ್ರವಿಸಲು ಅತ್ಯವಶ್ಯಕ. ಮ್ಯೂಕೋಸ ಸ್ರವಿಸುವ ರಸವನ್ನು ಮ್ಯೂಕಸ್ ಎಂದು ಕರೆಯಬಹುದು. ಬಾಯಿಯ ಮ್ಯೂಕೋಸದಲ್ಲಿ ಸ್ರವಿಸುವ ರಸವು ಜೊಲ್ಲುರಸವೆಂದು ಕರೆಯುತ್ತೇವೆ. ಬಾಯಿಯಲ್ಲಿ ನಾವು ಅನುಭವಿಸುವ ಹುಣ್ಣುಗಳು ಮ್ಯೂಕೋಸದಲ್ಲೇ ಕಾಣಿಸಿಕೊಳ್ಳುವುದು.

೩. ಆಟೋ ಇಮ್ಯುನ್ ಡಿಸ್‌ಆರ್ಡರ್ (Auto Immune Disorder)

ನಮ್ಮ ದೇಹದ ರೋಗನಿರೋಧಕ ಶಕ್ತಿಯು ದೇಹದ ಒಳಗೆ ಪ್ರವೇಶಮಾಡುವ ಎಲ್ಲಾ ಅಪರಿಚಿತ ಜೀವಕಣಗಳು ಮತ್ತು ವಸ್ತುಗಳ ಮೇಲೆ ಹತೋಟಿಯನ್ನಿಡುವ ಮತ್ತು ಅವುಗಳ ಮೇಲೆ ಪ್ರಹಾರ ಒಡ್ಡಿ ನಿರ್ಜೀವಗೊಳಿಸುವ ಕೆಲಸದಲ್ಲಿ ತೊಡಗಿಕೊಂಡಿರುತ್ತದೆ. ಹಾಗಾಗಿ ನಮಗೆ ಸುಲಭವಾಗಿ ಹೊರಗಿನ ರೋಗಕಾರಕ ಸೂಕ್ಷ್ಮಾಣುಜೀವಿಗಳಿಂದ ದೇಹದ ಆರೋಗ್ಯದ ಸಮತೋಲನ ಕಳೆದುಕೊಳ್ಳಲಾಗುವುದಿಲ್ಲ. ಹಾಗೆಯೇ ರೋಗಗಳು ದೇಹದಲ್ಲಿ ಸುಳಿಯದಂತೆ ರೋಗನಿರೋಧಕ ವ್ಯವಸ್ಥೆ ಕೆಲಸ ಮಾಡುತ್ತಿರುತ್ತದೆ. ಆದರೆ ವೈದ್ಯಕೀಯ ಜ್ಞಾನಕ್ಕೆ

ಇನ್ನೂ ಸಿಲುಕದ ಕಾರಣಗಳಿಂದ ಕೆಲವು ವಿಶಿಷ್ಟ ಸಂದರ್ಭಗಳಲ್ಲಿ ನಮ್ಮ ದೇಹದ ರೋಗನಿರೋಧಕ ವ್ಯವಸ್ಥೆಯು ಹೊರಗಿನ ಜೀವಕಣಗಳಲ್ಲದೆ, ನಮ್ಮ ದೇಹದ ಜೀವಕೋಶಗಳು ಮತ್ತು ಅಂಗಾಂಗಗಳ ಮೇಲೆಯೇ ತಿರುಗಿ ಬೀಳುವ ಸಂದರ್ಭಗಳು ಎದುರಾಗಿ ದೇಹವೂ ತನ್ನ ಎಲ್ಲಾ ಅಂಗಾಂಗಗಳ ಆರೋಗ್ಯದ ಸಮತೋಲನ ಕಳೆದುಕೊಳ್ಳಲಾರಂಭಿಸುತ್ತದೆ. ರೋಗನಿರೋಧಕ ವ್ಯವಸ್ಥೆಯ ಭಾಗವಾದ ಹೊರಗಿನ ರೋಗಾಣುಗಳ ಮೇಲೆ ದಾಳಿಮಾಡುವ ಸೈನಿಕರೆಂದೆ ಅನ್ನಬಹುದಾದ ಆಂಟಿಬಾಡಿಗಳು ನಮ್ಮ ದೇಹದ ಜೀವಕೋಶಗಳ ಮೇಲೆ ದಾಳಿಮಾಡಲಾರಂಭಿಸುತ್ತವೆ. ಇಂತಹ ಸಂದರ್ಭವನ್ನು ಆಟೋ ಇಮ್ಯೂನ್ ಡಿಸ್ ಆರ್ಡರ್ ಎಂದು ಕರೆಯಲಾಗುತ್ತದೆ. ಇದಕ್ಕೆ ವೈದ್ಯಕೀಯ ಲೋಕದಲ್ಲಿ ನಿಖರವಾದ ಕಾರಣಗಳು ಇನ್ನೂ ಸಿಕ್ಕಿಲ್ಲ.

೪. ಇಮ್ಯುನೋ ಥೆರಪಿ (Immunotherapy)

ನಮ್ಮ ದೇಹದ ರೋಗನಿರೋಧಕ ವ್ಯವಸ್ಥೆಯಲ್ಲಿ ಏರುಪೇರಾದ ಸಂದರ್ಭದಲ್ಲಿ ರೋಗನಿರೋಧಕ ಶಕ್ತಿಯು ಕುಂದುವುದೋ ಅಥವಾ ತನ್ನ ದೇಹದ ಜೀವಕೋಶಗಳ ಮೇಲೆಯೇ ತಿರುಗಿಬಿದ್ದೋ ಆರೋಗ್ಯದ ಸಮತೋಲನ ತಪ್ಪಿರುತ್ತದೆ. ಇದಕ್ಕಾಗಿ ವೈದ್ಯಕೀಯ ಚಿಕಿತ್ಸೆಯ ಒಂದು ಬಗೆಯೇ ಈ ರೋಗನಿರೋಧಕ ವ್ಯವಸ್ಥೆಯ ಶಕ್ತಿಯನ್ನು ಹೆಚ್ಚಿಸುವುದು ಅಥವಾ ತಗ್ಗಿಸುವುದು. ಇಂತಹ ಚಿಕಿತ್ಸೆಗೆ ಇಮ್ಯೂನೋ ಥೆರಪಿ ಎಂದು ಕರೆಯುತ್ತಾರೆ.

೫. ವೆಂಟಿಲೇಟರ್ (Ventilator)

ಒಬ್ಬ ವ್ಯಕ್ತಿಯು ಸ್ವಾಭಾವಿಕ ಉಸಿರಾಡುವ ಕ್ರಿಯೆಯಲ್ಲಿ ಸಂಪೂರ್ಣ ವಿಫಲಗೊಂಡರೆ ಅಥವಾ ಸರಿಯಾಗಿ ಉಸಿರಾಡಲು ಆಗದಿದ್ದ ಸಂದರ್ಭಗಳಲ್ಲಿ ಆ ವ್ಯಕ್ತಿಯ ಶ್ವಾಸಕೋಶಗಳಿಗೆ ಗಾಳಿಯನ್ನು ಒತ್ತಡಪೂರ್ವಕವಾಗಿ ಹೊರಗಿನಿಂದ ತುಂಬುವ ಮತ್ತು ಗಾಳಿಯನ್ನು ಆಚೆ ಹಾಕುವ ಸಲಕರಣೆಯನ್ನು ವೆಂಟಿಲೇಟರ್ ಎನ್ನುತ್ತಾರೆ. ಇದು ಒಬ್ಬ ವ್ಯಕ್ತಿಯ ಉಚ್ಛ್ವಾಸ ಮತ್ತು ನಿಚ್ಛ್ವಾಸ ಕ್ರಿಯೆಗಳನ್ನು ಪೂರೈಸುತ್ತದೆ.

೬. ಎಂಡೋ ಟ್ರೇಕಿಯಲ್ ಟ್ಯೂಬ್ (Endotracheal Tube)

ಗಂಟಲಿನ ಶ್ವಾಸನಾಳದ ಮೂಲಕ ಶ್ವಾಸಕೋಶಗಳಿಗೆ ಉಸಿರಾಡಲು ತಡೆಯಿಲ್ಲದ ದಾರಿಯನ್ನು ಕಲ್ಪಿಸಲು ಉಂಟುಮಾಡುವ ರಂಧ್ರಕ್ಕೆ ಟ್ರೇಕಿಯಾಸ್ಟಮಿ ಎಂದು

ಕರೆಯಲಾಗುತ್ತದೆ. ಈ ರಂಧ್ರದ ಮೂಲಕ ಉಸಿರಾಡಲು ಅನುಕೂಲವಾಗಿಸಲು ಅಳವಡಿಸುವ ಕೊಳವೆಗೆ ಎಂಡೋ ಟ್ರೇಕಿಯಲ್ ಟ್ಯೂಬ್ ಎಂದು ಕರೆಯಲಾಗುತ್ತದೆ. ಇದರ ಮೂಲಕ ವ್ಯಕ್ತಿಗೆ ಆಮ್ಲಜನಕವನ್ನು ಒದಗಿಸಲು ಮತ್ತು ಆಮ್ಲಜನಕ ಕಾರ್ಬನ್ ಡೈಆಕ್ಸೈಡ್‌ನ ಸರಿಯಾದ ಪ್ರಮಾಣದ ಉಸಿರಾಡುವ ಕ್ರಮಕ್ಕೆ ಅನುಕೂಲವಾಗುತ್ತದೆ. ಇದರ ಅಳವಡಿಕೆಯಿಂದ ಆ ವ್ಯಕ್ತಿಗೆ ಆಹಾರವನ್ನು ನುಂಗಲು ಕಷ್ಟವಾಗಬಹುದು ಮತ್ತು ಈ ಕೊಳವೆ ಧ್ವನಿ ಪೆಟ್ಟಿಗೆಯನ್ನು ಒತ್ತುವುದರಿಂದ ಮಾತನಾಡಲು ಕೂಡ ಆಗದು.

೭. ರೈಲ್ಸ್ ಟ್ಯೂಬ್ (Ryle's Tube)

ಒಬ್ಬ ವ್ಯಕ್ತಿಗೆ ಪ್ರಜ್ಞೆಯಿಲ್ಲದೆಯೋ ಅಥವಾ ವೆಂಟಿಲೇಟರ್ ಅಳವಡಿಕೆಯಿಂದ ಆಹಾರ ಸೇವಿಸಲು ಆಗದಿದ್ದಾಗ ಒಂದು ಪ್ಲಾಸ್ಟಿಕ್ ಕೊಳವೆಯನ್ನು ಮೂಗಿನ ಮೂಲಕ ತೂರಿಸಿ ಗಂಟಲಿನ ಹಾದಿಯಲ್ಲಿ ಜಠರಕ್ಕೆ ಬೀಳುವಂತೆ ಅಳವಡಿಸುತ್ತಾರೆ. ಇದರ ಮೂಲಕ ದ್ರವ ರೂಪದ ಆಹಾರವನ್ನು ನೇರ ಹೊಟ್ಟೆಗೆ ಸೇರಿಸಬಹುದು. ಇಂತಹ ಕೊಳವೆಗೆ ರೈಲ್ಸ್ ಟ್ಯೂಬ್ ಎನ್ನುತ್ತಾರೆ. ಇದನ್ನು ಮೊದಲು ಕಂಡುಹಿಡಿದವನ ಹೆಸರು ರೈಲ್ ಎಂದಾಗಿತ್ತು.

೮. ಎಮ್.ಐ.ಸಿ.ಯು (MICU Medical Intensive Care Unit)

ಒಬ್ಬ ವ್ಯಕ್ತಿಯ ಆರೋಗ್ಯವು ತೀವ್ರವಾಗಿ ಕೆಟ್ಟಿದ್ದರೆ ಅವರಿಗೆ ಅತ್ಯಂತ ಮುತುವರ್ಜಿಯ, ತುರ್ತು ಮತ್ತು ತೀವ್ರಗತಿಯ ವೈದ್ಯಕೀಯ ಚಿಕಿತ್ಸೆ ಬೇಕಾಗುತ್ತದೆ. ಇದರ ಜೊತೆಗೆ ತಜ್ಞ ವೈದ್ಯರ ಮತ್ತು ತೀವ್ರನಿಗಾ ಚಿಕಿತ್ಸೆಯಲಿ ತರಬೇತಿ ಪಡೆದಿರುವ ನರ್ಸ್‌ಗಳ ಇಪ್ಪತ್ತುನಾಲ್ಕು ಗಂಟೆಗಳ ಸೇವೆ ನಿರಂತರವಾಗಿ ನೀಡುವ ವ್ಯವಸ್ಥೆ ಬೇಕಾಗುತ್ತದೆ. ಇಂತಹ ವ್ಯವಸ್ಥೆಯಲ್ಲಿ ಅತ್ಯಾಧುನಿಕ ವೈದ್ಯಕೀಯ ಸಲಕರಣೆಗಳು ಮತ್ತು ರೋಗಪತ್ತೆ ಹಚ್ಚುವ ಸವಲತ್ತುಗಳು ಒಂದೇ ಸೂರಿನಡಿ ಒದಗಿಸಲಾಗುತ್ತದೆ. ಇವೆಲ್ಲಾ ಅನುಕೂಲಗಳಿರುವ ಒಂದು ಚಿಕಿತ್ಸಾ ವ್ಯವಸ್ಥೆಗೆ ಮೆಡಿಕಲ್ ಇಂಟೆನ್ಸಿವ್ ಕೇರ್ ಯೂನಿಟ್ ಎಂದು ಕರೆಯಲಾಗುತ್ತದೆ.

೯. ಲಿಂಪೋಮ (Lymphoma)

ಲಿಂಪೋಮ ಎಂಬುದು ಒಂದು ಬಗೆಯ ರಕ್ತಕಣಗಳ ಆರ್ಬುದರೋಗ. ಬಿಳಿರಕ್ತಕಣಗಳಿಗೆ ಬರುವ ಈ ಕ್ಯಾನ್ಸರ್‌ನಿಂದಾಗಿ ನಮ್ಮ ದೇಹದ ಗದಗಳ್ಳುಗಳು

ಊದಿಕೊಳ್ಳುವುದು, ಜ್ವರ ಬರುವುದು, ನೋವು ಉಂಟಾಗುವುದು ಇತ್ಯಾದಿ ಲಕ್ಷಣಗಳನ್ನು ಹೊಂದಿರುತ್ತದೆ.

೧೦. ಥೈಮೋಮ (Thymoma)

ನಮ್ಮ ದೇಹದ ರೋಗನಿರೋಧಕ ವ್ಯವಸ್ಥೆಯ ಒಂದು ಅಂಗವಾದ ಥೈಮಸ್ ಎಂಬ ಒಂದು ಗ್ರಂಥಿಗೆ ತಗುಲುವ ಅರ್ಬುದ ರೋಗಕ್ಕೆ ಥೈಮೋಮ ಎನ್ನುತ್ತಾರೆ. ಇದು ಸಾಮಾನ್ಯ ಗಡ್ಡೆಯ ರೂಪವಾಗಿ ಬೆಳೆದು ನಮ್ಮ ದೇಹದ ಜೀವಕೋಶಗಳ ವಿರುದ್ಧವೇ ತಿರುಗಿಬೀಳುವ ಆಟೋ ಆಂಟಿಬಾಡಿಗಳನ್ನು ಸ್ರವಿಸುತ್ತಿರುತ್ತದೆ. ಈ ಗಡ್ಡೆಯು ಸಾಮಾನ್ಯವಾಗಿ ಮಯಸ್ತೇನಿಯಾ ಗ್ರೇವಿಸ್ ಎಂಬ ಮಾಂಸಖಂಡ ಮತ್ತು ನರಕ್ಕೆ ಸಂಬಂಧಿಸಿದ ಆಟೊ ಇಮ್ಯೂನ್ ರೋಗದ ಜೊತೆ ಕಾಣಿಸಿಕೊಳ್ಳುತ್ತದೆ.

೧೧. ಮಯಸ್ತೇನಿಯಾ ಗ್ರೇವಿಸ್ (Myasthenia Gravis)

ಮಯಸ್ತೇನಿಯಾ ಗ್ರೇವಿಸ್ ಎನ್ನುವುದು ಒಂದು ಬಗೆಯ ಮಾಂಸಖಂಡ ಮತ್ತು ನರಗಳಿಗೆ ಸಂಬಂಧಪಟ್ಟ ಆಟೋ ಇಮ್ಯ್ಯೂನ್ ರೋಗವಾಗಿದೆ. ಇದರಲ್ಲಿ ನಮ್ಮ ದೇಹದ ರೋಗ ನಿರೋಧಕ ವ್ಯವಸ್ಥೆಯ ದೇಹದ ನರ ಮತ್ತು ಮಾಂಸಖಂಡಗಳ ವಿರುದ್ಧ ತಿರುಗಿ ಬೀಳುವುದರಿಂದ ಮಾಂಸಖಂಡಗಳಲ್ಲಿ ಶಕ್ತಿ ಇಲ್ಲದಂತಾಗಿ ಓಡಾಡಲು ಸುಸ್ತಾಗುವುದು, ಯಾವಾಗಲೂ ಆಯಾಸವಾಗುತ್ತಿರುವುದು ಇದರ ಸಾಮಾನ್ಯ ಲಕ್ಷಣ. ದೇಹದ ಎಲ್ಲಾ ಭಾಗಗಳ ಮಾಂಸಖಂಡಗಳನ್ನು ಇದು ನಿಧಾನವಾಗಿ ಆವರಿಸಿಕೊಳ್ಳುತ್ತಾ ಕೊನೆಗೆ ಆಹಾರ ನುಂಗಲು ಬೇಕಾಗುವ ಮತ್ತು ಉಸಿರಾಡಲು ಸಹಾಯ ಮಾಡುವ ಗಂಟಲಿನ ಮತ್ತು ಎದೆಯ ಭಾಗದ ಮಾಂಸಖಂಡಗಳನ್ನೂ ಸಂಪೂರ್ಣವಾಗಿ ನಿಶ್ಯಕ್ತಿಗೊಳಿಸುತ್ತದೆ.

೧೨. ಐ.ವಿ. ಲೈನ್ (Intra Venous Line)

ಒಬ್ಬ ವ್ಯಕ್ತಿಗೆ ಔಷಧಿಯನ್ನು ನೇರವಾಗಿ ರಕ್ತಕ್ಕೆ ರಕ್ತನಾಳಗಳ ಮೂಲಕ ನೀಡುವ ಕ್ರಿಯೆಗೆ ಇಂಟ್ರಾವೀನಸ್ ಥೆರಪಿ ಎನ್ನುತ್ತಾರೆ. ಇದಕ್ಕಾಗಿ ರಕ್ತನಾಳಗಳಿಗೆ ಅಳವಡಿಸುವ ಸಣ್ಣ ಕೊಳವೆಯ ಮೂಲಕ ಔಷಧವನ್ನು ನೇರವಾಗಿ ರಕ್ತಕ್ಕೆ ಸೇರಿಸಲಾಗುತ್ತದೆ. ಔಷಧದ ಪರಿಣಾಮವು ವೇಗವಾಗಿ ಉಂಟಾಗಲು ಅನುವಾಗುತ್ತದೆ.

೧೩. ಆಟೋ ಆಂಟಿಬಾಡಿಗಳು (Auto antibodies)

ನಮ್ಮ ದೇಹದ ರೋಗನಿರೋಧಕ ವ್ಯವಸ್ಥೆಯು ಉತ್ಪತ್ತಿ ಮಾಡುವ ಒಂದು

ಬಗೆಯ ಪ್ರೋಟೀನ್ ಅನ್ನು ಆಂಟಿಬಾಡಿ ಎಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ ಆಂಟಿಬಾಡಿಯು ರೋಗನಿರೋಧಕ ಕೆಲಸವನ್ನು ಮಾಡುವಲ್ಲಿ ಸೈನಿಕನ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತದೆ. ಆದರೆ ಆಟೋ ಇಮ್ಯೂನ್ ಡಿಸ್ ಆರ್ಡರ್‌ನ ಸಂದರ್ಭದಲ್ಲಿ ಈ ಆಂಟಿಬಾಡಿಗಳು ನಮ್ಮ ಜೀವಕೋಶ ಮತ್ತು ಅಂಗಾಂಗಗಳ ಮೇಲೆಯೇ ತಿರುಗಿಬೀಳಲು ಪ್ರಾರಂಭಿಸಿದಾಗ ಇವನ್ನು ಆಟೋ ಆಂಟಿಬಾಡಿಗಳು ಎನ್ನಲಾಗುತ್ತದೆ.

೧೪. ಐ.ವಿ.ಐ.ಜಿ. (IVIG Intravenous Immunoglobulin)

ಇಂಟ್ರಾವೀನಸ್ ಇಮ್ಯೂನೋಗ್ಲಾಬುಲಿನ್ ಎನ್ನುವುದು ರಕ್ತನಾಳಗಳ ಮೂಲಕ ನೇರವಾಗಿ ರಕ್ತಕ್ಕೆ ಸೇರಿಸುವ ಒಂದು ಬಗೆಯ ರಕ್ತದ ಭಾಗ. ರಕ್ತದಾನಿಗಳ ಮೂಲಕ ಪಡೆದಿರುವ ರಕ್ತದಲ್ಲಿ ಐಜಿ ಇಮ್ಯೂನೋಗ್ಲಾಬುಲಿನ್ ಎನ್ನುವ ಒಂದು ಬಗೆಯ ಆಂಟಿಬಾಡಿಯನ್ನು ಸೋಸಿ ತೆಗೆದು ಕ್ರೂಢೀಕರಿಸಿ ಶುದ್ಧಿಸಿ ಕೊಡಲಾಗುತ್ತದೆ. ಇದನ್ನು ರೋಗನಿರೋಧಕ ಶಕ್ತಿ ಕುಂದಿರುವ ಮತ್ತು ಆಟೋ ಇಮ್ಯಾನೋ ಡಿಸಾರ್ಡರ್ ಇರುವ ರೋಗಿಗಳಿಗೆ ನೀಡಲಾಗುತ್ತದೆ. ಐಜಿ ಇಮ್ಯೂನೋಗ್ಲಾಬುಲಿನ್ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.

೧೫. ಎಫ್.ಎನ್.ಐ.ಸಿ (FNAC Fine Needle Aspiration Cytology)

ಒಂದು ಸಣ್ಣ ರಂಧ್ರವಿರುವ ಕೊಳವೆಯ ಮೂಲಕ ಜೀವಕೋಶಗಳ ಮಾದರಿಯನ್ನು ತೆಗೆಯಲಾಗುವ ಒಂದು ಅಧ್ಯಯನ ಕ್ರಿಯೆಗೆ ಫೈನ್ ನೀಡಲ್ ಆಸ್ಪಿರೇಷನ್ ಸೈಟಾಲಜಿ ಎನ್ನುತ್ತಾರೆ.

೧೬. ಕಿಮೋಥೆರಪಿ (Chemotherapy)

ಅರ್ಬುದ ರೋಗಕ್ಕೆ ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ಸಂಖ್ಯೆಯ ಕ್ಯಾನ್ಸರ್ ಜೀವಕೋಶಗಳ ವಿರುದ್ಧ ಕೆಲಸಮಾಡುವ ಔಷಧಿಗಳನ್ನು ಉಪಯೋಗಿಸುವ ಒಂದು ವಿಧಾನಕ್ಕೆ ಕೀಮೋಥೆರಪಿ ಎನ್ನುತ್ತಾರೆ.

೧೭. ಬಯಾಪ್ಸಿ (Biopsy)

ಜೀವಕೋಶಗಳ ಅಧ್ಯಯನಕ್ಕೆಂದು ಶಸ್ತ್ರ ಚಿಕಿತ್ಸೆಯ ಮೂಲಕ ದೇಹದ ಯಾವುದೇ ಅಂಗದಿಂದ ಜೀವಕೋಶ ಅಥವಾ ಅಂಗಾಂಶವನ್ನು ತೆಗೆಯುವ ಕ್ರಿಯೆಗೆ

ಬಯಾಪ್ಸಿ ಎನ್ನುತ್ತಾರೆ. ಇದು ಜೀವಕೋಶಗಳ ರಚನೆಯಲ್ಲಿನ ವ್ಯತ್ಯಾಸಗಳಿಂದ ರೋಗವನ್ನು ಪತ್ತೆ ಹಚ್ಚುವ ಒಂದು ವಿಧಾನ.

೧೮. ಬಿನೈನ್ (Benign)

ಅರ್ಬುದ ರೋಗ ಗಡ್ಡೆಯ ರೂಪದಲ್ಲಿದ್ದು ತನ್ನ ಸುತ್ತಲಿನ ಜೀವಕೋಶಗಳಿಗೆ ಮತ್ತು ಅಂಗಾಂಗಗಳಿಗೆ ಹರಡುವ ಯಾವುದೇ ಗುಣ ಹೊಂದಿರದೇ ಇದ್ದರೆ ಅಂತಹ ಗಡ್ಡೆಯನ್ನು ಬಿನೈನ್ ಗಡ್ಡೆ ಎನ್ನುತ್ತಾರೆ. ಅರ್ಬುದ ರೋಗ ಪೀಡಿತ ಗಡ್ಡೆಯಲ್ಲಿನ ಜೀವಕೋಶಗಳಿಗೆ ಸುತ್ತಲಿನ ಅಂಗಾಂಗಗಳಿಗೆ ಮತ್ತು ದೇಹದ ಬೇರೆ ಭಾಗಗಳಿಗೆ ಹರಡುವ ಗುಣವಿದ್ದರೆ ಅಂತಹ ಆರ್ಬುದ ರೋಗಕ್ಕೆ ಮ್ಯಾಲಿಗ್ನೆನ್ಸಿ ಎಂದು ಕರೆಯುತ್ತಾರೆ.

೧೯. ಹೆಚ್.ಡಿ.ಯು. (HDU High Dependency Unit)

ಐ.ಸಿ.ಯು. ನಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಯು ಪ್ರಾಣಾಪಾಯದಿಂದ ಪಾರಾಗಿ ತೀವ್ರಗತಿಯ ಚಿಕಿತ್ಸೆಯ ಅವಶ್ಯಕತೆಯಿಲ್ಲದಿದ್ದರೆ ಆದರೆ ಸಾಮಾನ್ಯ ವಾರ್ಡ್‌ನಲ್ಲಿ ದೊರೆಯುವ ಚಿಕಿತ್ಸೆ ಮತ್ತು ನರ್ಸಿಂಗ್ ಮುತುವರ್ಜಿ ಸಾಕಾಗದಿರುವ ಹಂತದಲ್ಲಿದ್ದರೆ ಅಂತಹ ರೋಗಿಯನ್ನು ಹೈ ಡಿಪೆಂಡಿಂಸಿ ಘಟಕದಲ್ಲಿ ಇರಿಸಿಕೊಳ್ಳಲಾಗುತ್ತದೆ. ರೋಗಿಯ ಆರೋಗ್ಯದ ಸ್ಥಿತಿಯಲ್ಲಿ ಮತ್ತಷ್ಟು ಚೇತರಿಕೆ ಕಂಡು ನಿರಂತರ ಸೇವೆಯ ಅವಶ್ಯಕತೆಯಿಲ್ಲದಿದ್ದರೆ ಸಾಮಾನ್ಯ ವಾರ್ಡಿಗೆ ಸ್ಥಳಾಂತರಗೊಳಿಸಲಾಗುತ್ತದೆ.

೨೦. ಬೈಪ್ಯಾಪ್ (Bi Level Positive Air Pressure)

ವ್ಯಕ್ತಿಯ ಉಸಿರಾಡುವ ಕ್ರಿಯೆಯಲ್ಲಿ ಅಭಾವ ಉಂಟಾದರೆ ಆ ವ್ಯಕ್ತಿಗೆ ಕೃತಕ ಉಸಿರಾಟಕ್ಕೆಂದು ಒತ್ತಡ ತುಂಬಿದ ಗಾಳಿಯನ್ನು ನಿಯಮಬದ್ಧವಾಗಿ ಶ್ವಾಸಕೋಶದೊಳಗೆ ದೂಡುವ ಒಂದು ಉಪಕರಣಕ್ಕೆ ಬೈಪ್ಯಾಪ್ ಎನ್ನುತ್ತಾರೆ.

೨೧. ಪ್ಲಾಸ್ಮಾಫೆರೆಸಿಸ್ (Plasmapheresis)

ನಮ್ಮ ದೇಹದ ರಕ್ತಪರಿಚಲನೆಯ ವ್ಯವಸ್ಥೆಯಿಂದ ರಕ್ತವನ್ನು ತೆಗೆದು ಅದನ್ನು ಪರಿಷ್ಕರಿಸಿ ಮತ್ತೆ ಅದನ್ನು ದೇಹದ ರಕ್ತಪರಿಚಲನಾ ವ್ಯವಸ್ಥೆಗೆ ಸೇರಿಸುವ ಕ್ರಮಕ್ಕೆ ಪ್ಲಾಸ್ಮಾಫೆರೆಸಿಸ್ ಎನ್ನುತ್ತಾರೆ.

೨೨. ಟ್ರೇಕಿಯಾಸ್ಟಮಿ (Tracheostomy)

ಗಂಟಲಿನ ಶ್ವಾಸನಾಳದ ಮೂಲಕ ಶ್ವಾಸಕೋಶಗಳಿಗೆ ಉಸಿರಾಡಲು ತಡೆಯಿಲ್ಲದ ದಾರಿಯನ್ನು ಕಲ್ಪಿಸಲು ಉಂಟುಮಾಡುವ ರಂಧ್ರಕ್ಕೆ ಟ್ರೇಕಿಯಾಸ್ಟಮಿ ಎಂದು ಕರೆಯಲಾಗುತ್ತದೆ.

೨೩. ಪೆಗ್ ಟ್ಯೂಬ್ (PEG Percutaneous Endoscopic Gastrostomy Tube)

ಒಬ್ಬ ವ್ಯಕ್ತಿಗೆ ಬಾಯಿಯ ಮೂಲಕ ಆಹಾರ ಸೇವಿಸಲು ಆಗದಿದ್ದಾಗ ಹೊಟ್ಟೆಯ ಪದರದೊಳಗೆ ಒಂದು ಕೊಳವೆಯನ್ನು ಅಳವಡಿಸುವ ಒಂದು ವೈದ್ಯಕೀಯ ಕ್ರಿಯೆಗೆ ಪರ್ ಕ್ಯುಟೇನಿಯಸ್ ಎಂಡೋಸ್ಕೋಪಿಕ್ ಗ್ಯಾಸ್ಟ್ರಾಸ್ಟಮಿ (ಪೆಗ್) ಎನ್ನುತ್ತಾರೆ. ಅಂತಹ ಕೊಳವೆಗೆ ಪೆಗ್ ಟ್ಯೂಬ್ ಎಂದು ಕರೆಯುತ್ತಾರೆ.

೨೪. ಎಸ್.ಐ.ಸಿ.ಯು. (SICU Surgical Intensive Care Unit)

ಐ.ಸಿ.ಯು. ವಿನಂತೆಯೆ ಇಲ್ಲಿನ ರೋಗಿಗಳಿಗೂ ತುರ್ತು ಮತ್ತು ತೀವ್ರಗತಿಯ ನಿರಂತರ ಚಿಕಿತ್ಸೆಯನ್ನು ನೀಡಲಾಗುತ್ತದೆ. ಆದರೆ ಇಲ್ಲಿ ಕೇವಲ ಶಸ್ತ್ರ ಚಿಕಿತ್ಸೆಯ ಅವಶ್ಯಕತೆಯಿರುವ ರೋಗಿಗಳಿಗೆ ಮಾತ್ರ ತೀವ್ರ ನಿಗಾ ಘಟಕದ ಕೆಲಸದಲ್ಲಿ ನುರಿತ ಶಸ್ತ್ರಚಿಕಿತ್ಸಾ ತಜ್ಞರಿಂದ ಸೇವೆ ದೊರೆಯುತ್ತದೆ.

ಕನ್ನಡಕ್ಕೆ ಯಾವಾಗಲೂ ವಿಶಿಷ್ಟವಾದುದನ್ನೇ ಕೊಡುತ್ತಾ ಬಂದಿರುವ ಶಿವರಾಮು ಕಾಡನಕುಪ್ಪೆ ಅವರ ಅಪರೂಪದ ಪುಸ್ತಕವಿದು. ಇದು ಅವರ ಆತ್ಮಕಥೆಯ ಒಂದು ಭಾಗವೇ ಆಗಿದೆ; ಸುಸಂಸ್ಕೃತ ಮನಸ್ಸಿನ ಸಂವೇದನಾಶೀಲ ಕಥೆಯೂ ಆಗಿದೆ. ಅವರು ಆಸ್ಪತ್ರೆಯಲ್ಲಿ ಕಳೆಯಬೇಕಾಗಿ ಬಂದ ಐವತ್ತನಾಲ್ಕು ದಿನಗಳ ವಿವರಪೂರ್ಣವೂ ಅಧಿಕೃತವೂ ಆತ್ಮೀಯವೂ ಆದ, ಓದಲೇ ಬೇಕಾದ, ಕೃತಿಯಿದು.

ಆಸ್ಪತ್ರೆಯ ಸೇವಾ ವ್ಯವಸ್ಥೆ, ವೈದ್ಯರ ಕರ್ತವ್ಯ ನಿಷ್ಠೆ, ಸುಶ್ರೂಶಕ, ಸುಶ್ರೂಶಕಿಯರ ಕಾರ್ಯ ತತ್ಪರತೆ, 'ಅಣ್ಣಾ ಅಕ್ಕಾ'ಗಳ ಸೇವಾಪರತೆಗಳ ವಿವರಣೆ ಪರಿಶೀಲನೆಗಳು ಕೃತಿಯ ಮುಖ್ಯಭಾಗವಾಗಿದೆ. ನೋವಿನ ಮಧ್ಯದಲ್ಲಿಯೂ ಲೇಖಕರು ತದೇಕ ಚಿತ್ತ ಮತ್ತು ಜಾಗ್ರತ ಮನಸ್ಸಿನಿಂದ ಇವೆಲ್ಲವನ್ನೂ ಕಟ್ಟಿಕೊಟ್ಟಿರುವುದು ಅವರ ಮನೋದೃಢತೆಗೆ ಸಾಕ್ಷಿಯಾಗಿದೆ. ಈ ಪುಸ್ತಕ ಸಾಹಿತ್ಯಲೋಕದಲ್ಲಿ ಹೊಸ ಪ್ರಕಾರವೊಂದನ್ನು ಹುಟ್ಟುಹಾಕುತ್ತದೆ.

ಕನ್ನಡದಲ್ಲಿ ಇಂತಹ ಪುಸ್ತಕ ಇದೇ ಮೊದಲ ಬಾರಿಗೆ ಪ್ರಕಟವಾಗುತ್ತಿದೆ. ಹೊಸತನ, ಸೊಗಸು ಮತ್ತು ಪಾರದರ್ಶಕತೆ ಒಂದು ಅನ್ಯೋನ್ಯ ಸ್ಥರದಲ್ಲಿ ನಿಂತು ಕೆಲಸ ಮಾಡಿದೆ. ಸಾವು ನೋವಿನ ನಡುವೆ ಹೋರಾಟ ನಡೆಸಿ ಗೆದ್ದು ಬಂದ ಇಚ್ಛಾಶಕ್ತಿಯ ಚೇತನವೊಂದರ ದೊಡ್ಡ ಸಂಕಥನವಿದು. ಒಂದು ಹೊಸ ಪ್ರಪಂಚವನ್ನೆ ತೆರೆದಿಡುವ ಈ ಪುಸ್ತಕ ವಿಜ್ಞಾನ ಮತ್ತು ಕಲೆಯ ಸಾಮರಸ್ಯದಿಂದ ಅರಳಿದುದು. ಯಾತನೆ, ವಿಷಣ್ಣತೆ, ಸಂತೋಷಗಳ ಸಮ್ಮಿಶ್ರ ಭಾವದ ಉಯ್ಯಾಲೆಯಲ್ಲಿ ಐವತ್ತನಾಲ್ಕು ದಿನಗಳನ್ನು ಕಳೆದ ಶಿವರಾಮು ಕಾಡನಕುಪ್ಪೆ ಅವರ ಆಸ್ಪತ್ರೆಯ ಅನುಭವದ ಈ ಕಥನವನ್ನು ಕಂಬನಿಯ ಮಿಡಿತಗಳಿಲ್ಲದೆ ಓದುವುದು ಕಷ್ಟ. ನೋವನ್ನು ಕಲೆಯಾಗಿಸಿಕೊಳ್ಳುವ ಪರಮಾಶ್ಚರ್ಯದ ಪಾರಮ್ಯದ ಬರವಣಿಗೆಯಿದು.